ಶನಿವಾರ, ನವೆಂಬರ್ 25, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 325 | ಪುಟ 16
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ನವೆಂಬರ್ 25ರಂದು 'ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನ' ಆಚರಿಸಲಾಗುತ್ತಿದೆ

ಕರ್ನಾಟಕ 30 25 ವರ್ಷಗಳ ಮುನ್ನೋಟ 11
'ಸರ್ಕಾರ ಬದಲಾಗಬೇಕು. ಆದರೆ...' 13
ಸೆಬಿ ಸಂಶಯಿಸಲು ಆಧಾರ ಇಲ್ಲ: 'ಸುಪ್ರೀಂ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,970	19,794	₹63,350 (ಬೆಂಗಳೂರು)	₹75,200 (ಬೆಂಗಳೂರು)	83.40

ಆದಾಯಕ್ಕಿಂತ ಹೆಚ್ಚು ಆಸ್ತಿ •ಸಿಬಿಐ ತನಿಖೆ ನಡೆಸುತ್ತಿರುವ ಪ್ರಕರಣ ವಾಪಸ್ ನಿರ್ಣಯ

ಡಿಕೆಶಿಗೆ ರಕ್ಷಣೆ: ವಿಪಕ್ಷ ಆಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಕುರಿತು ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆಯುವ ಮೂಲಕ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ರಕ್ಷಣೆ ನೀಡಲು ಯತ್ನಿಸುತ್ತಿದೆ ಎಂದು ವಿರೋಧ ಪಕ್ಷಗಳು ಮುಗಿಬಿದ್ದಿವೆ.

ಶಿವಕುಮಾರ್ ಮೇಲೆ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ನೀಡಿದ್ದ ಅನುಮತಿಯನ್ನು ಹಿಂಪಡೆಯಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಸರ್ಕಾರದ ನಡೆಯನ್ನು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ತೀವ್ರವಾಗಿ ವಿರೋಧಿಸಿವೆ.

ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆಯುವ ವಿಚಾರ ಶುಕ್ರವಾರ ಇಡೀ ದಿನ ರಾಜ್ಯದ ಉದ್ದಗಲಕ್ಕೆ ಸದ್ದು ಮಾಡಿತು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಹಲವು ಮುಖಂಡರು ಸರ್ಕಾರದ ಮೇಲೆ ವಾಗ್ದಾಳಿ ನಡೆಸಿದರು.

9ನೇ ಪುಟ ನೋಡಿ

'ಸಿಬಿಐಗೆ ಕೊಟ್ಟಿದ್ದೇ ಕಾನೂನುಬಾಹಿರ'

'ಡಿ.ಕೆ. ಶಿವಕುಮಾರ್ ವಿರುದ್ಧದ ಪ್ರಕರಣದ ತನಿಖೆಯನ್ನು ಸಭಾಧ್ಯಕ್ಷರ ಅನುಮತಿ ಪಡೆಯದೇ ಸಿಬಿಐಗೆ ವಹಿಸಲಾಗಿದೆ. ಇದು ಕಾನೂನುಬಾಹಿರವಾಗಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಅಡ್ವೊಕೇಟ್ ಜನರಲ್ (ಎ.ಜಿ) ಅವರ ಅಭಿಪ್ರಾಯ ಹಾಗೂ ಅನುಮತಿ ಪಡೆದುಕೊಂಡು ಇದೀಗ ಪ್ರಕರಣವನ್ನು ವಾಪಸು ಪಡೆದಿದ್ದೇವೆ' ಎಂದರು.

'ಡಿ.ಕೆ. ಶಿವಕುಮಾರ್ ಅವರು ಶಾಸಕರು. ಅವರ ವಿರುದ್ಧದ ಪ್ರಕರಣವನ್ನು ಸಿಬಿಐಗೆ ವಹಿಸುವ ಮುನ್ನ ಸಭಾಧ್ಯಕ್ಷರ ಅನುಮತಿ ಹಾಗೂ ಅಡ್ವೊಕೇಟ್ ಜನರಲ್ ಅಭಿಪ್ರಾಯ ಪಡೆಯಬೇಕಿತ್ತು' ಎಂದು ಹೇಳಿದರು.

9ನೇ ಪುಟ ನೋಡಿ

'ನ್ಯಾಯಾಲಯದಲ್ಲಿ ಹೋರಾಟಕ್ಕೆ ಸಿದ್ಧ'

'ಜಾರಿ ನಿರ್ದೇಶನಾಲಯದ ಕೋರಿಕೆಯಂತೆ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಆದೇಶಿಸಲಾಗಿತ್ತು. ಈಗ ಅನುಮತಿ ಹಿಂಪಡೆಯುವುದನ್ನು ವಿರೋಧಿಸಿ ಕಾನೂನು ಹೋರಾಟಕ್ಕೆ ನಾವೂ ಸಿದ್ಧ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಎ.ಜಿ ಅಭಿಪ್ರಾಯ ಪಡೆದು, ಕಾನೂನು ಪ್ರಕಾರವೇ ನಾವು ನಿರ್ಧಾರ ಕೈಗೊಂಡಿದ್ದೆವು. ಈಗ ಶಿವಕುಮಾರ್ ಅವರನ್ನು ಸಿಬಿಐ ತನಿಖೆಯಿಂದ ರಕ್ಷಿಸಲು ಅನುಮತಿ ಹಿಂಪಡೆಯುವ ತೀರ್ಮಾನ ಕೈಗೊಳ್ಳಲಾಗಿದೆ' ಎಂದರು.

9ನೇ ಪುಟ ನೋಡಿ

'ಡಿಕೆಶಿಗೆ ಎ.ಜಿ ವಕೀಲರಾಗಿದ್ದರು'

'ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಡಿ.ಕೆ. ಶಿವಕುಮಾರ್ ಅವರ ವಕೀಲರಾಗಿ ಕೆ. ಶಶಿಕಿರಣ್ ಶೆಟ್ಟಿ ವಾದಿಸಿದ್ದರು. ಈಗ ಎ.ಜಿಯಾಗಿ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆಯುವ ಶಿಫಾರಸು ಮಾಡಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ದೂರಿದ್ದಾರೆ.

ಶಿವಕುಮಾರ್ ಅವರ ಪರ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿರುವುದಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅವರು, 'ಪ್ರಭಾವಿ ರಾಜಕಾರಣಿಯ ವಕೀಲರು ಎ.ಜಿಯಾಗಿ ತನಿಖೆಗೆ ಅನುಮತಿ ಹಿಂಪಡೆಯುವ ಶಿಫಾರಸು ನೀಡುತ್ತಾರೆ. ಸಂಪುಟ ಸಭೆಯಲ್ಲಿ ಚರ್ಚೆಯೇ ಆಗದೆ ಅಂಗೀಕೃತವಾಗುತ್ತದೆ. ರಾಷ್ಟ್ರೀಯ ಕಾನೂನು ಶಾಲೆಯ 'ಪ್ರತಿಭೆ' ಶಶಿಕಿರಣ್ ಈ ರೀತಿ ವಿರೋಧಾಭಾಸದ ಪಾತ್ರಗಳನ್ನು ಮಾಡಬಾರದು' ಎಂದಿದ್ದಾರೆ.

ಪೊಲೀಸರಿಂದ ತನಿಖೆಗೆ ಎ.ಜಿ ಸಲಹೆ

'ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ಸಿಬಿಐನಿಂದ ಹಿಂಪಡೆದು ಸ್ಥಳೀಯ ಪೊಲೀಸರು ಅಥವಾ ಲೋಕಾಯುಕ್ತ ಪೊಲೀಸರ ತನಿಖೆಗೆ ವಹಿಸಬಹುದು' ಎಂದು ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಸರ್ಕಾರಕ್ಕೆ ನೀಡಿದ ಸಲಹೆಯಲ್ಲಿ ಪ್ರತಿಪಾದಿಸಿದ್ದಾರೆ.

ಶಿವಕುಮಾರ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಯು ಅಡ್ವೊಕೇಟ್ ಜನರಲ್ ಅಭಿಪ್ರಾಯ ಕೋರಿದ್ದರು. ಮಂಗಳವಾರ (ನವೆಂಬರ್ 21) ಸಲಹೆಯನ್ನು ಸಲ್ಲಿಸಿರುವ ಅವರು, 'ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ನೀಡಿ 2019ರ ಸೆಪ್ಟೆಂಬರ್ 25ರಂದು ಹೊರಡಿಸಿದ್ದ ಆದೇಶ ಕಾನೂನುಬದ್ಧವಾಗಿಲ್ಲ' ಎಂದು ಉಲ್ಲೇಖಿಸಿದ್ದಾರೆ.

9ನೇ ಪುಟ ನೋಡಿ

ಅಂತಿಮ ಗೌರವ ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಉಗ್ರರ ಜೊತೆ ಸೆಣಸಿ ಹುತಾತ್ಮರಾದ ರಾಜ್ಯದ ಯೋಧ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಶುಕ್ರವಾರ ರಾತ್ರಿ ತಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿದರು 5

ಸಂಬಳ ಕೇಳಿದ ದಲಿತ ಯುವಕನ ಬಾಯಿಗೆ ಚಪ್ಪಲಿ

ಮುಖ್ಯಾಂಶಗಳು

- ಮಹಿಳಾ ಉದ್ಯಮಿ, ಇತರ ಆರು ಮಂದಿ ವಿರುದ್ಧ ಪ್ರಕರಣ ದಾಖಲು
- ಕಂಪನಿಯಲ್ಲಿ 16 ದಿನ ಕೆಲಸ ಮಾಡಿದ್ದ ನಿಲೇಶ್

ಮಾರ್ಬಿ (ಗುಜರಾತ್) (ಪಿಟಿಐ): 21 ವರ್ಷ ವಯಸ್ಸಿನ ದಲಿತ ಯುವಕ ನಿಲೇಶ್ ದಲ್ಸಾನಿಯಾ ಅವರ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಮಹಿಳಾ ಉದ್ಯಮಿ ಹಾಗೂ ಆರು ಮಂದಿ ಇತರರ ಮೇಲೆ ಮಾರ್ಬಿ ನಗರದ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಿಲೇಶ್ ಅವರು ಮಹಿಳಾ ಉದ್ಯಮಿಯ ಕಂಪನಿಯಲ್ಲಿ 16 ದಿನ ಕೆಲಸ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ಅವರು ಸಂಬಳ ಕೇಳಿದ್ದರು. ಆಗ ಮಹಿಳಾ ಉದ್ಯಮಿಯು ತಮ್ಮ ಪಾದರಕ್ಷೆಯನ್ನು ಬಲವಂತದಿಂದ ನಿಲೇಶ್ ಅವರು ಬಾಯಿಯಲ್ಲಿ ಕಚ್ಚಿ ಹಿಡಿಯುವಂತೆ ಮಾಡಿದರು, ಆ ಮೂಲಕ ನಿಲೇಶ್ ಕ್ಷಮೆ ಯಾಚಿಸುವಂತೆ ಮಾಡಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇದು ಬುಧವಾರ ನಡೆದಿದೆ. ಹಲ್ಲೆಗೆ ಒಳಗಾದ ನಿಲೇಶ್ ಅವರು ದೂರು ನೀಡಿದ್ದಾರೆ. ಇದನ್ನು ಆಧರಿಸಿ ಮಾರ್ಬಿ ನಗರದ ಪೊಲೀಸರು ಗುರುವಾರ ಎಫ್‌ಐಆರ್ ದಾಖಲಿಸಿದ್ದಾರೆ. ಮಹಿಳಾ ಉದ್ಯಮಿ ವಿಭೂತಿ ಪಟೇಲ್, ಅವರ ಸಹೋದರ ಓಂ ಪಟೇಲ್ ಮತ್ತು ನಿರ್ವಾಹಕ ಪರೀಕ್ಷಿತ್ ಎನ್ನುವವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಎಸ್‌ಸಿ/ಎಸ್‌ಟಿ ಘಟಕದ ಡಿವೈಎಸ್‌ಪಿ ಪ್ರತಿಫಲಸಿಂಹ ಜಾಲಾ ಅವರು ತಿಳಿಸಿದ್ದಾರೆ.

ವಿಭೂತಿ ಪಟೇಲ್ ಅವರು ರಾನಿಬಾ ಇಂಡಸ್ಟ್ರೀಸ್ ಪ್ರೈ.ಲಿ. ಎಂಬ ಕಂಪನಿ ನಡೆಸುತ್ತಿದ್ದಾರೆ. ಅಕ್ಟೋಬರ್ ಆರಂಭದಲ್ಲಿ ವಿಭೂತಿ ಪಟೇಲ್ ಅವರು ನಿಲೇಶ್ ಅವರನ್ನು ಮಾಸಿಕ ₹12 ಸಾವಿರ ಸಂಬಳಕ್ಕೆ ನೇಮಕ ಮಾಡಿಕೊಂಡಿದ್ದರು. ಆದರೆ ಅಕ್ಟೋಬರ್ 18ರಂದು ಅವರನ್ನು ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆಯಲಾಯಿತು. ಕೆಲಸ ಮಾಡಿದ 16 ದಿನಗಳ ಸಂಬಳ ಕೇಳಿದಾಗ, ವಿಭೂತಿ ಪಟೇಲ್ ಅವರು ಸ್ಪಷ್ಟ ಉತ್ತರ ನೀಡಲಿಲ್ಲ. ನಂತರ ಅವರು ನಿಲೇಶ್ ಅವರ ದೂರವಾಣಿ ಕರೆ ಸ್ವೀಕರಿಸುವುದನ್ನು ನಿಲ್ಲಿಸಿದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

'ನಿಲೇಶ್ ಅವರು ತಮ್ಮ ಸಹೋದರ ಮೆಹುಲ್ ಮತ್ತು ನೆರೆಯ ಭವೇಶ್ ಎನ್ನುವವರ ಜೊತೆ ಕಂಪನಿಯ ಕಚೇರಿಗೆ ತೆರಳಿದಾಗ, ವಿಭೂತಿ ಅವರ ಸಹೋದರ ಓಂ ಪಟೇಲ್ ಅವರು ತಮ್ಮ ಸಹಚರರೊಂದಿಗೆ ಅಲ್ಲಿಗೆ ಬಂದರು. ನಿಲೇಶ್ ಮತ್ತು ಇನ್ನಿಬ್ಬರ ಮೇಲೆ ಹಲ್ಲೆ ನಡೆಸಿದರು' ಎಂದು ಜಾಲಾ ವಿವರಿಸಿದರು.

ವಿಭೂತಿ ಅವರು ಕೂಡ ನಿಲೇಶ್ ಅವರಿಗೆ ಹೊಡೆದರು.

13 ನೇ ಪುಟ ನೋಡಿ

ಸದ್ಯ ದೇಶದಲ್ಲಿ ಪ್ರತಿಕೂಲ ಪರಿಣಾಮವಿಲ್ಲ –ಆರೋಗ್ಯ ಸಚಿವಾಲಯ

ಎಚ್‌9ಎನ್‌2 ಸೋಂಕು: ನಿಕಟ ನಿಗಾ

ನವದೆಹಲಿ (ಪಿಟಿಐ): ಚೀನಾದ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚಿರುವುದು ಹಾಗೂ ಎಚ್‌9ಎನ್‌2 ಸೋಂಕು ಪ್ರಕರಣಗಳ ಏರಿಕೆ ಬೆಳವಣಿಗೆಗಳನ್ನು ಭಾರತ ಸೂಕ್ಷ್ಮವಾಗಿ ಮತ್ತು ಎಚ್ಚರಿಕೆಯಿಂದ ಗಮನಿಸುತ್ತಿದೆ.

ಪ್ರಸ್ತುತ ಚೀನಾದಲ್ಲಿ ಕಾಣಿಸಿಕೊಂಡಿರುವ ಈ ಎರಡೂ ರೀತಿ ಸೋಂಕುಗಳಿಂದ ಭಾರತದ ಮೇಲೆ ಹೆಚ್ಚಿನ ಪರಿಣಾಮವಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿಕೆ ನೀಡಿದೆ.

ಆದರೂ, ಚೀನಾದಲ್ಲಿ ಕಾಣಿಸಿಕೊಂಡಿರುವ ಸೋಂಕಿನಿಂದ ಆಗುವ ಯಾವುದೇ ರೀತಿಯ ಪ್ರತಿಕೂಲ ಪರಿಣಾಮವನ್ನು ಎದುರಿಸಲು ಭಾರತ ಸಜ್ಜಾಗಿದೆ ಎಂದು ಆರೋಗ್ಯ ಸಚಿವಾಲಯವು ತಿಳಿಸಿದೆ.

ಕಳೆದ ಕೆಲ ವಾರಗಳಲ್ಲಿ ಚೀನಾದಲ್ಲಿ ಪ್ರಕರಣಗಳು ಗಣನೀಯವಾಗಿ ಏರಿವೆ. ಇದು, ಚಳಿಗಾಲದಲ್ಲಿ ಸಾಮಾನ್ಯವಾಗಿ ಕಾಣಿಸುವ ಅನಾರೋಗ್ಯ ಸಮಸ್ಯೆ. ಯಾವುದೇ ಹೊಸ ಸೋಂಕು ಪತ್ತೆಯಾಗಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಅಕ್ಟೋಬರ್ ತಿಂಗಳಲ್ಲಿ ಚೀನಾದಲ್ಲಿ ಮನುಷ್ಯರಲ್ಲಿ ಎಚ್‌9ಎನ್‌2 (ಹಕ್ಕಿಜ್ವರ) ಕಾಣಿಸಿಕೊಂಡಿದ್ದು, ಈ ಸಂಬಂಧ ಚೀನಾ ಡಬ್ಲ್ಯುಎಚ್‌ಒಗೆ ವರದಿ ಸಲ್ಲಿಸಿದೆ. ಯಾವೆಲ್ಲ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ನವದೆಹಲಿಯಲ್ಲಿ ಪೂರ್ವಭಾವಿ ಸಭೆಯೂ ನಡೆದಿದೆ.

ಡಬ್ಲ್ಯುಎಚ್‌ಒ ಅಧ್ಯಯನದಂತೆ ಮನುಷ್ಯರ ನಡುವೆ ಈ ಸೋಂಕು ವ್ಯಾಪಿಸುವ ಸಾಧ್ಯತೆಗಳು ಕಡಿಮೆ. ಅಲ್ಲದೆ, ಸಾವಿನ ಪ್ರಕರಣಗಳು ಇಲ್ಲ. ಮುಂಜಾಗ್ರತೆಯಾಗಿ ಮನುಷ್ಯರಲ್ಲಿ ವ್ಯಾಪಿಸದಂತೆ ಕಟ್ಟೆಚ್ಚರ ವಹಿಸಲು, ಪರಿಸ್ಥಿತಿ ಅವಲೋಕಿಸಲು ಆರೋಗ್ಯ ಮತ್ತು ಪಶುಸಂಗೋಪನಾ ಇಲಾಖೆಗಳ ನಡುವೆ ಹೆಚ್ಚಿನ ಸಹಕಾರಕ್ಕೆ ಒತ್ತು ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಪರಿಸ್ಥಿತಿ ಎದುರಿಸಲು ಸಜ್ಜು

ಸಾರ್ವಜನಿಕ ಅನಾರೋಗ್ಯ ಸ್ಥಿತಿಯನ್ನು ಸಮಗ್ರವಾಗಿ ನಿಭಾಯಿಸಲು 'ಒನ್ ಹೆಲ್ತ್' ಚಿಂತನೆಯಡಿ (ಅಂತರ್‌ಶಿಸ್ತೀಯ ಮತ್ತು ವಿವಿಧ ಸಂಸ್ಥೆಗಳ ನಡುವಣ ಸಮನ್ವಯದ ಸಮಗ್ರ ಧೋರಣೆ) ಭಾರತ ಕಾರ್ಯ ನಿರ್ವಹಿಸಲಿದೆ ಎಂದು ಆರೋಗ್ಯ ಸಚಿವಾಲಯವು ಹೇಳಿದೆ.

ಕೋವಿಡ್–19 ನಂತರ ಇಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಪೂರಕವಾಗಿ ದೇಶದಲ್ಲಿನ ಆರೋಗ್ಯ ಚಿಕಿತ್ಸಾ ವ್ಯವಸ್ಥೆಯನ್ನೂ ಪರಿಣಾಮಕಾರಿಯಾಗಿ ಬಲಪಡಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಭವಿಷ್ಯದಲ್ಲಿನ ಸಾಂಕ್ರಾಮಿಕ, ಆರೋಗ್ಯ ವಿಕೋಪಗಳ ಪರಿಸ್ಥಿತಿ ಎದುರಿಸಲು ಪ್ರಾಥಮಿಕ, ತಾಲ್ಲೂಕು ಮತ್ತು ವಲಯ ಮಟ್ಟದಲ್ಲಿ ಸೌಲಭ್ಯ ಬಲಪಡಿಸಿದ್ದು, ಪಿಎಂ–ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್‌ನಡಿ ಸಾಮರ್ಥ್ಯ ಹೆಚ್ಚಿಸಲಾಗಿದೆ.

ಇದರ ಹೊರತಾಗಿ , ಭಾರತದಲ್ಲಿ ಕಣ್ಗಾವಲು ಹಾಗೂ ಸೋಂಕು ಪತ್ತೆ ಜಾಲವನ್ನು ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದಡಿ (ಐಡಿಎಸ್‌ಪಿ) ವ್ಯವಸ್ಥಿತವಾಗಿ ರೂಪಿಸಲಾಗಿದೆ. ತುರ್ತು ಅನಾರೋಗ್ಯ ಕುರಿತ ಯಾವುದೇ ಸವಾಲುಗಳನ್ನು ಎದುರಿಸಲು ಬೇಕಾದ ಪರಿಣತಿಯೂ ಇದೆ ಎಂದು ಆರೋಗ್ಯ ಸಚಿವಾಲಯವು ತಿಳಿಸಿದೆ.

ಒಳ ಪುಟ

ಈರುಳ್ಳಿ: ತಗ್ಗಲೇ ಇಲ್ಲ ಚಿಲ್ಲರೆ ದರ 12

ಪತ್ರಿಕಾ ವಿತರಕರಿಗೆ ಸಾಮಾಜಿಕ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನಪತ್ರಿಕೆ ವಿತರಿಸುವವರಿಗೆ ಇನ್ನು ಮುಂದೆ ₹2 ಲಕ್ಷ ಅಪಘಾತ ಪರಿಹಾರ ಸೌಲಭ್ಯ ಹಾಗೂ ₹1 ಲಕ್ಷವರೆಗೆ ವೈದ್ಯಕೀಯ ಸೌಲಭ್ಯ ಸಿಗಲಿದೆ.

ಕಾರ್ಮಿಕ ಇಲಾಖೆಯು ಇದೇ 22ರಂದು ಹೊರಡಿಸಿರುವ ಆದೇಶದಲ್ಲಿ, ದಿನಪತ್ರಿಕೆ ವಿತರಕರನ್ನು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವ್ಯಾಪ್ತಿಗೆ ಸೇರಿಸಲಾಗಿದೆ.

5ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಗಣಿ ಬೊಮ್ಮಸಂದ್ರ ಲಿಂಕ್ ರಸ್ತೆ ವಿದ್ಯುತ್ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಡೆಯಲಿರುವುದರಿಂದ ನ.26ರಂದು ಬೆಳಿಗ್ಗೆ 10ರಿಂದ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗಲಿದೆ.

ನಂದನವನ ಬಡಾವಣೆ, ಜಿಗಣಿ ಕೈಗಾರಿಕೆ ಪ್ರದೇಶ, ಕಲ್ಲುಬಾಳು, ಹಾರಗದ್ದೆ, ಮಾದಪ್ಪನದೊಡ್ಡಿ, ಕೋನಸಂದ್ರ, ಮಾದಪಟ್ಟಣ, ಬೊಮ್ಮಂಡಹಳ್ಳಿ, ನೊಸೆನೂರು, ದ್ಯಾವಸಂದ್ರ, ಜಿಗಣಿ ಪಟ್ಟಣ, ಮದು ಮಿತ್ರ ಬಡಾವಣೆ, ವಾಬಸಂದ್ರ, ಕ್ಯಾಲಸನಹಳ್ಳಿ, ಬಂಡೇನಲ್ಲಸಂದ್ರ, ನವ್ಯ ನಮ್ಮದಿ ಬಡಾವಣೆ, ಮಾರಡಿನಗರ, ಕೈಗಾರಿಕೆ ಪ್ರದೇಶ ಹಂತ-3ರ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಚಂದಾಪುರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂರವಾಣಿ : 080–27682221,
Email : itstaff_ulb_devanahalli@yahoo.co.in

ಸಂಖ್ಯೆ: ದೇಪು/ತಾ.ಶಾ/ಟೆಂಡರ್/ಸಿಆರ್/05/2023–24 ದಿನಾಂಕ: 24.11.2023

ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ (ಕೆಪಿಪಿಪಿ ಪೋರ್ಟಲ್) ಮೂಲಕ ಮಾತ್ರ
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ. ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ 2023–24ನೇ ಸಾಲಿನ. ಸ್ವಚ್ಚ ಭಾರತ್ ಮಿಷನ್ (ನಗರ) 2.0, 2022–23 15ನೇ ಹಣಕಾಸು, 2023–24ನೇ ಸಾಲಿನ ಪುರಸಭಾ ನಿಧಿ, 2023–24ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಟಾಸ್ಕ್, 15ನೇ ಹಣಕಾಸು ಯೋಜನೆಯಡಿ ಕಾಮಗಾರಿಗಳ 03 ಕಾಮಗಾರಿಗಳಿಗೆ ಮರು ಟೆಂಡರ್ ಮತ್ತು 04 ಕಾಮಗಾರಿಗಳಿಗೆ ಮೊದಲನೇ ಕರೆ ಒಟ್ಟು 07 ಕಾಮಗಾರಿಗಳ ಒಟ್ಟು ಮೊತ್ತ ರೂ: 96.62 ಲಕ್ಷಗಳ ಮೊತ್ತಕ್ಕೆ ಟೆಂಡರ್ ಕರೆಯಲು ಐಟಾಂವಾರು ಮತ್ತು ಕೆ.ಪಿ.ಪಿ.ಪಿ ಪೋರ್ಟಾಲ್ ಮುಖಾಂತರ ಏಕ ಲಕೋಟೆ ಪದ್ದತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ:(As per KPP Portal) ಹೆಚ್ಚಿನ ವಿವರಗಳಿಗಾಗಿ ದೇವನಹಳ್ಳಿ ಪುರಸಭಾ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ದೇವನಹಳ್ಳಿ | ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/2278/2023–24 | ಸಹಿ/– ಮುಖ್ಯಾಧಿಕಾರಿ, ಪುರಸಭೆ, ದೇವನಹಳ್ಳಿ

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಅಭಿಯಂತರರು, ನಂ.1 ಕಟ್ಟಡಗಳ ವಿಭಾಗ,
ಎಸ್.ಜೆ.ಪಿ. ಆವರಣ, ಬೆಂಗಳೂರು. ದೂರವಾಣಿ: 080–22255210
ಸಂಖ್ಯೆ: ಕಾಅ/ಕವಿ.1/ಎಇ–4/2023–24/22 ದಿನಾಂಕ: 21.11.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿ ಹೆಸರು: **(1) 2023–24ನೇ ಸಾಲಿನಲ್ಲಿ (01.04.2023ರಿಂದ 31.03.2024) ರಾಜಭವನದಲ್ಲಿ ಕೈಗೊಳ್ಳಲಾಗುವ ರಾಷ್ಟ್ರೀಯ ಹಬ್ಬಗಳ ಕಾಮಗಾರಿಗಳನ್ನು ವಹಿಸಿಕೊಳ್ಳುವುದು.** (ಪಿಡಬ್ಲ್ಯೂಡಿ/2023–24/ಬಿಡಿ/ವರ್ಕ್_ಇಂಡೆಂಟ್ 6226/ಕರೆ–2), ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.24.29 ಲಕ್ಷಗಳು.** ಇಎಂಡಿ: **ರೂ.50,000/–.** ಕಾಮಗಾರಿಯ ದಸ್ತಾವೇಜು ಬೆಲೆ: **ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಕಾಲಾವಧಿ: **7 ತಿಂಗಳು. (2) ಬೆಂಗಳೂರು, ವಸಂತನಗರದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿನ ಆಡಿಟೋರಿಯಂ ಸ್ಟೇಜ್‌ಗೆ ವುಡನ್ ಫ್ಲೋರಿಂಗ್ ಒದಗಿಸುವುದು.** (ಪಿಡಬ್ಲ್ಯೂಡಿ/2023–24/ಬಿಡಿ/ವರ್ಕ್_ಇಂಡೆಂಟ್59/ಕರೆ–3), ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.43.95 ಲಕ್ಷಗಳು.** ಇಎಂಡಿ: **ರೂ.87,900/–.** ಕಾಮಗಾರಿಯ ದಸ್ತಾವೇಜು ಬೆಲೆ: **ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಕಾಲಾವಧಿ: **3 ತಿಂಗಳು.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **ಕಾಮಗಾರಿ ಸಂ.1ಕ್ಕೆ 27.11.2023, ಮಧ್ಯಾಹ್ನ 4.00 ಗಂಟೆಯೊಳಗೆ, ಕಾಮಗಾರಿ ಸಂ.2ಕ್ಕೆ 01.12.2023, ಮಧ್ಯಾಹ್ನ 4.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/2258/ಕೆಎಸ್‌ಎಂಸಿಎ/2023-24

ಕೇಂದ್ರೀಯ ಆಯುರ್ವೇದಿಕ ವಿಜ್ಞಾನಗಳ ಸಂಶೋಧನಾ ಪರಿಷತ್ (ಸಿಸಿಆರ್‌ಎಎಸ್)
(ಆಯುಷ್ ಸಚಿವಾಲಯ, ಭಾರತ ಸರ್ಕಾರ) ಜೆ.ಎಲ್.ಎನ್.ಬಿ.ಸಿ.ಎ.ಹೆಚ್. ಅನುಸಂಧಾನ ಭವನ, ನಂ.61–65, ಇನ್‌ಸ್ಟಿಟ್ಯೂಷನಲ್ ಏರಿಯಾ, 'ಡಿ' ಬ್ಲಾಕ್ ಎದುರು, ಜನಕಪುರಿ, ನವದೆಹಲಿ–110058
ಜಾಹೀರಾತು 2023 (ಡಿಸೆಂಬರ್ ಬ್ಯಾಚ್)
ಸಿಸಿಆರ್‌ಎಎಸ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ ಸ್ಕೀಮ್ (ಸಿಸಿಆರ್‌ಎಎಸ್ ಪಿಡಿಎಫ್ ಸ್ಕೀಮ್)

ಕೇಂದ್ರೀಯ ಆಯುರ್ವೇದಿಕ ವಿಜ್ಞಾನಗಳ ಸಂಶೋಧನಾ ಪರಿಷತ್ (ಸಿಸಿಆರ್‌ಎಎಸ್) ಎಂಬ ಈ ಸಂಸ್ಥೆಯು, ಭಾರತ ಸರ್ಕಾರದ ಆಯುಷ್ ಸಚಿವಾಲಯದ ಒಂದು ಸ್ವಾಯುತ್ತ ಅಂಗವಾಗಿದ್ದು, ಇದೀಗ ಈ ಸಂಸ್ಥೆಯು ಆಯುರ್ವೇದ ಕ್ಷೇತ್ರದಲ್ಲಿ ಆವಿಷ್ಕಾರಿ ಆಲೋಚನೆಗಳನ್ನು ಹೊಂದಿರುವ ಭರವಸೆದಾಯಕ ಯುವ ಸಂಶೋಧಕರನ್ನು ಗುರುತಿಸಿ, ಅವರಿಗೆ ಆಯುರ್ವೇದದ ವಿವಿಧ ಬಹುಶಿಸ್ತೀಯ ವಿಭಾಗಗಳಲ್ಲಿ ತರಬೇತಿ ನೀಡಲು ಮತ್ತು ಸಂಶೋಧನಾ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ, ಆಯುಷ್ ಸಚಿವಾಲಯದಿಂದ ಅನುಮೋದಿತ "ಸಿಸಿಆರ್‌ಎಎಸ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ ಸ್ಕೀಮ್" ಎಂಬ ಯೋಜನೆಯನ್ನು ಇತ್ತೀಚೆಗಷ್ಟೆ ಆರಂಭಿಸಿದೆ. ಇಂತಹ ಯುವ ಸಂಶೋಧಕರನ್ನು ಮಾರ್ಗದರ್ಶನವುಳ್ಳ ಸಂಶೋಧಕರಿಂದ ಸ್ವತಂತ್ರ ಸಂಶೋಧಕರ ಮಟ್ಟಕ್ಕೆ ಪರಿವರ್ತನೆಗೊಳಿಸುವ ಸೌಲಭ್ಯಗಳನ್ನು ನೀಡುವುದೇ ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಸಿಎಸ್‌ಐಆರ್, ಐಸಿಎಂಆರ್, ಡಿಬಿಟಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್, ಆಯುಷ್ ಅಂಗೀಕೃತ ವಿಶ್ವವಿದ್ಯಾಲಯಗಳು ಮತ್ತು ರಾಷ್ಟ್ರೀಯ ಸಂಸ್ಥೆ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಿಂದ, ಆಯುರ್ವೇದ ಪಿಹೆಚ್‌ಡಿ/ಪಿಜಿ ಪದವಿ ಪಡೆದಿರುವ ಮತ್ತು ಸಂಬಂಧಿತ ವಿಜ್ಞಾನ ವಿಷಯಗಳಲ್ಲಿ ಪಿಹೆಚ್‌ಡಿ ಪಡೆದಿರುವ ಭರವಸೆದಾಯಕ ನಿರ್ದಿಷ್ಟ ಪದವೀಧರರಿಗೆ, ಪ್ರತಿ ವರ್ಷ ಇಂತಹ ಹತ್ತು (10) ಫೆಲೋಶಿಪ್‌ಗಳನ್ನು ನೀಡಬೇಕೆಂದು ಸಿಸಿಆರ್‌ಎಎಸ್ ಉದ್ದೇಶಿಸಿರುತ್ತದೆ. ಸಂಬಂಧಿತ ಸಂಸ್ಥೆ/ಕೇಂದ್ರಗಳ ಅವಶ್ಯಕತೆಯ ಆಧಾರದ ಮೇರೆಗೆ, ಸಿಸಿಆರ್‌ಎಎಸ್ ಸಂಸ್ಥೆಯ ಮಹಾ ನಿರ್ದೇಶಕರಿಂದ ಸದರಿ ಫೆಲೋಶಿಪ್‌ಗಳನ್ನು ಹಂಚಿಕೆ ಮಾಡಲಾಗುತ್ತದೆ. ಜೂನ್, 2023ರ ಬ್ಯಾಚ್‌ನಲ್ಲಿ 7 ಪಿಡಿಎಫ್ ಅವಾರ್ಡ್ ಮಾಡಲಾಗಿದೆ. ಡಿಸೆಂಬರ್, **2023ರ ಬ್ಯಾಚ್‌ನಲ್ಲಿನ ಇನ್ನುಳಿದ 3 ಪಿಡಿಎಫ್ ಅವಾರ್ಡ್‌ಗಳಿಗೆ ಅರ್ಜಿ ಸಲ್ಲಿಸುವುದಕ್ಕಾಗಿ ಈ ಜಾಹೀರಾತು ಪ್ರಕಟಿಸಲಾಗಿದೆ. ಡಿಸೆಂಬರ್, 2023ರ ಬ್ಯಾಚ್‌ಗೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 31ನೇ ಡಿಸೆಂಬರ್, 2023.**
ಅರ್ಜಿ ನಮೂನೆಗಾಗಿ, ಅರ್ಹತೆ, ವಯೋಮಿತಿ, ಕಾಲಾವಧಿ, ಸಂಭಾವಣೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಆಯ್ಕೆ ಪ್ರಕ್ರಿಯೆಯ ವಿವರಗಳು ಸೇರಿದಂತೆ, ಸಿಸಿಆರ್‌ಎಎಸ್ ಪಿಡಿಎಫ್ ಸ್ಕೀಮ್‌ನ ವಿವರಗಳಿಗಾಗಿ, ಅರ್ಹ ಆಕಾಂಕ್ಷಿಗಳು ಪರಿಷತ್‌ನ **www.ccras.nic.in** ವೆಬ್‌ಸೈಟ್ ಪರಿಶೀಲಿಸಬಹುದು.

ಸಿಬಿಸಿ **17216/12/0029/2324** | ಆಡಳಿತಾಧಿಕಾರಿ (ಎಸ್ಟ್ಯಾ)

PUBLIC NOTICE

Our client Mr. Kiran V filed Comm.A.A No.11/2023 before X Addl. District & Sessions Judge, Commercial Court, Bangalore Rural District, Bangalore, against **M/s Modern Spaces and others, wherein the Hon'ble Court on 15.11.2023 passed an ex-parte order of temporary injunction restraining the Respondent No.2 to 5, its representatives, agents or any one claiming through them from alienating or creating any manner of third party rights over the Schedule properties of Respondent No.1.**

The public are hereby called upon to take notice of the aforementioned order passed by the Hon'ble Court and called upon not to enter into any transaction in respect of the schedule properties.

SCHEDULE PROPERTIES

All that piece and parcel of Converted land in Kada Agrahara Village, Sarjapura Hobli, Anekal Taluk, Bangalore Urban, with the following Sy. Nos. measurements and boundaries.

Schedule A: Sy No. 40/1 measuring 1 acre 11 guntas, bound by:
North: Road, South: Sy.No.30, East: Sy.No.40/1, West: Sy.No.30

Schedule B: Sy No. 39 measuring 2 acre 17.5 guntas, bound by:
North: Sy. No. 39, South: Sy.No.30,
East: Sy. No.38/1 & 39, West: Sy.No.30 & 65

Schedule C: Sy No. 40/2 measuring 2 acre 30.5 guntas
North: Road, South: Sy.No.65,
East: Sy.No.40/3, 41/5 and 41/6, West: Sy.No.40/1.

Bangalore
Date: 24.11.2023

HOLLA & HOLLA, Advocates
Level 4, Prestige Nebula, No.8,
Cubbon Road, Bangalore - 560001.

ಅಂತರಶಾಲಾ ನೃತ್ಯ ಸ್ಪರ್ಧೆ: ಸಮಕಾಲೀನ ವಿಷಯಗಳ ಪ್ರಸ್ತುತಿ

ನೃತ್ಯ ಸೊಬಗು, ಪ್ರತಿಭೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್‌ಉದ್ಯಾನದ ಬಾಲಭವನದಲ್ಲಿ ಶುಕ್ರವಾರ ನಡೆದ 'ಡೆಕ್ಕನ್ ಹೆರಾಲ್ಡ್' ಮಾಸ್ಟರ್‌ಮೈಂಡ್ ಅಂತರಶಾಲಾ ನೃತ್ಯ ಸ್ಪರ್ಧೆ, ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಆಯಿತು.

ದಿನವಿಡೀ ನಡೆದ ಸ್ಪರ್ಧೆಯು ಕ್ಷಣದಿಂದ ಕ್ಷಣಕ್ಕೆ ವಿದ್ಯಾರ್ಥಿಗಳ ಕಾತರ ಹೆಚ್ಚಿಸುವ ಜೊತೆಗೆ ವಿಜೇತರ ಸಂಭ್ರಮಕ್ಕೂ ಕಾರಣವಾಯಿತು. ಶಾಲೆ– ನಿತ್ಯದ ಕಲಿಕೆಯ ಗುಂಗಿನಲ್ಲಿದ್ದ ವಿದ್ಯಾರ್ಥಿಗಳು, ಶುಕ್ರವಾರ ಮಾತ್ರ ನೃತ್ಯರೂಪಕ ಸಂಭ್ರಮದಲ್ಲಿ ತೇಲಾಡಿದರು.

ಬೆಳಿಗ್ಗೆ 9.30ರ ವೇಳೆಗೆ ಸ್ಪರ್ಧೆ ಆರಂಭವಾಯಿತು. ಹಲವೆಡೆಯಿಂದ ವಿದ್ಯಾರ್ಥಿಗಳ ತಂಡಗಳು ಬಂದಿದ್ದವು. 4ರಿಂದ 7ನೇ ತರಗತಿವರೆಗೆ ಕಿರಿಯರ ವಿಭಾಗ, 8ರಿಂದ 10ನೇ ತರಗತಿವರೆಗೆ ಹಿರಿಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆದವು. ಪ್ರತಿ ವಿಭಾಗದ ಸ್ಪರ್ಧೆ ವೇಳೆಯಲ್ಲೂ ನೆರೆದಿದ್ದ ವಿದ್ಯಾರ್ಥಿಗಳು, ಶಿಕ್ಷಕರು ಚಪ್ಪಾಳೆ ತಟ್ಟಿ ಹುರಿದುಂಬಿಸಿದರು. ಶಿಳ್ಳೆ ಹಾಕಿ ಸಂಭ್ರಮಿಸಿದರು.

ಸಾಂಪ್ರದಾಯಿಕ ಹಾಗೂ ಆಧುನಿಕ ನೃತ್ಯ ಶೈಲಿಯನ್ನು ಪ್ರಸ್ತುತ ಪಡಿಸುವ ಮೂಲಕ ವಿದ್ಯಾರ್ಥಿಗಳು ಸಭಿಕರನ್ನು ನಿಬ್ಬೆರಗಾಗಿಸಿದರು. ವಿದ್ಯಾರ್ಥಿಗಳು ಬರೀ ನೃತ್ಯರೂಪಕ್ಕೆ ಮಾತ್ರ ಒತ್ತು ನೀಡಲಿಲ್ಲ. ನೃತ್ಯದ ಮೂಲಕವೇ ಹಲವು ಸಂದೇಶಗಳನ್ನು ಪ್ರಸ್ತುತ ಪಡಿಸಿದರು. ಸಮಕಾಲೀನ ವಿಷಯಗಳಲ್ಲಿ ಆಯ್ಕೆ ಮಾಡಿಕೊಂಡು ನೃತ್ಯ ಪ್ರಸ್ತುತ ಪಡಿಸುವ ಮೂಲಕ ತೀರ್ಪುಗಾರರ ಮನಸ್ಸು ಗೆಲ್ಲುವ ಪ್ರಯತ್ನ ಮಾಡಿದರು.

ಕಿರಿಯರು ಮತ್ತು ಹಿರಿಯರ ವಿಭಾಗಗಳಲ್ಲಿ ನಡೆದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದುಕೊಳ್ಳಲು ತೀವ್ರ ಪೈಪೋಟಿ ಏರ್ಪಟ್ಟಿತ್ತು. ಪ್ರಶಸ್ತಿ ಘೋಷಣೆ ಆಗುತ್ತಿದ್ದಂತೆಯೇ ವಿಜೇತ ತಂಡಗಳ ವಿದ್ಯಾರ್ಥಿಗಳು ಕೇಕೆ ಹಾಕಿ ಸಂಭ್ರಮಿಸಿದರು. ನೃತ್ಯರೂಪಕಗಳು ಹಸಿರು ಹಾಗೂ ಪರಿಸರದ ಮಹತ್ವ ಸಾರಿದವು. ವೇಷಭೂಷಣಗಳಲ್ಲಿ ಮಕ್ಕಳು ಮಿಂಚಿದರು.

ತೀರ್ಪುಗಾರರಾಗಿದ್ದ ಕಾವ್ಯ ಕಾಶೀನಾಥನ್ ಮಾತನಾಡಿ, 'ಪ್ರತಿ ತಂಡವು ವಿಭಿನ್ನ ಪ್ರಯತ್ನದ ಮೂಲಕ ಸ್ಪರ್ಧೆಯ ಸವಾಲು ಹೆಚ್ಚಿಸಿದವು' ಎಂದರು.

ಮತ್ತೊಬ್ಬ ತೀರ್ಪುಗಾರರಾಗಿದ್ದ ಮಧುಲಿತಾ ಮೊಹಾಪಾತ್ರ ಅವರು, 'ನಮ್ಮನ್ನೂ ಬಾಲ್ಯಕ್ಕೆ ಕರೆದೊಯ್ಯುಂತೆ ಸ್ಪರ್ಧೆ ನಡೆಯಿತು. ವಿದ್ಯಾರ್ಥಿಗಳ ಕೌಶಲ ಕೂಡಾ ಅನಾವರಣವಾಗಿದೆ' ಎಂದರು.

ನವೀನ್ ಕುಮಾರ್ ಮಾತನಾಡಿ, 'ಒಂದೇ ವೇದಿಕೆಯಲ್ಲಿ ಹಲವು ಪ್ರತಿಭೆಗಳು ಅನಾವರಣಗೊಂಡಿವೆ. ಎಲ್ಲ ತಂಡಗಳೂ ಅದ್ಭುತ ಪ್ರದರ್ಶನ ನೀಡಿದವು' ಎಂದರು.

ವಿವಿಧ ಸ್ಪರ್ಧೆಗಳು...: 'ಡೆಕ್ಕನ್ ಹೆರಾಲ್ಡ್' ಮಾಸ್ಟರ್‌ಮೈಂಡ್‌ನಿಂದ ನ.29ರಂದು ರಸಪ್ರಶ್ನೆ ಸ್ಪರ್ಧೆ, 30ರಂದು ಚಿತ್ರಕಲೆ ಹಾಗೂ ಸೃಜನಶೀಲ ಬರಹ, ಡಿ.1ರಂದು ಸ್ಪೆಲ್ ಬೀ ಸ್ಪರ್ಧೆ ಆಯೋಜಿಸಲಾಗಿದೆ.

ನಗರದಲ್ಲಿ ಶುಕ್ರವಾರ ನಡೆದ 'ಡೆಕ್ಕನ್ ಹೆರಾಲ್ಡ್' ಮಾಸ್ಟರ್‌ಮೈಂಡ್ ಅಂತರಶಾಲಾ ನೃತ್ಯ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಬಹುಮಾನ ವಿತರಿಸಲಾಯಿತು. – ಪ್ರಜಾವಾಣಿ ಚಿತ್ರ

> **ಸ್ಪರ್ಧೆಗೆ ಬಂದಿದ್ದರಿಂದ ಬೇರೆ ಶಾಲೆಗಳ ವಿದ್ಯಾರ್ಥಿಗಳ ಪ್ರದರ್ಶನವನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಯಿತು. ಸ್ಪರ್ಧೆಯಲ್ಲಿ ಪೈಪೋಟಿ ಹೆಚ್ಚಿತ್ತು**
> **ಶುತಿಕಾ,** ಪೂರ್ಣಪ್ರಜ್ಞಾ ಪ್ರೌಢಶಾಲೆ, ಕಮ್ಮಗೊಂಡನಹಳ್ಳಿ

> **ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು ಅತ್ಯಂತ ಸಂತೋಷ ನೀಡಿತು. ನಾಲ್ಕು ದಿನ ಅಭ್ಯಾಸ ನಡೆಸಿದ್ದರಿಂದ ಪ್ರದರ್ಶನ ಉತ್ತಮವಾಗಿ ಮೂಡಿಬಂತು**
> **ರೋಷನ್,** 9ನೇ ತರಗತಿ, ಈಸ್ಟ್ ವೆಸ್ಟ್ ಅಕಾಡೆಮಿ, ರಾಜಾಜಿನಗರ

ವಿಜೇತ ಶಾಲೆಗಳ ವಿವರ

ಶಾಲೆ	ಪಡೆದ ಸ್ಥಾನ
ಹಿರಿಯರ ವಿಭಾಗ	
ಸಿಲಿಕಾನ್ ಸಿಟಿ ಅಕಾಡೆಮಿ, ಕೋಣನಕುಂಟೆ	ಪ್ರಥಮ
ಜ್ಯೂಬಿಲಿ ಸ್ಕೂಲ್, ಎನ್‌ಆರ್‌ಐ ಲೇಔಟ್	ದ್ವಿತೀಯ
ಈಸ್ಟ್ ವೆಸ್ಟ್ ಅಕಾಡೆಮಿ, ರಾಜಾಜಿನಗರ	ತೃತೀಯ
ಕಾರ್ಮೆಲ್ ಇಂಗ್ಲಿಷ್ ಸ್ಕೂಲ್, ಪದ್ಮನಾಭ ನಗರ	ಸಮಾಧಾನಕರ
ಕಿರಿಯರ ವಿಭಾಗ	
ಕಾರ್ಮೆಲ್ ಇಂಗ್ಲಿಷ್ ಸ್ಕೂಲ್, ಪದ್ಮನಾಭನಗರ	ಪ್ರಥಮ
ಜ್ಯೂಬಿಲಿ ಸ್ಕೂಲ್, ಎನ್‌ಆರ್‌ಐ ಲೇಔಟ್	ದ್ವಿತೀಯ
ಹೋಲಿ ಸ್ಪಿರಿಟ್ ಸ್ಕೂಲ್, ಬನ್ನೇರುಘಟ್ಟ ರಸ್ತೆ	ತೃತೀಯ
ಸಿಲಿಕಾನ್ ಸಿಟಿ ಅಕಾಡೆಮಿ, ಕೋಣನಕುಂಟೆ	ಸಮಾಧಾನಕರ
ಆರ್ಮಿ ಪಬ್ಲಿಕ್ ಸ್ಕೂಲ್,ಕಾಮರಾಜ್ ರಸ್ತೆ	ಸಮಾಧಾನಕರ

ಸುದ್ದಿ 2 ನಿಮಿಷ

'ನಾರೀ ಶಕ್ತಿ ಸಂಗಮ' ನಾಳೆ

ಬೆಂಗಳೂರು: 'ಸಮರ್ಥ ಭಾರತ' ವತಿಯಿಂದ ಬೆಂಗಳೂರು ದಕ್ಷಿಣ ವಿಭಾಗ ಮಟ್ಟದ 'ನಾರೀ ಶಕ್ತಿ ಸಂಗಮ' ಮಹಿಳಾ ಸಮ್ಮೇಳನವನ್ನು ನ.26ರಂದು ಆಯೋಜಿಸಲಾಗಿದೆ.

ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಮ್ಮೇಳನ ನಡೆಯಲಿದೆ ಎಂದು 'ಸಮರ್ಥ ಭಾರತ' ಬೆಂಗಳೂರು ದಕ್ಷಿಣ ವಿಭಾಗದ ಸಂಯೋಜಕಿ ತೇಜಸ್ವಿನಿ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಸಮಾಜದ ಬಗ್ಗೆ ಕಳಕಳಿಯಿರುವ ಮಹಿಳೆಯರ ಏಕತ್ರೀಕರಣ, ವಿವಿಧ ಪ್ರವೃತ್ತಿಯಲ್ಲಿರುವ ಮಹಿಳೆಯರಿಗೆ ಸಮಾಜಮುಖಿ ದೃಷ್ಟಿ ನೀಡುವುದು, ಸಮಾಜ ಸೇವೆಯ ಅವಕಾಶ ಕಲ್ಪಿಸುವ ಉದ್ದೇಶದಿಂದ ಸಮ್ಮೇಳನ ಆಯೋಜಿಸಲಾಗಿದೆ ಎಂದರು.

ಡಾ. ವಿಜಯಲಕ್ಷ್ಮಿ ದೇಶಮಾನೆ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದು, ಡಾ. ಎಲ್. ಗೋಮತಿದೇವಿ ಅವರು ಉಪಸ್ಥಿತರಿರಲಿದ್ದಾರೆ. ವಿಭು ಅಕಾಡೆಮಿ ಅಧ್ಯಕ್ಷರಾದ ಡಾ. ಆರತಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. 'ಭಾರತೀಯ ಚಿಂತನೆಯಲ್ಲಿ ಮಹಿಳೆ' ವಿಷಯ ಸಂಕಿರಣ, 'ಸ್ವಾವಲಂಬಿ ಮಹಿಳೆಯ ಸ್ಥಿತಿ, ಸವಾಲುಗಳು ಹಾಗೂ ಪರಿಹಾರ' ಹಾಗೂ 'ಆಧುನಿಕ ಭಾರತ ವಿಕಾಸದಲ್ಲಿ ಮಹಿಳೆಯರ ಪಾತ್ರ' ಚರ್ಚಾಗೋಷ್ಠಿಗಳು ನಡೆಯಲಿವೆ. ಸಮಾರೋಪದಲ್ಲಿ ಮಾಜಿ ಶಾಸಕ ಡಾ.ಎಸ್.ಆರ್. ಲೀಲಾ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುಮಾರು 2 ಸಾವಿರ ಮಹಿಳೆಯರು ಭಾಗವಹಿಸಲಿದ್ದು, ರಾಷ್ಟ್ರೀಯ ಸಾಧಕ ಮಹಿಳೆ, ವನವಾಸಿ, ಗೋ ಉತ್ಪನ್ನ ಹಾಗೂ ಸ್ವದೇಶಿ ಮಳಿಗೆಗಳು ಇರಲಿವೆ ಎಂದರು.

ಪಾದಚಾರಿ ಮಾರ್ಗ ಒತ್ತುವರಿ ಅನಧಿಕೃತ ಕೇಬಲ್ ತೆರವು

ಬೆಂಗಳೂರು: ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಹಾಗೂ ಅನಧಿಕೃತವಾಗಿ ಒಎಫ್‌ಸಿ ಕೇಬಲ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಶುಕ್ರವಾರ ತೆರವುಗೊಳಿಸಿದರು.

ಶಾಂತಿನಗರ, ಶಿವಾಜಿನಗರ, ಸಿ.ವಿ. ರಾಮನ್‌ನಗರ, ಪುಲಕೇಶಿನಗರ, ಸರ್ವಜ್ಞನಗರ ಮತ್ತು ಹೆಬ್ಬಾಳ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಂಗಡಿ, ಮಳಿಗೆಗಳ ಚಾವಣಿ, ಅನುಪಯುಕ್ತ ತಳ್ಳುವ ಗಾಡಿ ಹಾಗೂ ಅನಧಿಕೃತವಾಗಿ ಅಳವಡಿಸಿರುವ ಓಎಫ್‌ಸಿ ಕೇಬಲ್‌ಗಳ ತೆರವು ಕಾರ್ಯಾಚರಣೆ ನಡೆಯಿತು.

7.85 ಕಿ.ಮೀ ವ್ಯಾಪ್ತಿಯ ರಸ್ತೆಯಲ್ಲಿ 104 ಅನುಪಯುಕ್ತ ತಳ್ಳುವ ಗಾಡಿ ಜಪ್ತಿ ಮಾಡಲಾಗಿದೆ. 36 ಪಾದಚಾರಿ ಮಾರ್ಗಕ್ಕೆ ಚಾಚಿಕೊಂಡ ಅಂಗಡಿಗಳ ಚಾವಣಿ, 52 ಅನಧಿಕೃತ ನಾಮಫಲಕಗಳು, 3,700 ಮೀಟರ್ ಅನಧಿಕೃತ ಓಎಫ್‌ಸಿ ಕೇಬಲ್‌ಗಳು ಹಾಗೂ ಎರಡು ಅನಧಿಕೃತ ಪೆಟ್ಟಿಗೆ ಅಂಗಡಿ ತೆರವುಗೊಳಿಸಲಾಗಿದೆ ಎಂದು ವಲಯ ಜಂಟಿ ಆಯುಕ್ತೆ ಕೆ.ಆರ್ ಪಲ್ಲವಿ ತಿಳಿಸಿದರು.

ಕಮಾಂಡ್ ಕೇಂದ್ರ ಶುರು

ಬೆಂಗಳೂರು: 'ಪೊಲೀಸ್ ಕಮಾಂಡ್ ಕೇಂದ್ರವನ್ನು ಸುಸಜ್ಜಿತ ರೀತಿಯಲ್ಲಿ ನಿರ್ಮಿಸಲಾಗಿದೆ. ಬೆಂಗಳೂರು ಜನರಿಗೆ ಸುರಕ್ಷತೆ ಒದಗಿಸುವ ಕೇಂದ್ರವಾಗಿ ಕೆಲಸ ಮಾಡಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಅಲಿ ಅಸ್ಕರ್ ರಸ್ತೆಯಲ್ಲಿ ಪೊಲೀಸ್ ಕಮಿಷನರ್ ಕಚೇರಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿರುವ ಬಹುಮಹಡಿ ಕಟ್ಟಡದ ಕಮಾಂಡ್ ಕೇಂದ್ರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನಿರ್ಭಯಾ ನಿಧಿಯಡಿ ರೂಪಿಸಲಾದ 'ಸುರಕ್ಷಿತ ನಗರ ಯೋಜನೆ'ಯಡಿ ಕಮಾಂಡ್ ಕೇಂದ್ರ ನಿರ್ಮಿಸಲಾಗಿದೆ. ಕೇಂದ್ರ ಸರ್ಕಾರ ಶೇ 40ರಷ್ಟು ಹಾಗೂ ರಾಜ್ಯ ಸರ್ಕಾರ ಶೇ 60 ಅನುದಾನ ಒದಗಿಸಿದೆ' ಎಂದರು.

'ವಿಶೇಷವಾಗಿ ಮಹಿಳೆಯರಿಗೆ ಸುರಕ್ಷತೆ ಒದಗಿಸುವುದು ಕೇಂದ್ರದ ಉದ್ದೇಶ. ಮಹಿಳೆಯರು ಅಪಾಯದಲ್ಲಿದ್ದ ಸಂದರ್ಭದಲ್ಲಿ ಕರೆ ಮಾಡಿದರೆ, ಹೊಯ್ಸಳ ಗಸ್ತು ವಾಹನ 7 ನಿಮಿಷದಲ್ಲಿ ಸ್ಥಳದಲ್ಲಿ ಇರಲಿದೆ' ಎಂದು ಮುಖ್ಯಮಂತ್ರಿ ಹೇಳಿದರು.

ಗೃಹ ಸಚಿವ ಜಿ. ಪರಮೇಶ್ವರ ಇತರರು ಇದ್ದರು.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ–561203.
ಸಂಖ್ಯೆ: ಬಾಪಪಂ/ತಾಂ.ಶಾ/ಟೆ.ಪ್ರ/05/2023–24 ದಿನಾಂಕ: 24–11–2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರಿಂದ 2023–24ನೇ ಸಾಲಿನ 15ನೇ ಹಣಕಾಸು ಯೋಜನೆ, ಎಸ್.ಎಫ್.ಸಿ ಯೋಜನೆ ಮತ್ತು ಪಟ್ಟಣ ಪಂಚಾಯಿತಿ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ **ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ **ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್** ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ಯಾಕೇಜ್ ಸಂ.	ಕೆಲಸದ ವಿವರ
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು	
1	DMA/2023-24/OW/WORK_INDENT6971
2	DMA/2023-24/RD/WORK_INDENT6961
3	DMA/2023-24/RD/WORK_INDENT6965
ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ	
4	DMA/2023-24/OW/WORK_INDENT6977
5	DMA/2023-24/RD/WORK_INDENT6968
ಸಾಮಾನ್ಯ ವರ್ಗದ ಕಾಮಗಾರಿಗಳು	
6	DMA/2023-24/WS/WORK_INDENT7408
7	DMA/2023-24/WS/WORK_INDENT7420
8	DMA/2023-24/RD/WORK_INDENT6958
9	DMA/2023-24/RD/WORK_INDENT6969
10	DMA/2023-24/RD/WORK_INDENT6973
11	DMA/2023-24/OW/WORK_INDENT6974
12	DMA/2023-24/RD/WORK_INDENT7131
13	DMA/2023-24/OW/WORK_INDENT7138
14	DMA/2023-24/OW/WORK_INDENT7146
15	DMA/2023-24/OW/WORK_INDENT7150
16	DMA/2023-24/WS/WORK_INDENT7124

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮುಖಾಂತರ ಕಾಮಗಾರಿ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 1.92 ಲಕ್ಷದಿಂದ ಗರಿಷ್ಠ 15.00 ಲಕ್ಷಗಳಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **08–12–2023 ರ 17.00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ: **11–12–2023 ರಂದು 17.15 ಗಂಟೆಗೆ. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.**

ಸಹಿ/– ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ | ವಾಸಾಸಂಇ/ವಾಪ್ರಾ/2260/ಸ್ಕ್ಯಾನ್/2023–24 | ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–110/1784/2023–24 ದಿನಾಂಕ:24.11.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಎ.ಎಸ್. ರಾಜೇಶ್ವರಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಬಂಡಾಪುರ	39/2	0–32	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆಗಳು ಸಂಗ್ರಹವಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/52/2023-24 | ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಆಸ್ತಿ ಡಿಜಿಟಲೀಕರಣ ಗುರಿ: ಅಸಮಾಧಾನ

ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳಿಗೆ ಮಾನಸಿಕ ಒತ್ತಡ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳನ್ನು ಡಿಜಿಟಲೀಕರಣ ಮತ್ತು ಆಸ್ತಿ ತೆರಿಗೆ ವಿಮರ್ಶೆ ಪ್ರಕ್ರಿಯೆಗೆ ಗುರಿ ನೀಡಿರುವುದಕ್ಕೆ ಕಂದಾಯ ಸಿಬ್ಬಂದಿಯಿಂದ ಅಸಮಾಧಾನ ವ್ಯಕ್ತವಾಗಿದೆ.

'ಕಂದಾಯ ನಿರೀಕ್ಷಕ, ತೆರಿಗೆ ನಿರೀಕ್ಷಕ ನಿತ್ಯ ತಲಾ 25 ಆಸ್ತಿಗಳಿಗೆ ಈ ಪ್ರಕ್ರಿಯೆಗಳನ್ನು ಮುಗಿಸಬೇಕು ಎಂದು ಗುರಿ ನೀಡಲಾಗಿದೆ. ಆದರೆ, ಲೋಕಸಭೆ ಚುನಾವಣೆಗೆ ಮತದಾರರ ಪಟ್ಟಿ ಪರಿಷ್ಕರಣೆ, ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ಮತದಾರರ ಪಟ್ಟಿ ತಯಾರಿ ಕಾರ್ಯವೇ ಅಧಿಕವಾಗಿದೆ. ಈ ಸಂದರ್ಭದಲ್ಲಿ 25 ಆಸ್ತಿಗಳ ಗುರಿ ನೀಡಿರುವುದು ಸರಿಯಲ್ಲ' ಎಂದಿದ್ದಾರೆ.

'ಎ ಹಾಗೂ ಬಿ ಖಾತೆಗಳನ್ನು ಹೊಂದಿರುವ ಆಸ್ತಿಗಳ ತೆರಿಗೆ ವಿಮರ್ಶೆ ಹಾಗೂ ನಕ್ಷೆ ಉಲ್ಲಂಘನೆ, ಸ್ವಯಂ ಘೋಷಿತ ತೆರಿಗೆಯಲ್ಲಿನ ವ್ಯತ್ಯಾಸಗಳನ್ನೆಲ್ಲ ತಪಾಸಣೆ ನಡೆಸಿ ಡಿಜಿಟಲೀಕರಣಗೊಳಿಸುವುದಕ್ಕೆ ಸಮಯ ಬೇಕಿದೆ. ಆದರೆ ಇದೀಗ ಮತದಾರರ ಪಟ್ಟಿ ಪರಿಷ್ಕರಣೆಗೆ ಹೆಚ್ಚಿನ ಸಮಯ ಬೇಕಾಗಿರುವುದರಿಂದ ಆಸ್ತಿ ತೆರಿಗೆ ಪ್ರಕ್ರಿಯೆ ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಂದಾಯ ವಿಭಾಗದ ಅಧಿಕಾರಿಗಳು ಹೇಳಿದರು.

'ಚುನಾವಣೆಗಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಯುವ ಸಂದರ್ಭದಲ್ಲಿ ಸಾಮಾನ್ಯವಾಗಿ ಆಸ್ತಿ ತೆರಿಗೆ ಪ್ರಕ್ರಿಯೆಗೆ ಸ್ವಲ್ಪ ವಿರಾಮ ನೀಡಲಾಗುತ್ತಿತ್ತು. ಈ ಬಾರಿ ಹೆಚ್ಚಿನ ಒತ್ತಡ ಹಾಕಲಾಗುತ್ತಿದೆ' ಎಂದು ದೂರಿದರು.

'ಕೆಲಸದ ಒತ್ತಡದಿಂದ ಹಲವರು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ರಕ್ತದೊತ್ತಡ, ಮಧುಮೇಹದ ಸಮಸ್ಯೆಗಳು ಹೆಚ್ಚಾಗಿದ್ದು, ಹಲವರಿಗೆ ಹೊಸದಾಗಿ ಈ ರೋಗಗಳು ಆವರಿಸಿಕೊಳ್ಳುತ್ತಿವೆ' ಎಂದು ಹೇಳಿದರು.

ಆಯೋಗಕ್ಕೆ ದೂರು: 'ಬಹಳಷ್ಟು ಕಾರ್ಯಗಳನ್ನು ಒಮ್ಮೆಲೇ ಮಾಡಲು ಸಾಧ್ಯವಾಗದೇ ಬಿಬಿಎಂಪಿ ಕಂದಾಯ ವಿಭಾಗದ ಹಲವು ಅನಾರೋಗ್ಯ ಪೀಡಿತರಾಗಿರುತ್ತಾರೆ ಮತ್ತು ಮಾನಸಿಕವಾಗಿ ಜರ್ಜರಿತರಾಗಿ ಖಿನ್ನತೆಗೆ ಒಳಗಾಗಿರುತ್ತಾರೆ. ಕೆಲಸ ಒತ್ತಡ ನಿವಾರಿಸಲು ಕ್ರಮ ಕೈಗೊಳ್ಳಬೇಕು ಎಂದು' ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್. ಆರ್. ರಮೇಶ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿಯನ್ನು ಅತ್ಯಧಿಕ ಕೆಲಸದ ಒತ್ತಡ ಹಾಕಿ ಮಾನಸಿಕವಾಗಿ ಕುಗ್ಗಿಸಲಾಗುತ್ತಿದೆ. ಮಾನವೀಯ ನೆಲೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಅವರಿಗೂ ಪತ್ರ ಬರೆದಿದ್ದಾರೆ.

'ಕಂದಾಯ ಸಿಬ್ಬಂದಿ ಮನವಿ ನೀಡಿಲ್ಲ. ಅವರು ಮನವಿ ನೀಡಿದರೆ, ಮುಖ್ಯ ಆಯುಕ್ತರೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿ ತಿಳಿಸಿದರು.

ಆದ್ಯತೆ ಮೇಲೆ ನೀಡಲಿ: 'ಬೆಳಿಗ್ಗೆ ಆಸ್ತಿ ತೆರಿಗೆ ಪ್ರಕ್ರಿಯೆ ಮಾಡಿ, ರಾತ್ರಿ ಮತದಾರರ ಪಟ್ಟಿ ಕೆಲಸ ಮಾಡಿ ಎನ್ನುತ್ತಾರೆ. ಇದು ಯಾವ ನ್ಯಾಯ ಹೇಳಿ. ಊಟ–ನಿದ್ದೆ, ವಿಶ್ರಾಂತಿ ಇಲ್ಲದೆ ಕೆಲಸ ಮಾಡಲು ಸಾಧ್ಯವೆ? ಆದರೆ, ನಾವೂ ಮನುಷ್ಯರೇ ಅಲ್ಲವೇ' ಎಂದು ಕಂದಾಯ ವಿಭಾಗದ ಸಿಬ್ಬಂದಿ ಪ್ರಶ್ನಿಸಿದರು.

'ಆರ್‌ಟಿಐ, ಹೊಸ ಖಾತೆ, ಖಾತೆ ವರ್ಗಾವಣೆಯ ನಿತ್ಯದ ಪ್ರಕ್ರಿಯೆಗಳನ್ನೂ ಪೂರೈಸಬೇಕು. ಇದರ ಜೊತೆಗೆ ಕಂದಾಯ, ಆಸ್ತಿ, ಜಾಹೀರಾತು, ಚುನಾವಣೆ ವಿಭಾಗದ ಹಿರಿಯ ಅಧಿಕಾರಿಗಳು ಹೊಸ ಆದೇಶಗಳನ್ನು ಹೊರಡಿಸಿ, ನಮ್ಮ ಕೆಲಸ ಮೊದಲು ಆಗಬೇಕು ಎಂದು ಅಪ್ಪಣೆ ಮಾಡುತ್ತಾರೆ. ಇದಕ್ಕೆ ಮುಖ್ಯ ಆಯುಕ್ತರು ಪರಿಹಾರ ಸೂಚಿಸಬೇಕು' ಎಂದು ಮನವಿ ಮಾಡಿದರು.

ನಿಧನ ವಾರ್ತೆ

ಕೆ.ಸಿ. ಈರಪ್ಪ ರೆಡ್ಡಿ

ಬೆಂಗಳೂರು: ಕಾಚರಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಯಲಹಂಕ ತಾಲ್ಲೂಕು ಬೋರ್ಡ್ ಅಭಿವೃದ್ಧಿ ಮಂಡಳಿ ಸದಸ್ಯರಾಗಿದ್ದ ಕೆ.ಸಿ. ಈರಪ್ಪ ರೆಡ್ಡಿ (86) ಅವರು ಶುಕ್ರವಾರ ನಿಧನರಾದರು. ಅವರಿಗೆ ನಾಲ್ವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ರಾಜ್ಯಸಭೆ ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ, ಕೆ.ಸಿ. ಜಗನ್ನಾಥ್ ರೆಡ್ಡಿ ಹಾಗೂ ಡಾ. ರಾಜು ರೆಡ್ಡಿ ಅವರು ಈರಪ್ಪ ರೆಡ್ಡಿ ಅವರ ಸಹೋದರರು.

ಆರೋಪಿಗಳ ಬಂಧನಕ್ಕೆ ಜೆಡಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ವಿರುದ್ಧ ಪೋಸ್ಟರ್ ಅಂಟಿಸಿದ ಆರೋಪಿಗಳನ್ನು ಬಂಧಿಸದಿದ್ದರೆ ಗೃಹ ಸಚಿವರ ವಿಧಾನಸೌಧದ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಜೆಡಿಎಸ್ ಮುಖಂಡರು ಹೇಳಿದರು.

ಈ ಕುರಿತು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ರಾಜ್ಯದ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ಅವರು, ಆರೋಪಿಗಳನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಭ್ರಷ್ಟಾಚಾರವನ್ನು ಬಯಲಿಗೆಳೆದ ಕಾರಣಕ್ಕೆ ಕುಮಾರಸ್ವಾಮಿ ವಿರುದ್ಧ ಜೆಡಿಎಸ್ ಕಚೇರಿಯ ಆವರಣದಲ್ಲೇ ಪೋಸ್ಟರ್ ಅಂಟಿಸಿ, ನಿಂದನೆ ಮಾಡಿದ್ದಾರೆ. ಶ್ರೀರಾಂಪುರ ಠಾಣೆಯಲ್ಲಿ ದೂರು ದಾಖಲಾಗಿದೆ. ಆದರೆ, ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

'ಕನ್ನಡ ಬೇಡವೆನ್ನುವ ಅನ್ಯಭಾಷಿಕರ ಪ್ರಶ್ನಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳ ಹಾವಳಿಯಲ್ಲಿ ನಮ್ಮ ಭಾಷೆಯನ್ನೇ ನಾವು ಮರೆಯುವಂತಹ ಸ್ಥಿತಿಗೆ ತಲುಪಿದ್ದೇವೆ' ಎಂದು ನಿರೂಪಕಿ ಅಪರ್ಣಾ ವಸ್ತಾರೆ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘ, ಯಲಹಂಕದ ಶೇಷಾದ್ರಿಪುರ ಕಾಲೇಜಿನ ಕನ್ನಡ ವಿಭಾಗ ಮತ್ತು ಕನ್ನಡ ಸಂಘದ ಸಹಯೋಗದಲ್ಲಿ ನಡೆದ 'ಇಂದಿರಾ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮತ್ತು ಕರ್ನಾಟಕ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

'ಅನ್ಯಭಾಷಿಕರ ಪಾರಮ್ಯ ಹೆಚ್ಚಾಗಿರುವ ಈ ಸಂದರ್ಭದಲ್ಲಿ ಅದನ್ನು ಪ್ರಶ್ನಿಸುವ ತಾಕತ್ತನ್ನು ನಾವು ಬೆಳೆಸಿಕೊಳ್ಳಬೇಕು. ಅವರಿಗೆ ಕನ್ನಡದ ನೆಲ, ಗಾಳಿ, ಜಲ, ಎಲ್ಲವೂ ಬೇಕು. ಆದರೆ, ಕನ್ನಡದ ಗುರುತು ಬೇಡ ಎಂದಾದಾಗ ಯಾಕೆ ಬೇಡ ಎನ್ನುವ ಪ್ರಶ್ನೆ ನಮ್ಮಲ್ಲಿ ಮೂಡದಿದ್ದರೆ ಕನ್ನಡತನ ಎನ್ನುವುದು ಎಲ್ಲಿ ಉಳಿದೀತು' ಪ್ರಶ್ನಿಸಿದರು.

ಕವಯಿತ್ರಿ ಆರ್‌ಹಂಸ ಅವರಿಗೆ 'ಇಂದಿರಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರು, 'ಈ ನಾಡಿನ ಸಂಸ್ಕೃತಿ, ಸಾಹಿತ್ಯದ ಬಗ್ಗೆ ಹೇಳುವಾಗ ನಮಗೆ ಎರಡು ಮುಖ್ಯ ವ್ಯಕ್ತಿಗಳು ಜ್ಞಾಪಕಕ್ಕೆ ಬರುತ್ತಾರೆ. ನಟ ರಾಜ್‌ಕುಮಾರ್ ಒಬ್ಬರು. ಈ ನಾಡಿನ ಸಂಸ್ಕೃತಿಯನ್ನು ತಮ್ಮ ಸಿನಿಮಾಗಳ ಮೂಲಕ ಯಾವರೀತಿ ಕಟ್ಟಿಕೊಟ್ಟಿದ್ದಾರೆ ಎಂಬುದೇ ಒಂದು ಅಧ್ಯಯನ ಯೋಗ್ಯ ವಿಷಯ. ಇನ್ನೊಬ್ಬರು ಸಾಹಿತ್ಯದ ಮಾರ್ಗವನ್ನೇ ಹಾಕಿಕೊಟ್ಟಂತಹ ಕುವೆಂಪು ಅವರು. ಈ ಇಬ್ಬರನ್ನೂ ಇಂದಿನ ಯುವಜನತೆ ಅರಿಯುವ ಅಗತ್ಯವಿದೆ' ಎಂದರು.

ಕಾಲೇಜಿನ ಪ್ರಾಂಶುಪಾಲ ಎಸ್. ಎನ್. ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಿ.ಸಿ. ಗೀತಾ, ಕಾಲೇಜಿನ ಐಕ್ಯುಎಸಿಯ ಸಂಚಾಲಕ ಎಂ.ಎಲ್. ಅಶೋಕ್ ಅವರು ಇದ್ದರು.

ವಿಶ್ವ ತುಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಶೋಭಾ ಕರಂದ್ಲಾಜೆ

‘ಇಂಗ್ಲಿಷ್ ಮೋಹ: ತುಳು ಮರೆವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುಳುವರು ತಮ್ಮ ವಿಶಿಷ್ಟ ಸಂಸ್ಕೃತಿ, ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ, ಯುವಪೀಳಿಗೆಯು ಇಂಗ್ಲಿಷ್ ಮೋಹಕ್ಕೆ ಒಳಗಾಗಿ ತುಳು ಮರೆಯುತ್ತಿದ್ದಾರೆ’ ಎಂದು ಕೇಂದ್ರದ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ವಿಷಾದಿಸಿದರು.

ತುಳುಕೂಟ ಬೆಂಗಳೂರು ಇದರ 50ನೇ ವರ್ಷದ ಸಂಭ್ರಮದ ಪ್ರಯುಕ್ತ ನಗರದಲ್ಲಿ ಶುಕ್ರವಾರ ನಡೆದ ವಿಶ್ವ ತುಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಮಾತನಾಡಿದರು.

‘ತುಳುವಿಗೆ ಜಾತಿ, ಧರ್ಮಗಳ ಮಿತಿ ಇಲ್ಲ. ಎಲ್ಲ ಧರ್ಮ, ಜಾತಿ ಸಮುದಾಯದವರ ಭಾಷೆ, ಸಂಸ್ಕೃತಿ ತುಳು. ಹಿಂದೆ ತುಳುವಿಗೆ ಲಿಪಿ ಇತ್ತು. ಆದರೆ, ಅದನ್ನು ಯಾರೂ ಬಳಸದ ಕಾರಣ ನಾವೆಲ್ಲ ತುಳುವನ್ನು ಕನ್ನಡ ಲಿಪಿಯಲ್ಲೇ ಬರೆಯುತ್ತಿದ್ದೇವೆ. ಈಗ ತುಳು ಲಿಪಿಯನ್ನು ಕಲಿಸುವ ಕೆಲಸವಾಗುತ್ತಿದೆ. ತುಳುವರೆಲ್ಲರೂ ತುಳು ಲಿಪಿ ಕಲಿಯಬೇಕು’ ಎಂದು ಸಲಹೆ ನೀಡಿದರು.

ಬೆಂಗಳೂರಿನಲ್ಲಿ ನಡೆದ ವಿಶ್ವ ತುಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಕಲಾವಿದರು ಆಕರ್ಷಕ ನೃತ್ಯ ಪ್ರದರ್ಶಿಸಿದರು

ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

‘ತುಳುವರು ಎಲ್ಲೇ ಹೋದರೂ ತಮ್ಮ ಸಂಸ್ಕೃತಿಯನ್ನು ಹರಡುತ್ತಾರೆ’ ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹೇಳಿದರು.

‘ತುಳು ಜನಪದ ಸಂಸ್ಕೃತಿ ಪ್ರತಿಬಿಂಬಿಸುವ ಕಂಬಳ ಈಗ ತುಳು ನಾಡಿನ ಗಡಿ ದಾಟಿ ಬೆಂಗಳೂರಿಗೆ ಬಂದಿದೆ. ಹೊರರಾಜ್ಯ, ಹೊರದೇಶಗಳಿಗೆ ತುಳುವರು ಹೋದರೆ, ಅಲ್ಲಿ ತಮ್ಮ ಛಾಪು ಮೂಡಿಸುತ್ತಾರೆ’ ಎಂದು ಶ್ಲಾಘಿಸಿದರು.

‘ನಾಗರಿಕತೆಗೆ ಸಂಸ್ಕಾರ ಸೇರಿದರೆ ಸಂಸ್ಕೃತಿಯಾಗುತ್ತದೆ. ಅಂಥ ವಿಶಿಷ್ಟ ಸಂಸ್ಕೃತಿಯನ್ನು ತುಳು ಹೊಂದಿದೆ. ನಾನು ಮೂರು ಮಹಾಕಾವ್ಯಗಳನ್ನು ಕನ್ನಡದಲ್ಲಿ ಬರೆದಿದ್ದರೂ ಅದರ ಆತ್ಮ ತೌಳವ ಸಂಸ್ಕೃತಿಯೇ ಆಗಿದೆ’ ಎಂದು ವಿವರಿಸಿದರು.

ವಿವಿಧ ಕ್ಷೇತ್ರಗಳ ಸಾಧಕರಾದ ವೀರಪ್ಪ ಮೊಯ್ಲಿ, ಸೆಂಚೂರಿ ಬಿಲ್ಡರ್ ಅಧ್ಯಕ್ಷ ದಯಾನಂದ ಪೈ, ಪ್ರಗತಿಪರ ಕೃಷಿಕ ಮಹಾಲಿಂಗ ನಾಯ್ಕ ಅಮೈ, ದುಬೈ ತುಳು ವಿಶ್ವಸಮ್ಮೇಳನದ ರೂವಾರಿ ಸರ್ವೋತ್ತಮ ಶೆಟ್ಟಿ, ಕತಾರ್ ತುಳುಕೂಟದ ಮಾಜಿ ಅಧ್ಯಕ್ಷ ದಿವಾಕರ ಪೂಜಾರಿ, ದೇವಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಸದಾನಂದ ಶೆಟ್ಟಿ, ಕುವೈತ್ ತುಳುಕೂಟದ ಮಾಜಿ ಅಧ್ಯಕ್ಷ ವಿಲ್ಸನ್ ಡಿಸೋಜ, ಸಮಾಜ ಸೇವಕ ಅಬ್ದುಲ್ಲಾ ಮಾದುಮೂಲೆ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನದ ಅಧ್ಯಕ್ಷ ರವಿ ಶೆಟ್ಟಿ ಮೂಡಂಬೈಲು, ಬೆಂಗಳೂರು ಕಂಬಳ ಸಮಿತಿ ಗೌರವಾಧ್ಯಕ್ಷ ಪ್ರಕಾಶ್ ಶೆಟ್ಟಿ, ಅಧ್ಯಕ್ಷ ಅಶೋಕ್ ಕುಮಾರ್ ರೈ, ಸಂಗೀತ ನಿರ್ದೇಶಕ ಗುರುಕಿರಣ್, ತುಳುಕೂಟ ಅಧ್ಯಕ್ಷ ಸುಂದರರಾಜ್ ರೈ, ಗೌರವಾಧ್ಯಕ್ಷ ಕೆ.ವಿ. ರಾಜೇಂದ್ರಕುಮಾರ್, ಪ್ರಧಾನ ಕಾರ್ಯದರ್ಶಿ ಅಜಿತ್ ಹೆಗ್ಡೆ ಕೆ. ಇದ್ದರು.

ಕುಣಿತ ಭಜನೆ, ತುಳು ಪದರಂಗಿತ (ಹಾಡು), ತುಳು ಜನಪದ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಿ.ಎಂ ಜನತಾ ದರ್ಶನ 27ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 27 ರಂದು ಬೆಳಿಗ್ಗೆ 9.30 ರಿಂದ ಗೃಹ ಕಚೇರಿ ಕೃಷ್ಣಾದಲ್ಲಿ ಜನತಾ ದರ್ಶನ ನಡೆಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ಜನರ ಬಳಿಗೇ ಆಡಳಿತ ಕೊಂಡೊಯ್ಯುವ ನಿಟ್ಟಿನಲ್ಲಿ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಜನತಾ ದರ್ಶನ ನಡೆಸುವಂತೆ ಮುಖ್ಯಮಂತ್ರಿ ಸೂಚಿಸಿದ್ದರು.

ನಗರದ ಎಚ್‌ಎಸ್‌ಆರ್ ಬಡಾವಣೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಶುಕ್ರವಾರ ನಡೆದ ಕರ್ನಾಟಕ ರಾಜ್ಯೋತ್ಸವಕ್ಕೆ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರು ಚಾಲನೆ ನೀಡಿದರು

‘ಗಿಳಿಪಾಠವಾದ ಬೋಧನೆ ಶಿಕ್ಷಣ ವ್ಯವಸ್ಥೆಯ ದುರಂತ’

ಬೆಂಗಳೂರು: ‘ಇಂದು ಶಿಕ್ಷಣ ವ್ಯವಸ್ಥೆ ಕ್ರಿಯಾಶೀಲತೆ ಕಳೆದುಕೊಂಡಿದೆ. ಬೋಧನೆಗಳು ಗಿಳಿಪಾಠಗಳಾಗಿ ಬದಲಾಗಿರುವುದು ಶಿಕ್ಷಣ ವ್ಯವಸ್ಥೆಯ ದುರಂತಕ್ಕೆ ಕಾರಣವಾಗಿದೆ’ ಎಂದು ರಂಗಕರ್ಮಿ ಸಿ.ಬಸವಲಿಂಗಯ್ಯ ಆತಂಕ ವ್ಯಕ್ತಪಡಿಸಿದರು.

ಎಚ್‌ಎಸ್‌ಆರ್ ಬಡಾವಣೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಕನ್ನಡ ವಿಭಾಗ, ಕನ್ನಡ ಸಂಘ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

‘ಇಂದು ಶಿಕ್ಷಣವು ಉತ್ತಮ ಪ್ರಜೆಗಳನ್ನು ನಿರ್ಮಿಸುವುದರ ಬದಲು ಜಾಗತೀಕರಣಕ್ಕೆ ಬೇಕಾದ ಗ್ರಾಹಕರನ್ನು ಸೃಷ್ಟಿಸುತ್ತಿದೆ. ತಮ್ಮ ಕಣ್ಣು ಮತ್ತು ಕಿವಿಗಳನ್ನು ಯಾರಿಗೋ ಒತ್ತೆ ಇಡುವಂತೆ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವದ ಮೂಲ ಆಶಯ ಸಾಕಾರಗೊಳಿಸಿ ಉತ್ತಮ ಪ್ರಜೆಗಳಾಗಿಸುವ ಮೌಲ್ಯ ಮತ್ತು ವಿವೇಕ ಕನ್ನಡ ಸಾಹಿತ್ಯಕ್ಕಿದೆ. ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ನಾಡು, ನುಡಿ ಸಂಸ್ಕೃತಿಗಳು ಹಲವು ವೈರುಧ್ಯಗಳ ನಡುವೆ ಸೌಹಾರ್ದ ಪರಂಪರೆ ಈ ನಾಡಿಗಿದೆ’ ಎಂದರು.

‘ಎಲ್ಲ ಭಾಷೆಗಳ ಮೂಲ ಸಂಸ್ಕೃತ ಅಲ್ಲ. ಕನ್ನಡದ ಮೂಲ ದ್ರಾವಿಡ ಭಾಷೆಯಲ್ಲಿದೆ. ಜನಸಮುದಾಯದ ಜೀವಂತಿಕೆಯೇ ಒಂದು ಭಾಷೆಯ ಜೀವಂತಿಕೆ’ ಎಂದರು. ಮೇಜರ್ ಗೋಪಾಲರೆಡ್ಡಿ, ಕಾಲೇಜಿನ ಪ್ರಾಂಶುಪಾಲ ಸಿ. ರಘು, ಕನ್ನಡ ವಿಭಾಗದ ಚಂದ್ರಕಲಾ, ಕನ್ನಡ ಸಂಘದ ಸಂಚಾಲಕರಾದ ಕೆ.ಲಕ್ಷ್ಮೀ, ನರ್ಮದಾ, ಮೇನಕಾ ಇದ್ದರು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಜಯನಗರ 3ನೇ ಬ್ಲಾಕ್ / 4ನೇ ಬ್ಲಾಕ್	ಬೆಂಗಳೂರು	ಮಹಾನಗರ	4000
ಲಗ್ಗೆರೆ	ಬೆಂಗಳೂರು	ಮಹಾನಗರ	2500
ನೆಲಮಂಗಲ	ಬೆಂಗಳೂರು ಗ್ರಾಮೀಣ	ಅರೆನಗರ	3000
ನಂದಗುಡಿ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1900
ಕಸಬಾ–ರಾಯರಪಾಳ್ಯ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **18–12–2023 ರಂದು ಸಂಜೆ 3.00 ಗಂಟೆಯವರೆಗೆ**. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.
“ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು
ದಿನಾಂಕ : 24–11–2023
ಸಹಿ/–
ಸಹಾಯಕ ಮಹಾ ಪ್ರಬಂಧಕರು

TATA ಉತ್ಪಾದನೆ

Lekana Hegde
State Level Athlete, Passionate Model, Philanthropist

TANISHQ PRESENTS
RIVAAH
WEDDING JEWELLERY
• CELEBRATING •
Real Brides of Karnataka



Zeba Sherifff
Diligent Makeup Artist, Fitness Enthusiast

ನೀವು ಮತ್ತು ರಿವಾಹ್. ಜೊತೆ ಸೇರಿದಾಗ.
ಅರಿಶಿನ ಸಂಭ್ರಮಕ್ಕೆ ಸೊಬಗು.
ರಿಸೆಪ್ಷನ್‌ಗೆ ವಿಶೇಷ ಮೆರುಗು.
ಮದುವಣಗಿತ್ತಿಯ ಮುಖದಲ್ಲಿ ಬಿನ್ನಾಣದ ಕಳೆ.
ಸಂಭ್ರಮಕ್ಕೆ ಅಂದದ ಬೊಟ್ಟಾಗಿರುವ ನಿಮ್ಮನ್ನು,
ಮತ್ತಷ್ಟು ಸಿಂಗರಿಸುವ ಆಸೆ ನಮ್ಮದು.
ಎಲ್ಲ ಸುಂದರ, ಚಂದದ ಮದುವಣಗಿತ್ತಿಯರಿಗೆ,
ನಿಮ್ಮ ಮದುವೆಯ ಎಲ್ಲ ಸಂಭ್ರಮಗಳಿಗೆ
ನಿಮ್ಮ ಅಂದವನ್ನು ಇನ್ನಷ್ಟು ಹೆಚ್ಚಿಸಲು ನಾವಿದ್ದೇವೆ.
ರಿವಾಹ್, ಎಲ್ಲ ಮದುವಣಗಿತ್ತಿಯರ, ನಿಮ್ಮ ಸಂಭ್ರಮ!

Runu Sharma
HR Professional, Fitness Enthusiast & Passionate Photographer

“ತನಿಷ್ಕ್‌ನಲ್ಲಿ ನನ್ನ ಹಳೆಯ ಜ್ಯುವೆಲ್ಲರಿಯನ್ನು ವಿನಿಮಯ ಮಾಡಿ ನನ್ನ ಮದುವೆಯ ಎಲ್ಲ ಸಂಭ್ರಮಗಳಿಗೆ ತಕ್ಕುದಾದ ಸುಂದರ ವಿನ್ಯಾಸಗಳನ್ನು ನಾನು ಪಡೆಯಬಹುದು”
–ಪ್ರತ್ಯುಷಿ ಸಭರ್ವಾಲ್

ಯಾವುದೇ ಜ್ಯುವೆಲ್ಲರ್‌ನಿಂದ ಖರೀದಿಸಿದ ಚಿನ್ನದ ಆಭರಣಗಳ ಮೇಲೆ
100%*
ವಿನಿಮಯ ಮೌಲ್ಯವನ್ನು ಪಡೆಯಿರಿ

20% ವರೆಗೆ ಕಡಿತ*
ಚಿನ್ನದ ಆಭರಣಗಳ ತಯಾರಿಕಾ ಶುಲ್ಕಗಳ ಮತ್ತು ವಜ್ರದ ಮೌಲ್ಯದ ಮೇಲೆ

To locate your nearest store and know more on 6366920017 Buy online at tanishq.co.in or Download our App *Conditions apply, For T&C visit our website.

Showrooms at Bangalore: Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, New Stores at Whitefield. Tel: 080-22633335, KR Puram; Subhash Nagar Batarahalli. Tel: 9611730802, RR Nagar-BEML Layout; Tel: 080 47574666, Relocated to New Premises at Malleswaram-Sampige Road. Tel: 9164326100 & Yelahanka-Opp to The Galleria Mall. Tel: 080 43364336; Relocated to No. 3, (Old No. 18), 9th Main, diagonally, Opp. to Pai Viceroy's hotel, Jayanagar 3rd Block, Jayanagar, Bengaluru, Karnataka 560011. Tel: 9886333665 Mysore: Near Suburban Bus Stand. Tel: 821 428 0074; Tumkur: ADR Complex, Tel: 816 4041666; #118 2/60/1, Doddakannahalli, (Beside shell petrol Pump), Sarjapur Road, Opposite to Wipro Gate, Bangalore,Tel: 9566565199

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

COLDWELL BANKER
VALUE ADD REALTY
#1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80, Buying/ Selling, Immediate Settlement. SHIVARAJU: 9845390290, 7676547557.

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

BDA ALLOTTED W/F 30X40 site for sale Banashankari 6 stage 9 block, near Chinmaya School, Adjacent park, over looking Konasandra. Rs 6,800/ sqft. Brokers excuse. 9900151290

SALE BSK 6th Stage 9th Block 30x40 East facing 66lakh also 40x60 west facing 4th Block 1.72Cr Negotiable 9945373839, 9620041313

BDA SITE for Sale, 30x40sft BSK 6th Stage, East Facing near RV College, good location. Call: 9845420040

Anjanapura

SALE BDA Anjanapura 8th Block 40x60 west facing Near BDA complex 40feet Road also BDA Commercial 20x60 site 80feet Road 6th Block 9620041313/ 9945373839

Arkavathi Layout

ARKAVATHI LAYOUT Site For Sale 55x100 Both-Sides Road Adjacent to BDA Layout In Good Location Call: 86602-20048 76769-00174

Basaweshwaranagar

COMMERCIAL NORTH East Corner Site, Fully Developed Area, 2230Sft. Near Pushpanjali Theatre, Shivanagar, Banglore 9343782958

Gnanabharathi

DIRECT OWNER 30x44 JNANABHARATHI BDA 2nd Block NAGADEVANAHALLI Full Developed area, Adjacent to Ring-Road. 9886634578

HRBR Layout

20X30 BDA site with old demolition house for sale at HRBR Layout, 2nd block, Parallel to Service road. Call 9844039482

HSR Layout

SALE BDA-SITE HSR Layout Near Agara Lake. 2322 Sq.Ft Landmark: Arogya Ahaara HSR 9972741127 8867580471

J P Nagar

SALE BDA JP Nagar 9th phase 3rd Block East facing 60feet 40x60 good location 1.5Km Metro Station. 9945373839/ 9620041313

Kengeri

SITE FOR Sale, BBMP A Khatha 20×30/ 30×40/ 40×60, Kodipalya Kengeri. And KGollahalli Panchayat Khatha. Contact: Navya- 9008176585

PRM/KA/RERA/1251/309/PR/060923/006244
DS-MAX SKYSANJEEVINI
LUXURIOUS 2 & 3-BHK APARTMENT
DS MAX
DR. K V SATISH, CHAIRMAN
ISO 9001:2015 COMPANY
OFF TUMKUR ROAD
NEAR HIMALAYA WELLNESS COMPANY
2-BHK HOMES STARTS @ JUST
₹ 45.81 L*
BMRDA APPROVED | G + 9 FLOORS
*T & C Apply

8880 465 465
www.dsmaxproperties.com

LAND FOR SALE (ANEKAL)

73.12 Guntas of general property with clear titles of land, situated at Surajakkanahalli Village, near Electronic City and Jigani Industrial Area, Anekal Bannerghatta Ring Road, attached to Residential Area is available for Sale.
CONTACT: 87623 81993

FOR IMMEDIATE SALE

BDA SITE - West Facing 50 X 80 sq.ft. at 5th Block, 100 feet Road, Sir M. Vishveshwariah Layout.
COMMERCIAL BUILDING
East facing 30x50 sq.ft. at Kothnur Dinne, Near BWSSB Tank 7th Phase, JP Nagar.
OFFICE SPACE
400 sq.ft. I Floor at DVG Road,Basavanagudi.
Broker excuse, Contact
9448455001 / 9731722433

PLOTS FOR SALE

Residential/ Farmhouse/ Warehouse/ Go-Down Purpose

DC Converted Premium Plots: Dimension: 600 Sqft. to 2400 Sqft. (Last 10 Sites Available)
Location: Ajjanahalli, Near Dodda Alada Mara.
Price: Rs. 1550/- Per Sqft.

Plot for warehouse/ Go-down, Dimension: 6 Guntas
Location: Near Budihal, Tumkur Road NH,
Price: Rs. 1450/- Per Sqft.

Farmhouse Plot: Dimension: 6 Guntas
Location: Near Sri Siddartha Medical College, T. Begur. Price: Rs. 750/- Per Sqft.

Call: 96864 45250/ 96060 63211

Kanakapura Road

35×45 BHIKASHIPURA, 30×40 Balaji KKP Road JP Nagar 8th Phase 2nd Block Duplex for SALE and 50×60 Jayanagar 4th Block Independent Commercial Property for RENT. Call: Shivanna 9448684258

NARAYANA NAGAR 1st Block 50x80 S/F 3rd Block 30x40 S/F Vakilgarden 40x50 W/F: 9964627255/ 9845511170

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotiable: 9538680364/ 9986146147

Kempegowda Layout

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

KEMPEGOWDA LAYOUT BDA 50×80 1st block K Sector Site No. 521 Commercial Property Contact: 9035151657

NADAPRABHU KEMPEGOWDA LAYOUT and Vishweshwaraiah Layout BDA Sites Buying, Selling 20x30, 30x40, 40x60. 9742568746, 9480186666.

Nelamangala



CNR Infocity
READY TO BUILD PLOTS FOR EVERY DREAM HOME
BMRDA Approved Sites available @ NEELAMANGALA
CALL +91 8722227780 +91 8660981179

Magadi Road

30X45 WEST FACING BEL LAYOUT MAGADI ROAD NEAR EAST WEST COLLEGE Rs. 10750/- NEGOTIABLE: 9611577666

SITE NO. 954/ 42/2/27/28 80x55- 4400 sqft E-Khatha, South face Kodigehalli near Magadi road, Gollarahatti per sqft Rs. 3500/ Negotiable. 9341268616/ 9448709882.

Outskirts

30X40 KHB WF LIG Site Nethaji Subashchandrabose Layout, Bidadi, E-katha, 29L Direct Owner: 9448673482

Sadashiva Nagar

SALE !! DOLLARS COLONY 40x60 East Facing Site Near RMV Club, Genuine Buyers Only Call:9900001973

Tumkur Road

30X45 FT. @13,000/- P/Sq.Ft. W/F at Ravi Kirloskar L' Out, Adj. Prestige Jindal City. Only genuine buyers, No brokers. Cont. 9900177430.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

40X40 EAST SOUTH CORNER 9500/- 40FT ROAD TELECOM LAYOUT VISHWESHWARAIAH LAYOUT 6TH BLOCK ATTACHED: 9916826976

NADPRABHU KEMPEGOWDA LAYOUT J-Sector 20X30 BDA NF 1st Block Near Podar School Good Location: 8553908699

BDA SITE FOR SALE VISHWESHWARAIAH LAYOUT 1ST BLOCK 30X40 GOOD LOCATION CONTACT: 8217392686/ 9980433004

"28X40 S/W Corner BDA Residential Site for Sale Kanaka Shree Layout, [Vishweshwraiah Layout 1st Block]- 7338328879"

40X60 SITE Vishveshwaraiah Layout 6th Block Direct Owner, 30X40 1st Block North, 30x44 Janabarathi Layout Ullal Road BDA 1628 North 2nd Block 7000 Sqft: 9844845864

DIRECT OWNER 60x40 East Facing VISHVESWARAIAH LAYOUT 1st Block, opp 60ft Road Beautiful Location. 9742681666

AVAILABLE BDA Site Vishweshwariah Layout 2nd Block 40X60 East Facing 60feet Road Good Location: 9743381719

SALE 30X40 VISHVESWARAIAH LAYOUT 4th Block south facing owner 82 Lakh Negotiable. 9945373839, 9620041313

House

Banashankari

SALE 20X30, 30X40 Thripex House's BSK 8th Phase, Anjanapura Fully Furnished Granit Flooring Call:8722777999 9449812176

J P Nagar

SALE J.P.NAGAR Second Phase West Facing 40x70 old House, Clear Titles, Good Location Suraj Realtors: 9845232711

Nagarabhavi

STUNNING 3 floors, SBA 7000 sqft designer home near Nagarbhavi BDA Complex. Features: 3 beds, 4 baths, home theater, gym, parking any 3 cars and motorcycles. Price: 8 Cr, negotiable. Contact: 9880315695, 9740700997

Kengeri

DC CONVERTED 20x40 North facing 4 BHK Duplex House. Car-parking, Wardrobes. (SALE: 85,00,000). 92434-19641.

3 BHK LUXURY FLATS FOR SALE

DREAMVILLE HOME

PROJECT BY PROMAX PROPERTIES
ISO 9001:2015 CERTIFIED
TRADE MARK REGISTERED



Ready to Move in

Amenities

GYM • Jogging Track • Club House • Mini Theater • Library • Kids Play area • Party Hall

SBI | ICICI Bank | AXIS BANK | HDFC BANK

BBMP APPROVED

RERA APPROVED
PRM/KA/ RERA/1251/446/PR/220622/005013

8073977742 / 9353084848
promaxdreamvillehome.com
Kothanur, Hennur Main Road Bangalore. 77

Mysore

HOUSE FOR SALE 40X70, 4BHK Near JP Nagar, Ring Road Srirampura, Mysore.Rs:1.40 Lakhs Contact: 9342288281

Flat

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kalyan Nagar

FOR SALE 3 Bedroom Semi Furnished FLAT 1900sft with 2 Car parks at Plama Heights Apartments, Hennur Main Road, Next D Mart, Hennur Garden, Kalyan Nagar. Mobile: 9740097252

Malleshwaram

MALLESHWARAM 4TH Main, Good Location 3 Bedroom Flats, each 1900 Sft. Carpark & Terrace. 98450-29067

Uttarahalli

3/4 BHK New Luxurious Flats Sale, Fully Furnished, Italian Marble, Cauvery, Security, Car-parking. 70L/90L. 9844394444, 9945224058.

Agricultural Land Converted

Mysore Road

2.0 ACRE Sale Commercial Land with Hotel Building. Near Maddur Bangalore-Mysore. Highway Service Road Attached. 9916551395

Commercial Building

Basaveshwaranagar

COMMERCIAL PROPERTY FOR SALE KAMALA NAGAR ROAD 96D BUS STOP BASAVESHWARA NAGAR CONTACT: 7975463324

Basavanagudi

COMMERCIAL BUILDING For sale at Basavanagudi (14 Cr) and Malleswaram (9 Cr). Contact: 7411255535.

Commerical

Banashankari

BANASHANKARI 6TH Stage 1st Block Commercial 60x100 West Facing BDA Link Road. 11,000/= Sft. 98456-09477

Farm House/ Land/ Resorts

Devanahalli

FARM LAND from 1Acre, 2Acre upto 80Acres Nandihills And Chapparkallu Road Converted And Non Converted Lands. Price Starts From 2cr Genuine Buyers Call:9342020101

General

Multiple Locations

ALL AREAS in Bangalore Sale/ Rent. Commercial, Industrial, Residential, Farmland and Office space. Contact. 9380586105

Residential/ Commercial

Mysore

JOINT VENTURE Prime Commercial converted Property 88400 Square Feet on Mysore express highway near Mysore is available for Mega Commercial cum Residential Joint Venture project. Contact 9741019028

RENTAL PROPERTIES

Accommodation Available

House

3 BHK House for Rent at past Locality, BSK 2nd Stage. Contact no: 95353 35713

Industrial And Factory

FOR RENT: 13000 sq ft Newly constructed 1st, 2nd floor with 50HP power each, 3rd fabricated closed structure with Lift 1500 kg capacity at Peenya 1st stage, near TVS Cross. Call: 9448398678, 9886577211

Commercial

3800 SQFT of Prime Commercial Office Space Available RENT on Queens Road in Central Business District of Bangalore. 9742383604.

COMMERCIAL SPACE FOR RENT 5100`Sqft. Near Vijaya`Bank Layout RTO on 60 Feet`Road, Lift, Basement Parking, Ground,First, Second. 8095055449.

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

ಕ್ಲಾಸಿಫೈಡ್ಸ್ ADMISSION CORNER

UJJVAL WORLD SCHOOL

The future is in our classrooms

REGISTER NOW

Forms are available between 8:30 am - 2:30 pm at the School office

ADMISSION OPEN

For more information call:080-28454466
Email: contactus@ujjvalworldschool.org | www.ujjvalworldschool.org
Ujjval World School, Near Kadugodi Bus Stand, Whitefield Post, Bangalore-560066
Affiliated to CBSE, New Delhi, Affiliation Number 831190

ಲಾಏಷಿಯಾ ಸಂಘಟನೆಯ 36ನೇ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

‘ಸಂವಿಧಾನಕ್ಕೆ ವಿರೋಧ: ಶಿಲಾಯುಗಕ್ಕೆ ದೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ವಿಶ್ವದಲ್ಲೇ ಶ್ರೇಷ್ಠ ಸಂವಿಧಾನ ಹೊಂದಿದ್ದರೂ, ಕೆಲವರು ವಿರೋಧ ವ್ಯಕ್ತಪಡಿಸುತ್ತಾರೆ. ದೇಶವನ್ನು ಶಿಲಾಯುಗಕ್ಕೆ ಮರಳಿಸುವ ಪ್ರಯತ್ನ ಮಾಡುತ್ತಲೇ ಇದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪೆಸಿಫಿಕ್ ಕಾನೂನು ಸಂಘ, ವಕೀಲರ ಸಂಘ ಶುಕ್ರವಾರ ಹಮ್ಮಿಕೊಂಡಿರುವ ನಾಲ್ಕು ದಿನಗಳ ಲಾಏಷಿಯಾ ಸಂಘಟನೆಯ 36ನೇ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಮಾನತೆ, ಸಮಾಜವಾದ, ಜಾತ್ಯತೀತ ತತ್ವಗಳನ್ನು ಒಳಗೊಂಡಿರುವ ಭಾರತದ ಸಂವಿಧಾನ ಸುಲಲಿತವಾಗಿದೆ. ಕಾಲ, ಪರಿಸ್ಥಿತಿಗೆ ತಕ್ಕಂತೆ ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಜನಪರ ಸಂವಿಧಾನವನ್ನು ಕೆಲವು ಸಂವಿಧಾನ ವಿರೋಧಿ ಶಕ್ತಿಗಳು ವಿರೋಧಿಸುತ್ತಲೇ ಬಂದಿದ್ದಾರೆ. ಇಂಥವರ ಬಗ್ಗೆ ನಾಗರಿಕರು ಎಚ್ಚರದಿಂದಿರಬೇಕು ಎಂದರು.

ಕಾನೂನುಗಳು ಸ್ವೇಚ್ಛಾಚಾರವನ್ನು ನಿರ್ಬಂಧಿಸುತ್ತವೆ. ನಾಗರಿಕ ಸಮಾಜದಲ್ಲಿ ಬದುಕಲು ಇಂತಹ ನಿಯಮಗಳ ಪಾಲನೆ ಅನಿವಾರ್ಯ. ಇದೇ ಕಾನೂನುಗಳು ಸರ್ಕಾರ, ಸಂಸ್ಥೆಗಳು ಹಾಗೂ ಕೆಲ ಜನಗಳಿಂದ ನಾಗರಿಕರ ಮೇಲಾಗುವ ದೌರ್ಜನ್ಯಗಳ ವಿರುದ್ಧವೂ ರಕ್ಷಣೆ ಒದಗಿಸುತ್ತವೆ. ಆ ಮೂಲಕ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಪರಿಕಲ್ಪನೆ ಕಟ್ಟಿಕೊಡಲಾಗಿದೆ ಎಂದು ಹೇಳಿದರು.

ಉಲ್ಲಂಘನೆ ತಡೆಗೆ ಕಾನೂನು ಜ್ಞಾನ ಬಳಕೆ: ಲಾಏಷಿಯಾ ಸಂಘಟನೆ ಅಂತರ ರಾಷ್ಟ್ರೀಯ ಕಾನೂನು ಜ್ಞಾನವನ್ನು ಪ್ರಚುರಪಡಿಸುವ ಪ್ರಮುಖ ವೇದಿಕೆಯಾಗಿದೆ. ಈ ಸಂಘಟನೆಯಲ್ಲಿರುವ ಕಾನೂನು ವೃತ್ತಿಪರರು, ವಕೀಲ ಸಂಘಗಳ ಪ್ರತಿನಿಧಿಗಳು ಅಂತರರಾಷ್ಟ್ರೀಯ ಕಾನೂನು ವ್ಯವಸ್ಥೆಯ ಕುರಿತು ತಮಗಿರುವ ಅನನ್ಯ ಜ್ಞಾನವನ್ನು ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧದ ಹೋರಾಟಕ್ಕೆ ಬಳಸಿಕೊಳ್ಳಬೇಕು. ಕಾನೂನು ಉಲ್ಲಂಘನೆ ತಡೆದು ಶಾಂತಿಯುತ ವಾತಾವರಣ ಸೃಷ್ಟಿಸಲು ಎಲ್ಲರೂ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇದಿಕೆಯಲ್ಲಿ ಆಸ್ಟ್ರೇಲಿಯಾದ ಮುಖ್ಯ ನ್ಯಾಯಮೂರ್ತಿ ಬ್ರೈನ್ ಜೆ. ಪ್ರಿಸ್ಟನ್, ಜಪಾನ್ ಕಾನೂನು ಪ್ರಾಧ್ಯಾಪಕ ಯಸುಶಿ ಹೈಗಶಿಝಾವ ಅವರಿಗೆ ಲಾಏಷಿಯಾದ ಆಜೀವ ಸದಸ್ಯತ್ವ ನೀಡಿ ಗೌರವಿಸಲಾಯಿತು.

ಲಾಏಷಿಯಾ ಅಧ್ಯಕ್ಷೆ ಮಿಲೆಸ್ಸಾ ಕೆ ಪಂಗ್, ಭಾರತ ವಕೀಲರ ಸಂಘದ ಅಧ್ಯಕ್ಷ ಪ್ರಶಾಂತ್ ಕುಮಾರ್, ಉಪಾಧ್ಯಕ್ಷರಾದ ಎಸ್.ಎಸ್.ನಾಗಾನಂದ್, ಪ್ರಧಾನ ಕಾರ್ಯದರ್ಶಿ ಗಾರ್ಡನ್ ಹ್ಯೂಸ್ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶುಕ್ರವಾರ ಆರಂಭವಾದ ಲಾಏಷಿಯಾ 36ನೇ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಗಾರ್ಡನ್ ಹ್ಯೂಸ್, ಸೌಮ್ಯಾ ಸ್ವಾಮಿನಾಥನ್, ಸಿದ್ದರಾಮಯ್ಯ, ಮಿಲೆಸ್ಸಾ ಕೆ ಪಂಗ್, ಪ್ರಶಾಂತ್ ಕುಮಾರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಅಸಮಾನತೆ ಸೃಷ್ಟಿಸುವ ಹವಾಮಾನ ವೈಪರೀತ್ಯ: ಸೌಮ್ಯಾ

ವಿಶ್ವದ ವಕೀಲ ಸಮುದಾಯ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಅದರಿಂದ ಸೃಷ್ಟಿಯಾಗುವ ಅಸಮಾನತೆ ತೊಡೆದು ಹಾಕಲು ಶ್ರಮಿಸಬೇಕು ಎಂದು ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯ ಅಧ್ಯಕ್ಷೆ ಸೌಮ್ಯ ಸ್ವಾಮಿನಾಥನ್ ಸಲಹೆ ನೀಡಿದರು.

> **ಏಷಿಯಾ ಆಯೋಜಿಸಿರುವ ವಕೀಲರ ಸಮ್ಮೇಳನದಲ್ಲಿ ನಿರೀಕ್ಷೆಗಿಂತ ಹೆಚ್ಚು ಗಣ್ಯರು ಭಾಗವಹಿಸಿದ್ದಾರೆ. ಅವರ ಆತಿಥ್ಯ ವಹಿಸಲು ಕರ್ನಾಟಕಕ್ಕೆ ಅವಕಾಶ ದೊರೆತಿರುವುದು ಹೆಮ್ಮೆಯ ವಿಷಯ**
> **ಎಸ್.ಎಸ್.ನಾಗಾನಂದ,** ಉಪಾಧ್ಯಕ್ಷ, ಲಾಏಷಿಯಾ

ಕೋವಿಡ್‌ನಂತಹ ಸಾಂಕ್ರಾಮಿಕ ರೋಗಗಳಿಗಿಂತ ಹವಾಮಾನ ಬದಲಾವಣೆ ಪ್ರಮುಖ ಸವಾಲಾಗಿದೆ. ಹವಾಮಾನ ಬದಲಾವಣೆ ಭೂಮಿಯ ಮೇಲಿನ ಎಲ್ಲಾ ಜೀವಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ ಒಂದಕ್ಕೊಂದು ಸಮಸ್ಯೆಗಳು ಬೆಸೆದುಕೊಳ್ಳುತ್ತವೆ. ಇಂತಹ ಸ್ಥಿತಿಯಲ್ಲಿ ಅತಿ ಹೆಚ್ಚು ಸಮಸ್ಯೆ ಎದುರಿಸುವುದು ದುರ್ಬಲ ವರ್ಗಗಳು. ಹಾಗಾಗಿ, ಹವಾಮಾನ ವೈಪರೀತ್ಯ ಹಾಗೂ ದುರ್ಬಲ ಸಮುದಾಯಗಳ ಸಂರಕ್ಷಣೆಗೆ ವಕೀಲರು ನ್ಯಾಯ ಮತ್ತು ಸಮಾನತೆಯ ಅಸ್ತ್ರ ಬಳಸಬೇಕು ಎಂದರು.

ಸಾಂಕ್ರಾಮಿಕ ರೋಗದ ಸಮಯದಲ್ಲಿ ಲಸಿಕೆ ಹಾಕುವಲ್ಲೂ ಶ್ರೀಮಂತ ಮತ್ತು ಬಡ ದೇಶಗಳ ಮಧ್ಯೆ ತಾರತಮ್ಯ ಎದ್ದುಕಾಣುತ್ತಿತ್ತು. ಹವಾಮಾನ ಬದಲಾವಣೆಯು ರಚನೆ, ವ್ಯವಸ್ಥೆಗಳು ನಮ್ಮ ಆರ್ಥಿಕತೆಯ ಮೇಲೂ ಪರಿಣಾಮ ಬೀರುವುದರಿಂದ ಇಂತಹ ವ್ಯತ್ಯಾಸಗಳು ಸಹಜವಾಗಿವೆ. ಇಂತಹ ಸಂಕಟಗಳನ್ನು ಶಮನ ಮಾಡಲು ಭೂಮಿಯ ಉಷ್ಣತೆ ಸಹಜ ಸ್ಥಿತಿಗೆ ತರಲು ಎಲ್ಲರೂ ಶ್ರಮಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಸೌಂದರ್ಯ ಕಾನೂನು ಕಾಲೇಜಿನಲ್ಲಿ ನಡೆದ ‘ದೀಕ್ಷಾರಂಭ’ ಸಮಾರಂಭದಲ್ಲಿ (ಎಡದಿಂದ) ಟ್ರಸ್ಟಿ ವರುಣ್‌ಕುಮಾರ್, ಮಾಜಿ ಅಡ್ವೋಕೇಟ್ ಜನರಲ್ ಬಿ. ವಸುದೈವ ಆಚಾರ್ಯ, ಸಂಸ್ಥೆಯ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ, ಸಿಇಒ ಎಂ. ಕೀರ್ತನ್‌ಕುಮಾರ್ ಇದ್ದರು.

‘ಕಾನೂನು ವೃತ್ತಿಯಲ್ಲಿ ಮೌಲ್ಯ ಎತ್ತಿಹಿಡಿಯುವ ಕೆಲಸ ಆಗಲಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಶಿಕ್ಷಣದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ವಿದ್ಯಾರ್ಥಿ ಸಮುದಾಯ ತನ್ನ ಕೌಶಲ ವೃದ್ಧಿಸಿಕೊಳ್ಳಬೇಕು ಎಂದು ಮಾಜಿ ಅಡ್ವೊಕೇಟ್ ಜನರಲ್ ಬಿ. ವಸುದೈವ ಆಚಾರ್ಯ ಕರೆ ನೀಡಿದರು.

ಸಿಡೇದಹಳ್ಳಿಯ ಸೌಂದರ್ಯ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ‘ದೀಕ್ಷಾರಂಭ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಭಾರತದ ಸಂವಿಧಾನದ ಮಹತ್ವದ ಬಗ್ಗೆ ಪ್ರತಿಯೊಬ್ಬರಲ್ಲೂ ಅರಿವಿರಬೇಕು. ಪ್ರಮುಖ ತೀರ್ಪುಗಳನ್ನು ಅಧ್ಯಯನ ಮಾಡುವ ಜೊತೆಗೆ ವಕೀಲ ವೃತ್ತಿಯಲ್ಲಿ ತೊಡಗುವವರು, ಮಾದರಿ ನಡಾವಳಿ ಸಂಹಿತೆಯನ್ನು ಪರಿಪಾಲಿಸಬೇಕು. ಕಾನೂನು ವೃತ್ತಿಯಲ್ಲಿ ಮೌಲ್ಯಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕು’ ಎಂದರು.

ಸೌಂದರ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ಮಾತನಾಡಿ, ‘ಕಾನೂನು ವೃತ್ತಿ ಅತ್ಯಂತ ಮಹತ್ವದ್ದಾಗಿದ್ದು, ಉತ್ತಮ ರೀತಿಯಲ್ಲಿ ಕಾನೂನು ಶಿಕ್ಷಣ ಪಡೆದು ನೊಂದ ಜನರಿಗೆ ನ್ಯಾಯ ಒದಗಿಸಲು ವಿದ್ಯಾರ್ಥಿ ಸಮುದಾಯ ಮುಂದಾಗಬೇಕು’ ಎಂದರು.

ಶಿಕ್ಷಣ ಸಂಸ್ಥೆಯ ಸಿಇಒ ಎಂ.ಕೀರ್ತನ್ ಕುಮಾರ್, ಟ್ರಸ್ಟಿ ವರುಣ್‌ಕುಮಾರ್, ಸೌಂದರ್ಯ ಶಿಕ್ಷಣ ಸಂಸ್ಥೆಯ ವಿಜ್ಞಾನ ಮತ್ತು ಆಡಳಿತ ನಿರ್ವಹಣೆ ವಿಭಾಗದ ಪ್ರಾಂಶುಪಾಲ ಬಿ.ಎ.ವಸು, ಕಾನೂನು ಕಾಲೇಜಿನ ಪ್ರಾಂಶುಪಾಲ ಬಿ.ಪಿ. ಮಹೇಶ್, ಸಹಾಯಕ ಪ್ರಾಧ್ಯಾಪಕ ಹನುಮಂತೇಗೌಡ ಉಪಸ್ಥಿತರಿದ್ದರು.

‘ಮರಣ ಪ್ರಮಾಣ ಪತ್ರಕ್ಕಾಗಿ ಇ–ಕೆವೈಸಿ ಮಾದರಿ ಅನುಸರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರಣ ಪ್ರಮಾಣಪತ್ರ ವಿತರಣೆಗೂ ಮುನ್ನ ಇ-ಕೆವೈಸಿ ಮಾದರಿ ಅನುಸರಿಸಿ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಇ-ಆಡಳಿತ ಇಲಾಖೆ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶಿಸಿದೆ.

ನಗರದ ಸಾಯಿ ಲಕ್ಷ್ಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಕುರಿತಂತೆ ಆದೇಶಿಸಿದ್ದು, ’ಇದರಿಂದಾಗಿ ಮರಣ ಪ್ರಮಾಣಪತ್ರ ವಿತರಣೆಯಲ್ಲಿ ಉಂಟಾಗುವ ದೋಷಗಳು ತಪ್ಪುತ್ತವೆ‘ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಮೃತ ವ್ಯಕ್ತಿಯ ಅಗತ್ಯ ದಾಖಲೆಗಳನ್ನು ಪಡೆದು ಅಂತಹ ವಿವರಗಳನ್ನು ಪ್ರಾಥಮಿಕ ಹಂತದಲ್ಲಿಯೇ ದಾಖಲಿಸಬೇಕು. ಅದನ್ನು ಸಂಬಂಧಿಸಿದ ಪ್ರಾಧಿಕಾರ ಅಥವಾ ಅಧಿಕಾರಿಗಳು ಪರಿಶೀಲಿಸಿ ನಂತರ ಮರಣ ಪ್ರಮಾಣಪತ್ರ ವಿತರಿಸಬೇಕು‘ ಎಂದು ಹೇಳಿದೆ. ಬಿಬಿಎಂಪಿ ಅಧಿಕಾರಿಗಳು ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ 20 ದಿನಗಳಲ್ಲಿ ಅಗತ್ಯ ತಿದ್ದುಪಡಿ ಮಾಡಿ ಹೊಸ ಮರಣ ಪ್ರಮಾಣಪತ್ರ ವಿತರಿಸಬೇಕು‘ ನ್ಯಾಯಪೀಠ ನಿರ್ದೇಶಿಸಿದೆ.

ಜಯಪ್ರಕಾಶ್ ಹೆಗ್ಡೆ 2 ತಿಂಗಳು ಮುಂದುವರಿಕೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ಅವರನ್ನು ಎರಡು ತಿಂಗಳ ಅವಧಿಗೆ ಮರು ನೇಮಕ ಮಾಡಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹೊರಡಿಸಿರುವ ಆದೇಶದಲ್ಲಿ, ಆಯೋಗದ ಅಧ್ಯಕ್ಷ ಹಾಗೂ ಎಲ್ಲ ಸದಸ್ಯರನ್ನೂ 2024ರ ಜನವರಿ 31ರವರೆಗೆ ಮರು ನೇಮಕ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಆಯೋಗ ಅಧ್ಯಕ್ಷರ ಮೂರು ವರ್ಷಗಳ ಅಧಿಕಾರ ಅವಧಿಯು ಇದೇ 26ಕ್ಕೆ ಮುಕ್ತಾಯವಾಗುತ್ತಿದ್ದು, ಅದರೊಂದಿಗೆ ಇಡೀ ಆಯೋಗದ ಅವಧಿಯೂ ಕೊನೆಯಾಗುತ್ತಿದೆ. ಎಚ್. ಕಾಂತರಾಜ ನೇತೃತ್ವದ ಹಿಂದಿನ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ದತ್ತಾಂಶವನ್ನು ವಿಶ್ಲೇಷಿಸಿ ವರದಿ ಸಿದ್ಧಪಡಿಸುವ ಕೆಲಸದಲ್ಲಿ ಆಯೋಗ ನಿರತವಾಗಿದೆ.

‘ಜಾತಿ ಗಣತಿ ಚುನಾವಣೆವರೆಗೆ ಏನೂ ಆಗಲ್ಲ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಲೋಕಸಭೆ ಚುನಾವಣೆಯವರೆಗೂ ಈ ಸರ್ಕಾರ ಜಾತಿಗಣತಿಯ ನಾಟಕವಾಡುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಶುಕ್ರವಾರ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇನ್ನೂ ನಾಲ್ಕು ತಿಂಗಳು ವರದಿ ಅಧ್ಯಯನ ಮಾಡಲಾಗುವುದು ಎಂದು ಸರ್ಕಾರ ಹೇಳುತ್ತಿದೆ. ಈ ವಿಷಯದಲ್ಲಿ ಯಾರೂ ಗಾಬರಿಯಾಗುವ ಅವಶ್ಯಕತೆ ಇಲ್ಲ. ಈ ಸರ್ಕಾರದ ಕೈಯಲ್ಲಿ ಏನೂ ಆಗಲ್ಲ’ ಎಂದರು.

‘ನಾನು 2018ರಲ್ಲಿ ಸಿ.ಎಂ ಆಗಿದ್ದಾಗ ಕಾಂತರಾಜ ವರದಿ ಸ್ವೀಕರಿಸಲಿಲ್ಲ ಎಂದು ಇದೇ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ವರದಿ ಆಗಲೇ ಸಿದ್ಧವಾಗಿತ್ತು ತಾನೇ? ನಿಮ್ಮ ಸರ್ಕಾರ ಬಂದು ಆರು ತಿಂಗಳಾಗಿದೆ. ಯಾಕಿನ್ನೂ ಸ್ವೀಕರಿಸಿಲ್ಲ’ ಎಂದು ಪ್ರಶ್ನಿಸಿದರು.

ಅಣಕು ನ್ಯಾಯಾಲಯ ಸ್ಪರ್ಧೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಸುತ್ತುಗಳ ‘ಲಾಏಷಿಯಾ ಅಂತರರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ– 2023’ ರಾಮಯ್ಯ ಕಾನೂನು ಕಾಲೇಜಿನಲ್ಲಿ ಶುಕ್ರವಾರ ಆರಂಭವಾಯಿತು.

ಬಾರ್ ಅಸೋಸಿಯೇಷನ್ ಆಫ್ ಇಂಡಿಯಾದ ವತಿಯಿಂದ ‘ಲಾ ಏಷಿಯಾ’ ಸಮ್ಮೇಳನದ ಅಂಗವಾಗಿ ಈ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ರಾಮಯ್ಯ ಕಾನೂನು ಕಾಲೇಜು ಸ್ಪರ್ಧೆಯ ಅತಿಥ್ಯ ವಹಿಸಿದ್ದು, ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್.ಜಯರಾಂ ಸ್ಪರ್ಧೆಯನ್ನು ಉದ್ಘಾಟಿಸಿದರು. ‘ಕಾನೂನು ವೃತ್ತಿಯಲ್ಲಿ ಪರಿಣಾಮಕಾರಿ ಸಂವಹನ ಕೌಶಲದ ಪ್ರಾಮುಖ್ಯವಿದೆ. ವಕೀಲರಾದವರಿಗೆ ಈ ಕೌಶಲ ಅಳವಡಿಸಿಕೊಳ್ಳುವುದು ಆದ್ಯತೆಯಾಗಬೇಕಿದೆ’ ಎಂದರು.

ಲಾ ಏಷಿಯಾ ಅಣಕು ನ್ಯಾಯಾಲಯ ಸ್ಥಾಯಿ ಸಮಿತಿ ಅಧ್ಯಕ್ಷ ರಾಫೇಲ್ ಟೇ, ಸಮಿತಿ ಮಾಜಿ ಅಧ್ಯಕ್ಷ ಇಸೋಮಿ ಸುಝುಕಿ, ತೀರ್ಪುಗಾರರ ಪರವಾಗಿ ವೆಸ್ಟ್ ನರೆಥ್ ಹಿಬ್, ರಾಮಯ್ಯ ಕಾನೂನು ಕಾಲೇಜಿನ ನಿರ್ದೇಶಕ ಎಂ.ಆರ್.ಆನಂದರಾಮ್, ಗೋಕುಲ್ ಎಜುಕೇಷನ್ ಫೌಂಡೇಷನ್ ಮುಖ್ಯಾಧಿಕಾರಿ ಬಿ.ಎಸ್.ರಾಮಪ್ರಸಾದ್, ಮುಖ್ಯ ಹಣಕಾಸು ಅಧಿಕಾರಿ ಜಿ. ರಾಮಚಂದ್ರ, ರಾಮಯ್ಯ ಕಾನೂನು ಕಾಲೇಜಿನ ಪ್ರಾಂಶುಪಾಲ ಉಮಾಮಹೇಶ್ ಸತ್ಯನಾರಾಯಣ್ ಹಾಜರಿದ್ದರು.

ಅರ್ಹತೆ ಪಡೆದ ಏಳು ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿವೆ. ಎನ್‌ಎಲ್‌ಯು ಜೋಧ್‌ಪುರ್, ಸಿಂಗಪುರ, ಮಲೇಷ್ಯಾ, ಹಾಂಕಾಂಗ್, ಯುನೈಟೆಡ್ ಕಿಂಗ್‌ಡಮ್, ಚೀನಾ, ಆಸ್ಟ್ರೇಲಿಯಾ ಸೇರಿದಂತೆ 30 ವಿವಿಧ ದೇಶಗಳ 60 ಕಾನೂನು ವಿದ್ಯಾಲಯಗಳು ಭಾಗವಹಿಸುತ್ತಿವೆ. ನಾಲ್ಕು ದಿನದಲ್ಲಿ ಹಲವು ಕಠಿಣ ಸ್ಪರ್ಧೆಗಳು ಮುಗಿದ ನಂತರ ನ.27ರಂದು ವಿಜೇತ ತಂಡವನ್ನು ನಿರ್ಧರಿಸಲಾಗುತ್ತದೆ.

ರಾಮಯ್ಯ ಕಾನೂನು ಕಾಲೇಜಿನಲ್ಲಿ ನಡೆದ ‘ಲಾ ಏಷಿಯಾ ಅಂತರರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ’ ಉದ್ಘಾಟನೆ ಸಮಾರಂಭದಲ್ಲಿ ಎಂ.ಆರ್. ಜಯರಾಂ, ರಾಫೇಲ್ ಟೇ, ಇಸೋಮಿ ಸುಝುಕಿ, ವೆಸ್ಟ್ ನರೆಥ್ ಹಿಬ್, ರಾಮಯ್ಯ ಎಂ.ಆರ್. ಆನಂದರಾಮ್ ಇದ್ದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE BUYING

Sites

Anjanapura

WANTED BDA sites Anjanapura, Banashankari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

Banashankari

WANTED SITE BDA and KHB approved in Chandapura Surya City,Sarjapur Road, Banashankari 6th Stage. Contact: 9900640887

Magadi Road

REQUIRED SITE/ Independent House in and around surrounding Magadi Road, Kadabagere, Machohalli, Bedrahalli, Anjananagar 20x30 OR 30x40 Owner or agent. Contact: 9353617093.

Vishweshwariah Layout

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

Mysore

WANTED MUDA Allotted Sites Measuring 20/30, 30/40, 40/60 and 50/80 Genuine Owners contact: 9845495879, 9902066606

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

EDUCATIONAL

Diploma Courses

JNANA JYOTHI YOGA STUDY CENTRE Mahalakshmi Layout (Affiliated to Karnataka Sanskrit University) Admission Open-Courses- Certificate/ Diploma/ PG Diploma in Yoga Online/ Offline. Last Date 27-11-2023, with fine 30.11.2023. 9663663637/ 9008557979/ 7019356168

PERSONAL

Change of Name

CHANGE OF NAME
I, **UMASHANKAR K S** URF **UMASHANKAR SHIVANNA,** R/at # 40, Near Govt. School, Kenchanakuppe, Bidadi Post, Ramanagara Dist-562109 changing my name in passport from old name UMASHANKAR SHIVANNA to **UMASHANKAR KENCHANAKUPPE SHIVANNA,** vide affidavit dated 24/11/2023 before Notary Shekar H V, Ramanagar

WEEKEND CORNER

I, SANJANA R/o #948, 6th Cross, 9th Main, BSK 1st Stage, 2nd Block, Bangalore-50 have changed my name as SANJANAA SHRIKANT MUGALI Vide affidavit dated 20/11/2023 before Notary Jayappa. A, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

GAGAN S, #78/8, 11th cross, near Lake, Bellandur, Bengaluru-103, have changed my name to GAGAN REDDY, vide affidavit dated-24/11/2023

CHANGE OF NAME
I, **PARVATHI CHARLES,** W/o 624705-R, Ex Sgt.Charles Emmanuel, R/at # 467/C, Near Kudlu Last Bus Stop, Chikka Kere Road, Kudlu, Bangalore- 560068 have changed my name to **PARVATHI V** vide affidavit dt.16-11-2023, before VII Addl. Chief Metropolitan Magistrate, Bangalore.

CHANGE OF NAME
I, **KANAKARATHINAMMA,** W/o No. JC87082F, Rank: Ex-Sub, Maj/Hony Capt, Vasudevan, R/at # 106/2, 5th Cross, Varsova Layout, C.V. Ramannagar, Bangalore- 560093 have changed my name to **KANAKARATHNA** vide affidavit dt.20-11-2023, before S.I. Balaguru, Bangalore.

CARMEL VERONICA J, #23, 1st floor, 27th main, 6th cross, Ejipura, Ashwini Layout, Bengaluru-47 have changed my name to CARMEL VERONICA G vide affidavit dated- 24/11/2023

ಕರುಳಿನ ಆರೋಗ್ಯ ಮುಖ್ಯ

ಜೀರ್ಣಾಂಗದ ಆರೋಗ್ಯದ ಮೇಲೆ ಜೀವನಶೈಲಿ ಅಂಶಗಳ ಪ್ರಭಾವ

ಜಠರಕರುಳಿನ (ಜಿಐ) ನಾಳ ಮಾನವ ಶರೀರಶಾಸ್ತ್ರ ವ್ಯವಸ್ಥೆಯ ಪ್ರಮುಖ ಘಟಕಾಂಶವಾಗಿದೆ. ಆದಾಗ್ಯೂ, ಈ ಸೂಕ್ಷ್ಮ ವ್ಯವಸ್ಥೆಯು ಹಲವಾರು ದೀರ್ಘಕಾಲದ ಸ್ಥಿತಿಗಳಿಗೆ ತುತ್ತಾಗುತ್ತದೆ, ಅವುಗಳಲ್ಲಿ ಎರಡು ಅತಿ ಪ್ರಮುಖವಾದವೆಂದರೆ **ಉರಿಯೂತಕ್ಕೆ ತುತ್ತಾದ ಕರುಳಿನ ರೋಗ (ಐಬಿಡಿ) ಮತ್ತು ಜಠರ ಅನ್ನನಾಳದ ಹಿಮ್ಮುಖ ಹರಿವಿನ ರೋಗ (ಜಿಇಆರ್‌ಡಿ).** ಗುಣಲಕ್ಷಣಗಳಲ್ಲಿ ವಿಭಿನ್ನವಾಗಿರುವ ಈ ಸ್ಥಿತಿಗಳು ಅನಿಯಮಿತ ಜೀವನಶೈಲಿಗಳಿಗೆ, ಅಸ್ತವ್ಯಸ್ತ ಆಹಾರ ಕ್ರಮದ ಚಟಗಳು, ಮತ್ತು ಕಾರಣವಾದ ಇತರ ಅನೇಕ ಅಂಶಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಲಕ್ಷಣವನ್ನು ಹೊಂದಿರುತ್ತವೆ. ಅಧಿಕ ಒತ್ತಡದ ಮಟ್ಟಗಳು, ಅವಸರವಸರವಾದ ದೈನಂದಿನ ಚಟುವಟಿಕೆಗಳು, ಮತ್ತು ಸಂಸ್ಕರಿಸಿದ ಆಹಾರ ಸೇವನೆಯಿಂದ ಕೂಡಿದ ಆಧುನಿಕ ಜೀವನ ಜಿಐ ನಾಳದ ಅಸ್ವಸ್ಥತೆಗಳಲ್ಲಿ ಗಂಭೀರ ಏರಿಕೆ ಉಂಟುಮಾಡಿದೆ. ಆದ್ದರಿಂದ, ನಮ್ಮ ಜಿಐ ನಾಳದ ಆರೋಗ್ಯದ ಮೇಲೆ ನಮ್ಮ ದೈನಂದಿನ ಆಯ್ಕೆಗಳ ಪ್ರಮುಖ ಪ್ರಭಾವ ಅರ್ಥಮಾಡಿಕೊಳ್ಳುವುದು ಮತ್ತು ಅವುಗಳಿಗೆ ಗಮನ ನೀಡುವುದು ಅನಿವಾರ್ಯವಾಗುತ್ತದೆ.

ಈ ಸ್ಥಿತಿಗಳನ್ನು ಇನ್ನಷ್ಟು ವಿವರವಾಗಿ ತಿಳಿಯೋಣ.

ಉರಿಯೂತಕ್ಕೆ ಒಳಗಾದ ಕರುಳಿನ ರೋಗ (ಐಬಿಡಿ) ಭಾರತದಾದ್ಯಂತ ದೊಡ್ಡ ಪ್ರಮಾಣದಲ್ಲಿ ಜಾಸ್ತಿಯಾಗುತ್ತಿದೆ. ಅದು ಕಿಬ್ಬೊಟ್ಟೆ ನೋವು, ಭೇದಿ, ಮತ್ತು ಗುದದ್ವಾರದ ರಕ್ತಸ್ರಾವದಂತಹ ರೋಗಲಕ್ಷಣಗಳ ಮುಖಾಂತರ ಉಂಟಾಗುತ್ತದೆ ಮತ್ತು ಜೀವನದ ಗುಣಮಟ್ಟದ ಮೇಲೆ ಪ್ರಮುಖವಾಗಿ ಪ್ರಭಾವ ಬೀರುತ್ತದೆ. ಐಬಿಡಿ ಗೆ ನಿಖರವಾದ ಕಾರಣ ತಿಳಿದಿರುವುದಿಲ್ಲ, ಮತ್ತು ಅದು ಆನುವಂಶಿಕವಾಗಿ ತುತ್ತಾಗುವ ಸಾಧ್ಯತೆ, ಪರಿಸರೀಯ ಪ್ರಚೋದನೆಗಳು, ಆಹಾರ ಕ್ರಮದ ಅಂಶಗಳು, ಮತ್ತು ಕರುಳಿನ ಬ್ಯಾಕ್ಟೀರಿಯಾಗಳಲ್ಲಿ ಅಸಮತೋಲನಗಳ ಸಂಯೋಜನೆಯಿಂದ ಉಂಟಾಗುತ್ತದೆ ಎಂದು ಕೊಳ್ಳಲಾಗಿದೆ. ಅಪಾಯದ ಅಂಶಗಳು ಕೌಟುಂಬಿಕ ಇತಿಹಾಸ, ಧೂಮ್ರಪಾನ, ಮತ್ತು ಕೆಲವು ಸೋಂಕುಗಳನ್ನು ಒಳಗೊಂಡಿರುತ್ತವೆ.

ಜಠರ ಅನ್ನನಾಳದ ಹಿಮ್ಮುಖ ಹರಿವಿನ ರೋಗ (ಜಿಇಆರ್ ಡಿ) ಭಾರತದಲ್ಲಿ ವ್ಯಾಪಕವಾಗಿರುವ ಇನ್ನೊಂದು ಜೀರ್ಣಾಂಗದ ಅಸ್ವಸ್ಥತೆಯಾಗಿದ್ದು, ಜನಸಂಖ್ಯೆಯ ಸರಿಸುಮಾರು 10–20% ಜನರ ಮೇಲೆ ಪರಿಣಾಮ ಬೀರಿದೆ. ಈ ಸ್ಥಿತಿಯು ಜಠರದ ಆಮ್ಲವು ಹಿಮ್ಮುಖವಾಗಿ ಹರಿದು ಅನ್ನನಾಳದೊಳಗೆ (ಇಸೊಫೇಗಸ್) ಹೋಗುವುದರಿಂದ ಉಂಟಾಗುವ ರೋಗಲಕ್ಷಣಗಳನ್ನು ಒಳಗೊಂಡಿರುತ್ತದೆ. ಎದೆಯುರಿ, ಹಿಮ್ಮುಖ ಹರಿವು, ಮತ್ತು ಎದೆ ನೋವಿನಂತಹ ಈ ರೋಗಲಕ್ಷಣಗಳು ದೈನಂದಿನ ಜೀವನ ಮತ್ತು ಒಟ್ಟಾರೆ ಯೋಗಕ್ಷೇಮದಲ್ಲಿ ಗಣನೀಯವಾಗಿ ಅಡಚಣೆಯುಂಟು ಮಾಡಬಹುದು. ಜಿಇಆರ್ ಡಿ ಅಪಾಯದ ಅಂಶಗಳು ಬೊಜ್ಜು, ಧೂಮ್ರಪಾನ, ಮದ್ಯ, ಗರ್ಭಧಾರಣೆ, ಅಧಿಕ–ಕೊಬ್ಬಿನ ಆಹಾರ ಕ್ರಮ, ಮತ್ತು ಕಾರ್ಬೊನೇಟ್ ಯುಕ್ತ ಪಾನೀಯಗಳನ್ನು ಒಳಗೊಂಡಿರುತ್ತವೆ. ಕಿಬ್ಬೊಟ್ಟೆ ಮತ್ತು ಎದೆಯನ್ನು ಪ್ರತ್ಯೇಕಿಸುವ ದೊಡ್ಡ ಸ್ನಾಯುವಿನ ಮುಖಾಂತರ ಜಠರವು ಹೊರಚಾಚಿಕೊಳ್ಳುವುದು (ಹಯಟಸ್ ಹರ್ನಿಯಾ) ಎಂದು ಕರೆಯಲಾಗುವ ಎದೆಯಲ್ಲಿನ ಅಂಗರಚನೆಯ ದೋಷವು ಜಿಇಆರ್ ಡಿ ಆಗಿ

ಪರಿಣಮಿಸಬಹುದು. ಅಲ್ಲದೇ, ಅನಿಯಂತ್ರಿತ ಮಧುಮೇಹದಂತಹ ಕೆಲವು ವೈದ್ಯಕೀಯ ಸ್ಥಿತಿಗಳು ಮತ್ತು ಔಷಧಿಗಳು ಕೂಡ ಜಿಇಆರ್ ಡಿ ಅಪಾಯವನ್ನು ಹೆಚ್ಚಿಸಬಹುದು.

ಕೋರಮಂಗಲದಲ್ಲಿರುವ ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಯಲ್ಲಿ ಹಿರಿಯ ಜಠರ/ ಸಣ್ಣ ಕರುಳಿನ ಉರಿಯೂತದ ತಜ್ಞರಾಗಿರುವ (ಗ್ಯಾಸ್ಟ್ರೊಎಂಟರೊಲಾಜಿಸ್ಟ್) ಡಾ. ಅಮಿತ್ ಯಲ್ಸಂಗೀಕರ್ ಅವರು ಹೇಳುತ್ತಾರೆ, “ಐಬಿಡಿ ಮತ್ತು ಜಿಇಆರ್ ಡಿ ಯಂತಹ ಜೀರ್ಣಾಂಗದ ಅಸ್ವಸ್ಥತೆಗಳಿಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿದ್ದರೂ, ಈ ರೋಗವನ್ನು ಉಪಶಮನ ಮಾಡುವ ಮತ್ತು ದೀರ್ಘಕಾಲದವರೆಗೆ ನಿಯಂತ್ರಿಸುವ ಹಲವಾರು ನಿರ್ವಹಣಾ ಕಾರ್ಯತಂತ್ರಗಳಿವೆ. ಇದರಿಂದ ರೋಗಲಕ್ಷಣಗಳು ಗಣನೀಯವಾಗಿ ಕಡಿಮೆಯಾಗುತ್ತವೆ ಮತ್ತು ಜೀವನದ ಗುಣಮಟ್ಟ ಸುಧಾರಿಸುತ್ತದೆ. ಇವು ಆಹಾರ ಕ್ರಮದಲ್ಲಿ ಹೊಂದಾಣಿಕೆಗಳು, ನಿಯಮಿತ ಔಷಧೋಪಚಾರ ಮತ್ತು ಅನುಸರಣೆ, ಒತ್ತಡ ನಿರ್ವಹಣೆ, ಮತ್ತು ಜೀವನ ಶೈಲಿಯಲ್ಲಿ ಬದಲಾವಣೆಗಳನ್ನು ಒಳಗೊಂಡಿರುತ್ತವೆ. ಆದರೆ ಹಲವಾರು ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ಪ್ರತ್ಯೇಕ ರೋಗಿಗಳನ್ನಾಧರಿಸಿ ಚಿಕಿತ್ಸೆಯ ಮತ್ತು ನಿರ್ವಹಣೆಯ ಯೋಜನೆಗಳನ್ನು ವೈಯಕ್ತೀಕರಿಸಬೇಕಾಗುತ್ತದೆ. ಹೆಚ್ಚುವರಿಯಾಗಿ, ಸಮಯಕ್ಕೆ ಸರಿಯಾಗಿ ಊಟ ಮಾಡುವುದು, ತೂಕ ನಿರ್ವಹಣೆ ಮತ್ತು ಮಂಚದ ತಲೆಭಾಗವನ್ನು ಎತ್ತರಿಸಿಕೊಂಡು ಮಲಗುವುದು ಹೀಗೆ ಕೆಲವು ಸರಳ ಹಿಮ್ಮುಖ ಹರಿವು ನಿರೋಧಕ ಕ್ರಮಗಳಿದ್ದು, ಇವು ಜಿಇಆರ್ ಡಿ ರೋಗಲಕ್ಷಣಗಳನ್ನು ಹತೋಟಿಯಲ್ಲಿಡಲು ಸಹಾಯ ಮಾಡುತ್ತವೆ.”

ಕೋರಮಂಗಲದಲ್ಲಿರುವ ಅಪೊಲೊ ಸ್ಪೆಕ್ಟ್ರಾದಲ್ಲಿ ಹಿರಿಯ ಹೊಟ್ಟೆಯ ಶಸ್ತ್ರಚಿಕಿತ್ಸಕರಾಗಿರುವ ಡಾ. ಜೆ.ಜಿ. ಶರತ್ ಕುಮಾರ್ ಶಸ್ತ್ರಚಿಕಿತ್ಸೆಯ ಆಯ್ಕೆಗಳ ಬಗ್ಗೆ ತಮ್ಮ ನಿಪುಣ ಅಭಿಪ್ರಾಯವನ್ನು ಹಂಚಿಕೊಳ್ಳುತ್ತ ಹೇಳುತ್ತಾರೆ, “ಸಾಮಾನ್ಯವಾಗಿ ಐಬಿಡಿ ಮತ್ತು ಜಿಇಆರ್ ಡಿ ಇವೆರಡರಲ್ಲೂ ಜೀವನ ಶೈಲಿಯಲ್ಲಿನ ಬದಲಾವಣೆಗಳು ಮತ್ತು ಔಷಧಿಗಳಂತಹ ಮುನ್ನೆಚ್ಚರಿಕೆಯ (ಕನ್ಸರ್ವೇಟಿವ್) ಚಿಕಿತ್ಸೆಗಳು ರೋಗಲಕ್ಷಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸದಿದ್ದಾಗ ಶಸ್ತ್ರಚಿಕಿತ್ಸೆಯನ್ನು ಕೊನೆಯ ಉಪಾಯವಾಗಿ ಪರಿಗಣಿಸಲಾಗುತ್ತದೆ, ಐಬಿಡಿ ನಲ್ಲಿ, ಕರುಳಿನಲ್ಲಿನ ಅಡಚಣೆ, ರಕ್ತಸ್ರಾವ, ಅಥವಾ ಅಸಹಜ ತೂತುಗಳಂತಹ ತೀವ್ರ ಜಟಿಲತೆಗಳಿಗಾಗಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಅದು ಈ ಸಮಸ್ಯೆಗಳನ್ನು ಪರಿಹರಿಸುವ ಗುರಿ ಹೊಂದಿರುತ್ತದೆ ಮತ್ತು ಪರಿಣಾಮಕ್ಕೊಳಗಾದ ಕರುಳಿನ ಭಾಗಗಳನ್ನು ತೆಗೆಯುವುದನ್ನು ಒಳಗೊಂಡಿರುತ್ತದೆ. ಅದೇ ರೀತಿ, ಜಿಇಆರ್ ಡಿ ನಲ್ಲಿ, ಕೆಳಭಾಗದ ಅನ್ನನಾಳದ ವೃತ್ತಾಕಾರದ ಸ್ನಾಯುವನ್ನು ಬಲಪಡಿಸುವ ಗುರಿ ಹೊಂದಿರುತ್ತದೆ. ಜಿಇಆರ್ ಡಿ ವಿಷಯದಲ್ಲಿ ಫಂಡೊಪ್ಲಿಕೇಶನ್ ಚೆನ್ನಾಗಿ–ಸಾಬೀತಾಗಿರುವ ಶಸ್ತ್ರಚಿಕಿತ್ಸಾ ತಂತ್ರವಾಗಿದೆ, ಮತ್ತು ಅದರ ಯಶಸ್ಸು ಹಲವಾರು ಅಂಶಗಳನ್ನು ಆಧರಿಸಿರುತ್ತದೆ, ಅವುಗಳೆಂದರೆ ರೋಗಿಯ ಸಂಪೂರ್ಣ ಆರೋಗ್ಯ, ಅವರ ಆರೋಗ್ಯ ಸ್ಥಿತಿಯ ತೀವ್ರತೆ, ಮತ್ತು ಕಾರ್ಯವಿಧಾನಕ್ಕೆ ಅವರ ವೈಯಕ್ತಿಕ ಪ್ರತಿಕ್ರಿಯೆ. ಜಿಇಆರ್ ಡಿ ನಿರ್ವಹಿಸುವುದಕ್ಕಾಗಿ ಫಂಡೊಪ್ಲಿಕೇಶನ್ ಸರಿಯಾದ ಆಯ್ಕೆಯಾಗಿದೆಯೋ ಇಲ್ಲವೋ ಎಂಬುದರ ಬಗ್ಗೆ ಮಾಹಿತಿಯುಕ್ತ ನಿರ್ಧಾರ ಕೈಗೊಳ್ಳಲು ರೋಗಿಗಳು ತಮ್ಮ ಆರೋಗ್ಯ ಕಾಳಜಿದಾತರೊಂದಿಗೆ ವಿಸ್ತಾರವಾದ ಚರ್ಚೆ ನಡೆಸಬೇಕು.”

ನೀವು ಅಥವಾ ನಿಮ್ಮ ಪ್ರೀತಿಪಾತ್ರರಲ್ಲಿ ಯಾರಾದರೂ ದೀರ್ಘಕಾಲದ ಜಠರಕರುಳಿನ ಸಮಸ್ಯೆಗಳಾದ ಐಬಿಡಿ ಮತ್ತು ಜಿಇಆರ್ ಡಿ ನಿಂದ ಬಳಲುತ್ತಿದ್ದರೆ, ತಡ ಮಾಡಬೇಡಿ. ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಯು ಕೋರಮಂಗಲದಲ್ಲಿರುವ ಕೇಂದ್ರದಲ್ಲಿ 30 ನೇ ನವೆಂಬರ್ ವರೆಗೆ ವಿಶೇಷ ಜಠರ ಸಮಾಲೋಚನಾ ಶಿಬಿರ ಏರ್ಪಡಿಸಿದೆ. ಅವರ ಜೀರ್ಣಾಂಗದ ವಿವಿಧ ಪ್ರಕಾರದ ಅಸ್ವಸ್ಥತೆಗಳನ್ನು ನಿರ್ವಹಿಸುವಲ್ಲಿ ಮತ್ತು ಚಿಕಿತ್ಸೆ ನೀಡುವಲ್ಲಿ ದಶಕಗಳ ಅನುಭವ ಹೊಂದಿರುವ ನಿಪುಣ ಜಠರ ಉರಿಯೂತ ತಜ್ಞರೊಂದಿಗೆ ಪೂರಕ ಉಚಿತ ಸಮಾಲೋಚನೆಗೆ ನೀವು ನೋಂದಾಯಿಸಿಕೊಳ್ಳಬಹುದು. ವೈದ್ಯರು ಸಲಹೆ ನೀಡಿದ್ದರೆ, ರೋಗಪತ್ತೆ ಮೇಲೆ ನಿಮಗೆ 25% ವಿನಾಯ್ತಿ ಸಿಗುತ್ತದೆ.

40+ ವರ್ಷಗಳಿಗಿಂತಲೂ ಹೆಚ್ಚು ಕಾಲ ಅಪೊಲೊದ ವಿಶ್ವಾಸ ಮತ್ತು ಪರಂಪರೆಯ ಬೆಂಬಲದಡಿ ಬೆಳೆದು ಬಂದಿರುವ ಸ್ಪೆಕ್ಟ್ರಾ ಅತ್ಯುತ್ತಮ ವೈದ್ಯಕೀಯ ನೈಪುಣ್ಯತೆ, ತಂತ್ರಜ್ಞಾನ ಮತ್ತು ಸೌಲಭ್ಯಗಳನ್ನು ಒದಗಿಸುವ ಮೂಲಕ ಅಡಚಣೆ ರಹಿತ ಮತ್ತು ಸಮರ್ಥ ಆರೋಗ್ಯ ಆರೈಕೆ ಅನುಭವವನ್ನು ಒದಗಿಸುತ್ತದೆ. ನಗದು ರಹಿತ ಚಿಕಿತ್ಸೆ ಒದಗಿಸುವುದಕ್ಕಾಗಿ, ಅವರು ಎಲ್ಲ ಪ್ರಮುಖ ವಿಮಾದಾರರು ಮತ್ತು ಟಿಪಿಎ ಗಳೊಂದಿಗೆ ನೋಂದಾಯಿಸಿಕೊಂಡಿರುತ್ತಾರೆ.

ಈ ಶಿಬಿರಕ್ಕೆ ಬರಬೇಕೆಂದರೆ ಮುಂಚಿತವಾಗಿ ಅಪಾಯಿಂಟ್ಮೆಂಟ್ ಪಡೆಯುವುದು ಕಡ್ಡಾಯವಾಗಿರುತ್ತದೆ. ನೋಂದಣಿಗಳಿಗಾಗಿ,
ಸಂಪರ್ಕಿಸಿ: 8447697810
ವಿಳಾಸ: 143, 1ನೇ ಅಡ್ಡರಸ್ತೆ,

Apollo Spectra HOSPITALS
Specialists in Surgery

ನಾಗಾರ್ಜುನ ಹೋಟೆಲ್ ಹತ್ತಿರ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬ್ಯಾಟರಾಯನಪುರ ಎಸಿಪಿ ತನಿಖೆಯಿಂದ ಕೃತ್ಯ ಬಯಲು ● ಜಿ.ಕೆ. ಶಂಕರ್ ನಾಯಕ್ ವಿರುದ್ಧ ಎಫ್‌ಐಆರ್

‘₹ 75 ಲಕ್ಷ ದೋಚಲು ಸುಳ್ಳು ಪ್ರಕರಣ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನದ ಬಗ್ಗೆ ಸುಳ್ಳು ಪ್ರಕರಣ ಸೃಷ್ಟಿಸಿ ₹ 75 ಲಕ್ಷ ದೋಚಲು ಸಂಚು ರೂಪಿಸಿದ್ದ ಹಾಗೂ ₹ 20 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ವಿವಿಧ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಕೆ. ಶಂಕರ್ ನಾಯಕ್ ಹಾಗೂ ಇತರರ ವಿರುದ್ಧ ಬ್ಯಾಟರಾಯನಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಆರೋಪಿ ಶಂಕರ್ ನಾಯಕ್, ಬ್ಯಾಟರಾಯನಪುರ ಠಾಣೆ ಇನ್‌ಸ್ಪೆಕ್ಟರ್ ಆಗಿ ಈ ಹಿಂದೆ ಕೆಲಸ ಮಾಡಿದ್ದರು. ಅದೇ ಸಂದರ್ಭದಲ್ಲಿಯೇ ಅವರು ಈ ಕೃತ್ಯ ಎಸಗಿದ್ದಾರೆ. ಈ ಬಗ್ಗೆ ತನಿಖೆ ನಡೆಸಿದ್ದ ಬ್ಯಾಟರಾಯನಪುರ ಉಪ ವಿಭಾಗದ ಎಸಿಪಿ ಭರತ್ ರೆಡ್ಡಿ, ಕೃತ್ಯದ ಬಗ್ಗೆ ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಇನ್‌ಸ್ಪೆಕ್ಟರ್ ಶಂಕರ್ ನಾಯಕ್

‘ಇನ್‌ಸ್ಪೆಕ್ಟರ್ ಶಂಕರ್ ನಾಯಕ್, ಅಧಿಕಾರ ದುರ್ಬಳಕೆ ಮಾಡಿಕೊಂಡು ಸುಳ್ಳು ಪ್ರಕರಣ ಸೃಷ್ಟಿ ಕರ್ತವ್ಯದಲ್ಲಿ ನಂಬಿಕೆ ದ್ರೋಹ ಹಾಗೂ ಭ್ರಷ್ಟಾಚಾರ ಎಸಗಿರುವುದಾಗಿ ಎಸಿಪಿ ಅವರು ದೂರಿನಲ್ಲಿ ತಿಳಿಸಿದ್ದಾರೆ. ಐಪಿಸಿ 409 (ಸಾರ್ವಜನಿಕ ಸೇವಕರಿಂದ ನಂಬಿಕೆಯ ಉಲ್ಲಂಘನೆ), ಐಪಿಸಿ 465 (ನಕಲಿ ದಾಖಲೆ ಸೃಷ್ಟಿ), ಐಪಿಸಿ 201 (ಸಾಕ್ಷ್ಯಗಳನ್ನು ಕಣ್ಮರೆ ಮಾಡುವುದು), ಐಪಿಸಿ 110 (ಅಪರಾಧಕ್ಕೆ ಕುಮ್ಮಕ್ಕು) ಆರೋಪ ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯಡಿ ‘ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಹಾಗೂ ಲೋಕನಾಥ್ ಸಿಂಗ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ವಿವರ: ‘2022ರ ಸೆಪ್ಟೆಂಬರ್‌ನಲ್ಲಿ ಉದ್ಯಮಿ ಹರೀಶ್ ಅವರಿಗೆ ಸೇರಿದ್ದ ₹ 75 ಲಕ್ಷವನ್ನು ಚಾಲಕ ಸಂತೋಷ್ ಕದ್ದೊಯ್ದಿದ್ದ. ಈ ವಿಚಾರ ಮಧ್ಯವರ್ತಿ ಲೋಕನಾಥ್ ಸಿಂಗ್ ಮೂಲಕ ತಿಳಿದುಕೊಂಡಿದ್ದ ಶಂಕರ್ ನಾಯಕ್, ಹರೀಶ್‌ನನ್ನು ಸಂಪರ್ಕಿಸಿದ್ದ. ಆರೋಪಿಯನ್ನು ಹುಡುಕಿಕೊಡಲು ₹ 20 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದ’ ಎಂದು ಎಸಿಪಿ ದೂರಿನಲ್ಲಿ ತಿಳಿಸಲಾಗಿದೆ.

‘ಕಳ್ಳತನ ನಡೆದಿದ್ದ ಸ್ಥಳ, ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಇರಲಿಲ್ಲ. ಆದ್ಯಾಗಿಯೂ ತನ್ನ ಠಾಣೆ ವ್ಯಾಪ್ತಿಯಲ್ಲಿಯೇ ಕಳ್ಳತನ ನಡೆದಿರುವುದಾಗಿ ಸುಳ್ಳು ಪ್ರಕರಣ ಸೃಷ್ಟಿಸಿದ್ದ ಶಂಕರ್ ನಾಯಕ್, ತಾನೇ ಸಿದ್ಧಪಡಿಸಿದ್ದ ದೂರಿಗೆ ಸ್ನೇಹಿತನಿಂದ ನಕಲಿ ಸಹಿ ಪಡೆದು 2022ರ ಅಕ್ಟೋಬರ್ 12ರಂದು ಎಫ್‌ಐಆರ್ ದಾಖಲಿಸಿಕೊಂಡಿದ್ದ. ನಂತರ, ಆರೋಪಿಯನ್ನು ಪತ್ತೆ ಮಾಡಿ ₹ 72 ಲಕ್ಷ ಜಪ್ತಿ ಮಾಡಿದ್ದ.’

‘ಪ್ರಕರಣದ ಬಗ್ಗೆ ಅನುಮಾನಗೊಂಡಿದ್ದ ಅಂದಿನ ಡಿಸಿಪಿ, ಎಸಿಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದರು. ಅಂದಿನ ಎಸಿಪಿ ಕೋದಂಡರಾಮ್, ಪ್ರಕರಣದ ಕಡತಗಳನ್ನು ಮಾತ್ರ ಸುಪರ್ದಿಗೆ ಪಡೆದಿದ್ದರು. ಜಪ್ತಿ ಮಾಡಿದ್ದ ₹ 72 ಲಕ್ಷವನ್ನು ಸರ್ಕಾರಿ ಖಜಾನೆಯಲ್ಲಿ ಇರಿಸುವಂತೆ ಶಂಕರ್ ನಾಯಕ್‌ಗೆ ಸೂಚಿಸಿದ್ದರು. ಆದರೆ, ಶಂಕರ್ ನಾಯಕ್ ಅದೇ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದ’ ಎಂಬ ಸಂಗತಿ ದೂರಿನಲ್ಲಿದೆ.

‘ಬ್ಯಾಟರಾಯನಪುರ ಠಾಣೆಗೆ ವರ್ಗಾವಣೆಗೊಂಡಿದ್ದ ನಿಂಗನಗೌಡ ಪಾಟೀಲ ಅಧಿಕಾರ ಸ್ವೀಕರಿಸಿದ್ದರು. ಜಪ್ತಿ ಹಣವನ್ನು ಅವರ ಸುಪರ್ದಿಗೆ ನೀಡುವಂತೆ ಎಸಿಪಿ ಅವರು ಶಂಕರ್ ನಾಯಕ್‌ಗೆ ಹಲವು ಬಾರಿ ನೋಟಿಸ್ ನೀಡಿದ್ದರು.

ಆದರೆ, ಆತ ಯಾವುದೇ ಹಣ ನೀಡಿರಲಿಲ್ಲ. ‘ಇದರ ನಡುವೆಯೇ ಶಂಕರ್ ನಾಯಕ್, ಹಣವಿದ್ದ ಚೀಲವನ್ನು ಠಾಣೆಯಲ್ಲಿರಿಸಿದ್ದ ಸಂಗತಿ ಸಿ.ಸಿ.ಟಿ.ವಿ ಕ್ಯಾಮೆರಾದಿಂದ ಗೊತ್ತಾಗಿತ್ತು. ಚೀಲವನ್ನು ಪತ್ತೆ ಮಾಡಿ ಪರಿಶೀಲಿಸಿದಾಗ, ಅದರಲ್ಲಿ ₹ 75 ಲಕ್ಷ (₹100, ₹ 200, ₹500 ಹಾಗೂ ₹2000 ಮುಖಬೆಲೆ ನೋಟುಗಳು) ಪತ್ತೆಯಾಗಿದ್ದ’ ಎಂದು ಎಸಿಪಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಉಗ್ರಗಾಮಿ’ ಪಟ್ಟ: ₹ 29.63 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಗ್ರಗಾಮಿ ಸಂಘಟನೆ ಜೊತೆ ನಂಟು ಹೊಂದಿರುವುದಾಗಿ ಹೇಳಿ ಪೊಲೀಸರ ಹೆಸರಿನಲ್ಲಿ ಬೆದರಿಸಿ ನಗರದ ನಿವಾಸಿಯೊಬ್ಬರಿಂದ ₹29.63 ಲಕ್ಷ ಪಡೆದು ವಂಚಿಸಲಾಗಿದೆ.

ಈ ಸೈಬರ್ ವಂಚನೆ ಸಂಬಂಧ ಬೇಗೂರು ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ರಾಹುಲ್ ಶರ್ಮಾ ವಿರುದ್ಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಖಾಸಗಿ ಕಂಪನಿ ಉದ್ಯೋಗಿ ಆಗಿರುವ ದೂರುದಾರರಿಗೆ ನ. 13ರಂದು ಕರೆ ಮಾಡಿದ್ದ ಆರೋಪಿ ರಾಹುಲ್, ‘ನಿಮ್ಮ ಹೆಸರಿನಲ್ಲಿ ಪಾರ್ಸೆಲ್ ಬಂದಿದೆ. ಅದರಲ್ಲಿ ಭಯೋತ್ಪಾದನೆಗೆ ಬಳಸುವ ನಿಷೇಧಿತ ವಸ್ತುಗಳಿವೆ’ ಎಂದಿದ್ದ. ಇದರಿಂದಾಗಿ ದೂರುದಾರರು ಆತಂಕಗೊಂಡಿದ್ದರು. ಪಾರ್ಸೆಲ್ ತಮ್ಮದಲ್ಲದೆಂದು ಹೇಳಿದರೂ ಆರೋಪಿ ಕೇಳಿ ರಲಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ನಿಮ್ಮ ವಿಳಾಸವನ್ನು ದೃಢೀಕರಣ ಮಾಡಬೇಕು. ಸ್ಕೈಪೇ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ’ ಎಂದೂ ಆರೋಪಿ ತಿಳಿಸಿದ್ದ. ಅದರಂತೆ ದೂರುದಾರ, ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದರು. ‘ಕೆಲ ಭಯೋತ್ಪಾದಕರು ನಿಮ್ಮ ಆಧಾರ್ ಬಳಸುತ್ತಿದ್ದಾರೆ. ಅದೇ ಆಧಾರ್ ಮೂಲಕ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದಾರೆ. ಈ ಬಗ್ಗೆ ನಮಗೆ ಖಚಿತ ಮಾಹಿತಿ ಇದೆ. ನೀವೂ ಉಗ್ರಗಾಮಿ ಎಂಬ ಶಂಕೆ ಇದೆ’ ಎಂದು ಆರೋಪಿ ಪುನಃ ಬೆದರಿಸಿದ್ದ.’

‘ಉಗ್ರಗಾಮಿ ಎನ್ನುತ್ತಿದ್ದಂತೆ ಮತ್ತಷ್ಟು ಹೆದರಿದ್ದ ದೂರುದಾರ, ‘ನಾನು ಯಾವುದೇ ತಪ್ಪು ಮಾಡಿಲ್ಲ. ದಯವಿಟ್ಟು ಬಿಟ್ಟುಬಿಡಿ’ ಎಂದಿದ್ದ. ಆರೋಪಿ, ‘ನೀವು ಅಮಾಯಕರು ಎಂಬುದನ್ನು ನಿರೂಪಿಸಿ. ವೈಯಕ್ತಿಕ ಮಾಹಿತಿ ಹಾಗೂ ಬ್ಯಾಂಕ್ ಖಾತೆ ಮಾಹಿತಿ ನೀಡಿ. ಎಲ್ಲವನ್ನೂ ಪರಿಶೀಲನೆ ಮಾಡುತ್ತೇನೆ. ನಂತರ, ನಿಮ್ಮ ವಿರುದ್ಧದ ಪ್ರಕರಣ ರದ್ದು ಮಾಡುತ್ತೇನೆ’ ಎಂದಿದ್ದ. ಅದರಂತೆ ದೂರುದಾರ, ಎಲ್ಲ ಮಾಹಿತಿ ಹಂಚಿಕೊಂಡಿದ್ದರು’ ಎಂದು ತಿಳಿಸಿವೆ.

‘ಪರಿಶೀಲನೆ ಶುಲ್ಕ ಹಾಗೂ ಇತರೆ ಹೆಸರಿನಲ್ಲಿ ಆರೋಪಿ, ಹಂತ ಹಂತವಾಗಿ ₹ 29.63 ಲಕ್ಷ ಪಡೆದುಕೊಂಡಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

₹10.50 ಲಕ್ಷ ವಂಚಿಸಿದ ‘ನಕಲಿ ಸಿಬಿಐ’

ಬೆಂಗಳೂರು: ಸಿಬಿಐ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿ ₹ 10.50 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂದ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಸವನಗುಡಿ ನಿವಾಸಿಯಾಗಿರುವ 47 ವರ್ಷದ ಉದ್ಯಮಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ನ. 15ರಂದು ಸ್ಕೈಪೇ ಆ್ಯಪ್ ಮೂಲಕ ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಆಧಾರ್ ಜೋಡಣೆ ಆಗಿರುವ ಮೊಬೈಲ್ ಸಂಖ್ಯೆಯಿಂದ ಅಪರಾಧವಾಗಿದೆ. ಈ ಬಗ್ಗೆ ಸಿಬಿಐ ಮುಂಬೈ ಕಚೇರಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸದ್ಯದಲ್ಲೇ ನಿಮ್ಮ ಮೊಬೈಲ್ ನಂಬರ್ ನಿಷ್ಕ್ರಿಯವಾಗಲಿದೆ.’ ಎಂದಿದ್ದ. ಇದರಿಂದ ದೂರುದಾರರು ಆತಂಕಗೊಂಡಿದ್ದರು.’

‘ಕೆಲ ಹೊತ್ತಿನ ಬಳಿಕ ಸಿಬಿಐ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿ, ‘ಅಕ್ರಮ ಹಣ ವರ್ಗಾವಣೆ ಸಂಬಂಧ ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ತನಿಖೆ ನಡೆಸಲಾಗುತ್ತಿದೆ. ನಿಮ್ಮ ಮೊಬೈಲ್ ನಂಬರ್ ಹಾಗೂ ಆಧಾರ್ ಪರಿಶೀಲನೆ ಮಾಡಬೇಕು. ಎಲ್ಲ ಮಾಹಿತಿ ತಿಳಿಸಿ’ ಎಂದಿದ್ದ. ಅದನ್ನು ನಂಬಿದ್ದ ದೂರುದಾರ, ಮಾಹಿತಿ ಹಂಚಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು. ‘ಮಾಹಿತಿ ತಿಳಿದುಕೊಂಡಿದ್ದ ಆರೋಪಿ, ಪರಿಶೀಲನೆ ಹಾಗೂ ಇತರೆ ಹೆಸರಿನಲ್ಲಿ ಹಂತ ಹಂತವಾಗಿ ₹ 10.50 ಲಕ್ಷ ಪಡೆದುಕೊಂಡಿದ್ದ. ಇದಾದ ಕೆಲ ಗಂಟೆಗಳ ನಂತರ ಆರೋಪಿ ಮೊಬೈಲ್ ಸ್ವಿಚ್ ಆಫ್ ಮಾಡಿ ನಾಪತ್ತೆಯಾಗಿದ್ದಾನೆ. ವಂಚನೆ ಎಂಬುದು ತಿಳಿಯುತ್ತಿದ್ದಂತೆ ಉದ್ಯಮಿ ಠಾಣೆಗೆ ದೂರು ನೀಡಿದ್ದಾರೆ’ ಎಂದು ಹೇಳಿದರು.

ಕಾರ್ಖಾನೆ ನಿರ್ಮಾಣಕ್ಕೆ ಮಂಜೂರಾತಿ ನೀಡಲು ₹1.20 ಲಕ್ಷ ಲಂಚ

ಕೆಐಎಡಿಬಿ ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಂಚಿಕೆಯಾಗಿದ್ದ ನಿವೇಶನದಲ್ಲಿ ಕಾರ್ಖಾನೆ ನಿರ್ಮಿಸಲು ಮಂಜೂರಾತಿ ನೀಡಲು ₹ 1.20 ಲಕ್ಷ ಲಂಚ ಪಡೆಯುತ್ತಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಇಬ್ಬರು ಎಂಜಿನಿಯರ್‌ಗಳನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕೆಐಎಡಿಬಿಯ ಕಾರ್ಯನಿರ್ವಾಹಕ ಎಂಜಿನಿಯರ್–1 ಕಚೇರಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನವೀನ್ ತೋಟಗಂಟಿ ಮತ್ತು ಕಿರಿಯ ಎಂಜಿನಿಯರ್ ಜಿ.ಎಚ್. ಮಲ್ಲಾಪುರ ಬಂಧಿತರು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲಗೂರು ನಿವಾಸಿ ನಾರಾಯಣಸ್ವಾಮಿ ಎಂಬುವರಿಗೆ ಕೆಐಎಡಿಬಿಯು ನೆಲಮಂಗಲ ಸಮೀಪದ ಸೋಂಪುರದಲ್ಲಿ ನಿರ್ಮಿಸಿರುವ ಕೈಗಾರಿಕಾ ಪ್ರದೇಶದಲ್ಲಿ

ಜಿ.ಎಚ್. ಮಲ್ಲಾಪುರ

ನವೀನ್ ತೋಟಗಂಟಿ

ನಿವೇಶನ ಹಂಚಿಕೆಯಾಗಿತ್ತು. ಅಲ್ಲಿ ಕಾರ್ಖಾನೆ ನಿರ್ಮಿಸಲು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು.

ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲು ₹ 1.5 ಲಕ್ಷ ಲಂಚ ನೀಡುವಂತೆ ಆರೋಪಿಗಳು ಬೇಡಿಕೆ ಇಟ್ಟದ್ದರು. ಬಳಿಕ ಚೌಕಾಸಿ ನಡೆಸಿದಾಗ ₹ 1.2 ಲಕ್ಷ ಕೊಟ್ಟರೆ ಮಂಜೂರಾತಿ ನೀಡುವುದಾಗಿ ಹೇಳಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ನಾರಾಯಣಸ್ವಾಮಿ ಅವರಿಂದ ಗುರುವಾರ ₹ 1.2 ಲಕ್ಷ ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಇಬ್ಬರನ್ನೂ ಬಂಧಿಸಿದರು.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ–1 ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆನಂದ್ ಮತ್ತು ಸಿಬ್ಬಂದಿ ಈ ಕಾರ್ಯಾಚರಣೆ ನಡೆಸಿದ್ದರು.

ಟೆಕಿ ಕಾರು ಹಿಂಬಾಲಿಸಿ ಕಿರುಕುಳ

ಬೆಂಗಳೂರು: ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಮಹಿಳಾ ಸಾಫ್ಟ್‌ವೇರ್ ಎಂಜಿನಿಯರೊಬ್ಬರ ಕಾರು ಹಿಂಬಾಲಿಸಿದ್ದ ವ್ಯಕ್ತಿಯೊಬ್ಬ ಕಿರುಕುಳ ನೀಡಿದ್ದು, ಈ ದೃಶ್ಯ ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಘಟನೆ ಬಗ್ಗೆ ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪೋಸ್ಟ್ ಪ್ರಕಟಿಸಿ ಪೊಲೀಸರ ಖಾತೆಗೆ ಟ್ಯಾಗ್ ಮಾಡಿರುವ ಮಹಿಳೆ, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

‘ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಹಿಳೆ, ಕೆಲಸ ಮುಗಿಸಿ ತಮ್ಮ ಕಾರಿನಲ್ಲಿ ಮನೆಯತ್ತ ಹೊರಟಿದ್ದರು. ಪಾನಮತ್ತನಾಗಿದ್ದ ಎನ್ನಲಾದ ವ್ಯಕ್ತಿ, ಬೈಕ್‌ನಲ್ಲಿ ಕಾರು ಹಿಂಬಾಲಿಸಿದ್ದ. ಕಾರಿನ ಅಕ್ಕ–ಪಕ್ಕದಲ್ಲಿ ಅಡ್ಡಾದಿಡ್ಡಿ ಬೈಕ್ ಚಲಾಯಿಸಿ ಡಿಕ್ಕಿ ಹೊಡೆಯಲು ಯತ್ನಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಬಿಇಎಂ ಬಡಾವಣೆ ಬಳಿ ಕಾರು ಅಡ್ಡಗಟ್ಟಿದ್ದ ಆರೋಪಿ, ಸನ್ನೆಗಳ ಮೂಲಕ ಮಹಿಳೆಗೆ ಕಿರುಕುಳ ನೀಡಿದ್ದ. ಕಾರಿನ ಬಾಗಿಲು ತೆರೆಯುವಂತೆ ವ್ಯಕ್ತಿ ಕೂಗಾಡಿದ್ದ. ಹೆದರಿದ್ದ ಮಹಿಳೆ, ಬಾಗಿಲು ತೆರೆದಿರಲಿಲ್ಲ. ಕೆಲ ನಿಮಿಷಗಳ ನಂತರ ಮಹಿಳೆ, ಕಾರು ಸಮೇತ ಅಲ್ಲಿಂದ ಹೊರಟು ಮನೆ ತಲುಪಿದ್ದರು’ ಎಂದು ಮೂಲಗಳು ತಿಳಿಸಿವೆ.

ಪ್ರತಿಭಟನೆ ‘ರೈತರು ಸರಬರಾಜು ಮಾಡುವ ಹಾಲಿಗೆ ಕನಿಷ್ಠ ₹ 40 (ಪ್ರತಿ ಲೀಟರ್‌ಗೆ) ನಿಗದಿಪಡಿಸಬೇಕು. ಪಶು ಆಹಾರ ದರ ಇಳಿಕೆ ಮಾಡಬೇಕು. ಬರಗಾಲದ ವಿಶೇಷ ಪ್ರೋತ್ಸಾಹ ಧನ ನೀಡಬೇಕು’ ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆಯ ದೊಡ್ಡಬಳ್ಳಾಪುರ ಘಟಕದ ಸದಸ್ಯರು ಬೆಂಗಳೂರು ಡೇರ ಕೇಂದ್ರ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

3 ವರ್ಷದ ಮಗುವಿನ ಮೇಲೆ ದೌರ್ಜನ್ಯ

ಬೆಂಗಳೂರು: ಮೂರು ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಬಾಲಕನೊಬ್ಬನನ್ನು ಜಯನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ನ. 22ರಂದು ನಡೆದಿರುವ ಘಟನೆ ಸಂಬಂಧ ಮಗುವಿನ ಪೋಷಕರು ದೂರು ನೀಡಿದ್ದರು. ಅದರನ್ವಯ ಬಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಮಗುವಿನ ತಾಯಿ ಅಂಗಡಿಗೆ ಹೋಗಿದ್ದರು. ಇದೇ ವೇಳೆ ಬಾಲಕ, ಚಾಕೊಲೇಟ್ ನೀಡುವುದಾಗಿ ಹೇಳಿ ಮಗುವನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದಿದ್ದ. ಅಲ್ಲಿಯೇ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ಅದನ್ನು ನೋಡಿದ್ದ ಸ್ಥಳೀಯರೊಬ್ಬರು ಮಗುವನ್ನು ರಕ್ಷಿಸಿದ್ದರು’ ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

‘ನಮ್ಮ ಮೆಟ್ರೊ’ದಲ್ಲಿ ಚಿತ್ರೀಕರಣಕ್ಕೆ ಅವಕಾಶ: ಬಿಎಂಆರ್‌ಸಿಎಲ್

ಬೆಂಗಳೂರು: ‘ನಮ್ಮ ಮೆಟ್ರೊ’ದಲ್ಲಿ ಸಿನಿಮಾ, ಕಿರುಚಿತ್ರ ಹಾಗೂ ಧಾರಾವಾಹಿ ಚಿತ್ರೀಕರಣಕ್ಕೆ ಅವಕಾಶ ನೀಡಿ ಬಿಎಂಆರ್‌ಸಿಎಲ್ ಮಾರ್ಗಸೂಚಿ ಪ್ರಕಟಿಸಿದೆ.

ಚೆನ್ನೈ ಹಾಗೂ ದೆಹಲಿ ಮೆಟ್ರೊದಲ್ಲಿ ಸಿನಿಮಾ ಹಾಗೂ ಧಾರಾವಾಹಿಗಳ ಚಿತ್ರೀಕರಣಕ್ಕೆ ಅವಕಾಶವಿತ್ತು. ಅದರಂತೆ ಇನ್ನು ಮುಂದೆ ನಮ್ಮ ಮೆಟ್ರೊ ನಿಲ್ದಾಣಗಳು ಹಾಗೂ ರೈಲುಗಳಲ್ಲಿ ಚಿತ್ರೀಕರಣಕ್ಕೆ ಅವಕಾಶ ಸಿಗಲಿದೆ.

ಚಿತ್ರೀಕರಣಕ್ಕೆ ಅವಕಾಶ ನೀಡಬೇಕೆಂದು ಕನ್ನಡ ಚಲನಚಿತ್ರೋದ್ಯಮದ ಸದಸ್ಯರು ,ಈ ಹಿಂದೆ ಬಿಎಂಆರ್‌ಸಿಎಲ್‌ಗೆ ಮನವಿ ಸಲ್ಲಿಸಿದ್ದರು. ಮನವಿಗೆ ಈಗ ಒಪ್ಪಿಗೆ ಸಿಕ್ಕಿದೆ.

ಮೆಟ್ರೊ ರೈಲು ಹಾಗೂ ನಿಲ್ದಾಣಕ್ಕೆ ಯಾವುದೇ ಹಾನಿ ಆಗದಂತೆ ಎಚ್ಚರಿಕೆ ವಹಿಸಬೇಕು. ದಟ್ಟಣೆ ಅಲ್ಲದ ಅವಧಿಯಲ್ಲಿ ಮಾತ್ರ ಚಿತ್ರೀಕರಣಕ್ಕೆ ಅವಕಾಶ ಸಿಗಲಿದೆ. ಚಿತ್ರೀಕರಣದ ವೇಳೆ ಪ್ರಯಾಣಿಕರಿಗೆ ತೊಂದರೆ ಆಗಬಾರದು. ಚಿತ್ರೀಕರಣ ಸಮಯದಲ್ಲಿ ಭದ್ರತೆ ಒದಗಿಸಲು ಹೆಚ್ಚುವರಿ ಪೊಲೀಸರು ಮತ್ತು ಗೃಹರಕ್ಷಕರನ್ನು ನಿಯೋಜಿಸಬೇಕು. ಮೆಟ್ರೊ ನಿಲ್ದಾಣಗಳು ಮತ್ತು ರೈಲುಗಳಲ್ಲಿ ಚಿತ್ರೀಕರಣಕ್ಕೆ ಅನುಮತಿ ಪಡೆಯಲು ದಿನಕ್ಕೆ ₹6 ಲಕ್ಷ ಹಾಗೂ ಒಂದು ತಾಸಿಗೆ ₹50 ಸಾವಿರವನ್ನು ಮುಂಗಡವಾಗಿ ಪಾವತಿಸಬೇಕು. ಕನ್ನಡ ಚಲನಚಿತ್ರಗಳಿಗೆ ಶೇ 25 ರಿಯಾಯಿತಿ ಇರಲಿದೆ. ಚಿತ್ರೀಕರಣ ಮಾಡಲು ಆಸಕ್ತಿ ಹೊಂದಿರುವ ಚಲನಚಿತ್ರ ಮತ್ತು ಧಾರಾವಾಹಿ ತಂಡಗಳು ಬಿಎಂಆರ್‌ಸಿಎಲ್‌ಗೆ ಅರ್ಜಿ ಸಲ್ಲಿಸಬಹುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಿದೆ.

ಚಿತ್ರೀಕರಣ ಮಾಡಲು ಮುಂಗಡವಾಗಿ ಅರ್ಜಿ ಸಲ್ಲಿಸಬೇಕು. ಪರವಾನಗಿ ಶುಲ್ಕ ಹೊರತುಪಡಿಸಿ ರೈಲು ಬಳಸಿಕೊಳ್ಳಲು ಗಂಟೆಗೆ ₹20 ಸಾವಿರ ಬಾಡಿಗೆ ಶುಲ್ಕ ನೀಡಬೇಕು. ಶೈಕ್ಷಣಿಕ ಉದ್ದೇಶಕ್ಕೆ ರೈಲಿನಲ್ಲಿ ಚಿತ್ರೀಕರಿಸಲು ₹5 ಸಾವಿರ ಶುಲ್ಕ ಪಾವತಿಸಬೇಕು ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಸರ ಕಿತ್ತೊಯ್ದ ಕಳ್ಳರು: ಬಿದ್ದು ಗಾಯಗೊಂಡ ಮಹಿಳೆ

ಬೆಂಗಳೂರು: ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಚಿನ್ನದ ಸರವನ್ನು ಕಳ್ಳರು ಕಿತ್ತೊಯ್ದಿದ್ದು, ಕೃತ್ಯದ ವೇಳೆ ರಸ್ತೆಗೆ ಬಿದ್ದು ಮಹಿಳೆ ಗಾಯಗೊಂಡಿದ್ದಾರೆ.

‘ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಯನ್ನು ಬೈಕ್‌ನಲ್ಲಿ ಹಿಂಬಾಲಿಸಿದ್ದ ಕಳ್ಳರು, ಕೃತ್ಯ ಎಸಗಿ ಪರಾರಿಯಾಗಿದ್ದಾರೆ. ಗಾಯಾಳು ಮಹಿಳೆ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆಯ ಕತ್ತಿಗೆ ಕೈ ಹಾಕಿದ್ದ ಕಳ್ಳ, ಚಿನ್ನದ ಸರವನ್ನು ಎಳೆದಿದ್ದ. ಸರ ತುಂಡಾಗಿರಲಿಲ್ಲ. ಸರದ ಸಮೇತ ಮಹಿಳೆಯನ್ನು ಸ್ವಲ್ಪ ದೂರಕ್ಕೆ ಎಳೆದೊಯ್ದಿದ್ದ. ನಂತರ ಸರ ತುಂಡರಿಸಿತ್ತು. ಮಹಿಳೆ ರಸ್ತೆ ಮೇಲೆ ಬಿದ್ದು ತೀವ್ರ ಗಾಯಗೊಂಡರು. ಆರೋಪಿಗಳು ಸ್ಥಳದಿಂದ ಕಾಲ್ಕಿತ್ತರು. ಪ್ರಾಥಮಿಕ ಚಿಕಿತ್ಸೆ ಪಡೆದು ಮಹಿಳೆ ಚೇತರಿಸಿಕೊಂಡಿದ್ದಾರೆ’ ಎಂದು ತಿಳಿಸಿವೆ.

ಬೆಂಗಳೂರು ರೇಸ್

ರಾವಿಶಿಂಗ್ ಫಾರ್ಮ್ ಗೆಲ್ಲುವ ನಿರೀಕ್ಷೆ

ಹೈದರಾಬಾದ್ ಸಿಲ್ವರ್ ವೇಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾವಿಶಿಂಗ್ ಫಾರ್ಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೀ ಗಾಡ್ 1, ಅಪ್ಸರ 2, ಲೋನ್ ರೇಂಜರ್ 3

2ನೇ ರೇಸ್: ಎಲೈಟ್ ಏಂಜೆಲ್ 9, ಅಲ್ಟಾಮಾಂಟೆ 3, ಎಸ್ಟೆಫೇನಿಯಾ 5

3ನೇ ರೇಸ್: ರಿಕಾರ್ಡೋ 2, ನ್ಯಾಯ 1, ದಿ ಒಮೆಗ ಮ್ಯಾನ್ 4

4ನೇ ರೇಸ್: ಫಾರ್ಚ ನೈನರ್ 3, ಮ್ಯಾಕ್ರಾನ್ 7, ಟ್ರಿಪಿಟಾಕ 2

5ನೇ ರೇಸ್: ವಿವಾಲ್ಡೊ 1, ಗೋಲ್ಡನ್ ಪೀಕ್ಸ್ 7, ಅಮೇಜಿಂಗ್ ಅಟ್ರ್ಯಾಕ್ಷನ್ 8

6ನೇ ರೇಸ್: ರಾವಿಶಿಂಗ್ ಫಾರ್ಮ್ 4, ಲಾಸ್ಟ್ ವಿಶ್ 3, ಯೂಕಾನ್ 2

7ನೇ ರೇಸ್: ಮೆರೂನ್ 2, ಪೆರಿಡಾಟ್ 4, ಸದರ್ನ್ ಫೋರ್ಸ್ 1

8ನೇ ರೇಸ್: ಮಜಾಲ್ ಟೋವ್ 1, ಕ್ವಾರ್ 2, ರೋಮನ್ ಸ್ಪಿರಿಟ್ 5

ಉತ್ತಮ ಬೆಟ್: ವಿವಾಲ್ಡೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಡ್ರಗ್ಸ್ ಮಾರಾಟ ವೃತ್ತಿ: ಬಂಧನ

ಬೆಂಗಳೂರು: ಡ್ರಗ್ಸ್ ಮಾರುವುದನ್ನು ವೃತ್ತಿ ಮಾಡಿಕೊಂಡಿದ್ದ ಆರೋಪಿ ಅಖಿಲೇಶ್‌ಕುಮಾರ್‌ನನ್ನು (30) ‘ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಾಣಿಕೆ ತಡೆ (ಪಿಐಟಿ– ಎನ್‌ಡಿಪಿಎಸ್)’ ಕಾಯ್ದೆಯಡಿ ಬಂಧಿಸಲಾಗಿದೆ.

‘ಬಿಹಾರದ ಅಖಿಲೇಶ್‌ಕುಮಾರ್, ಬಾಗಲೂರು ಬಳಿ ಬಾಡಿಗೆ ಮನೆಯಲ್ಲಿ ವಾಸವಿದ್ದ. ಬಿಹಾರದಿಂದ ಡ್ರಗ್ಸ್ ತಂದು ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಡ್ರಗ್ಸ್ ಮಾರಾಟ ಮಾಡಲು ಆರೋಪಿ, ಆಹಾರ ಪೂರೈಕೆ ಡೆಲಿವರಿ ಬಾಯ್‌ಗಳನ್ನು ನೇಮಿಸಿಕೊಂಡಿದ್ದ. ಮೊಬೈಲ್ ಕರೆ ಹಾಗೂ ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರನ್ನು ಸಂಪರ್ಕಿಸುತ್ತಿದ್ದ. ಪೆಡ್ಲರ್ ಆಗಿ ಬದಲಾಗಿದ್ದ.’

‘ಆರೋಪಿ ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಹಲವು ಬಾರಿ ಈತನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಜಾಮೀನು ಮೇಲೆ ಹೊರಬರುತ್ತಿದ್ದ ಈತ, ಪುನಃ ಡ್ರಗ್ಸ್ ಮಾರಾಟದಲ್ಲಿ ತೊಡಗಿಕೊಳ್ಳುತ್ತಿದ್ದ.

ಕಮಿಷನರ್, ತಮ್ಮ ಅಧಿಕಾರ ಚಲಾಯಿಸಿ ಆರೋಪಿಯನ್ನು ಒಂದು ವರ್ಷ ಜೈಲಿನಲ್ಲಿಡಲು ಆದೇಶಿಸಿದ್ದಾರೆ. ಸದ್ಯ ಆರೋಪಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ’ ಎಂದು ತಿಳಿಸಿದರು.

ಪಿಯು ವಿದ್ಯಾರ್ಥಿನಿ ಮೇಲೆ ದೌರ್ಜನ್ಯ

ಪ್ರಾಂಶುಪಾಲ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಯುಸಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಪ್ರಾಂಶುಪಾಲರೊಬ್ಬರ ವಿರುದ್ಧ ನಗರದ ಕೇಂದ್ರ ವಿಭಾಗದ ಠಾಣೆಯೊಂದರಲ್ಲಿ ಪ್ರಕರಣ ದಾಖಲಾಗಿದೆ.

‘ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿರುವ 16 ವರ್ಷದ ವಿದ್ಯಾರ್ಥಿನಿಯ ಪೋಷಕರು, ಲೈಂಗಿಕ ದೌರ್ಜನ್ಯದ ಬಗ್ಗೆ ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಆರೋಪಿ ಪ್ರಾಂಶುಪಾಲ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿದ್ಯಾರ್ಥಿನಿಗೆ ಆಂತರಿಕ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದಿದ್ದವು. ನ. 22ರಂದು ಸಂತ್ರಸ್ತೆಯನ್ನು ಕೊಠಡಿಗೆ ಕರೆಸಿದ್ದ ಪ್ರಾಂಶುಪಾಲ, ಅಸಭ್ಯವಾಗಿ ವರ್ತಿಸಿದ್ದ. ಹೆದರಿದ್ದ ವಿದ್ಯಾರ್ಥಿನಿ ಕೊಠಡಿಯಿಂದ ಹೊರಗೆ ಓಡಿ ಬಂದಿದ್ದರು. ಅದೇ ವಿಷಯವನ್ನು ಪೋಷಕರಿಗೆ ತಿಳಿಸಿದ್ದಳು’ ಎಂದು ತಿಳಿಸಿದೆ. ‘ಪ್ರಕರಣದ ಸಂಗತಿಗೆ ತಕ್ಕಂತೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಘಟನಾ ಸ್ಥಳಕ್ಕೂ ಭೇಟಿ ನೀಡಿ ಮಾಹಿತಿ ಪಡೆಯಲಾಗಿದೆ. ಪ್ರಕರಣದಲ್ಲಿ ಕೆಲ ಗೊಂದಲಗಳಿದ್ದು, ಅವುಗಳನ್ನು ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಮೂಲಗಳು ಹೇಳಿವೆ.

‘ಠಾಣೆಗಳು ರಿಯಲ್ ಎಸ್ಟೇಟ್ ಕೇಂದ್ರಗಳಾಗಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಠಾಣೆಗಳು ರಿಯಲ್ ಎಸ್ಟೇಟ್ ದಂಧೆಯ ಒಪ್ಪಂದ ಕೇಂದ್ರಗಳಾಗಿ ಪರಿವರ್ತನೆಗೊಂಡಿವೆ’ ಎಂದು ಹೈಕೋರ್ಟ್ ಪೊಲೀಸರ ನಡೆಯನ್ನು ತರಾಟೆಗೆ ತೆಗೆದುಕೊಂಡಿದೆ.

‘ನಮ್ಮ ವಿರುದ್ಧ ಬಾಣಸವಾಡಿ ಪೊಲೀಸರು ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ನಿರ್ದೇಶಿಸಬೇಕು‘ ಎಂದು ಕೋರಿ ಹೆಣ್ಣೂರು ಮುಖ್ಯರಸ್ತೆ ಗೆದ್ದಲಹಳ್ಳಿಯ ಶ್ರೀಜುವಿತ್ತಾ ರವಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ನಮಿತಾ ಮಹೇಶ್, ‘ಅರ್ಜಿದಾರರ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪೊಲೀಸರು ವಿನಾಕಾರಣ ಕಿರು ಕುಳ ನೀಡುತ್ತಿದ್ದಾರೆ’ ಎಂದು ಆಕ್ಷೇಪಿಸಿದರು. ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ನ್ಯಾಯಪೀಠ, ’ಠಾಣೆಗಳು ರಿಯಲ್ ಎಸ್ಟೇಟ್ ವ್ಯವಹಾರಸ್ಥರ ಕೊಡುಕೊಳ್ಳುವಿಕೆ ಕೇಂದ್ರಗಳಾಗಿ ಪರಿವರ್ತನೆಗೊಂಡಿವೆ. ಸಿವಿಲ್ ವ್ಯಾಜ್ಯಗಳಲ್ಲಿ ಮಧ್ಯಪ್ರವೇಶ ಮಾಡದಂತೆ ಸುಪ್ರಿಂ ಕೋರ್ಟ್ ಹಾಗೂ ಹೈಕೋರ್ಟ್ ಪದೇ ಪದೇ ನಿರ್ದೇಶನಗಳನ್ನು ನೀಡಿದ್ದರೂ, ಪೊಲೀಸರು ಮಾತ್ರ ಈ ಆದೇಶವನ್ನು ಉಲ್ಲಂಘಿಸುತ್ತಲೇ ಇದ್ದಾರೆ‘ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಪ್ರಕಣರಣಕ್ಕೆ ಸಂಬಂಧಿಸಿದಂತೆ ಬಾಣಸವಾಡಿ ಎಸಿಪಿ ಇದೇ 29ರಂದು ಮಧ್ಯಾಹ್ನ 2.30ಕ್ಕೆ ಕೋರ್ಟ್‌ಗೆ ಖುದ್ದು ಹಾಜರಾಗಬೇಕು ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

ನಗರದಲ್ಲಿ ಇಂದು

ಪಿಂಕ್ ಬೈಕಥಾನ್: ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿಗಾಗಿ ನೂರು ಬೈಕ್‌ಗಳ ರ್‍ಯಾಲಿ, ಆಯೋಜನೆ: ಕ್ಯಾನ್ಸರ್‌ನಿಂದ ಚೇತರಿಸಿಕೊಂಡವರು, ಸ್ಥಳ: ಸುಮಂಗಲಿ ಸೇವಾಶ್ರಮದಿಂದ ಕೋರಮಂಗಲ ಸೇಂಟ್ ಫ್ರಾನ್ಸಿಸ್ ಕಾಲೇಜುವರೆಗೆ, ಬೆಳಿಗ್ಗೆ 8ರಿಂದ

ಕನ್ನಡ ಜಾಗೃತಿ ಮೆರವಣಿಗೆ, ಸಾಂಸ್ಕೃತಿಕ ಸಂಜೆ, ಕರ್ನಾಟಕ ರಾಜ್ಯೋತ್ಸವ, ಧ್ವಜಸ್ತಂಭ ಉದ್ಘಾಟನೆ: ಆಯೋಜನೆ: ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿ, ಸಾಕ್ಷಾತ್ಕಾರ ಸಾಂಸ್ಕೃತಿಕ ಪ್ರತಿಷ್ಠಾನ, ರಾಜರಾಜೇಶ್ವರಿನಗರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶಿವಕುಮಾರ ಸ್ವಾಮೀಜಿ ವೃತ್ತ, ನಾಗರಬಾವಿ, ಬೆಳಿಗ್ಗೆ 8.30ರಿಂದ

ಪ್ರಿನ್ಸ್‌ಟನ್ ಸ್ಕೂಲ್ ವಾರ್ಷಿಕ ಕ್ರೀಡೆ: ಅತಿಥಿಗಳು: ಜಗದೀಶ್ ಯಾದವ್ ಕೆ., ಉಮಾಶಂಕರ್, ಟಿ. ಏಕಾಂಬರಮ್ ನಾಯ್ಡು, ಸ್ಥಳ: ಆಯೋಧ್ಯ ಗ್ರೌಂಡ್, ಕಾಚರಕನಹಳ್ಳಿ, ಬೆಳಿಗ್ಗೆ 9

ಕನ್ನಡ ನುಡಿಹಬ್ಬ–2023: ಅತಿಥಿಗಳು: ಎಸ್.ಜಿ. ಸಿದ್ದರಾಮಯ್ಯ, ಸಿ. ಪ್ರಶಾಂತ್ ಕುಮಾರ್, ಅಧ್ಯಕ್ಷತೆ: ಬಿ.ಎಂ. ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬೆಳಿಗ್ಗೆ 9.30

ವಾರ್ಷಿಕೋತ್ಸವ ಸಮಾರಂಭ: ಆಯೋಜನೆ: ಕನ್ನಡಿಗರ ಸ್ನೇಹಕೂಟ ಪ್ರತಿಭಾನ್ವೇಷಣಾ ವೇದಿಕೆ, ಸ್ಥಳ: ಎಸ್.ಆರ್. ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆಯ ಸಭಾಂಗಣ, ಲಿಂಗರಾಜಪುರ ಮೇಲ್ಸೇತುವೆ ಬಳಿ, ಬೆಳಿಗ್ಗೆ 9.30

ಹಸಿರು ದಿನ: ಆಯೋಜನೆ: ಗ್ರೀನ್‌ಲಿಟ್‌ಫೆಸ್ಟ್, ಸ್ಥಳ: ಸೆಂಚುರಿ ಪಾರ್ಕ್, ಕಬ್ಬನ್ ಪಾರ್ಕ್, ಬೆಳಿಗ್ಗೆ 10

‘ಕಿಂಕಿಣಿ ನಾದ ಆವೃತ್ತಿ–1’ ನೃತ್ಯ ಮತ್ತು ಅಭಿನಯ ಕಾರ್ಯಕ್ರಮ: ಅತಿಥಿ: ಕಲ್ಪನಾ ಕೃಷ್ಣಸ್ವಾಮಿ, ಆಯೋಜನೆ: ನೃತ್ಯ ತರಂಗಿಣಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ವೆ. ಅಜಿತ್ ಕುಮಾರ್, ಸ್ವಾಮಿ ಎಂ.ಎಂ., ಕೃಷ್ಣ ನಾಯ್ಕ್, ಆಯೋಜನೆ: ರಾಜಧಾನಿ ಸಮೂಹ ಶಿಕ್ಷಣ ಸಂಸ್ಥೆಗಳು, ಸ್ಥಳ: ರಾಜಧಾನಿ ಕಾಲೇಜು ಸಭಾಂಗಣ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ, ‘ಅಂಧ ಮತ್ತು ಇತರೆ ಬರಹಗಾರರ ಸಮನ್ವಯ ಗೋಷ್ಠಿ’: ಉದ್ಘಾಟನೆ: ಸತೀಶ್ ಕುಮಾರ್ ಹೊಸಮನಿ, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಅತಿಥಿಗಳು: ನೂತನ್ ಕದಮ್, ಮುದಿಗೆರೆ ರಮೇಶ್ ಕುಮಾರ್, ಆರ್. ಎಸ್. ಶಾಂತಾರಾಮ್, ಆಯೋಜನೆ: ದೀಪ ಅಂಧ ಮಕ್ಕಳ ಪಾಠಶಾಲೆ, ಸ್ಥಳ: ಈಸ್ಟ್‌ವೆಸ್ಟ್ ಕಾಲೇಜು ಸಭಾಂಗಣ, ಬೆಳಿಗ್ಗೆ 10.30

ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಹಿಂದುಳಿದ ಜಾತಿಗಳ ಒಕ್ಕೂಟದ ಜಂಟಿ ಸಭೆ: ಅಧ್ಯಕ್ಷತೆ: ಕೆ.ಎಂ. ರಾಮಚಂದ್ರಪ್ಪ, ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ, ಬೆಳಿಗ್ಗೆ 11

ಎಸ್.ಎಸ್. ಕಟಗಿಹಳ್ಳಿಮಠ ಅವರ ‘ಸಾವಯವ ಕೃಷಿ ಒಂದು ಅಧ್ಯಯನ’ ಕೃತಿ ಲೋಕಾರ್ಪಣೆ: ಬಿಡುಗಡೆ: ಕೆ. ನಾರಾಯಣ ಗೌಡ, ಪ್ರತಿಸ್ಪಂದನೆ: ವಿಜಯಕುಮಾರ್ ಕಟಗಿಹಳ್ಳಿಮಠ, ಅಧ್ಯಕ್ಷತೆ: ಎಚ್.ಎನ್. ಸುರೇಶ್, ಉಪಸ್ಥಿತಿ: ಕುಮಾರಸ್ವಾಮಿ ಕಟಗಿಹಳ್ಳಿಮಠ, ಸೋಮಶೇಖರ ಕಟಗಿಹಳ್ಳಿಮಠ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 11

ಎಮೋಷನಲ್ ಫಸ್ಟ್ ಏಡ್ ಅಕಾಡೆಮಿಯ ಪ್ರದವಿ ಪ್ರದಾನ ಸಮಾರಂಭ: ಅತಿಥಿಗಳು: ಅಲೋಕ್ ದೀಕ್ಷಿತ್, ರಂಜತಾ ಭಾಸ್ಕರ್, ಮಂಜು ಆರೀಫ್, ಶಶಿಭಾಸ್ಕರ ಕೃಷ್ಣಮೂರ್ತಿ, ಸುನೀತಾ ಕೆ. ಮಣಿ, ಸ್ಥಳ: ರ್‍ಯಾಡಿಶನ್ ಬ್ಲ್ಯು ಹೋಟೆಲ್, ಅಂಬೇಡ್ಕರ್ ಬೀದಿ, ಪ್ಯಾಲೇಸ್ ರಸ್ತೆ, ಬೆಳಿಗ್ಗೆ 11

ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಕಾರ್ಯಕಾರಿಣಿ: ಉದ್ಘಾಟನೆ: ಎ.ಆರ್. ಕೃಷ್ಣಮೂರ್ತಿ, ಅತಿಥಿಗಳು: ಪಿ.ಎಂ. ನರೇಂದ್ರಸ್ವಾಮಿ, ಎನ್. ಸಿದ್ದಯ್ಯ, ಚಿದರಹಳ್ಳಿ ಮಹದೇವಸ್ವಾಮಿ, ಸಿ. ಭೈರಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಗಾಂಧಿಭವನ, ಬೆಳಿಗ್ಗೆ 11.30

‘ಆಹಾರ ಮತ್ತು ಆರೋಗ್ಯ–ನಾವು ಸರಿಯಾದ ಹಾದಿಯಲ್ಲಿದ್ದೇವೆಯೇ’ ಉಪನ್ಯಾಸ ಸರಣಿ: ಉಪನ್ಯಾಸ: ಸೌಮ್ಯಾ ಸ್ವಾಮಿನಾಥನ್, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಮಧ್ಯಾಹ್ನ 12.30

ನಾಡದೇವಿಗೆ ನಮನ: ಮಕ್ಕಳಿಂದ ಕನ್ನಡ ನುಡಿಗೀತೆಗಳ ವಾಚನ, ಗಾಯನ, ರಂಗನಮನ, ನೃತ್ಯ ನೀರಾಜನ, ದೇಶಭಕ್ತಿಗೀತೆಗಳ ವಾಚನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಅತಿಥಿಗಳು: ನಂದಿ ಸುಬ್ರಮಣಿ, ವೀರಕಪುತ್ರ ಶ್ರೀನಿವಾಸ್, ಡಿ.ಕೆ. ಸಣ್ಣಾನಾಯಕ್, ಎಂ. ಬೈರೇಗೌಡ, ಲಕ್ಷ್ಮಣಮೂರ್ತಿ ಕಲ್ಕೆರೆ, ಜಿ.ವಿ. ಚನ್ನಗಿರಿಯಪ್ಪ, ಜಿ.ಎಸ್. ನಂಜುಂಡಸ್ವಾಮಿ, ಜಿ.ಪಿ. ರಾಮಣ್ಣ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಷನ್, ಸ್ಥಳ: ನಯನಾ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2.30

‘ಪ್ರಾಯ’ ಕವನ ಸಂಕಲನ ಬಿಡುಗಡೆ: ಉದ್ಘಾಟನೆ: ಎಲ್.ಎ. ರವಿಸುಬ್ರಹ್ಮಣ್ಯ, ಪುಸ್ತಕ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ, ಪುಸ್ತಕ ಪರಿಚಯ: ಮಹದೇವ ಎಚ್.ಡಿ., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ವೂಡೇ ಪಿ. ಕೃಷ್ಣ, ಬಿ. ನೀಲಮ್ಮ, ಪಿ.ಎಚ್. ವಿಶ್ವನಾಥ್, ಜಮೀಲ್ ಸಾವಣ್ಣ, ಪ್ರಾಸ್ತಾವಿಕ: ಎಂ. ಖಾಸೀಮ್ ಮಲ್ಲಿಗೆಮಡುವು, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

‘ಸಾಧನೆ–2023’ ಕಾರ್ಯಕ್ರಮ: ಅತಿಥಿಗಳು: ನಿವೃತ್ತಿ ರೈ, ಗುರುರಾಜ್ ಕರಜಗಿ, ಬಿ.ವಿ. ಜಗದೀಶ್, ವಿಜಯ್ ಪುಲ್ಲೂರು, ಪದ್ದು ಮೇಲನಹಳ್ಳಿ, ಆಯೋಜನೆ, ಸ್ಥಳ: ಒಎಸ್‌ಎಟಿ ಎಜುಕೇಷನಲ್ **ಚಾರಿಟಬಲ್ ಟ್ರಸ್ಟ್, ಮಧ್ಯಾಹ್ನ 3**

ಕರ್ನಾಟಕ ರಾಜ್ಯೋತ್ಸವ: ಕನ್ನಡ ತೇರು ವಿಶೇಷ ಉಪನ್ಯಾಸ: ಸುಧಾಕರನ್ ರಾಮಂತಳಿ, ಅತಿಥಿ: ಎಸ್.ಆರ್. ವಿಜಯಶಂಕರ್, ಸನ್ಮಾನ: ಷರೀಫಾ ಕೆ., ಆಯೋಜನೆ: ಶಿವರಾಮ ಕಾರಂತ ವೇದಿಕೆ ಮತ್ತು ವಿನಾಯಕ ದೇವಸ್ಥಾನ ಸಮಿತಿ, ಸ್ಥಳ: ವಿನಾಯಕ ದೇವಸ್ಥಾನ ಸಭಾಂಗಣ, ಆರ್. ಟಿ.ನಗರ, ಸಂಜೆ 4

ನಟಭೈರವ ವಜ್ರಮುನಿ ಕಂಚಿನ ಪ್ರತಿಮೆ ಅನಾವರಣ: ಉದ್ಘಾಟನೆ: ಎಂ. ಕೃಷ್ಣಪ್ಪ, ಪ್ರತಿಮೆ ಅನಾವರಣ: ಶಿವರಾಜಕುಮಾರ್, ಅಧ್ಯಕ್ಷತೆ: ಪ್ರಿಯಕೃಷ್ಣ, ಅತಿಥಿಗಳು: ಡಿ. ಹೇಮಚಂದ್ರ ಸಾಗರ್, ಲಕ್ಷ್ಮೀ ವಜ್ರಮುನಿ, ಕೆ.ಎಂ. ನಾಗರಾಜ್, ಎನ್. ಸಂಪಂಗಿ, ಆಯೋಜನೆ: ನಟಭೈರವ ವಜ್ರಮುನಿ ಕಲಾ ಮತ್ತು ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಾಗರಬಾವಿ ವೃತ್ತ, ಸಂಜೆ 5

‘ನಿಷೇಧ’ ಕಾದಂಬರಿ ಬಿಡುಗಡೆ: ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ, ಪುಸ್ತಕ ಪರಿಚಯ: ಅನಸೂಯ ಕಾಂಬಳೆ, ಉಪನ್ಯಾಸ: ವಿಕಾಸ ಆರ್. ಮೌರ್ಯ, ಉಪಸ್ಥಿತಿ: ನಗರಗೆರೆ ರಮೇಶ್, ನಲ್ಲೂರಿ ರುಕ್ಮಿಣಿ, ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ 8ನೇ ಬ್ಲಾಕ್, ಸಂಜೆ 4.30.

ಕಲಾಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮ: ಅತಿಥಿಗಳು: ಬಿ.ಕೆ. ಶೇಷಾದ್ರಿ, ರಾಘವೇಂದ್ರ ಆಚಾರ್ಯ, ಮು. ಮುರಳೀಧರ, ಚಿಕ್ಕರಸು ಹುಲ್ಲೂರು, ಸುಚೇತನಾ ಸಾಧನ ಪ್ರಶಸ್ತಿ: ಎಲ್.ವಿ. ಶಾಂತಕುಮಾರಿ, ಸಿದ್ಧಾರ್ಥ್, ಗೀತಾ ಸತ್ಯಮೂರ್ತಿ, ಲೋಕೇಶ್ ಕುಮಾರ್ ಗಜೇಂದ್ರ, ಆಯೋಜನೆ: ಎ.ಜೀಸ್ ಕಲಾಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಸಿಟಿ ಸೆಂಟ್ರಲ್ ಲೈಬ್ರೆರಿ ಸಭಾಂಗಣ, ಹಂಪಿನಗರ, ವಿಜಯನಗರ, ಸಂಜೆ 5

‘ಸಂಕ್ರಮಣ–24’ 5 ದಿನಗಳ ನೃತ್ಯೋತ್ಸವ: ಉದ್ಘಾಟನೆ: ವಿ. ಸೋಮಣ್ಣ, ಶೈಲಜಾ ಸೋಮಣ್ಣ, ಆಯೋಜನೆ: ಮಂಜುಳಾ ಪರಮೇಶ್ ಮತ್ತು ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಶನ್ಸ್, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಸಂಜೆ 5.30

‘ಅನ್ ಸಂಗ್ ಕಿಶೋರಿ’ ವಾರ್ಷಿಕೋತ್ಸವ, ಸಂಗೀತ ಕಾರ್ಯಕ್ರಮ: ಸ್ಥಳ: ಕೆನರಾ ಯೂನಿಯನ್ ಬಿಲ್ಡಿಂಗ್, ವಿನಾಯಕ ಬಡಾವಣೆ, ಮಲ್ಲೇಶ್ವರ, ಸಂಜೆ 5.30

‘36ನೇ ಲಾ ಏಷಿಯಾ’ ಸಮ್ಮೇಳನದ ಎರಡನೇ ದಿನ ಗೋಷ್ಠಿ: ಬೆಳಿಗ್ಗೆ 8.45ಕ್ಕೆ ಸಮಗ್ರ ಅಧಿವೇಶನ, ಭಾಗವಹಿಸುವವರು: ಎಸ್.ಎಸ್. ನಾಗಾನಂದ, ರುಕ್ಮಣಿ ವಿಜಯಕುಮಾರ್, ನ್ಯಾ. ಪಿ.ಬಿ. ವರಾಳೆ, ನ್ಯಾ. ಡಿ.ವೈ. ಚಂದ್ರಚೂಡ್, ಅಮರಜಿತ್‌ಸಿಂಗ್ ಚಾಂದಿಯೋಕ್. ಬೆಳಿಗ್ಗೆ 10.30ರಿಂದ ನ್ಯಾಯಾಂಗ ಗೋಷ್ಠಿ, ಕೌಟುಂಬಿಕ ಕಾನೂನು, ಮಾನವ ಹಕ್ಕುಗಳು ಮತ್ತು ಕಾನೂನು ಗೋಷ್ಠಿಗಳು. ಮಧ್ಯಾಹ್ನ 12ರಿಂದ ವ್ಯಾವಹಾರಿಕ ಕಾಯ್ದೆ ಸಹಿತ ವಿವಿಧ ಗೋಷ್ಠಿಗಳು. ರಾತ್ರಿ 7ರಿಂದ ಸಂಗೀತ ಸಂಜೆ. ಆಯೋಜನೆ: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ: ಫೋರ್ ಸೀಸನ್ ಹೋಟೆಲ್, ಗಂಗಾನಗರ, ಬಳ್ಳಾರಿ ರಸ್ತೆ

ಪಿಟೀಲು ವಿದ್ವಾನ್ ಗಾನಕಲಾ ಭೂಷಣ ಅನೂರ್ ಎಸ್. ರಾಮಕೃಷ್ಣ ಸ್ಮರಣಾರ್ಥ ಅಮೋಘ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸಂಯೋಜನೆ: ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ದೇವಸ್ಥಾನ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರ ನಗರ, ಸಂಜೆ 6

ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ಸ್ವಾತಿ ತಿರುನಾಳ್, ಗಾಯನ: ಆರ್.ಎ. ರಮಾಮಣಿ, ಮೃದಂಗ: ಅನೂರ್ ಕೃಷ್ಣ ಶರ್ಮಾ, ವಾಯಲಿನ್: ಮಥೂರ್ ಶ್ರೀನಿಧಿ, ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಸ್ಥಳ: ಸೇವಾಸದನ, ಮಲ್ಲೇಶ್ವರ 14ನೇ ಅಡ್ಡರಸ್ತೆ, ಸಂಜೆ 6

ಕಾಂಚನೋತ್ಸವ–2023: ಸಂಗೀತ ಕಛೇರಿ– ಎನ್.ಆರ್. ಪ್ರಶಾಂತ್, ಅಚ್ಯುತ ರಾವ್, ಆರ್. ರಮೇಶ್, ಉಡುಪಿ ಶ್ರೀಕಾಂತ್, ಆಯೋಜನೆ: ಕಾಂಚನ ಶ್ರೀ ಲಕ್ಷ್ಮೀ ನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಸ್ಥಳ: ಅಕ್ಷರಂ, ಗಿರಿನಗರ, ಸಂಜೆ 6

ಲೈಂಗಿಕ ಕಿರುಕುಳ ಆರೋಪ: ಸನ್ನದು ಅಮಾನತು

ಮಂಜುನಾಥ್

ಬೆಂಗಳೂರು: ಸಹೋದ್ಯೋಗಿಯಾಗಿದ್ದ ಕಿರಿಯ ವಕೀಲೆಗೆ ಲೈಂಗಿಕ ಕಿರುಕುಳ ನೀಡಿ ಜೀವ ಬೆದರಿಕೆ ಹಾಕಿದ ಆರೋಪದಡಿ ನಗರದ ಕೌಟುಂಬಿಕ ನ್ಯಾಯಾಲಯಗಳ ವಕೀಲ ಎಚ್. ಮಂಜುನಾಥ್ (46) ಅವರ ಸನ್ನದನ್ನು ತಾತ್ಕಾಲಿಕವಾಗಿ ಅಮಾನತುಪಡಿಸಲಾಗಿದೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಚ್.ಎಲ್. ವಿಶಾಲ ರಘು ನೇತೃತ್ವದಲ್ಲಿ ಇದೇ 4 ಮತ್ತು 5ರಂದು ನಡೆಸಿದ್ದ ಸಭೆಯಲ್ಲಿ ಈ ಕುರಿತಂತೆ ನಿರ್ಣಯ ಕೈಗೊಳ್ಳಲಾಗಿದೆ. ಠರಾವಿನ ಅನುಸಾರ ಪರಿಷತ್ ಸದಸ್ಯರೂ ಆದ ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಪಿ.ಶಂಕರ್ ನೇತೃತ್ವದ ಮೂವರು ಪರಿಷತ್ ಸದಸ್ಯರ ಶಿಸ್ತು ಸಮಿತಿಯು ಆರೋಪಕ್ಕೆ ಸಂಬಂಧಿಸಿದಂತೆ ಸಮಗ್ರ ವಿಚಾರಣೆ ನಡೆಸಲಿದೆ.

ಇಂದಿನಿಂದ ಎರಡು ದಿನ 'ಬೆಂಗಳೂರು ಕಂಬಳ ನಮ್ಮ ಕಂಬಳ' ● ನೇಗಿಲು, ಹಗ್ಗ ಸೇರಿ ಒಟ್ಟು 6 ವಿಭಾಗಗಳಲ್ಲಿ ಸ್ಪರ್ಧೆ

ಕಂಬಳ ಫಲಿತಾಂಶ ನಿರ್ಧಾರಕ್ಕೆ ಲೇಸರ್ ಸಿಸ್ಟಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ಆರಂಭಗೊಳ್ಳಲಿರುವ 'ಬೆಂಗಳೂರು ಕಂಬಳ ನಮ್ಮ ಕಂಬಳ'ಕ್ಕೆ ಅರಮನೆ ಮೈದಾನ ಸಕಲ ರೀತಿಯಲ್ಲಿ ಸಜ್ಜಾಗಿದೆ. ಸ್ಪರ್ಧೆಯ ಸಮಯದಲ್ಲಿ ಯಾವುದೇ ಗೊಂದಲ, ವಿವಾದಗಳು ಉಂಟಾಗದಂತೆ ಮಾಡಲು 'ಲೇಸರ್ ಬೀಮ್ ನೆಟ್‌ವರ್ಕ್ ಸಿಸ್ಟಂ ವಿತ್ ಎಲೆಕ್ಟ್ರಾನಿಕ್ ಟೈಮಿಂಗ್ಸ್' ಅಳವಡಿಸಲಾಗಿದೆ.

ಗುರಿ ಮುಟ್ಟಿದ ಕೂಡಲೇ ಲೇಸರ್ ದೀಪ ಉರಿಯುವುದಲ್ಲದೇ ಎಷ್ಟು ಸೆಕೆಂಡ್ಸ್‌ನಲ್ಲಿ ತಲುಪಿವೆ ಎಂಬುದನ್ನೂ ಅದು ತೋರಿಸುತ್ತದೆ. ಇದರಿಂದ ಸೋತವರಿಗೂ ತಮ್ಮ ಕೋಣಗಳು ಎಷ್ಟು ವೇಗವಾಗಿ ಓಡಿವೆ ಎಂಬುದು ಗೊತ್ತಾಗಲಿದೆ ಎಂದು ಕಂಬಳ ತಜ್ಞ ಗುಣಪಾಲ ಕಡಂಬ ಅವರು ಕಂಬಳದ ತಾಂತ್ರಿಕ ವಿವರಗಳನ್ನು ನೀಡಿದರು.

ನೇಗಿಲು (ಹಿರಿಯ ಮತ್ತು ಕಿರಿಯ), ಹಗ್ಗ (ಹಿರಿಯ ಮತ್ತು ಕಿರಿಯ), ಅಡ್ಡಹಲಗೆ ಮತ್ತು ಕಣೆ ಹಲಗೆ ಹೀಗೆ ಒಟ್ಟು ಆರು ವಿಭಾಗಗಳಲ್ಲಿ ಸ್ಪರ್ಧೆಗಳು ಇರಲಿವೆ. 6 ಅಥವಾ ಅದಕ್ಕಿಂತ ಕಡಿಮೆ ಹಲ್ಲು ಇರುವ ಕೋಣಗಳನ್ನು ಕಿರಿಯ ವಿಭಾಗವಾಗಿ ಗುರುತಿಸಲಾಗುತ್ತದೆ. ಎಲ್ಲ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕೋಣಗಳಿಗೆ 16 ಗ್ರಾಂ ಚಿನ್ನ ₹1 ಲಕ್ಷ, ದ್ವಿತೀಯ ಸ್ಥಾನಿಗಳಿಗೆ 8 ಗ್ರಾಂ ಚಿನ್ನ ಮತ್ತು ₹50 ಸಾವಿರ, ತೃತೀಯ ಸ್ಥಾನಿಗಳಿಗೆ 4 ಗ್ರಾಂ ಚಿನ್ನ ಮತ್ತು ₹25 ಸಾವಿರ ಬಹುಮಾನ ದೊರೆಯಲಿದೆ.

ಜೋಡುಕರೆಯಲ್ಲಿ 6.5 ಅಡಿ ಎತ್ತರದ ಮತ್ತು 7.5 ಅಡಿ ಎತ್ತರದ ನಿಶಾನೆಗಳನ್ನು ಕಟ್ಟಿರುತ್ತಾರೆ. ಕಣೆ ಹಲಗೆಯ ಓಟದ ಸಂದರ್ಭದಲ್ಲಿ ಅಷ್ಟು ಎತ್ತರಕ್ಕೆ ನೀರು ಚಿಮ್ಮಿಸಬೇಕು. 7.5 ಅಡಿ ನಿಶಾನೆಗೆ ನೀರು ಚಿಮ್ಮಿಸಿದ ಎಲ್ಲರಿಗೂ ಪ್ರಥಮ ಬಹುಮಾನ ದೊರೆಯಲಿದೆ. ಒಂದು ಜೋಡಿ ಎಷ್ಟು ಬಾರಿ ನಿಶಾನೆಗೆ ನೀರು ಹಾರಿಸಿದರೂ ಒಂದೇ ಪ್ರಶಸ್ತಿ ಸಿಗಲಿದೆ. 6.5 ಅಡಿ ಹಾರಿಸಿದವರು ಮುಂದಿನ ಓಟದಲ್ಲಿ 7.5 ಅಡಿ ಹಾರಿಸಲು ಪ್ರಯತ್ನಿಸಲು ಅವಕಾಶ ಇರಲಿದೆ.

ಉದ್ಘಾಟನೆಗೆ ಸಜ್ಜು: ಕಂಬಳದ ಜೋಡು'ಕರೆ' (ಟ್ರ್ಯಾಕ್)ಗಳಿಗೆ 'ರಾಜ– ಮಹಾರಾಜ' ಎಂದು ಹೆಸರು ಇಡಲಾಗಿದೆ. ಕಾರ್ಯಕ್ರಮದ ಮುಖ್ಯವೇದಿಕೆಗೆ ಪುನೀತ್ ರಾಜಕುಮಾರ್ ಹೆಸರು, ಸಾಂಸ್ಕೃತಿಕ ವೇದಿಕೆಗೆ ಕೃಷ್ಣರಾಜ ಒಡೆಯರ್ ಹೆಸರು ಇಡಲಾಗಿದೆ. ನ.25ರಂದು ಬೆಳಿಗ್ಗೆ 10.30ಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ 'ಕರೆ'ಗಳಿಗೆ ಚಾಲನೆ ನೀಡಲಿದ್ದಾರೆ. ಬಳಿಕ ಪ್ರಾಯೋಗಿಕ ಓಟಗಳು, ಲೀಗ್ ಮಾದರಿಯ ಓಟಗಳು ನಡೆಯಲಿವೆ. ಈ ಓಟಗಳಲ್ಲಿ ವಿಜೇತ ಕೋಣಗಳು ಸಂಜೆಯ ಹೊತ್ತಿಗೆ ಪ್ರಮುಖ ಸ್ಪರ್ಧೆಗೆ ಅಣಿಯಾಗಲಿವೆ. ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದು ಕಂಬಳ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ, ಗೌರವಾಧ್ಯಕ್ಷ ಪ್ರಕಾಶ್ ಶೆಟ್ಟಿ, ಸಂಗೀತ ನಿರ್ದೇಶಕ ಗುರುಕಿರಣ್ ಮಾಹಿತಿ ನೀಡಿದರು.

ಶನಿವಾರ ಮಧ್ಯರಾತ್ರಿವರೆಗೂ ಕಂಬಳದ ಓಟಗಳು ನಡೆಯಲಿವೆ. ಅಂತಿಮ ಸ್ಪರ್ಧೆಗಳು ಭಾನುವಾರ ನಡೆಯಲಿವೆ ಎಂದು ತಿಳಿಸಿದರು.

ಕರಾವಳಿಯ ಯಕ್ಷಗಾನ, ಹುಲಿವೇಷ ಕುಣಿತ, ಕಂಗೀಲು, ಆಟಿ ಕಳೆಂಜ ಸಹಿತ ತುಳುನಾಡಿನ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ. ಬೆಂಗಳೂರಿನಲ್ಲಿ ಹೊಸ ಇತಿಹಾಸ ಸೃಷ್ಟಿಯಾಗಲಿದೆ ಎಂದರು.

ನಿಯಮ ಮೀರಲ್ಲ: 'ಪ್ರಾಣಿಗಳಿಗೆ ಯಾವುದೇ ಹಿಂಸೆ ಮಾಡಬಾರದು ಎಂದು ಪಶುಸಂಗೋಪನಾ ಇಲಾಖೆ, ಪ್ರಾಣಿ ದಯಾ ಸಂಘಗಳು ತಿಳಿಸಿವೆ. ಕಂಬಳದಲ್ಲಿ ಯಾವುದೇ ಕ್ರೌರ್ಯಗಳು ಇರುವುದಿಲ್ಲ. ಕೈಯಲ್ಲಿ ಬೆತ್ತ ಇಲ್ಲದೇ ಇದ್ದರೆ ಓಡುವುದಿಲ್ಲ. ಒಂದೆರಡು ಏಟು ನೀಡುವುದಕ್ಕೂ ಕ್ರೌರ್ಯಕ್ಕೂ ವ್ಯತ್ಯಾಸ ಇದೆ. ನಾವು ಯಾವುದೇ ನಿಯಮಗಳನ್ನು ಮೀರುವುದಿಲ್ಲ' ಎಂದು ಸಂಘಟಕರು ಸ್ಪಷ್ಟಪಡಿಸಿದರು.

ವಿವಿಧ ಮಳಿಗೆ: ಕಂಬಳದಲ್ಲಿ 180ಕ್ಕೂ ಹೆಚ್ಚು ಮಳಿಗೆಗಳು. ಹಲಸಿನ ಹಪ್ಪಳದಿಂದ ಕೋರಿ (ಕೋಳಿ) ರೊಟ್ಟಿಯವರೆಗೆ ಕರಾವಳಿಯ ಸಾಂಪ್ರದಾಯಿಕ ತಿನಿಸುಗಳು ಈ ಮಳಿಗೆಗಳಲ್ಲಿವೆ. ಭೂತದ ಅಣಿ ಸೇರಿದಂತೆ ತುಳುನಾಡ ಸಂಸ್ಕೃತಿಯನ್ನು ಬಿಂಬಿಸುವ ವಸ್ತು ಪ್ರದರ್ಶನ ನಡೆಯಲಿದೆ.

'ಬೆಂಗಳೂರು ಕಂಬಳ ನಮ್ಮ ಕಂಬಳ'ದಲ್ಲಿ ಭಾಗವಹಿಸಲು ಬಂದಿರುವ ಕೋಣಕ್ಕೆ ಶುಕ್ರವಾರ ಎಣ್ಣೆ ಹಚ್ಚಿ ಮಸಾಜ್ ಮಾಡಲಾಯಿತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಮಲೆಕುಡಿಯರ ಹೆಸರಲ್ಲಿ ಕೋಣ

ಕಾಡಂಚಿನಲ್ಲಿ ಬದುಕುತ್ತಿರುವ ಮಲೆಕುಡಿಯರ ಹೆಸರಲ್ಲಿ ಒಂದು ಜೋಡಿ ಕೋಣ ಓಡಲಿದೆ. ಡಿಕ್ಲರೇಶನ್ ಕಾಲದಲ್ಲಿ ಭೂಮಿ ಪಡೆದ ನಾರಾಯಣ ಮಲೆಕುಡಿಯ ಅವರು ಕೋಣಗಳನ್ನು ಸಾಕಿ ತನ್ನ ಮನೆ ಸಮೀಪದ ಕಂಬಳದಲ್ಲಷ್ಟೇ ಓಡಿಸುತ್ತಿದ್ದರು. ಮಂಗಳೂರಿನ ವಕೀಲ ದಿನೇಶ್ ಹೆಗ್ಡೆ ಉಳೇಪಾಡಿ ಅವರು ಅದನ್ನು ನೋಡಿ ಹುರಿದುಂಬಿಸಿ ಬೆಂಗಳೂರಿಗೆ ಕರೆತಂದಿದ್ದಾರೆ. 'ಬೀರ ಮಲೆ' ಹೆಸರಿನ ಕೋಣಗಳು ಓಡಲಿವೆ.

ಉಚಿತ ಪ್ರವೇಶ

ಕಂಬಳ ವೀಕ್ಷಿಸಲು ಉಚಿತ ಪ್ರವೇಶ ಇರಲಿದೆ. ಹಾಗಾಗಿ ಲಕ್ಷಾಂತರ ಕಂಬಳ ಪ್ರೇಮಿಗಳು ಬರುವ ನಿರೀಕ್ಷೆ ಇದೆ. ಶನಿವಾರ ಮತ್ತು ಭಾನುವಾರ ಎರಡು ದಿನಗಳಲ್ಲಿ ಕಂಬಳ ನಿರಂತರವಾಗಿ ನಡೆಯಲಿರುವುದರಿಂದ ಕಂಬಳ ಪ್ರೇಮಿಗಳು ಯಾವುದೇ ಸಮಯಕ್ಕೆ ಬಂದು ವೀಕ್ಷಿಸಲು ಅವಕಾಶವಿದೆ.

ಕಂಬಳವನ್ನು ನೇರ ವೀಕ್ಷಿಸಲು 7 ಸಾವಿರ ಜನರು ಕುಳಿತುಕೊಳ್ಳಬಲ್ಲ ಗ್ಯಾಲರಿಯನ್ನು ಕರೆಗಳ ಇಕ್ಕೆಲಗಳಲ್ಲಿ ನಿರ್ಮಿಸಲಾಗಿದೆ. 1.5 ಲಕ್ಷ ಜನರಿಗೆ 'ಕರಾವಳಿ' ಶೈಲಿಯ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.

ಹುತಾತ್ಮ ಕ್ಯಾಪ್ಟನ್ ಪ್ರಾಂಜಲ್ ಭಾವಚಿತ್ರಕ್ಕೆ ಅಲಂಕಾರ ಮಾಡಲಾಗಿತ್ತು

ಮೊಳಗಿದ 'ಅಮರ್ ರಹೇ ಪ್ರಾಂಜಲ್' ಘೋಷಣೆ

ಪ್ರಜಾವಾಣಿ ವಾರ್ತೆ

ಆನೇಕಲ್: ಜಮ್ಮು-ಕಾಶ್ಮೀರದ ರಜೌರಿಯಲ್ಲಿ ಉಗ್ರರ ವಿರುದ್ಧದ ನಡೆದ ಕಾದಾಟದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಪ್ರಾಂಜಲ್ ಅವರ ಪಾರ್ಥೀವ ಶರೀರವನ್ನು ದೆಹಲಿಯಿಂದ ಶುಕ್ರವಾರ ರಾತ್ರಿ ಬೆಂಗಳೂರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತರಲಾಯಿತು. ಸಕಲ ಸೇನಾ ಗೌರವದೊಂದಿಗೆ ಪಾರ್ಥಿವ ಶರೀರವನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಯಿತು.

ಜಿಗಣಿಯ ನಂದನವನ ಬಡಾವಣೆಯಲ್ಲಿರುವ ಪ್ರಾಂಜಲ್ ಮನೆಯ ಎದುರು ಶನಿವಾರ ಬೆಳಗ್ಗೆ 7ರಿಂದ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ತಾಲ್ಲೂಕು ಆಡಳಿತವು 500 ಮಂದಿ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಿದೆ. ಕುಟುಂಬದವರು, ಸಂಬಂಧಿಕರಿಗೆ ಮತ್ತು ಸಾರ್ವಜನಿಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ.

ಬೆಳಗ್ಗೆ 10ಕ್ಕೆ ಮನೆಯಿಂದ ಅಂತಿಮ ಯಾತ್ರೆ ಹೊರಡಲಿದೆ. ಜಿಗಣಿ ಓಟಿಸಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ, ನೈಸ್ ರೋಡ್, ಕೋನಪ್ಪನ ಅಗ್ರಹಾರ ಸರ್ಕಲ್, ಕೂಡ್ಲುಗೇಟ್ ಮೂಲಕ ಸೋಮಸುಂದರ ಪಾಳ್ಯ ಚಿತಾಗಾರಕ್ಕೆ ಕೊಂಡೊಯ್ಯಲಾಗುವುದು.

ಅಂತಿಮ ಯಾತ್ರೆ ಸಾಗಲಿರುವ 30ಕಿ.ಮೀ. ರಸ್ತೆಯುದ್ದಕ್ಕೂ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಸಕಲ ಸರ್ಕಾರಿ ಮತ್ತು ಸೇನಾ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ.

ನಂದನವನ ಬಡಾವಣೆಯ ಮುಖ್ಯ ದ್ವಾರದ ಬಳಿ ಜಮಾಯಿಸಿದ್ದ ನೂರಾರು ಅಭಿಮಾನಿಗಳು ಅಗಲಿದ ವೀರಯೋಧನಿಗೆ ನಮನ ಸಲ್ಲಿಸಿದರು. ಮೊಂಬತ್ತಿ ಹಿಡಿದು 'ಅಮರ್ ರಹೇ ಕ್ಯಾಪ್ಟನ್ ಪ್ರಾಂಜಲ್' ಘೋಷಣೆ ಕೂಗಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ವೀರಯೋಧನ ಅಂತಿಮ ದರ್ಶನ ಪಡೆಯಲು ಆನೇಕಲ್ ಸುತ್ತಮುತ್ತಲ ಪ್ರದೇಶಗಳಿಂದ ಆಗಮಿಸುತ್ತಿರುವ ಜನರು ಮನೆಯ ಬಳಿ ಜಮಾಯಿದ್ದಾರೆ.

'ಆಲ್ ಓಕೆ' ಸಂದೇಶ ಕಳಿಸಿ ಪ್ರಾಣಬಿಟ್ಟ ಪ್ರಾಂಜಲ್

'ಐದು ದಿನದ ಹಿಂದೆ ಕರೆ ಮಾಡಿದ್ದ ಪ್ರಾಂಜಲ್ ಇಂಟೆಲಿಜೆನ್ಸ್ ಕಾರ್ಯವೊಂದರ ಮೇಲೆ ನಿಯೋಜನೆಗೊಂಡಿದ್ದೇನೆ. ನೀವೇನೂ ಕರೆ ಮಾಡಬೇಡಿ ನಾನೇ ಮೆಸೆಜ್ ಮಾಡುತ್ತೇನೆ ಅಥವಾ ಕರೆ ಮಾಡುತ್ತೇನೆ ಎಂದು ಹೇಳಿದ್ದ. ಆಲ್ ಓಕೆ ಎಂಬ ಸಂದೇಶ ಬರುತ್ತಿತ್ತು. ಆದರೆ ಅಲ್ಲಿನ ಪರಿಸ್ಥಿತಿಯ ಬಗ್ಗೆ ಅರಿವಿರಲಿಲ್ಲ. ಆಲ್ ಓಕೆ ಎಂದು ಹೇಳುತ್ತಲೇ ಕೊನೆಯುಸಿರೆಳೆದಿದ್ದಾನೆ' ಎಂದು ಹೇಳುತ್ತಾ ಪ್ರಾಂಜಲ್ ತಂದೆ ವೆಂಕಟೇಶ್ ಗದ್ಗದಿತರಾದರು.

'ಸಿಇಟಿಯಲ್ಲಿ ಆರ್.ವಿ.ಕಾಲೇಜಿನಲ್ಲಿ ಕೆಮಿಕಲ್ ಎಂಜಿನಿಯರಿಂಗ್ ಸೀಟು ದೊರೆತರೂ ಪ್ರಾಂಜಲ್ ಮಿಲಿಟರಿ ಆಯ್ಕೆ ಮಾಡಿಕೊಂಡಿದ್ದ. ಮೂರನೇ ತರಗತಿಯಿಂದಲೂ ಮಿಲಿಟರಿ ಸೇರುವ ಕನಸು ಕಂಡಿದ್ದ. ತನ್ನಾಸೆಯಂತೆಯೇ 2014ರ ಜೂನ್‌ನಲ್ಲಿ ಮಿಲಿಟರಿಗೆ ಸೇರಿದ್ದ' ಎಂದು ಕಣ್ಣೀರಾದರು.

'ಎರಡು ವರ್ಷದ ಹಿಂದೆ ಬೆಂಗಳೂರಿನ ಅದಿತಿಯನ್ನು ಮದುವೆಯಾಗಿದ್ದ. ಚೆನ್ನೈನ ಐಐಟಿಯಲ್ಲಿ ಅದಿತಿ ಪಿಎಚ್‌.ಡಿ ಮಾಡುತ್ತಿದ್ದಾಳೆ. ಒಬ್ಬ ಯೋಧನ ಪತ್ನಿಯಾಗಿ ಪತಿಗೆ ಸದಾ ನೈತಿಕ ಬೆಂಬಲ ನೀಡುತ್ತಿದ್ದಳು. ಪ್ರಾಂಜಲ್ ದೇಶಕ್ಕಾಗಿ ಪ್ರಾಣ ಬಿಟ್ಟಿದ್ದಾನೆ ಎಂಬ ತೃಪ್ತಿ ನನಗಿದೆ. ದೇಶಕ್ಕಾಗಿ ಕುಟುಂಬವನ್ನೂ ಲೆಕ್ಕಿಸದೆ ಪ್ರಾಣ ಪಣಕ್ಕಿಟ್ಟು ಸೇವೆ ಸಲ್ಲಿಸುತ್ತಿರುವ ಲಕ್ಷಾಂತರ ಯೋಧರಿದ್ದಾರೆ. ಪ್ರಾಂಜಲ್ ಎಲ್ಲರಿಗೂ ಸ್ಫೂರ್ತಿಯಾಗಿದ್ದಾನೆ. ಆತಂಕವಾದಿಗಳನ್ನು ದಮನ ಮಾಡಬೇಕೆಂಬುದು ಪ್ರಾಂಜಲ್‌ನ ಗುರಿಯಾಗಿತ್ತು' ಎಂದು ನೆನಪಿಸಿಕೊಂಡರು.

ಪತ್ರಿಕಾ ವಿತರಕರಿಗೆ ಸಾಮಾಜಿಕ ಭದ್ರತೆ

ಒಂದನೇ ಪುಟದಿಂದ

ಪತ್ರಿಕಾ ವಿತರಕರು ಅರೆಕಾಲಿಕ ವೃತ್ತಿ ನಿರ್ವಹಿಸುತ್ತಿದ್ದು, ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಹಾಗಿದ್ದರೂ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ಸಾಮಾಜಿಕ ಭದ್ರತಾ ಸೌಲಭ್ಯಗಳಿಂದ ಅವರು ವಂಚಿತರಾಗಿದ್ದಾರೆ.

ಇಂತಹ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯ ಒದಗಿಸಲು ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಲಾಗಿದೆ. ದಿನಪತ್ರಿಕೆ ವಿತರಿಸಲು ಬಹುತೇಕರು ದ್ವಿಚಕ್ರ ವಾಹನ ಅಥವಾ ಸೈಕಲ್‌ಗಳನ್ನು ಬಳಸುತ್ತಿದ್ದು, ಅಪಘಾತಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಹೀಗಾದಲ್ಲಿ, ವಿತರಕರು ಹಾಗೂ ಅವರ ಅವಲಂಬಿತರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಅವರಿಗೆ ನೆರವು ನೀಡುವ ಉದ್ದೇಶದಿಂದ ಅಪಘಾತ ಪರಿಹಾರ ಸೌಲಭ್ಯ ಹಾಗೂ ವೈದ್ಯಕೀಯ ಸೌಲಭ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು, ಪತ್ರಿಕಾ ವಿತರಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸಲು ಸರ್ಕಾರದ ಮೇಲೆ ನಿರಂತರ ಒತ್ತಡ ಹಾಕಿದ್ದರು.

ಜಿಲ್ಲೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಳ

ಮಕ್ಕಳು, ವೃದ್ಧರಿಗೆ ವೈರಾಣು ಜ್ವರ ಬಾಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ, ಚಿಕೂನ್ ಗುನ್ಯ, ಮಲೇರಿಯಾ ಸೇರಿದಂತೆ ವೈರಾಣು ಜ್ವರಬಾಧೆ ಪ್ರಕರಣಗಳು ಏರಿಕೆಯಾಗಿವೆ.

ಚಿಕಿತ್ಸೆ ಪಡೆಯಲು ಆಸ್ಪತ್ರೆಯತ್ತ ಬರುತ್ತಿರುವ ರೋಗಿಗಳ ಸಂಖ್ಯೆಯಲ್ಲಿ ಏರಿಕೆ ಕಂಡಿದ್ದು, ಜಿಲ್ಲೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಾಗಿದೆ.

ಮಕ್ಕಳು ಹಾಗೂ ವೃದ್ಧರಲ್ಲಿ ಜ್ವರಬಾಧೆ ತೀವ್ರವಾಗಿದೆ. ಜ್ವರ, ಕೆಮ್ಮು–ನೆಗಡಿ, ಮೈಕೈ ನೋವು, ಬಾಯಿಯಲ್ಲಿ ಅಲ್ಸರ್ ಸಮಸ್ಯೆಯಿಂದ ಬಳಲುತ್ತಿರುವವರು ಚಿಕಿತ್ಸೆಗೆ ಆಸ್ಪತ್ರೆಯತ್ತ ಬರುತ್ತಿದ್ದಾರೆ. ಚಿಕೂನ್ ಗುನ್ಯ ರೋಗ ಲಕ್ಷಣಗಳಾದ ತಲೆಸಿಡಿತ, ಮಂಡಿ ಹಾಗೂ ಮೊಣಕೈ ನೋವು, ಮುಂಗೈ ನೋವಿನಿಂದ ಬಳಲುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ.

ನಗರ ಹಾಗೂ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಹೆಚ್ಚಿನ ಪ್ರಕರಣಗಳು ಪತ್ತೆಯಾಗುತ್ತಿವೆ. ಚಳಿಗಾಲ ಶುರುವಾಗುತ್ತಿರುವುದು ಹಾಗೂ ಕವಿದ ಮೋಡದಿಂದಾಗಿ ತಂಪನೆಯ ಹವಾಮಾನವು ವೈರಾಣು ಜ್ವರಕ್ಕೆ ಪೂರಕವಾಗಿದೆ ಎಂದು ವೈದ್ಯರು ಹೇಳುತ್ತಾರೆ.

ರಾಜ್ಯದಲ್ಲಿ ನ.24ರವರೆಗೆ 14,116 ಡೆಂಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿಯೇ 7,256 ಪ್ರಕರಣಗಳು ಪತ್ತೆಯಾಗಿವೆ. ಅಕ್ಟೋಬರ್ 31ರವರೆಗೆ 12,536 ಡೆಂಗಿ ಪ್ರಕರಣಗಳು ವರದಿಯಾಗಿದ್ದವು. 25 ದಿನಗಳಲ್ಲಿ 1,580 ಡೆಂಗಿ ಪ್ರಕರಣಗಳು ವರದಿಯಾಗಿವೆ. ಅದರಲ್ಲೂ ಕಳೆದ ಒಂದು ವಾರದಿಂದ ಸರಾಸರಿ 100ರಿಂದ 200 ಪಾಸಿಟಿವ್ ಪ್ರಕರಣಗಳು ಪತ್ತೆಯಾಗುತ್ತಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಇದುವರೆಗೂ 50,621 ಮಂದಿಗೆ ಡೆಂಗಿ ತಪಾಸಣೆ ನಡೆಸಲಾಗಿತ್ತು. ಅದರಲ್ಲಿ 31,621 ಡೆಂಗಿ ಶಂಕಿತರ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ತುಮಕೂರು, ಶಿವಮೊಗ್ಗ, ವಿಜಯಪುರ, ಕಲಬುರಗಿ, ಮೈಸೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಡೆಂಗಿ ಪ್ರಕರಣಗಳು ವರದಿಯಾಗುತ್ತಿವೆ.

ರಾಜ್ಯದಲ್ಲಿ ನ.24ರ ವರೆಗೆ 1,410 ಚಿಕೂನ್ ಗುನ್ಯ ಪ್ರಕರಣಗಳು ವರದಿಯಾಗಿವೆ. ಅಕ್ಟೋಬರ್ 31ರ ವರೆಗೆ 1,274 ಚಿಕೂನ್ ಗುನ್ಯ ಪ್ರಕರಣಗಳ ವರದಿಯಾಗಿದ್ದವು.

ಮಂಗಳೂರು ಮಹಾನಗರಪಾಲಿಕೆ

DMA/2023-24/WORK INDENT NO.6848 ದಿನಾಂಕ: 22-11-2023

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ಸಾಮಾನ್ಯ ನಿಧಿಯಡಿಯಲ್ಲಿ ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12-12-2023.** ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂಪಾಯಿ
1	ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವಿಭಾಗದ ಸುರತ್ಕಲ್ ವಲಯದ (ವಾರ್ಡ್ ನಂ.01 ರಿಂದ 20) ವ್ಯಾಪ್ತಿಗೆ ಬರುವ ಪ್ರದೇಶದಲ್ಲಿನ ಒಳಚರಂಡಿ ಆಳುಗುಂಡಿ ಮತ್ತು ಕೊಳವೆ ಮಾರ್ಗದ ದೈನಂದಿನ ನಿರ್ವಹಣೆ ಕಾಮಗಾರಿ. (1 ವರ್ಷದ ಅವಧಿಗೆ) **(Indent No.6848)**	**65,00,000.00**

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/776/23-24 dt.24.11.2023

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000
ಇ-ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2023-24/2338 ದಿನಾಂಕ: 24.11.2023

ಬಿಡ್‌ದಾರರಿಗೆ ಸೂಚನೆ

ಆರ್.ಎಫ್.ಪಿ - ಕರ್ನಾಟಕ ರಾಜ್ಯದಲ್ಲಿ "ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ - ಲಿಂಗಸುಗೂರು ಜಂಕ್ಷನ್ ಕಿ.ಮೀ 0.000 ರಿಂದ ಕಿಮೀ 78.45 ರ ವರೆಗಿನ (ವಿನ್ಯಾಸಿತ ಉದ್ದ ಕಿ.ಮೀ 77.03) ಉದ್ದದ ರಸ್ತೆ ನಿರ್ಮಾಣವನ್ನು ಪಿಪಿಪಿ-ಡಿ.ಬಿ.ಎಫ್.ಓ.ಎಂ.ಟಿ-ಹೈಬ್ರಿಡ್ ಆನ್ಯೂಟಿ (HAM) ಆಧಾರದ ಮೇಲೆ ರಸ್ತೆ ನಿರ್ಮಾಣ".

ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ :ಕರಅನಿನಿ/ಐಎಫ್‌ಬಿ/2023-24/16, ದಿನಾಂಕ: 17.11.2023.

ದಿನಾಂಕ: 19.11.2023ರಂದು ಟೈಮ್ಸ್ ಆಫ್ ಇಂಡಿಯಾ (ಅಖಿಲ ಭಾರತ ಆವೃತ್ತಿ), ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಉಲ್ಲೇಖಿತ ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದ್ದು, **ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪ್ರಕಟಣೆಯನ್ನು ರದ್ದುಪಡಿಸಲಾಗಿದೆಯೆಂದು** ಈ ಮೂಲಕ ತಿಳಿಸಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕರಅನಿನಿ ಬೆಂಗಳೂರು

DIPR/CP/YC/2277/2023-24

ಸಮಾಜ ಕಲ್ಯಾಣ ಇಲಾಖೆ

ಉಪ ನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ನಂ. 217, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ,
ದೇವನಹಳ್ಳಿ ತಾಲ್ಲೂಕು. ದೂ.: 080-29787447, ಇಮೇಲ್: dswoblorerural@gmail.com

ಸಂಖ್ಯೆ : ಉನಿ/ಸಕಇ/ಬೆಂಗ್ರಾ/ಆಹಾರ ಟೆಂಡರ್/ಸಿಆರ್-4/2023-24
ದಿನಾಂಕ : 22-11-2023

ಇ-ಟೆಂಡರ್ ಪ್ರಕಟಣೆ

2023-24 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ, ತರಕಾರಿ ಮತ್ತು ಇತರೆ ಸಾಮಗ್ರಿಗಳ ಸರಬರಾಜಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಇಂಡೆಂಟ್ ಸಂಖ್ಯೆ : **SWD/2023-24/IND0136, SWD/2023-24/IND0138, SWD/2023-24/IND0139, SWD/2023-24/IND0140.**

ಟೆಂಡರ್‌ನ್ನು ದಿನಾಂಕ : 20-12-2023 ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ: 217, 2ನೇ ಮಹಡಿ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು ರವರ ಮೊಬೈಲ್ ಸಂಖ್ಯೆ : 94808 43020, ದೂರವಾಣಿ ಸಂಖ್ಯೆ : 080-2978 7447, ಇಲ್ಲಿ ಪಡೆಯಬಹುದು. ಹಾಗೂ ಕೆ.ಪಿ.ಪಿ.ಪಿ. ವೆಬ್‌ಸೈಟ್‌ನಲ್ಲಿ SWD/2023-24/IND0136, SWD/2023-24/IND0138, SWD/2023-24/IND0139, SWD/2023-24/IND0140. ರ ಮೂಲಕ ವೀಕ್ಷಿಸಬಹುದು.

ಸಹಿ/- ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆಹಾರ ಟೆಂಡರ್
ಖರೀದಿ ಸಮಿತಿ ಹಾಗೂ ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜ/ಮಣಿಪಾಲ್/2254/2023-24

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001.
ದೂರವಾಣಿ: 080-22215601, ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ವೈಎನ್/46/ಯುಚೈ/2023-24 ದಿನಾಂಕ: 22.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2023-24 ನೇ ಸಾಲಿನಲ್ಲಿ ಅರ್ಹ ಯುವ ಸಂಘಗಳಿಗೆ ಯುವ ಚೈತನ್ಯ ಕಾರ್ಯಕ್ರಮದಡಿ ಕ್ರೀಡಾ ಕಿಟ್ ಖರೀದಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ 1999 ಮತ್ತು ನಿಯಮ 2000 ಅನ್ವಯ ಖರೀದಿ ಮಾಡಲು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್ದಾರರಿಂದ ಟೆಂಡರ್ನನ್ನು ಆಹ್ವಾನಿಸಲಾಗಿದೆ.

ಯುವ ಚೈತನ್ಯ ಕಾರ್ಯಕ್ರಮದಡಿ ಯುವ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ. ಅಂದಾಜು ಮೊತ್ತ : ರೂ. 110 ಲಕ್ಷಗಳು/- ಇಎಂಡಿ ಮೊತ್ತ : ರೂ. 1.65 ಲಕ್ಷಗಳು/-.ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : http://eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. (1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 01.12.2023 ಸಮಯ 16-00 ಗಂಟೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02.12.2023 ಸಮಯ 16-30 ಗಂಟೆ. 3) ಹಣಕಾಸು ಬಿಡ್ ತೆರೆಯುವ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾಹಿತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/2270/Zen/2023-24

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426-281027.ಇಮೇಲ್:dam_division@rediffmail.com

ಸಂಖ್ಯೆ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2023-24/2691 ದಿನಾಂಕ:24.11.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) "Preparation of Land Acquisition proposal for lands coming under submergence of Almatti reservoir from RL519.600m to 522.00m and 522.00m to 524.256m (2 Stages) - Indent No. KBJNL/2023-24/OW/WORK_INDENT28 Rs. 124.76 Lakhs** ಶೇಕಡಾವಾರು ದ್ವಿ-ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ: 27.11.2023 ರಿಂದ 14.12.2023 ಸಾಯಂಕಾಲ 5.00 ಘಂಟೆಯವರೆಗೆ.** 2) ಪೂರ್ವಭಾವಿ ಸಭೆ (ಪ್ರೀಬಿಡ್ ಮೀಟಿಂಗ್) **(1) ದಿನಾಂಕ: 06.12.2023 ಮುಂಜಾನೆ 11.00 ಘಂಟೆ. ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.12.2023 ಮುಂಜಾನೆ 11.00 ಘಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20.12.2023 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/290/ಕೆಎಸ್‌ಎಂಸಿಎ/2023-24

ಕರ್ನಾಟಕ ಅರಣ್ಯ ಇಲಾಖೆ

ವನ್ಯಜೀವಿ ವಿಭಾಗ, ಶಿವಮೊಗ್ಗ.

No.A1/BUD/CAMPA-R.C/CR-12/2023-24 Date:23.11.2023

ಕೆ.ಪಿ.ಪಿ- ಪೋರ್ಟಲ್ ಪ್ರಕಟಣೆ. (ಕೆ.ಪಿ.ಪಿ- ಪೋರ್ಟಲ್ ಮುಖಾಂತರ)

2023-24ನೇ ಸಾಲಿನಲ್ಲಿ ಹುಲಿ-ಸಿಂಹಧಾಮ, ತ್ಯಾವರೆಕೊಪ್ಪದಲ್ಲಿ ಅನುಬಂಧ ದಲ್ಲಿ ನಮೂದಿಸಲಾದ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ - ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023-24ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ನೊಂದಾಯಿತ ಹಾಗೂ ಸದರಿ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಆಸಕ್ತ ಲೋಕೋಪಯೋಗಿ ಹಾಗೂ ಅರಣ್ಯ ಗುತ್ತಿಗೆದಾರರಿಂದ ಕೆ.ಪಿ.ಪಿ- ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.12.2023 ಸಂಜೆ 4.30ರವರೆಗೆ ನಿಗಧಿ ಪಡಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in/ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/97/11/23-24/814

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001. ದೂರವಾಣಿ: +91-0821-2520512
ವೆಬ್‌ಸೈಟ್: www.mmcri/karnataka.gov.in ಇಮೇಲ್:mmcrimysore@yahoo.com

ಸಂಖ್ಯೆ:ಸರಬ/ವಿವ/204/2023-24 ದಿನಾಂಕ:13.11.2023

ಟೆಂಡರ್ ಅಧಿಸೂಚನೆ

ವಿಷಯ: ಈ ವಿದ್ಯಾಲಯದ ಟ್ರಾಮಾಕೇರ್ ಆಸ್ಪತ್ರೆಗೆ ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 - ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಯಾದ ಟ್ರಾಮಾಕೇರ್ ಸೆಂಟರ್‌ಗೆ ವಿವಿಧ ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ **ದಿನಾಂಕ 23.11.2023** ರಿಂದ ಪಡೆಯಬಹುದಾಗಿದ್ದು, **ದಿನಾಂಕ 22.12.2023 ರಂದು ಅಪರಾಹ್ನ 5.00 ರೊಳಗಾಗಿ** ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/- ನಿರ್ದೇಶಕರು ಮತ್ತು ಡೀನ್
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

DIPR/MYS/KAVITA/674/23-24

ಕರ್ನಾಟಕ ಸರಕಾರ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗದಗ, ಜಿಲ್ಲೆ ಗದಗ.

ನಂ. 208. ಜಿಲ್ಲಾ ಆಡಳಿತ ಭವನ, ಗದಗ- 582101
e-mail- dobcmgadag@gmail.com

ಸಂ:ಹಿಂವಕಇ/ಹೊಸಿಸೇ/ಎಸ್.8/2023-24 ದಿನಾಂಕ : 24-11-2023

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2023-24ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ /ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳಲ್ಲಿ ಹಾಗೂ ಕಛೇರಿಗಳಲ್ಲಿ ಖಾಲಿ ಇರುವ ವಿವಿಧ ಗ್ರೂಪ್ 'ಸಿ' & 'ಡಿ' ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಜವಾನರು, ಸ್ವಚ್ಚತಾ ಸಿಬ್ಬಂದಿ ಮತ್ತು ಸ್ಟಾಫ್ ನರ್ಸ, ಡಾಟಾಎಂಟ್ರಿ ಆಪರೇಟರ್‌ಗಳ ಅಂದಾಜು **205** ಹುದ್ದೆಗಳನ್ನು ಆದೇಶವಾದ ದಿನದಿಂದ ಒಂದು ವರ್ಷ ಮುಗಿಯುವ ಅವಧಿಯವರೆಗೆ ತಾತ್ಕಾಲಿಕವಾಗಿ ಹೊರಸಂಪನ್ಮೂಲ ಏಜೆನ್ಸಿ/ಸಂಸ್ಥೆಗಳಿಂದ ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: **BCWD/2023-24/SE0012,** ಟೆಂಡರ್‌ಗಿಟ್ಟ ಅಂದಾಜು ಮೊತ್ತ **438.28** ಲಕ್ಷಗಳು ಹಾಗೂ ಇ.ಎಂ.ಡಿ **6.57** ಲಕ್ಷಗಳು ಇರುತ್ತದೆ.

ದಿನಾಂಕ : **23-11-2023** ರಿಂದ **26-12-2023** ರ ಸಂಜೆ 5.00 ಗಂಟೆ ವರೆಗೆ ಟೆಂಡರ್ ದಸ್ತಾವೇಜುಗಳನ್ನು **Website: https://kppp.karnataka.gov.in** ನಲ್ಲಿ ಪಡೆದು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ **08372-237414** ಸಂಪರ್ಕಿಸಲು ಕೋರಿದೆ.

ಸಹಿ/- (ಶ್ರೀ ರವಿ .ಎಲ್.ಗುಂಜೀಕರ)
ಜಿಲ್ಲಾ ಹಿಂದುಳಿದ ವರ್ಗಗಳ
ಕಲ್ಯಾಣ ಇಲಾಖೆ ಗದಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/316/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಆಡಳಿತ/03/23/23-24/812 ದಿನಾಂಕ: 23-11-2023

ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು - 560052 ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಆಸಕ್ತ ಸರಬರಾಜುದಾರರಿಂದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ.

ಒಪ್ಪಂದದ ನಿಯಮ ಮತ್ತು ಷರತ್ತುಗಳು, ಬಿಡ್ಡರ್‌ಗಳ ಅರ್ಹತಾ ಅವಶ್ಯಕತೆ, ಮಾನದಂಡಗಳು ಮತ್ತು ಸೇವೆಗಳ ವ್ಯಾಪ್ತಿ ಒಳಗೊಂಡ ಬಿಡ್ ಡಾಕ್ಯೂಮೆಂಟ್‌ಗಳ ವಿದ್ಯುನ್ಮಾನ ಪ್ರತಿಗಳ ವಿವರಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್ ದಾಖಲೆಗಳನ್ನು ಪಡೆಯಬಹುದು. ಇ-ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ: **23-11-2023 ರಂದು ಸಂಜೆ 4.00 ಗಂಟೆಯಿಂದ 14-12-2023 ರಂದು ಸಂಜೆ 4.00 ಗಂಟೆಯವರೆಗೆ.**

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಆಯೋಗದ ದೂರವಾಣಿ ಸಂಖ್ಯೆ: **080-22268677/78/79,** Extn **212** ಮೂಲಕ ಪಡೆಯಬಹುದು.

ಸಹಿ/- ಟೆಂಡರ್ ಕರೆಯುವ ಪ್ರಾಧಿಕಾರ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ವಾಸಾಸಂಇ/ವಾ.ಪ್ರ/2267/2023-24

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ-1:ಟೆಂಡರ್16/2023-24
ದಿನಾಂಕ: 21.11.2023

ಟೆಂಡರ್ ಪ್ರಕಟಣೆ ಸಂ.16/2023-24 ದಿನಾಂಕ: 21.11.2023

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 16/2023-24 ದಿನಾಂಕ 21-11-2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 3054- ಜಿ.ಮು.ರ/ರಾ.ಹೆ ಸೇತುವೆಗಳು ಲೆಕ್ಕ ಶೀರ್ಷಿಕೆ ಅಡಿಗಳಲ್ಲಿ 2 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.21.15 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.3.28 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.50000/-, ಇ.ಎಂ.ಡಿ ಕನಿಷ್ಠ ಮೊತ್ತ ರೂ.8200/-, ಅರ್ಹ ಗುತ್ತಿಗೆದಾರರು : 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 3 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 30-11-2023ರ 17-00 ಗಂಟೆಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್-2 ಮೂಲಕ ಟೆಂಡರ್‌ಗಳನ್ನು ದಿನಾಂಕ 23-11-2023 ರಿಂದ 01-12-2023ರ 17-15 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 01-12-2023 ರ 17-15 ಗಂಟೆವರೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 02-12-2023 ರ 17-30ಗಂಟೆ ನಂತರ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/317/KSMCA/2023-24

ಕರ್ನಾಟಕ ಸರ್ಕಾರ

ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಅರೆ ವೈದ್ಯಕೀಯ ಮಂಡಳಿ

ನಂ. 40/20ಎ, 1ನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್, ಕೆ.ಆರ್.ರಸ್ತೆ, ಕೋಟೆ, ಬೆಂಗಳೂರು-560 002
ಸಂಖ್ಯೆ: ಪಿಎಂಬಿ/453/2019-20 ದಿನಾಂಕ : 24.11.2023

ಪ್ರಕಟಣೆ ರದ್ದತಿ

ದಿನಾಂಕ: 24.11.2023ರಂದು ಇದೇ ಪತ್ರಿಕೆಯಲ್ಲಿ ಸಂಖ್ಯೆ: ಪಿಎಂಬಿ/452/2019-20 ದಿನಾಂಕ: 23.11.2023ರ ಅನ್ವಯ ಪ್ರಕಟಪಡಿಸಿದ್ದ **'ಬೇಕಾಗಿದ್ದಾರೆ'** ಜಾಹೀರಾತು ಪ್ರಕಟಣೆಯನ್ನು **ತಾಂತ್ರಿಕ ಕಾರಣಗಳಿಂದ** ರದ್ದುಪಡಿಸಲಾಗಿದೆ.

ಸಹಿ/- ವಿಶೇಷಾಧಿಕಾರಿಗಳು, ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಬೆಂಗಳೂರು

ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು-24
ಇ-ಮೇಲ್: jdfarmsahvs@gmail.com ದೂರವಾಣಿ ಸಂಖ್ಯೆ: 080-23412767

ಸಂಖ್ಯೆ: CAH:VMS:LH&DC:ASCAD:Tender:2023-24 ದಿನಾಂಕ: 24-11-2023

ಟೆಂಡರ್ ನೋಟಿಫಿಕೇಷನ್ ("ಕೆಪಿಪಿ ಪೋರ್ಟಲ್" ಮೂಲಕ ಮಾತ್ರ)

2023-24ನೇ ಸಾಲಿಗೆ ಆಸ್ಕಾಡ್ ಯೋಜನೆಯಡಿಯಲ್ಲಿ ಪ್ರಯೋಗಾಲಯ ಸಲಕರಣೆಗಳನ್ನು ಖರೀದಿಸಿ, ಪೂರೈಸುವ ಕುರಿತು ಅರ್ಹ ಟೆಂಡರ್‌ದಾರರಿಂದ ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ **ರೂ.457.60 ಲಕ್ಷಗಳು.**

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **24-11-2023** ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟಫಾರ್ಮ್ ನಲ್ಲಿ ದಿನಾಂಕ: **24-11-2023** ರಿಂದ **26-12-2023 ರವರೆಗೆ ಸಾಯಂಕಾಲ 5.30 ಗಂಟೆಯೊಳಗೆ** ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಚೇರಿ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/-
ಉಪನಿರ್ದೇಶಕರು,
ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/2275/SPAN/2023-24

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 13/2023-24 ದಿನಾಂಕ: 22.11.2023

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 22.11.2023 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಟ ರೂ.167.56 ಲಕ್ಷಗಳು ಮತ್ತು ಕನಿಷ್ಟ ರೂ.1.06 ಲಕ್ಷಗಳು, ಗರಿಷ್ಟ ಇ.ಎಂ.ಡಿ ರೂ.2,51,340/- ಮತ್ತು ಕನಿಷ್ಟ ರೂ.1,325/- ಗುತ್ತಿಗೆ ಕಾಲಾವಧಿ ಗರಿಷ್ಟ 6-ತಿಂಗಳು ಮತ್ತು ಕನಿಷ್ಟ 45-ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 01.12.2023 ಎಂದು ನಿಗದಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

DIPR/DDMYS/KSMCA/687/2023-24 ಸಹಿ/- ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ನಂ.2 ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋಕೋಪಯೋಗಿ ಇಲಾಖೆ, ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22122856
Email ID: eepwdbngdn@yahoo.com E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2023-24
ದಿನಾಂಕ: 24.11.2023

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ-2000ರನ್ವಯ ಕೆಡಬ್ಲ್ಯೂ-1 ನಿಯಮಗಳಂತೆ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ಮತ್ತು ಇಎಸ್‌ಐ ಆಸ್ಪತ್ರೆಯಲ್ಲಿ 41 ವಿವಿಧ ಕಾಮಗಾರಿಗಳಿಗಾಗಿ (ಮೀಸಲಾತಿ ಹಂಚಿಕೆ ಕ್ರ.ಸಂ : 1 ರಿಂದ 09 : ಪರಿಶಿಷ್ಟ ಜಾತಿ, ಕ್ರ.ಸಂ : 10 ರಿಂದ 13 ಪರಿಶಿಷ್ಟ ಪಂಗಡ, ಕ್ರ.ಸಂ: 14-41-(ಇತರೆ) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 27.11.2023 ರಿಂದ 05.12.2023 ಸಂಜೆ : 4.30 ಗಂಟೆಯವರೆಗೆ

2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 05.12.2023 ಸಂಜೆ: 4.30 ಗಂಟೆಯವರೆಗೆ.

3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 07.12.2023 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಪಡೆಯಬಹುದು ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

DIPR/CP/2262/Zen/2023-24

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16-ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ,
ವಸಂತನಗರ, ಬೆಂಗಳೂರು-560 052. ಫೋನ್: 8050770005
ಇ-ಮೇಲ್ : bcwdhelpline@gmail.com

ಸಂಖ್ಯೆ:E 1238966 BCWD-17/34/2023-BCWD_SCHLR-BCWD ದಿನಾಂಕ:23.11.2023

ಪ್ರಕಟಣೆ

ಮೆಟ್ರಿಕ್-ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ಅಲೆಮಾರಿ / ಅರೆಅಲೆಮಾರಿ ವಿದ್ಯಾರ್ಥಿಗಳಿಂದ, 2023-24 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಮೂಲಕ ನೀಡಲಾಗುತ್ತಿರುವ **"ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ", "ಶುಲ್ಕ ಮರುಪಾವತಿ",** ಮತ್ತು **"ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ",** ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, **10.01.2024 ಕ್ಕೆ** ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10.01.2024
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ:	https://ssp.postmatric.karnataka.gov.in
ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ: https://bcwd.karnataka.gov.in	
ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ :	8050770005
ಇಮೇಲ್ :	bcwdhelpline@gmail.com
ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್ :	postmatrichelp@karnataka.gov.in
ದೂರವಾಣಿ ಸಂಖ್ಯೆ :	1902

ಸಹಿ/- ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜೆಎ/2264/2023-24

ಅದಾನಿ-ಹಿಂಡನ್‌ಬರ್ಗ್ ವಿವಾದ ಅರ್ಜಿ

ಸೆಬಿ ಸಂಶಯಿಸಲು ಆಧಾರ ಇಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯನ್ನು (ಸೆಬಿ) ಸಂದೇಹದಿಂದ ಕಾಣಲು ಕಾರಣಗಳು ಇಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಸೆಬಿ ಕೈಗೊಂಡಿರುವ ಕ್ರಮಗಳನ್ನು ಅನುಮಾನದಿಂದ ನೋಡಲು ನ್ಯಾಯಾಲಯದ ಮುಂದೆ ಯಾವುದೇ ಆಧಾರ ಇಲ್ಲ. ಅಲ್ಲದೆ, ಹಿಂಡನ್‌ಬರ್ಗ್ ವರದಿಯಲ್ಲಿ ಇರುವುದನ್ನೆಲ್ಲ ತಾನು ನಿಜವೆಂದು ಭಾವಿಸಬೇಕಾಗಿಲ್ಲ ಎಂದು ಕೂಡ ಕೋರ್ಟ್ ಹೇಳಿದೆ.

ಷೇರುಪೇಟೆಯಲ್ಲಿನ ಅಸ್ಥಿರತೆಯಿಂದಾಗಿ ಅಥವಾ ಶಾರ್ಟ್ ಸೆಲ್ಲಿಂಗ್‌ನಿಂದಾಗಿ ಹೂಡಿಕೆದಾರರು ಹಣ ಕಳೆದುಕೊಳ್ಳದಂತೆ ನೋಡಿಕೊಳ್ಳಲು ಯಾವ ಕ್ರಮ ಕೈಗೊಳ್ಳಲು ಸೆಬಿ ಉದ್ದೇಶಿಸಿದೆ ಎಂದು ಪ್ರಶ್ನಿಸಿದೆ. ಸೂಕ್ತ ಆಧಾರಗಳು ಇಲ್ಲದೆ ತಾನು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವುದು ಸೂಕ್ತವಾಗುವುದಿಲ್ಲ ಎಂದು ಹೇಳಿದೆ.

ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಕೆಲವು ಸಂಗತಿಗಳನ್ನು ಪರಮಸತ್ಯವೆಂದು ಭಾವಿಸಬೇಕು ಎಂದು ತಾನು ಶಾಸನಬದ್ಧ ನಿಯಂತ್ರಣ ಸಂಸ್ಥೆಯೊಂದಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಕೂಡ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಹೇಳಿದೆ. ಅದಾನಿ-ಹಿಂಡನ್‌ಬರ್ಗ್ ವಿವಾದಕ್ಕೆ ಸಂಬಂಧಿಸಿದ ಹಲವು ಅರ್ಜಿಗಳ ಕುರಿತ ತೀರ್ಪನ್ನು ಪೀಠವು ಕಾಯ್ದಿರಿಸಿದೆ.

'ಹಿಂಡನ್‌ಬರ್ಗ್ ವರದಿಯಲ್ಲಿ ವಿವರಿಸಿರುವುದನ್ನು ನಾವು ನಿಜವೆಂದು ಭಾವಿಸಬೇಕಾಗಿಲ್ಲ. ಹೀಗಾಗಿಯೇ ನಾವು ತನಿಖೆ ನಡೆಸುವಂತೆ ಸೆಬಿಗೆ ಸೂಚಿಸಿದ್ದೆವು. ಏಕೆಂದರೆ, ವರದಿ ಸಿದ್ಧಪಡಿಸಿರುವ ಸಂಸ್ಥೆ ನಮ್ಮೆದುರು ಇಲ್ಲ ಹಾಗೂ ಅದು ಪ್ರಕಟಿಸಿರುವ ವರದಿಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ನಮ್ಮಲ್ಲಿ ಯಾವುದೇ ವ್ಯವಸ್ಥೆ ಇಲ್ಲ. ಹೀಗಿರುವಾಗ, ವರದಿಯಲ್ಲಿನ ಅಂಶಗಳನ್ನು ಒಪ್ಪಿಕೊಳ್ಳುವುದು ನಿಜಕ್ಕೂ ನ್ಯಾಯಸಮ್ಮತ ಆಗುವುದಿಲ್ಲ' ಎಂದು ಪೀಠವು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರಿಗೆ ಹೇಳಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿ ಇದ್ದಾರೆ.

ಸೆಬಿ ನಡೆಸಿರುವ ತನಿಖೆಯು ವಿಶ್ವಾಸಾರ್ಹವೇ, ಸ್ವತಂತ್ರ ಸಂಸ್ಥೆಯೊಂದರಿಂದ ಅಥವಾ ಎಸ್‌ಐಟಿ ಮೂಲಕ ತನಿಖೆ ನಡೆಸಬೇಕೇ ಎಂಬುದನ್ನು ಕೋರ್ಟ್ ಪರಿಶೀಲಿಸಬೇಕು ಎಂದು ಭೂಷಣ್ ಹೇಳಿದರು. 'ಸೆಬಿಯ ಕೆಲಸವನ್ನು ಅನುಮಾನದಿಂದ ಕಾಣಲು ಯಾವ ಆಧಾರ ಇದೆ' ಎಂದು ಪೀಠ ಪ್ರಶ್ನಿಸಿತು.

ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ತಜ್ಞರ ಸಮಿತಿಯ ಇಬ್ಬರು ಸದಸ್ಯರು ಹಿತಾಸಕ್ತಿ ಸಂಘರ್ಷ ಹೊಂದಿದ್ದಾರೆ ಎಂದು ಭೂಷಣ್ ಅವರ ಹೇಳಿಕೆಗೆ ಪೀಠವು ಆಕ್ಷೇಪ ವ್ಯಕ್ತಪಡಿಸಿತು. 'ನೀವು ಬಹಳ ಎಚ್ಚರಿಕೆಯಿಂದ ಇರಬೇಕು. ಆರೋಪ ಮಾಡುವುದು ಬಹಳ ಸುಲಭ. ನಾವು ಇಲ್ಲಿ ನಡತೆ ಪ್ರಮಾಣಪತ್ರ ನೀಡಲು ಕುಳಿತಿಲ್ಲ. ನ್ಯಾಯೋಚಿತವಾಗಿರುವುದಕ್ಕೆ ಸಂಬಂಧಿಸಿದ ಮೂಲ ತತ್ವಗಳು ನಮಗೆ ಅರಿವಿರಬೇಕು' ಎಂದು ಪೀಠ ಭೂಷಣ್ ಅವರಿಗೆ ಹೇಳಿತು.

ಸೆಬಿ ತನಿಖೆಯು ವಿಶ್ವಾಸಾರ್ಹ ಆಗಿಲ್ಲ ಎಂಬ ತಮ್ಮ ವಾದಕ್ಕೆ ಪೂರಕವಾಗಿ ಭೂಷಣ್ ಅವರು ಹಿಂಡನ್‌ಬರ್ಗ್‌ನ ವರದಿ ಹಾಗೂ ಕೆಲವು ಮಾಧ್ಯಮ ವರದಿಗಳನ್ನು ಉಲ್ಲೇಖಿಸಿದರು. 'ಗಾರ್ಡಿಯನ್ ಆಗಿರಲಿ, ಫೈನಾನ್ಶಿಯಲ್ ಟೈಮ್ಸ್ ಆಗಿರಲಿ, ಪತ್ರಿಕೆಯೊಂದರಲ್ಲಿ ಬಂದಿರುವ ಯಾವುದೋ ಒಂದು ಸಂಗತಿಯನ್ನು ಪರಮಸತ್ಯವೆಂದು ಭಾವಿಸಬೇಕು ಎಂದು ನಾವು ಶಾಸನಬದ್ಧ ನಿಯಂತ್ರಣ ಸಂಸ್ಥೆಯೊಂದಕ್ಕೆ ಸೂಚಿಸಲು ಆಗದು. ಸೆಬಿ ಬಗ್ಗೆ ಸಂಶಯಪಡಲು ನಮ್ಮಲ್ಲಿ ಆಧಾರಗಳಿಲ್ಲ...' ಎಂದು ಪೀಠ ತಿಳಿಸಿತು.

ಪಂಜಾಬ್ ಪ್ರಕರಣದ ತೀರ್ಪು ಓದಲು ಸಿಜೆಐ ಸೂಚನೆ

ನವದೆಹಲಿ (ಪಿಟಿಐ): ಪಂಜಾಬ್ ಸರ್ಕಾರದ ಪ್ರಕರಣದಲ್ಲಿ ಈಚೆಗೆ ತಾನು ನೀಡಿರುವ ತೀರ್ಪನ್ನು ಕೇರಳ ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಪರಿಶೀಲಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಪಂಜಾಬ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಶಾಸನ ರೂಪಿಸುವ ಸಹಜ ಪ್ರಕ್ರಿಯೆಗೆ ರಾಜ್ಯಪಾಲರು ಅಡ್ಡಿಯಾಗುವಂತೆ ಇಲ್ಲ ಎಂದು ಹೇಳಿದೆ. ವಿಧಾನಸಭೆಯ ಅಂಗೀಕಾರ ದೊರೆತಿರುವ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕುತ್ತಿಲ್ಲ ಎಂದು ಕೇರಳ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಸಿಜೆಐ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರು ಇದ್ದ ನ್ಯಾಯಪೀಠವು ಕೇರಳ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸುತ್ತಿದೆ. ಪ್ರಕರಣದ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿದೆ.

'ಪಂಜಾಬ್ ಪ್ರಕರಣದಲ್ಲಿ ನಾವು ನೀಡಿರುವ ತೀರ್ಪನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಕೇರಳ ರಾಜ್ಯಪಾಲರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಆ ತೀರ್ಪನ್ನು ಗಮನಿಸಲು ಹೇಳಿ' ಎಂದು ಸಿಜೆಐ ತಿಳಿಸಿದರು.

ಐ.ಟಿ. ನಿಯಮ ಉಲ್ಲಂಘನೆ: ದೂರು ನೀಡಲು ಸರ್ಕಾರ ನೆರವು



ರಾಜೀವ್ ಚಂದ್ರಶೇಖರ್

ನವದೆಹಲಿ (ಪಿಟಿಐ): ಡೀಪ್‌ಫೇಕ್ ನಂತಹ ಆಕ್ಷೇಪಾರ್ಹ ವಸ್ತು-ವಿಷಯಗಳು ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿದಲ್ಲಿ, ಐ.ಟಿ. ನಿಯಮಗಳನ್ನು ಉಲ್ಲಂಘಿಸಿದ ಸಾಮಾಜಿಕ ಜಾಲತಾಣಗಳ ವಿರುದ್ಧ ದೂರು ಸಲ್ಲಿಸಲು ಕೇಂದ್ರ ಸರ್ಕಾರವು ಜನರಿಗೆ ನೆರವು ಒದಗಿಸಲಿದೆ.

ಸಾಮಾಜಿಕ ಜಾಲತಾಣ ವೇದಿಕೆಗಳು ಐ.ಟಿ. ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಮಾಹಿತಿ ನೀಡಲು ನೆರವಾಗುವ ವೇದಿಕೆಯೊಂದನ್ನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಅಭಿವೃದ್ಧಿಪಡಿಸಲಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ ವೇದಿಕೆಗಳ ಪ್ರತಿನಿಧಿಗಳ ಜೊತೆ ಸಭೆ ನಡೆಸಿದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿದರು. 'ಐ.ಟಿ. ನಿಯಮಗಳ ಉಲ್ಲಂಘನೆಯನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ' ಎಂದರು.

ಎಫ್‌ಐಆರ್ ಅನ್ನು ವೇದಿಕೆಗಳ ವಿರುದ್ಧ ದಾಖಲಿಸಲಾಗುತ್ತದೆ. ವೇದಿಕೆಗಳು ಆಕ್ಷೇಪಾರ್ಹ ವಸ್ತು-ವಿಷಯ ಬಂದಿದ್ದು ಎಲ್ಲಿಂದ ಎಂಬುದನ್ನು ತಿಳಿಸಿದರೆ, ಆ ವಸ್ತು-ವಿಷಯವನ್ನು ಪೋಸ್ಟ್ ಮಾಡಿದ ಸಂಸ್ಥೆ-ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಸಾಮಾಜಿಕ ಜಾಲತಾಣ ವೇದಿಕೆಗಳು ತಮ್ಮ ಬಳಕೆ ನಿಯಮಗಳನ್ನು ಐ.ಟಿ. ನಿಯಮಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 05/835-844/2023-24
ದಿನಾಂಕ : 18-11-2023

ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾವಣೆ ಮಾಡಿಕೊಂಡಿರುವ **ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,** ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : **https://kppp.karnataka.gov.in** ಮುಖಾಂತರ **ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ, ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ** ಲೆಕ್ಕ ಶೀರ್ಷಿಕೆ : ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಕನಿಷ್ಠ ಅಂದಾಜು ಮೊತ್ತ ರೂ. 10.00 ಲಕ್ಷಗಳು, ಗರಿಷ್ಠ ಅಂದಾಜು ಮೊತ್ತ ರೂ. 160.00 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 04-12-2023 ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05-12-2023 ರ ಸಂಜೆ 4.30 ಗಂಟೆಯ ನಂತರ. (KW-I, KW-II, KW-III) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 07-12-2023 ರ ಸಂಜೆ 4.30 ಗಂಟೆಯ ನಂತರ. (KW-III)** ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/304/ಮಣಿಪಾಲ್/2023-24

ಚೀನಾದಲ್ಲಿ ಹೊಸ ಸೋಂಕಿನ ಭೀತಿ • ಕೋವಿಡ್ ರೂಪಾಂತರ ತಳಿಯಲ್ಲ –ವರದಿ

ಮಕ್ಕಳಲ್ಲಿ ಉಸಿರಾಟ ಸಮಸ್ಯೆ: ಆತಂಕ

ಶಾಂಘೈ (ರಾಯಿಟರ್ಸ್/ ಪಿಟಿಐ): ಉಸಿರಾಟದ ಸಮಸ್ಯೆ ಪ್ರಕರಣಗಳು ಮುಖ್ಯವಾಗಿ ಮಕ್ಕಳಲ್ಲಿ ಗಣನೀಯವಾಗಿ ಏರಿಕೆಯಾದ ಹಿಂದೆಯೇ ಕಟ್ಟೆಚ್ಚರ ವಹಿಸುವಂತೆ ನಾಗರಿಕರಿಗೆ ಚೀನಾ ಸಲಹೆ ಮಾಡಿದೆ. ಮಕ್ಕಳ ಚಿಕಿತ್ಸೆಗಾಗಿ ಆಸ್ಪತ್ರೆಗಳಲ್ಲಿ ದಟ್ಟಣೆ ಕಂಡುಬಂದಿದೆ.

ಈ ಮಧ್ಯೆ, ಸೋಂಕು ಪ್ರಕರಣ ಹೆಚ್ಚುತ್ತಿರುವ ಕುರಿತು ವರದಿಯನ್ನು ಸಲ್ಲಿಸಲು ಚೀನಾಗೆ ಸೂಚಿಸಿದ್ದ ವಿಶ್ವ ಆರೋಗ್ಯ ಸಂಘಟನೆಯು (ಡಬ್ಲ್ಯುಎಚ್‌ಒ), ಚೀನಾದಲ್ಲಿ ಭಿನ್ನ ಅಥವಾ ಹೊಸತಾದ ರೋಗಕಾರಕ ವೈರಾಣು ಪತ್ತೆಯಾಗಿಲ್ಲ ಎಂದು ಶುಕ್ರವಾರ ತಿಳಿಸಿದೆ.

ಕೋವಿಡ್–19 ನಿರ್ಬಂಧಗಳನ್ನು ಸಡಿಲಿಸಿದ ನಂತರದ ಪ್ರಥಮ ಚಳಿಗಾಲ ಪ್ರವೇಶಿಸಿದ ಹಿಂದೆಯೇ ಮಕ್ಕಳಲ್ಲಿ ಉಸಿರಾಟದ ಸಮಸ್ಯೆಗಳು ಏರಿಕೆಯಾಗಿವೆ. ಮುಖ್ಯವಾಗಿ ಬೀಜಿಂಗ್, ಲಯೊನಿಂಗ್ ಪ್ರಾಂತ್ಯದಲ್ಲಿ ತೀವ್ರವಾಗಿದ್ದು, ಆಸ್ಪತ್ರೆಗಳಲ್ಲಿ ಉದ್ದನೆಯ ಸಾಲು ಇದೆ.

ಚಳಿಗಾಲ ಮತ್ತು ವಸಂತಕಾಲದಲ್ಲಿ ಮಕ್ಕಳಲ್ಲಿ ಸೋಂಕು, ಜ್ವರದ ಸಮಸ್ಯೆಗಳು ಹೆಚ್ಚಾಗಬಹುದು. ಭವಿಷ್ಯದಲ್ಲಿ ಕೆಲವು ಕಡೆ ಶ್ವಾಸಕೋಶವನ್ನು ಬಾಧಿಸುವ ಮೈಕೋಪ್ಲಾಸ್ಮಾ ನ್ಯುಮೋನಿಯಾ ಸೋಂಕು ಹೆಚ್ಚಾಗಬಹುದು. ಅಲ್ಲದೆ, ಕೋವಿಡ್ ಸೋಂಕು ಮತ್ತೆ ಕಾಡುವ ಸಾಧ್ಯತೆಗಳು ಇವೆ ಎಂದು ರಾಜ್ಯ ಮಂಡಳಿ ಜನತೆಗೆ ಎಚ್ಚರಿಕೆ ನೀಡಿದೆ.

ಸೋಂಕು ಪ್ರಕರಣಗಳ ಕುರಿತು ಸಕಾಲದಲ್ಲಿ, ವ್ಯವಸ್ಥಿತವಾಗಿ ಮಾಹಿತಿ ನೀಡಬೇಕು ಎಂದು ರಾಜ್ಯ ಮಂಡಳಿಯು ಸ್ಥಳೀಯ ಅಧಿಕಾರಿಗಳು ಸೂಚಿಸಿ ಹೇಳಿಕೆ ನೀಡಿದೆ.

ಶಾಂಘೈನಲ್ಲಿನ ಹೆಚ್ಚಿನ ಪೋಷಕರು, ಜ್ವರದ ಸಮಸ್ಯೆಗಳು ಶೀಘ್ರ ಇನ್ನಷ್ಟು ವ್ಯಾಪಿಸಬಹುದು ಎಂಬ ಆತಂಕ ಕಾಡುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಬೀಜಿಂಗ್‌ನ ಆಸ್ಪತ್ರೆಯೊಂದರಲ್ಲಿ ಅನಾರೋಗ್ಯಪೀಡಿತ ಮಕ್ಕಳ ಚಿಕಿತ್ಸೆಗಾಗಿ ಸರದಿಯಲ್ಲಿರುವ ಪೋಷಕರು –ಎಎಫ್‌ಪಿ ಚಿತ್ರ

ಸೋಂಕು ಏರಿಕೆ: ವರದಿ ಸಲ್ಲಿಸಿದ ಚೀನಾ

ಶಾಂಘೈ (ರಾಯಿಟರ್ಸ್): ಮಕ್ಕಳಲ್ಲಿ ಹೆಚ್ಚುತ್ತಿರುವ ಅನಾರೋಗ್ಯ ಸಮಸ್ಯೆ ಪ್ರಕರಣಗಳನ್ನು ಕುರಿತಂತೆ ತನ್ನ ಸೂಚನೆಗೆ ಸ್ಪಂದಿಸಿ ಚೀನಾ ವರದಿಯನ್ನು ಸಲ್ಲಿಸಿದೆ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಒ) ತಿಳಿಸಿದೆ.

ವರದಿಯ ಪ್ರಕಾರ, ಮೈಕೋಪ್ಲಾಸ್ಮಾ ನ್ಯುಮೋನಿಯಾ ಎಂಬ ಸೋಂಕು ಸಮಸ್ಯೆ ಕಾರಣ. ಮಕ್ಕಳಲ್ಲಿ ಈ ಸೋಂಕು ಸಾಮಾನ್ಯವಾಗಿದ್ದು, ಮೇ ತಿಂಗಳಿನಿಂದ ಚೀನಾದಲ್ಲಿ ಗಣನೀಯವಾಗಿ ಕಾಣಿಸಿಕೊಂಡಿದೆ.

ಈ ತಿಂಗಳಲ್ಲಿ ಸ್ಥಳೀಯ ಆಡಳಿತಗಳು ಜನತೆಗೆ ಆರೋಗ್ಯ ಕಾಳಜಿ ಕುರಿತು ಮುನ್ನೆಚ್ಚರಿಕೆ ಸಲಹೆಗಳನ್ನು ನೀಡಿದ್ದು, ಪರಿಸ್ಥಿತಿಯು ಗಂಭೀರವಾಗಿದೆ ಎಂದು ತಿಳಿಸಿದೆ. ಸೋಂಕು ಬಾಧಿತ ಮಕ್ಕಳ ಚಿಕಿತ್ಸೆಗಾಗಿ ಆಸ್ಪತ್ರೆಗಳಲ್ಲಿ ದಟ್ಟಣೆ ಹೆಚ್ಚಾಗಿದೆ. ಆದರೆ, ಕೋವಿಡ್ ಸಂದರ್ಭದಲ್ಲಿ ವಿಧಿಸಿದಂತೆ ಮುಂಜಾಗ್ರತೆಯಾಗಿ ಶಾಲೆಗಳಿಗೆ ರಜೆ ನೀಡುವುದು ಸೇರಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಈ ಬಾರಿ ತೆಗೆದುಕೊಂಡಿಲ್ಲ. ಜಾಗ್ರತೆ ವಹಿಸಲು ಸಾರ್ವಜನಿಕರಿಗೆ ಎಚ್ಚರಿಕೆ ನೀಡುವ ಸೂಚನೆಗಳು ಇಲ್ಲ.

ಮೆಲ್ಬರ್ನ್‌ನ ಆರೋಗ್ಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥ ಬ್ರೂಸ್ ಥಾಂಪ್ಸನ್ ಅವರು, ಈ ಹಂತದಲ್ಲಿ ಈಗ ಕಾಣಿಸಿರುವ ಸೋಂಕು ಕೋವಿಡ್‌ನ ಹೊಸ ರೂಪಾಂತರ ತಳಿ ಎಂಬ ತೀರ್ಮಾನಕ್ಕೆ ಬರಲು ಪೂರಕವಾದ ಯಾವುದೇ ಅಂಶಗಳಿಲ್ಲ ಎಂದಿದ್ದಾರೆ.

ಮುನ್ನೆಚ್ಚರಿಕೆಯ ಕ್ರಮಗಳು ಜಾರಿಯಲ್ಲಿವೆ ಎಂಬುದು ಈ ಹೊತ್ತಿನ ಉತ್ತಮ ಬೆಳವಣಿಗೆ ಎಂದು ತಿಳಿಸಿದ್ದಾರೆ.

ಹಮಾಸ್ ಬಂಡುಕೋರರು ಬಿಡುಗಡೆ ಮಾಡಿದ ಇಸ್ರೇಲ್‌ನ ಒತ್ತೆಯಾಳುಗಳನ್ನು ಹೊತ್ತ ರೆಡ್‌ಕ್ರಾಸ್‌ನ ವಾಹನ ಗಾಜಾಪಟ್ಟಿಯ ರಫಾ ಗಡಿ ದಾಟಿ ಈಜಿಪ್ಟ್ ಪ್ರವೇಶಿಸುತ್ತಿದ್ದುದನ್ನು ವ್ಯಕ್ತಿಯೊಬ್ಬ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದದ್ದು ಶುಕ್ರವಾರ ಕಂಡು ಬಂತು –ಎಎಫ್‌ಪಿ ಚಿತ್ರ

ಗಾಜಾ: ಕದನ ವಿರಾಮ ಶುರು

24 ಒತ್ತೆಯಾಳು ಬಿಡುಗಡೆ ಮಾಡಿದ ಹಮಾಸ್

ಜೆರುಸಲೇಂ/ಡೀರ್ ಅಲ್ ಬಲಾಹ್ (ಎಪಿ/ಎಎಫ್‌ಪಿ): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಣ ನಾಲ್ಕು ದಿನಗಳ ಕದನ ವಿರಾಮ ಶುಕ್ರವಾರ ಆರಂಭವಾಗಿದೆ. ಹಮಾಸ್ ಬಂಡುಕೋರರು ಮೊದಲ ಹಂತದಲ್ಲಿ 13 ಇಸ್ರೇಲ್ ಪ್ರಜೆಗಳು ಸೇರಿದಂತೆ 24 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಇನ್ನೊಂದೆಡೆ, ಇಸ್ರೇಲ್ ಸೇನೆಯು ತನ್ನ ಜೈಲುಗಳಲ್ಲಿ ಇರಿಸಿರುವ ಪ್ಯಾಲೆಸ್ಟೀನಿಯನ್ನರ ಪೈಕಿ 39 ಜನರನ್ನು ಬಿಡುಗಡೆ ಮಾಡಿದೆ. ಕದನ ವಿರಾಮದ ಅವಧಿಯಲ್ಲಿ ಇಸ್ರೇಲ್, 150 ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಲಿದೆ.

'13 ಇಸ್ರೇಲಿಗರು, 10 ಮಂದಿ ಥಾಯ್ಲೆಂಡ್ ಪ್ರಜೆಗಳು ಹಾಗೂ ಒಬ್ಬ ಫಿಲಿಪ್ಪೀನ್ ಪ್ರಜೆಯನ್ನು ಹಮಾಸ್ ಬಂಡುಕೋರರು ಬಿಡುಗಡೆ ಮಾಡಿದ್ದಾರೆ' ಎಂದು ಕತಾರ್ ಹೇಳಿದೆ.

ನಾಲ್ಕು ದಿನಗಳ ಕದನ ವಿರಾಮದ ಅವಧಿಯಲ್ಲಿ ಹಮಾಸ್ ಬಂಡುಕೋರರು 50 ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಿದ್ದಾರೆ.

'ಇಸ್ರೇಲ್ ಸೇನೆಯು 24 ಮಹಿಳೆಯರು ಹಾಗೂ 15 ಅಪ್ರಾಪ್ತ ವಯಸ್ಕರನ್ನು ಬಿಡುಗಡೆ ಮಾಡಿದೆ. ಭದ್ರತಾ ಪಡೆಗಳ ಮೇಲೆ ದಾಳಿ, ಕೊಲೆ ಯತ್ನ ಮಾಡಿದ್ದರೆಂದು ಕೆಲವರಿಗೆ ಜೈಲು ಶಿಕ್ಷೆ ವಿಧಿಸಲಾಗಿತ್ತು. ಕಲ್ಲು ತೂರಾಟ ನಡೆಸಿದ್ದಾರೆಂದು 15 ಅಪ್ರಾಪ್ತ ವಯಸ್ಕರನ್ನು ಜೈಲಿನಲ್ಲಿರಿಸಲಾಗಿತ್ತು' ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ಹೇಳಿದ್ದಾರೆ.

ಕತಾರ್, ಅಮೆರಿಕ ಮಧ್ಯಸ್ಥಿಕೆಯಿಂದಾಗಿ ಮೂಡಿದ್ದ ಒಪ್ಪಂದದ ಭಾಗವಾಗಿ ಹಮಾಸ್ ಬಂಡುಕೋರರು ಒತ್ತೆಯಾಳುಗಳನ್ನು, ಇಸ್ರೇಲ್ ಸೇನೆಯು ರಾಜಕೀಯ ಕೈದಿಗಳನ್ನು ಮೊದಲ ಹಂತದಲ್ಲಿ ಬಿಡುಗಡೆ ಮಾಡಬೇಕಾಗಿದೆ.

ಕದನವಿರಾಮದಿಂದಾಗಿ ಗಾಜಾಪಟ್ಟಿಯಲ್ಲಿ ಸುಮಾರು 48 ದಿನಗಳ ನಂತರ ಗನ್‌ಗಳು, ಟ್ಯಾಂಕ್‌ಗಳು ಮೌನವಹಿಸಿವೆ. ಇನ್ನೊಂದೆಡೆ, ಯುದ್ಧಬಾಧಿತ ಗಾಜಾಪಟ್ಟಿಗೆ ಇಂಧನ, ಅಗತ್ಯ ಮಾನವೀಯ ನೆರವು ಒದಗಿಸುವ ಕಾರ್ಯ ಚುರುಕುಗೊಂಡಿದೆ.

ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ಕದನವಿರಾಮದ ಅವಧಿ ಮುಗಿದಂತೆಯೇ ದಾಳಿ ಚುರುಕಾಗಲಿದೆ ಎಂದು ಪುನರುಚ್ಚರಿಸಿದ್ದಾರೆ.

ಕದನ ವಿರಾಮ ಆರಂಭವಾದಂತೆ ನೂರಾರು ಪ್ಯಾಲೆಸ್ಟೀನಿಯರು ಗಾಜಾದ ದಕ್ಷಿಣದಿಂದ ಉತ್ತರ ಭಾಗದತ್ತ ಗುಳೆ ಹೊರಟಿದ್ದಾರೆ. ಸೇನೆಯು ಕಾರ್ಯಚಟುವಟಿಕೆ ಸ್ಥಗಿತಗೊಳಿಸಿದ್ದರೂ ಗಸ್ತಿನಲ್ಲಿದೆ.

ಬಾಲಕ ಸೇರಿ ಮೂವರ ಸಾವು

ಜೆರುಸಲೇಂ (ಎ.ಪಿ): ಇಸ್ರೇಲ್‌ನ ಸೇನೆಯು ಗುರುವಾರ ವೆಸ್ಟ್‌ಬ್ಯಾಂಕ್‌ನ ಫ್ಲಾಶ್‌ಪಾಯಿಂಟ್ ನಗರದಲ್ಲಿ 12 ವರ್ಷದ ಬಾಲಕನ ಹತ್ಯೆ ಮಾಡಿದೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಯೋಧರು ಗ್ರಾಮ ಪ್ರವೇಶಿಸಿದಾಗ ಪ್ಯಾಲೆಸ್ಟೀನಿಯರು ಕಲ್ಲು ತೂರಾಟ ನಡೆಸಿದರು. ಪ್ರತಿಯಾಗಿ ಯೋಧರು ಗುಂಡು ಹಾರಿಸಿದ್ದಾರೆ. ಬಾಲಕನ ಸಾವಿಗೆ ಕಾರಣವಾದ ಸಂದರ್ಭವನ್ನು ಪರಿಶೀಲಿಸಲಾಗುವುದು ಎಂದು ಸೇನೆ ತಿಳಿಸಿದೆ.

ಇನ್ನೊಂದೆಡೆ, ಗಾಜಾ ಪಟ್ಟಿ ಪ್ರವೇಶಿಸಲು ಯತ್ನಿಸಿದ ಪ್ಯಾಲೆಸ್ಟೀನಿಯರ ಮೇಲೂ ಸೇನೆ ಗುಂಡು ಹಾರಿಸಿದ್ದು, ಇಬ್ಬರು ಸತ್ತಿದ್ದಾರೆ.

ಬಾಲಕಿ ವಿವಾಹವಾದ 46 ವರ್ಷದ ಶಿಕ್ಷಕನ ಬಂಧನ

ತಾಡೇರು (ಆಂಧ್ರಪ್ರದೇಶ) (ಪಿಟಿಐ): ಅಪ್ರಾಪ್ತ ವಯಸ್ಸಿನ ತನ್ನ ವಿದ್ಯಾರ್ಥಿನಿಯನ್ನು ಪುಸಲಾಯಿಸಿ ಮದುವೆಯಾದ ಆರೋಪದ ಮೇಲೆ 46 ವರ್ಷ ವಯಸ್ಸಿನ ಶಿಕ್ಷಕನೊಬ್ಬನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮಾವರಮ್‌ನ ಯಂಡಗಣಿ ಜಿಲ್ಲಾ ಪರಿಷತ್ ಪ್ರೌಢಶಾಲೆಯಲ್ಲಿ ಹಿಂದಿ ಶಿಕ್ಷಕನಾಗಿರುವ ಕೆ. ಸೋಮರಾಜು ಬಂಧಿತ ಆರೋಪಿ. ಸೋಮರಾಜುಗೆ ಇಬ್ಬರು ಪುತ್ರಿಯರಿದ್ದು, ಪತ್ನಿ 7 ವರ್ಷಗಳ ಹಿಂದೆಯೇ ಆತನನ್ನು ತ್ಯಜಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿ ಸೋಮರಾಜು ನಾಲ್ಕು ತಿಂಗಳಿಂದ 10ನೇ ತರಗತಿಯ ವಿದ್ಯಾರ್ಥಿನಿಯನ್ನು ಪುಸಲಾಯಿಸುತ್ತಿದ್ದ. ಆಕೆಗೆ ಸ್ಮಾರ್ಟ್ ಫೋನ್ ಕೊಡಿಸಿದ್ದ. ನ. 19ರಂದು ಬಾಲಕಿಯ ಮನೆ ಬಳಿಯಿಂದಲೇ ಆಕೆಯನ್ನು ಕರೆದೊಯ್ದಿದ್ದ ಆರೋಪಿ ತನ್ನ ಮನೆಯಲ್ಲಿ ಕೂಡಿ ಹಾಕಿ ಮದುವೆಯಾಗಿದ್ದ. ನಂತರ ಎರಡು ದಿನ ತನ್ನ ಬಳಿಯೇ ಇರಿಸಿಕೊಂಡಿದ್ದ' ಎಂದು ಜಿಲ್ಲಾ ಮಹಿಳಾ ರಕ್ಷಣಾ ದಳ 'ದಿಶಾ' ಡಿಎಸ್‌ಪಿ ಎನ್. ಮುರಳಿ ಕಿಶೋರ್ ತಿಳಿಸಿದ್ದಾರೆ.

'ಆತನಿಂದ ಬಿಡಿಸಿಕೊಂಡು ಹೊರ ಬಂದಿದ್ದ 15 ವರ್ಷದ ಈ ವಿದ್ಯಾರ್ಥಿನಿ ಮನೆಗೆ ಬಂದು ನಡೆದ ವಿಷಯವನ್ನು ಪೋಷಕರಿಗೆ ತಿಳಿಸಿದ್ದಳು. ಪೋಷಕರು ನೀಡಿದ ದೂರಿನ ಮೇರೆಗೆ ಆರೋಪಿ ಸೋಮರಾಜುನನ್ನು ಬಂಧಿಸಿ, ಆತನ ವಿರುದ್ಧ 'ಪೋಕ್ಸೊ' ಸೇರಿ ಇತರೆ ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಭಾರತದ ಅರ್ಜಿ ವಿಚಾರಣೆಗೆ ಒಪ್ಪಿದ ಕತಾರ್ ಕೋರ್ಟ್

ನವದೆಹಲಿ(ಪಿಟಿಐ): ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳಿಗೆ ಮರಣ ದಂಡನೆ ವಿಧಿಸಿರುವುದರ ವಿರುದ್ಧ ಭಾರತ ಸಲ್ಲಿಸಿರುವ ಮೇಲ್ಮನವಿಯನ್ನು ಕತಾರ್ ನ್ಯಾಯಾಲಯ ವಿಚಾರಣೆಗೆ ಸ್ವೀಕರಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಭಾರತ ಸರ್ಕಾರ ಗುರುವಾರ ಅರ್ಜಿ ಸಲ್ಲಿಸಿದ್ದು, ಕತಾರ್ ನ್ಯಾಯಾಲಯವು ಶೀಘ್ರವೇ ಅರ್ಜಿ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ ಎಂದೂ ವರದಿಗಳು ಹೇಳಿವೆ.

ಆದರೆ, ಈ ವಿಚಾರವಾಗಿ ವಿದೇಶಾಂಗ ಸಚಿವಾಲಯದಿಂದ ಯಾವುದೇ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ.

ಕತಾರ್‌ನ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದ ಭಾರತೀಯ ನೌಕಾಪಡೆಯ 8 ಜನ ಮಾಜಿ ಅಧಿಕಾರಿಗಳಿಗೆ ಪ್ರಕರಣವೊಂದರಲ್ಲಿ ಕತಾರ್‌ನ ನ್ಯಾಯಾಲಯ ಅಕ್ಟೋಬರ್ 26ರಂದು ಮರಣ ದಂಡನೆ ವಿಧಿಸಿತ್ತು. ಈ ತೀರ್ಪಿಗೆ ಆಘಾತ ವ್ಯಕ್ತಪಡಿಸಿದ್ದ ಭಾರತ, ಎಂಟು ಜನರ ಭಾರತೀಯರನ್ನು ಶಿಕ್ಷೆಯಿಂದ ಪಾರು ಮಾಡಲು ಕಾನೂನಿನಡಿ ಲಭ್ಯವಿರುವ ಎಲ್ಲ ಆಯ್ಕೆಗಳನ್ನು ಪರಿಗಣಿಸಲಾಗುವುದು ಎಂದು ಹೇಳಿತ್ತು.

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ

"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102, ದೂರವಾಣಿ : (08472) –256767, 239556, 255564, ಫ್ಯಾಕ್ಸ್ : (08472) 227527, E-mail : hkadbgulb@gmail.com, Website : hkrdb.kar.nic.in

ಸಂಖ್ಯೆ: KKRDB/TECH/286/2023-24/Call-2 ದಿನಾಂಕ:24–11–2023

ಅಲ್ಪಾವಧಿ ಟೆಂಡರ ಪ್ರಕಟಣೆ

1) ಕಾಮಗಾರಿಯ ಹೆಸರು: "Supply of Printed Practice Papers for improvements towards 10th Standard Results for the Students", 2) ಲೆಕ್ಕ ಶೀರ್ಷಿಕೆ : KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ : **24.11.2023,** 5) ಕ್ಯಾರೀಸ್ ಸಲ್ಲಿಸುವ ದಿನಾಂಕ : **28.11.2023 ಸಾಯಂಕಾಲ 5.00 ವರೆಗೆ,** 6) ಪ್ರಿ–ಬಿಡ್ ಸಭೆ ದಿನಾಂಕ (online): **29–11–2023 ಬೆಳಿಗ್ಗೆ 11.30ಕ್ಕೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **02–12–2023 ಮಧ್ಯಾಹ್ನ 4.00ರ ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04–12–2023 ಸಾಯಂಕಾಲ 4.30ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: **05–12–2023 ಸಾಯಂಕಾಲ 5.00ಕ್ಕೆ,** 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ.ಮೊತ್ತ: ರೂ. 3,85,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://kppp.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ: https://kppp.karnataka.gov.in, 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://kppp.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/501/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಸಂಖ್ಯೆಃ ಕಾನಿಇಂ/ಲೋಇ/ವಿಬಿ/ಜೆಇ:5/2023–24/2323 ದಿನಾಂಕಃ 22.11.2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ 2023–24 ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳ, ಕನಿಷ್ಠ **ರೂ. 1.00 ಲಕ್ಷಗಳ ಮತ್ತು ಗರಿಷ್ಠ ರೂ. 150.00 ಲಕ್ಷಗಳ** ಮೊತ್ತದ ಲೆಕ್ಕ ಶೀರ್ಷಿಕೆ 3054 ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಡಿಯ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

1) ವರ್ಕ್ ಇಂಡೆಂಟ್ ಸಂಖ್ಯೆ: **PWD/2023-24/BD/RD/OW/WORK_INDENT,** ಸಾಮಾನ್ಯ (05) : WORK_INDENT 5969/call-2, 5963/call-2, 5962/call-2, 5980/call-2, ಮತ್ತು 5460/call-2, ಎಸ.ಟಿ. (01) : WORK_INDENT 5974/call-2

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್ https://kppp.karnataka.gov.in ರಿಂದ ದಾಖಲಾತಿಗಳನ್ನು ದಿನಾಂಕ: 23.11.2023 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 01.12.2023 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.

ವಿಶೇಷ ಸೂಚನೆ : ಯು.ಡಿ.ಐ ನಂಬರ ಹೊಂದಿರುವ ಟರ್ನ ಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ವಾ.ಸಾ.ಸಂ.ಇ/ಬೀದರ/146/ಕೆಎಸ್‌ಎಂಸಿ&ಎ/2023–24

रजिष्ट्री सं.डी.एल – 33004/99 REGD. No. D.L. - 33004/99

भारत का राजपत्र
The Gazette of India

सी.जी.–डी.एल.–अ.– 09062023-246414
CG-DL-E-09062023-246414

असाधारण
EXTRAORDINARY

भाग– II - खण्ड– 3 - उप खण्ड– (ii)
PART II - Section -3 - Sub section (ii)

प्राधिकार से प्रकाशित
PUBLISHED BY AUTHORITY

सं. - 2368] नई दिल्ली, मंगलवार, जून 6, 2023/ज्येष्ठ 16, 1945
No. 2368] NEW DELHI, TUESDAY, JUNE 6, 2023/JYAISHTHA 16, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 6ನೇ ಜೂನ್, 2023

ಎಸ್.ಓ. ನಂ. 2478(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.167 ರಲ್ಲಿ ಕಿ.ಮೀ. 125.626 ರಿಂದ ಕಿ.ಮೀ. 155.800 (ಹಗರಿ – ಜಡಚೆರ್ಲಾ ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ** (ಅಗಲೀಕರಣ, ನಾಲ್ಕು ಪಥ ಇತ್ಯಾದಿ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (1) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು–167, ಪಿ.ಡಬ್ಲ್ಯುಡಿ ಆವರಣ, ಕೆ.ಆರ್. ವೃತ್ತ, ಬೆಂಗಳೂರು–01,** ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆ ರಾಷ್ಟ್ರೀಯ ಹೆದ್ದಾರಿ ನಂ.167 ರಲ್ಲಿ ಕಿ.ಮೀ. 125.626 ರಿಂದ ಕಿ.ಮೀ. 155.800 (ಹಗರಿ – ಜಡಚೆರ್ಲಾ ಸೆಕ್ಷನ್) ರವರೆಗೆ ರಸ್ತೆ ನಿರ್ಮಾಣ, ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ರಾಯಚೂರು

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಹೆಕ್ಟೇರ್‌ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು : ರಾಯಚೂರು					
ಗ್ರಾಮ : ರಾಯಚೂರು					
1	1152	ಖಾಸಗಿ	ಖುಷ್ಕಿ	0.27324	0.27324
2	1153	ಖಾಸಗಿ	ಖುಷ್ಕಿ	0.11571	0.11571
3	1154	ಖಾಸಗಿ	ಖುಷ್ಕಿ	0.04807	0.04807
				ಒಟ್ಟು	**0.43702**

[F. No. RW/NH/12014/25/2015-16(P-6)/3A]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ

ನಂಜನಗೂಡು, ಮೈಸೂರು ಜಿಲ್ಲೆ

ದೂ. : 08221–226245, 223320 E-Mail ID : sstnanjangud@gmail.com

ಸಂಖ್ಯೆ : ಎಸ್‌ಎಸ್‌ಟಿ/ಡಿವಿಪಿ2/ಇ–ಟೆಂಡರ್‌ಲಾಡ್/1/2023–24 ದಿನಾಂಕ : 21–11–2023

ಮರು ಇ–ಟೆಂಡರ್ ಪ್ರಕಟಣೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2023ನೇ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಲಾಡು ಪ್ರಸಾದ ತಯಾರಿಸಿ ಪ್ಯಾಕೆಟ್ಸ್ ಮಾಡಿಕೊಡುವ ಗುತ್ತಿಗೆ ಹಕ್ಕಿನ ಬಗ್ಗೆ ಹಾಗೂ ಲಾಡು ಪ್ರಸಾದವನ್ನು ಪ್ಯಾಕೆಟ್ಸ್ ಮಾಡಲು ಬೇಕಾದ 60 ಜಿ.ಎಸ್.ಎಂ. ಬಟರ್ ಪೇಪರ್ ಕವರ್ಸ್‌ಗಳನ್ನು ಸರಬರಾಜು ಬಗ್ಗೆ, ಹಾಗೂ ದೇವಾಲಯಕ್ಕೆ ಬೇಕಾಗುವ ಪಾಲಿಸ್ಟರ್ ವಲ್ಲಿಗಳನ್ನು ಸರಬರಾಜು ಮಾಡುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಇ–ಟೆಂಡರ್‌ಯಡಿಯಲ್ಲಿ ಮರುಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ (https:kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid/ Qualification Criteria) ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಟೆಂಡರ್‌ನ ವಿವರ	ಟೆಂಡರ್‌ಗೆ ಅಂದಾಜಿಸಲಾದ ಮೊಬಲಗು	ಇ.ಎಂ.ಡಿ. ಮೊತ್ತ
1.	2023 ನೇ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಲಾಡು ಪ್ರಸಾದ ತಯಾರಿಸಿ ಪ್ಯಾಕೆಟ್ಸ್ ಮಾಡಿಕೊಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	ರೂ. 50000=00
2.	2023 ನೇ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಲಾಡು ಪ್ರಸಾದವನ್ನು ಪ್ಯಾಕೆಟ್ಸ್ ಮಾಡಲು ಬೇಕಾದ 60 ಜಿ.ಎಸ್.ಎಂ. ಬಟರ್ ಪೇಪರ್ ಕವರ್ಸ್‌ಗಳನ್ನು ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	ರೂ. 30000=00
3.	2023 ನೇ ಸಾಲಿಗೆ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾಗುವ ಅಳತೆ : 35 * 78 ಬಾರ್ಡರಿನಲ್ಲಿ ಜರಿ ಇರುವ ಪಾಲಿಸ್ಟರ್ ವಲ್ಲಿಗಳನ್ನು ದೇವಾಲಯದ ಇಂಟೆಂಡ್‌ಗೆ ಅನುಗುಣವಾಗಿ ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	ರೂ. 30000=00

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ :	24–11–2023	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	11–12–2023	ಸಂಜೆ 5.00 ಗಂಟೆಯವರೆಗೆ
3.	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	13–12–2023	11.00 A.M.ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ: ಉನಸ:ಬಿ2:ಸಿಆರ್:ಟೆ.ಪ್ರ:2023–24 ದಿನಾಂಕ: 20–11–2023

ಟೆಂಡರು ಪ್ರಕಟಣೆ

2024ರ ಜನವರಿ ಮಾಹೆಯಲ್ಲಿ ನಡೆಯುವ ಪರ್ಯಾಯ ಮಹೋತ್ಸವದ ಅಂಗವಾಗಿ ಉಡುಪಿ ನಗರಸಭಾ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W.-1 & K.W-2ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 04–12–2023 ಸಂಜೆ 5.00 ಗಂಟೆಗೆ.
2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 05–12–2023 ಸಂಜೆ 5.01 ಗಂಟೆಗೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ.	ಟ್ರಾನ್ಸಾಕ್ಷನ್ ಫೀ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1.	ಅಜ್ಜರಕಾಡು ವಾರ್ಡಿನಲ್ಲಿರುವ ಬ್ರಹ್ಮಗಿರಿ ಸರ್ಕಲ್‌ನಿಂದ ಪುರಭವನದವರೆಗೆ ರಸ್ತೆ ಮರು ಡಾಂಬರೀಕರಣ ಹಾಗೂ ರಸ್ತೆಗೆ ಮಾರ್ಕಿಂಗ್ ಮಾಡುವ ಕಾಮಗಾರಿ. DMA/2023-24/RD/WORK_IDENT7253	49,75,000.00	49,750.00	ಇ–ಪೋರ್ಟಲ್ ರಂತೆ	1 ತಿಂಗಳು
2.	ಅಜ್ಜರಕಾಡು ವಾರ್ಡಿನಲ್ಲಿರುವ ಕೆನರಾ ಬ್ಯಾಂಕ್‌ನಿಂದ ನೆಟ್‌ಹಟ್ ಸರ್ಕಲ್‌ವರೆಗೆ ಇಂಟರ್‌ಲಾಕ್ ಅಳವಡಿಸುವುದು ಹಾಗೂ ರಸ್ತೆ ಮರು ಡಾಂಬರೀಕರಣ. DMA/2023-24/RD/WORK_IDENT7254	20,00,000.00	25,000.00	ಇ–ಪೋರ್ಟಲ್ ರಂತೆ	1 ತಿಂಗಳು
3.	ಕಿನ್ನಿಮುಲ್ಕಿ ಸ್ವಾಗತ ಗೋಪುರ ಮತ್ತು ಕಛೇರಿಗೆ ಬಣ್ಣ ಬಳಿಯುವುದು. DMA/2023-24/OW/WORK_IDENT7255	10,00,000.00	25,000.00	ಇ–ಪೋರ್ಟಲ್ ರಂತೆ	1 ತಿಂಗಳು
4.	ಉಡುಪಿ ನಗರಸಭಾ ವ್ಯಾಪ್ತಿಯಲ್ಲಿರುವ ರಸ್ತೆಗುಂಡಿಗಳಿಗೆ ಪ್ಯಾಚ್ ವರ್ಕ್ ಮಾಡುವ ಕಾಮಗಾರಿ. DMA/2023-24/OW/WORK_IDENT7256	25,00,000.00	50,000.00	ಇ–ಪೋರ್ಟಲ್ ರಂತೆ	1 ತಿಂಗಳು
5.	ಉಡುಪಿ ನಗರಸಭಾ ವ್ಯಾಪ್ತಿಯಲ್ಲಿರುವ ತುಂಡಾದ ಕಾಂಕ್ರೀಟ್ ಸ್ಲ್ಯಾಬ್ ಮರು ರಚಿಸಿ ಅಳವಡಿಸುವುದು. DMA/2023-24/OW/WORK_IDENT7257	20,00,000.00	50,000.00	ಇ–ಪೋರ್ಟಲ್ ರಂತೆ	1 ತಿಂಗಳು
6.	ಉಡುಪಿ ನಗರಸಭಾ ವ್ಯಾಪ್ತಿಯ ಕಾಂಕ್ರೀಟ್ ರಸ್ತೆಯ Joint ಗಳಿಗೆ Asphalt ತುಂಬುವ ಕಾಮಗಾರಿ. DMA/2023-24/OW/WORK_IDENT7258	2,00,000.00	5,000.00	ಇ–ಪೋರ್ಟಲ್ ರಂತೆ	1 ತಿಂಗಳು
7.	ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಪಾದಾಚಾರಿ ಮಾರ್ಗಕ್ಕೆ ಮತ್ತು ರಸ್ತೆ ವಿಭಾಜಗಕ್ಕೆ ಪೈಂಟ್ ಬಳಿಯುವುದು ಮತ್ತು ರಿಫ್ಲೆಕ್ಟರ್ ಅಳವಡಿಸುವುದು. DMA/2023-24/OW/WORK_IDENT7259	25,00,000.00	50,000.00	ಇ–ಪೋರ್ಟಲ್ ರಂತೆ	1 ತಿಂಗಳು
8.	ಕುಂಜಿಬೆಟ್ಟು ವಾರ್ಡಿನಲ್ಲಿರುವ ಕಟ್ಟೆ ಆಚಾರ್ಯ ರಸ್ತೆಗೆ ಮರು ಡಾಂಬರೀಕರಣ. DMA/2023-24/OW/WORK_IDENT7260	19,00,000.00	47,500.00	ಇ–ಪೋರ್ಟಲ್ ರಂತೆ	1 ತಿಂಗಳು
9.	ಉಡುಪಿ ನಗರಸಭಾ ವ್ಯಾಪ್ತಿಯ ತೆಂಕಪೇಟೆ ವಾರ್ಡಿನ ಬಿ.ಎಸ್.ಎನ್.ಎಲ್. ಆಫೀಸ್ ಎದುರುಗಡೆ ಮೋರಿ ರಚನೆ ಮಾಡುವುದು. DMA/2023-24/OW/WORK_IDENT7262	4,00,000.00	10,000.00	ಇ–ಪೋರ್ಟಲ್ ರಂತೆ	1 ತಿಂಗಳು
10.	ಕಿನ್ನಿಮುಲ್ಕಿ ವಾರ್ಡಿನಲ್ಲಿರುವ ಬಿಗ್ ಬಜಾರ್ ಎದುರು ರಸ್ತೆ ಮರು ಡಾಂಬರೀಕರಣ. DMA/2023-24/RD/WORK_IDENT7263	15,00,000.00	18,750.00	ಇ–ಪೋರ್ಟಲ್ ರಂತೆ	1 ತಿಂಗಳು
11.	ಉಡುಪಿ ನಗರಸಭಾ ವ್ಯಾಪ್ತಿಯ ಸಂಸ್ಕೃತ ಕಾಲೇಜ್‌ನ ಎದುರು ಚರಂಡಿ ರಚಿಸಿ ಸ್ಲ್ಯಾಬ್ ಅಳವಡಿಸುವುದು. DMA/2023-24/OW/WORK_IDENT7264	22,00,000.00	44,000.00	ಇ–ಪೋರ್ಟಲ್ ರಂತೆ	1 ತಿಂಗಳು
12.	ಉಡುಪಿ ನಗರಸಭಾ ವ್ಯಾಪ್ತಿಯ ತೆಂಕಪೇಟೆ ವಾರ್ಡಿನ ವಿದ್ಯಾಸಮುದ್ರ ಮಾರ್ಗದಲ್ಲಿ ಚರಂಡಿ ರಚಿಸಿ ಅಯ್ದ ಭಾಗ ಸ್ಲ್ಯಾಬ್ ಅಳವಡಿಸಿ ಮರು ಡಾಂಬರೀಕರಣ. DMA/2023-24/OW/WORK_IDENT7265	28,00,000.00	56,000.00	ಇ–ಪೋರ್ಟಲ್ ರಂತೆ	1 ತಿಂಗಳು
13.	ಉಡುಪಿ ನಗರಸಭಾ ವ್ಯಾಪ್ತಿಯ SVC ಬ್ಯಾಂಕ್‌ನ ಎದುರು ಮೋರಿ ರಚನೆ ಮಾಡುವುದು. DMA/2023-24/OW/WORK_IDENT7267	4,25,000.00	10,625.00	ಇ–ಪೋರ್ಟಲ್ ರಂತೆ	1 ತಿಂಗಳು
14.	ಬೀಡಿನಗುಡ್ಡೆ ಜಂಕ್ಷನ್‌ನ ಹತ್ತಿರದಿಂದ ಚಿಟ್ಪಾಡಿ ಜಂಕ್ಷನ್ ವರೆಗೆ ರಸ್ತೆ ಡಾಂಬರೀಕರಣ ಹಾಗೂ ಚರಂಡಿ ಮಾಡುವ ಕಾಮಗಾರಿ. DMA/2023-24/OW/WORK_IDENT7269	40,60,000.00	81,200.00	ಇ–ಪೋರ್ಟಲ್ ರಂತೆ	1 ತಿಂಗಳು
15.	ಬೈಲೂರು ವಾರ್ಡಿನ ಅಮ್ಮಣ್ಣಿ ರಾಮಣ್ಣ ಹಾಲ್‌ನ ಎದುರಿನ ರಸ್ತೆ ಅಗಲೀಕರಣಗೊಳಿಸಿ ರಸ್ತೆ ಡಾಂಬರೀಕರಣ. DMA/2023-24/RD/WORK_IDENT7271	20,00,000.00	25,000.00	ಇ–ಪೋರ್ಟಲ್ ರಂತೆ	1 ತಿಂಗಳು
16.	ಉಡುಪಿ ನಗರಸಭಾ ವ್ಯಾಪ್ತಿಯ ಶಿರಿಬೀಡು ವಾರ್ಡಿನ ಕಿದಿಯೂರು ಹೋಟೆಲ್ ಪಕ್ಕದ ರಸ್ತೆ ಮರುಡಾಂಬರೀಕರಣ. DMA/2023-24/RD/WORK_IDENT7273	7,00,000.00	8,750.00	ಇ–ಪೋರ್ಟಲ್ ರಂತೆ	1 ತಿಂಗಳು
17.	ಉಡುಪಿ ನಗರಸಭಾ ವ್ಯಾಪ್ತಿಯ ಒಳಕಾಡು ವಾರ್ಡಿನ ಬೀಡಿನಗುಡ್ಡೆ ರಸ್ತೆ, ಮರುಡಾಂಬರೀಕರಣ. DMA/2023-24/RD/WORK_IDENT7274	14,00,000.00	17,500.00	ಇ–ಪೋರ್ಟಲ್ ರಂತೆ	1 ತಿಂಗಳು
18.	ಬೈಲೂರು ವಾರ್ಡಿನ ಶಾರದಾಂಬ ದ್ವಾರದಿಂದ ಭುಜಂಗರಾವ್ ರಸ್ತೆ, ಆಗಿ ಹಳೇ ಸ್ಟೇಟ್ ಬ್ಯಾಂಕ್‌ವರೆಗೆ ರಸ್ತೆ, ಅಗಲೀಕರಣಗೊಳಿಸಿ ರಸ್ತೆ ಡಾಂಬರೀಕರಣ. DMA/2023-24/RD/WORK_IDENT7276	34,00,000.00	68,000.00	ಇ–ಪೋರ್ಟಲ್ ರಂತೆ	1 ತಿಂಗಳು

ಹೆಚ್ಚಿನ ವಿವರಗಳನ್ನುಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು. ಕ್ರ. ಸಂ. (1) & (15)ರ ಕಾಮಗಾರಿ ಪರಿಶಿಷ್ಠ ಪಂಗಡ & ಕ್ರ. ಸಂ. (2) (10) (16) & (17)ರ ಕಾಮಗಾರಿಗಳು ಪರಿಶಿಷ್ಟ ಜಾತಿಗೆ ಮೀಸಲಿರಿಸಲಾಗಿರುತ್ತದೆ.

ಸಹಿ/– ಪೌರಾಯುಕ್ತರು
ಉಡುಪಿ ನಗರಸಭೆ

ನವೆಂಬರ್ 25ರಂದು 'ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನ' ಆಚರಿಸಲಾಗುತ್ತಿದೆ. ಇದು ಲಿಂಗಾಧಾರಿತ ದೌರ್ಜನ್ಯವನ್ನು ವಿರೋಧಿಸಲು ಇರುವ ನೆಪವಷ್ಟೆ. ಸೂಕ್ಷ್ಮಸಂವೇದಿಯಾದ ಹೆಣ್ಣುಮಕ್ಕಳು ದೌರ್ಜನ್ಯವನ್ನು ಸಹಿಸದೆ ಅದನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಅರಿತಾಗ ಆಚರಣೆಗೆ ಅರ್ಥ ಬರುತ್ತದೆ.



ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿ



ಲತಾ ಹೆಗಡೆ

ಹೆಣ್ಣು ವಿದ್ಯಾವಂತಳಾಗಿ, ಆರ್ಥಿಕವಾಗಿ ಸಬಲೆಯಾದರೂ ಭಾವನಾತ್ಮಕವಾಗಿ ಆಕೆಯ ಸ್ಪಂದಿಸುವಿಕೆಯನ್ನು ದುರುಪಯೋಗ ಪಡಿಸಿಕೊಳ್ಳುವುದೇ ಹೆಚ್ಚು. ಅಪರಿಚಿತರಿಗಿಂತಲೂ ಹೆತ್ತವರಿಂದ, ಒಡಹುಟ್ಟಿದವರಿಂದ, ಕಟ್ಟಿಕೊಂಡವನಿಂದ, ಆಪ್ತರಿಂದ ಕಡೆಗೆ ಮಕ್ಕಳಿಂದಲೂ ಆಕೆ ಶೋಷಣೆ ಅಥವಾ ದೌರ್ಜನ್ಯಕ್ಕೊಳಗಾಗುವುದು ಸಾಮಾನ್ಯ. ಮಹಿಳೆಯ ಮೇಲಿನ ಈ ದೌರ್ಜನ್ಯಕ್ಕೆ ಮಾನದಂಡವಿಲ್ಲ.

ಸಾಮಾನ್ಯವಾಗಿ ಅವಿದ್ಯಾವಂತರಲ್ಲಿ, ಬಡವರಲ್ಲಿ, ಕೆಳ ಕಾರ್ಮಿಕ ವರ್ಗಗಳಲ್ಲಿ ಬೈಗುಳದ ಜೊತೆಗೆ ಹೊಡೆತ ಬಡಿತದಂತಹ ದೈಹಿಕ ದೌರ್ಜನ್ಯ ಹೆಚ್ಚು. ಕುಡಿತದ ಚಟವಿರುವ ಮನೆಗಳಲ್ಲಂತೂ ಬಲಿಪಶುಗಳು ಸದಾ ಹೆಂಗಸರೇ. ಆದರೆ, ಶಾರೀರಿಕವಾಗಿ ಹಿಂಸಿಸುವ ದೌರ್ಜನ್ಯಗಳಿಗಿಂತಲೂ ಭಾವನಾತ್ಮಕ ದೌರ್ಜನ್ಯದ ತೀವ್ರತೆ ಮಹಿಳೆಯನ್ನು ಜರ್ಜರಿತಳನ್ನಾಗಿಸಿ ಮಾನಸಿಕವಾಗಿ ಕುಗ್ಗಿಸಿ ಖಿನ್ನತೆ, ಆತಂಕ, ಭಯಗಳೆಡೆಗೆ ನೂಕಿ ಮೂಕವಾಗಿಸುತ್ತವೆ. ಈ ದೌರ್ಜನ್ಯ ವಿದ್ಯಾವಂತರೆನ್ನಿಸಿಕೊಂಡ ಸುಸಂಸ್ಕೃತರಲ್ಲಿ, ಮಧ್ಯಮ ಹಾಗೂ ಮೇಲ್ವರ್ಗದವರಲ್ಲಿಯೇ ಹೆಚ್ಚು. ವಿದ್ಯಾವಂತ ಹೆಣ್ಣು ಸ್ವಭಾವತಃ ಸೂಕ್ಷ್ಮ ಸಂವೇದಿಯಾದ ಕಾರಣ ಮರ್ಯಾದೆಗೆ ಅಂಜಿ, ಅವುಡುಗಚ್ಚಿ ಸಹಿಸಿಕೊಳ್ಳಲೇಬೇಕಾದ ಪರಿಸ್ಥಿತಿಗೆ ಅನಿವಾರ್ಯವಾಗಿ ಹೊಂದಿಕೊಳ್ಳುತ್ತಾಳೆ.

ಈ ದೌರ್ಜನ್ಯಗಳನ್ನು ಶಾರೀರಿಕ, ಲೈಂಗಿಕ, ಮಾನಸಿಕ, ಭಾವನಾತ್ಮಕ, ಸಾಂಪ್ರದಾಯಿಕ ದೌರ್ಜನ್ಯಗಳಾಗಿ ವಿಂಗಡಿಸಬಹುದು. ಹೆಣ್ಣಿನ ಇಷ್ಟಾನಿಷ್ಟಗಳಿಗೆ ಬೆಲೆಕೊಡದೇ ಆಕೆಯ ಮೇಲೆ ಕಟ್ಟುಪಾಡುಗಳನ್ನು ಹೇರುವುದು; ಸಂಶಯಿಸುವುದು; ಕಟುವಾಗಿ ಟೀಕಿಸುವುದು; ಅವಹೇಳನ ಮಾಡುತ್ತಾ ಹೀಗಳೆಯುವುದು; ಅಶ್ಲೀಲ ಪದ ಬಳಕೆ; ಅಸಹ್ಯ ಹಾವಭಾವ; ಕಿರಿಕಿರಿಗೊಳಿಸುವ ಮೆಸೇಜುಗಳ ಮೂಲಕ ಲೈಂಗಿಕವಾಗಿ ಶೋಷಿಸುವುದು; ಆಕೆಯ ಅವಶ್ಯಕತೆಗಳನ್ನು ಕಡೆಗಣಿಸಿ ಆರ್ಥಿಕವಾಗಿಯೂ ಆಕೆಯನ್ನು ಅತಿಯಾಗಿ ಮಿತಿಗೊಳಿಸುವುದು; ಅಭಿಪ್ರಾಯಗಳನ್ನು ಆಕೆಯ ಮೇಲೆ ಬಲವಂತವಾಗಿ ಹೇರುವುದು; ಕೆಲಸಕ್ಕೆ ಸೇರುವ ಅಥವಾ ಹೋಗುವ ಅವಕಾಶಕ್ಕೆ ವಿರೋಧ ತೋರುವುದು; ಆಕೆಯ ಆಪ್ತರು, ಕುಟುಂಬವರ್ಗದವರೊಡನೆ ಬೆರೆಯದಂತೆ ನಿರ್ಬಂಧಿಸುವುದು; ಹೊಡೆತ-ಬಡಿತ- ಜರೆತದಿಂದಲೋ ಅಥವಾ ಇವ್ಯಾವುದೂ ಇಲ್ಲದೇ ಆಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಮೌನವಹಿಸಿ ಕಡೆಗಣಿಸುವುದೂ ಕೂಡ ಭಾವನಾತ್ಮಕ ದೌರ್ಜನ್ಯದ ಒಂದು ಮುಖವೆನ್ನಬಹುದು. ಉಡುಗೆ ತೊಡುಗೆ, ನಿಲುವು, ಬಣ್ಣ, ಹಾವಭಾವ ಮುಂತಾದರ ಕುರಿತು ಬಾಡಿ ಶೇಮಿಂಗ್ ಮಾಡುತ್ತಾ ಸದಾ ಟೀಕಿಸುತ್ತಿದ್ದರೆ ಆತ್ಮವಿಶ್ವಾಸವೇ ಕುಗ್ಗಿ ಕೀಳರಿಮೆಯಿಂದ ನರಳುವುದರ ಜೊತೆಗೆ ಸ್ವಂತಿಕೆಯ ವ್ಯಕ್ತಿತ್ವ ಖಂಡಿತವಾಗಿಯೂ ಧಕ್ಕೆಗೊಳ್ಳುತ್ತದೆ. ಇನ್ನು ಕೆಲ ದಿಟ್ಟ ಮಹಿಳೆಯರು ಬೇಡದ ಸಂಬಂಧಗಳಿಂದ ಹೊರಬಂದು ಸ್ವತಂತ್ರ ಜೀವನ ಕಟ್ಟಿಕೊಳ್ಳುವ ಯತ್ನದಲ್ಲಿದ್ದಾಗಲೋ ಅಥವಾ ನಂತರದ ಸ್ವಾವಲಂಬಿ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ಯಾವುದೋ ಒಂದು ರೀತಿಯಲ್ಲಿ ದೌರ್ಜನ್ಯಕ್ಕೆ ಒಳಗಾಗುವುದು ಕಟುವಾಸ್ತವವೇ ಹೌದು. ಕಚೇರಿಗಳಲ್ಲಿ, ಸಮಾಜದಲ್ಲಿ, ಮನೆಯಲ್ಲಿ ಆಕೆಯ ಬುದ್ಧಿಮತ್ತೆಯನ್ನು; ತನಗಿಂತಲೂ ಮೇಲೇರುವಿಕೆಯನ್ನು ಸುಲಭದಲ್ಲಿ ಒಪ್ಪಿಕೊಳ್ಳದ ಪುರುಷ ಪ್ರಧಾನ ವ್ಯವಸ್ಥೆ, ಯಾವುದಾದರೂ ಒಂದು ನೆಪದಲ್ಲಿ ಆತ್ಮಸ್ಥೈರ್ಯ ಕುಗ್ಗಿಸುವ ಹೀನ ಕೃತ್ಯಗಳಲ್ಲಿ ತೊಡಗುವುದು ದೌರ್ಜನ್ಯದ ಪರಮಾವಧಿಯೇ ಸರಿ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮನೆಯ ಮಗಳನ್ನೋ, ಅಕ್ಕ ತಂಗಿಯರನ್ನೋ ನಯವಾಗಿ ವಂಚಿಸಿ ಹತ್ಯೆಗೈಯುವ ಹೀನಾತಿಹೀನ ದೌರ್ಜನ್ಯವೆಂದರೆ ಅದು ಮರ್ಯಾದೆಗೇಡು ಹತ್ಯೆ! ಜಾತಿ, ಧರ್ಮವೆಂದು ಬಡಿದಾಡುವ ಧರ್ಮಾಂಧರೇ ಈ ಭೀಭತ್ಸ ಕೃತ್ಯಕ್ಕೆ ಸೂತ್ರಧಾರಿ.

ಹೆಣ್ಣು ತಾನು ದೌರ್ಜನ್ಯಕ್ಕೀಡಾದಾಗ ಅದರ ಪರಿಣಾಮವನ್ನು ಅಸಹಾಯಕ ಮಕ್ಕಳ ಮೇಲೆ ತೋರಿಸುವುದು; ನಂತರದಲ್ಲಿ ಅವೂ ಕೂಡ ಹಿಂಸಾತ್ಮಕ ಪ್ರವೃತ್ತಿಯನ್ನು ಬೆಳೆಸಿಕೊಂಡು ಸಮಾಜಘಾತಕ ಕಾರ್ಯಗಳಲ್ಲಿ ತೊಡಗಿಕೊಳ್ಳುವುದು... ಹೀಗೆ ದೌರ್ಜನ್ಯವೆಂಬ ವಿಷವರ್ತುಲದ ಸುಳಿ ಆಳವಾಗುತ್ತಲೇ ಹೋಗುತ್ತದೆ. ಮಹಿಳೆಯರು ಮೌನವಹಿಸಿ ಸಹಿಸಿಕೊಂಡು ಕಾಲಕ್ರಮೇಣ ದೌರ್ಜನ್ಯವೂ ನಿಲ್ಲುತ್ತದೆ ಎಂಬ ತಪ್ಪು ತಿಳಿವಳಿಕೆಯಿಂದ ಹೊರಬರಲೇಬೇಕಿದೆ ಮತ್ತು ದೌರ್ಜನ್ಯವನ್ನು ವಿರೋಧಿಸುವ ಮೂಲಕ ಎಚ್ಚೆತ್ತುಕೊಳ್ಳಬೇಕಿದೆ. ಹಾಗಲ್ಲದೇ ಮೌನವಾಗಿ ಸಹಿಸಿಕೊಂಡರೆ ದೌರ್ಜನ್ಯ ದೌರ್ಜನ್ಯವನ್ನೇ ಹುಟ್ಟು ಹಾಕುತ್ತದೆ.

ತನಗಾದ ಶೋಷಣೆ, ಅನ್ಯಾಯವನ್ನು ಮರೆಯಲು ಅಥವಾ ಎದುರಿಸಲು ಮಾದಕ ದ್ರವ್ಯ, ಧೂಮಪಾನ, ಮದಿರೆಯಂತಹ ವ್ಯಸನಗಳ ಮೊರೆಹೋಗುವುದು ಖಂಡಿತ ಸಲ್ಲದು. ಕಾನೂನನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ ಶ್ರಮಿಸಬೇಕು; ತನಗಾಗಿಯೇ ಸ್ವಲ್ಪ ಸಮಯವನ್ನು ಮೀಸಲಿಡಬೇಕು; ಇಷ್ಟವಾದ ಹವ್ಯಾಸದಲ್ಲಿ ತೊಡಗಿಕೊಂಡಲ್ಲಿ ಸಂಕೀರ್ಣ ಮನೋಭಾವದಿಂದ ಮುಕ್ತರಾಗಬಹುದು; ಆಸ್ಪದವಿದ್ದಲ್ಲಿ ಆರ್ಥಿಕವಾಗಿ ಸ್ವಾವಲಂಬಿಯಾಗುವುದು ಒಳ್ಳೆಯದು. ಸೂಕ್ಷ್ಮ ಸಂವೇದಿಯಾಗದೇ 'ಇಲ್ಲ' 'ಬೇಡ' 'ಇಷ್ಟವಿಲ್ಲ' ಎಂಬಂತಹ ಸರಳ ಪದಗಳ ಪ್ರಯೋಗವನ್ನು ಸಕಾಲಕ್ಕೆ ನಿಸ್ಸಂಕೋಚದಿಂದ ಮಾಡುವುದನ್ನು ರೂಢಿಸಿಕೊಳ್ಳಬೇಕು. ಹಾಗೆಂದು ದೌರ್ಜನ್ಯದ ಹಣೆಪಟ್ಟಿ ಅಂಟಿಸಿ ಕಾನೂನಿನ ಸವಲತ್ತು, ಕಲಿತ ವಿದ್ಯೆ, ಹಣವನ್ನು ದುರುಪಯೋಗಪಡಿಸಿಕೊಂಡಲ್ಲಿ ನಷ್ಟ ಯಾರಿಗೆ? ನಾನು ಹೆಣ್ಣು, ನನಗೇನು ಮಾಡಿದರೂ ಅಂದರೂ ಅಪಾರ್ಥವನ್ನೇ ಕಲ್ಪಿಸಿಕೊಂಡು ದೌರ್ಜನ್ಯವೆಂದು ಬೊಬ್ಬಿಡುತ್ತಾ ಸಿಡಿದೆದ್ದಲ್ಲಿ ಸುಂದರ ಜೀವನವನ್ನು ಕೈಯಾರೇ ಹಾಳುಮಾಡಿಕೊಳ್ಳುವುದಲ್ಲದೇ ಅಪಹಾಸ್ಯಕ್ಕೀಡಾಗುವುದು ಖಂಡಿತ.

ಇನ್ನು ವಿಶ್ವಸಂಸ್ಥೆಯಿಂದ 1999ರ ನವೆಂಬರ್ 25ರಂದು ಪ್ರಾರಂಭಿಸಲಾದ ಈ ಆಚರಣೆ ಬರೀ ಒಂದು ದಿನದ ಘೋಷಣೆಗಳಿಗೆ ಮಾತ್ರ ಸೀಮಿತಗೊಳ್ಳದೆ ಹೆಣ್ಣಿನಲ್ಲಿ ಜಾಗೃತಿ ಮೂಡಿಸುವಂತಿರಬೇಕು.

ಶೋಷಣೆ, ದೌರ್ಜನ್ಯದ ಕುರಿತಾಗಿ ಅರಿವು ಮೂಡಿಸಿ ಸಂದರ್ಭ ಬಂದಾಗ ಹೇಗೆ ಪ್ರತಿಕ್ರಿಯಿಸಬೇಕು, ಹೇಗೆ ನಿಭಾಯಿಸಬೇಕೆಂಬುದರ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಶ್ರಮಿಸಿದಾಗ ಮಾತ್ರ ಅದಕ್ಕೊಂದು ಅರ್ಥ, ಆಚರಣೆಯೂ ಸಾರ್ಥಕ.

ನಿಲ್ಲದ ದೌರ್ಜನ್ಯ

ಮಂಜುಳಾ ಮುನವಳ್ಳಿ

2005ರ ಪೂರ್ವದಲ್ಲಿ ಭಾರತೀಯ ಕಾನೂನಿನಲ್ಲಿ ಕೌಟುಂಬಿಕ ದೌರ್ಜನ್ಯದ ವ್ಯಾಖ್ಯಾನದ ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆಯು (National Crime Record's Bureo) 2016ನೇ ಇಸವಿಯ ಪ್ರಕಾರ ಭಾರತದಲ್ಲಿ ಪ್ರತಿ ಮೂರು ನಿಮಿಷಗಳಿಗೊಂದು ಹೆಣ್ಣಿನ ಮೇಲೆ ಅಪರಾಧ ಎಸಗಲಾಗುತ್ತದೆ. ಪ್ರತಿ 77 ನಿಮಿಷಗಳಿಗೆ ಒಬ್ಬ ಮಹಿಳೆ ಹಿಂಸೆಯಿಂದ ಸಾಯುತ್ತಿದ್ದಾಳೆ. ಮದುವೆಯಾದ 100ರಷ್ಟು ಮಹಿಳೆಯರಲ್ಲಿ 20ರಷ್ಟು ಮಹಿಳೆಯರು ದಿನನಿತ್ಯ ಗಂಡನಿಂದ ಅಥವಾ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಿದ್ದಾರೆ. ಪ್ರತಿ ಆರು ಗಂಟೆಗೊಮ್ಮೆ ಒಬ್ಬ ವಿವಾಹಿತ ಮಹಿಳೆಯನ್ನು ಜೀವಂತವಾಗಿ ಸುಡಲಾಗುತ್ತಿದೆ ಅಥವಾ ಹೊಡೆದು ಸಾಯಿಸಲಾಗುತ್ತಿದೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರೇರೇಪಿಸಲಾಗುತ್ತೆ. ಪ್ರತಿ 9 ನಿಮಿಷಕ್ಕೊಂದು ಕೌಟುಂಬಿಕ ದೌರ್ಜನ್ಯ ಮಹಿಳೆಯ ಮೇಲೆ ಎಸಗಲಾಗುತ್ತಿದೆ.

ದೌರ್ಜನ್ಯಗಳು ಕಡಿಮೆಯಾದಂತೆ ಕಂಡರೂ ದೌರ್ಜನ್ಯದ ರೂಪಗಳು ಬದಲಾಗಿದೆ. ಹೆಣ್ಣುಮಕ್ಕಳು ಹೇಳಿಕೊಂಡ ಸಂಕಟಗಳಿಗಿಂತ ಹೇಳಿಕೊಳ್ಳಲಾರದ ಸಂಕಟಗಳು ಹೆಚ್ಚುತ್ತಿವೆ. ಭಾರತ ಸರ್ಕಾರ 2005ರಲ್ಲಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾನೂನನ್ನು ಜಾರಿಗೆ ತಂದರು.

ನೊಂದ ಮಹಿಳೆಯರಿಗೆ ಸೂಕ್ತ ಪರಿಹಾರವನ್ನು ಒದಗಿಸುವ ದಿಕ್ಕಿನಲ್ಲಿ ರೂಪುಗೊಂಡ ಸದರಿ ಕಾನೂನು ಪರಿಣಾಮಕಾರಿಯಾಗಿ ಜಾರಿಯಾಗಲು ಅನೇಕ ತೊಡರುಗಳಿವೆ. ಈ ಕಾನೂನಿನ ಮೂಲ ಆಶಯ ಮಹಿಳೆಯ ಎಲ್ಲ ಪರಿಹಾರ ಹಿಂಸೆಯಿಂದ ಮುಕ್ತವಾಗಿ ಸ್ವಾಭಿಮಾನಪೂರ್ವಕವಾದ ಬದುಕನ್ನು ತಮ್ಮದಾಗಿಸಿಕೊಳ್ಳಬೇಕು ಮತ್ತು ದೈಹಿಕ, ಮಾನಸಿಕ, ಲೈಂಗಿಕ, ಭಾವನಾತ್ಮಕ ಹಾಗೂ ಆರ್ಥಿಕ ಹಿಂಸೆಗಳ ವಿರುದ್ಧ ಸದರಿ ಕಾಯಿದೆಯ ಮಹಿಳೆಯರಿಗೆ ರಕ್ಷಣೆ ನೀಡಬೇಕೆಂಬುದು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂಕಷ್ಟಕ್ಕಿರುವ ಕಾನೂನಿನ ಆಶಯವಾಗಿದೆ. ಈ ಕಾನೂನಿನಡಿಯಲ್ಲಿ ದೈಹಿಕ, ಮಾನಸಿಕ, ಲೈಂಗಿಕ ಭಾವನಾತ್ಮಕ ಹಾಗೂ ಆರ್ಥಿಕ ಹಿಂಸೆಗಳನ್ನು ಗಂಭೀರ ಅಪರಾಧಗಳೆಂದು ಪರಿಗಣಿಸಲಾಗಿದೆ.

ಕೌಟುಂಬಿಕ ದೌರ್ಜನ್ಯವನ್ನು ಕೇವಲ ಕಾನೂನಿನ ಸಮರ ಮಾತ್ರವಲ್ಲದೆ ಇದು ಸಾಮಾಜಿಕ ಸಮಸ್ಯೆಯಾಗಿ ಪರಿಗಣಿಸಲಾಗಿದೆ.

ಕೌಟುಂಬಿಕ ದೌರ್ಜನ್ಯ ಕಾಯ್ದೆಯಿದೆ. ಕೇವಲ ಗಂಡ, ಅತ್ತೆ, ಮಾವ, ಅವರವರಲ್ಲದೇ ಒಂದೇ ಸೂರಿನಡಿಯಲ್ಲಿ ವಾಸಿಸುತ್ತಿರುವ ಯಾವುದೋ ವ್ಯಕ್ತಿಯಿಂದ ಮಹಿಳೆ ಹಿಂಸೆಯನ್ನು ಅನುಭವಿಸುತ್ತಿದ್ದರೆ ಇದು ಈ ಕಾನೂನಿನಡಿಯಲ್ಲಿ ಹಿಡಿದಿಟ್ಟುಕೊಂಡಿದೆ. ಈ ಕಾಯ್ದೆಯ ಸಂರಕ್ಷಣಾ ಅಧಿಕಾರಿಗಳಿಂದ ಬಾಧಿತ ಮಹಿಳೆ ಸಹಾಯವನ್ನು ಕೋರಬಹುದು, ನ್ಯಾಯಾಲಯದಿಂದ ಹಣಕಾಸಿನ ಪರಿಹಾರದ ಆಯ್ಕೆಯು ಅವಳಿಗಿದೆ. ಮಕ್ಕಳನ್ನು ತನ್ನ ಹಾರೈಕೆಗೆ ಕೇಳುವ ಅವಕಾಶವು ಮಹಿಳೆಗಿದೆ. ಈ ಎಲ್ಲ ರೀತಿಯ ಹಕ್ಕು ಮತ್ತು ಅವಕಾಶಗಳು ಈ ಕಾನೂನಿನಡಿಯಲ್ಲಿ ಮಹಿಳೆಗೆ ದೊರಕುತ್ತವೆ.

ಅವಕಾಶಗಳನ್ನು ಬಳಸಿಕೊಳ್ಳುವ ಸುಗಮ ದಾರಿ, ತಿಳಿವಳಿಕೆ, ಇವೆಲ್ಲವನ್ನು ನಮ್ಮ ಪ್ರಜ್ಞಾವಂತ ವ್ಯವಸ್ಥೆ ಗೌರವಯುತವಾಗಿ ಒದಗಿಸಬೇಕು.

ವಕೀಲರು, ಹೈಕೋರ್ಟ್

ದೇವನೊಪ್ಪದ ದಾಸ್ಯ

ಸಂಧ್ಯಾ ಹೆಗಡೆ

'ಬಳಿಗೆ ಬಂದವನು ತನ್ನ ವಾಂಛೆ ತೀರಿದ ಮೇಲೆ ಮತ್ ಈ ಕಡೆ ಬರಾಂಗಿಲ್ರಿ. ಹೆಂಗ್ ಮುಖ ಹೊತ್ಕೊಂಡ್ ಅಡ್ಡಾಡ್ಲಿ. ಮಕ್ಕಳು ಸಾಲಿಗ್ ಹೋಗ್ತೀನಿ ಅಂತಾವ, ಕಳಸಾಕ ಆಗ್ಬೇಕಲ್ರಿ. ಕೈಯ್ಯಾಗ ರೊಕ್ಕಿಲ್ಲ. ಹೊಟ್ಟಿಗೆ ಹಿಟ್ಟಿಲ್ಲ...' ಹೀಗೆ ದೇವದಾಸಿ ಹೇಳುವಾಗ ಮೂಕಿಯಾಗಿದ್ದೆ. ವಿಜಯಪುರ, ಕೊಪ್ಪಳ ಜಿಲ್ಲೆಗಳ ಹಳ್ಳಿಗಳಿಗೆ ಓಡಾಡಿ ಬರುವಷ್ಟರಲ್ಲಿ ಇಂತಹ ನೋವಿನ ಗೊಂಚಲುಗಳು ನನ್ನ ಒಡಲನ್ನು ಭಾರವಾಗಿಸಿದ್ದವು...

'ಗಾಡ್ಸ್ ವೈವ್ಸ್ ಮೆನ್ಸ್ ಸ್ಲೇವ್ಸ್' (ದೇವರ ಸತಿ, ಮನುಷ್ಯರ ದಾಸಿ) ಸಾಕ್ಷ್ಯಚಿತ್ರ ರೂಪಿಸಿರುವ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಪ್ರಾಧ್ಯಾಪಕಿ ಪೂರ್ಣಿಮಾ ರವಿ ಅವರು 'ದೇವರ ಪತ್ನಿ'ಯರನ್ನು ಭೇಟಿ ಮಾಡಿದ ತಮ್ಮ ಅನುಭವಗಳನ್ನು ಹೇಳುತ್ತಿದ್ದರೆ, ಕೇಳುವ ತಾಯ್ಗರುಳು ಸಂಕಟಪಡದೆ ಇರಲಾರದು.

'Representations of the Devadasi Tradition in Select Indian English Narratives' ವಿಷಯದ ಮೇಲೆ ಪಿಎಚ್.ಡಿ ಮಾಡುತ್ತಿರುವ ಪೂರ್ಣಿಮಾ, ದೇವದಾಸಿ ವಿಮೋಚನಾ ಸಂಘದ ಸಹಕಾರದೊಂದಿಗೆ ಉತ್ತರ ಕರ್ನಾಟಕದ ವಿವಿಧ ಹಳ್ಳಿಗಳಿಗೆ ಭೇಟಿ ನೀಡಿ, 100ಕ್ಕೂ ಹೆಚ್ಚು ದೇವದಾಸಿಯರ ಜೊತೆ ಒಂದಿಷ್ಟು ಸಮಯ ಕಳೆದಿದ್ದಾರೆ. ಶುರುವಿನಲ್ಲಿ ಮೌನಕ್ಕೆ ಶರಣಾಗಿದ್ದ ಆ ಮಹಿಳೆಯರ ಹೆಪ್ಪುಗಟ್ಟಿದ ನೋವು, ನಿಧಾನಕ್ಕೆ ಕರಗಿ ಧಾರೆಯಾಗಿದೆ.

ಪಾತ್ರ 1: 'ಮದುವೆಯಾಗದೆ ತಾಳಿ ಕಟ್ಟಿಕೊಳ್ಳುವುದಿದೆಯಲ್ಲ ಅದು ತಾಳಿಗಿಂತಲೂ ಘೋರ ಬಂಧವಾಗಬಹುದೆಂದು ಅರೆಕ್ಷಣವೂ ಯೋಚಿಸಿರಲಿಲ್ಲ. ಯಾವಾಗ ಮದುವೆಯಾಯ್ತೆ, ವರಿಸಿದವನು ಯಾರೆಂದು ಹಾದಿ-ಬೀದಿಯಲ್ಲಿ ಸಿಕ್ಕವರ ಪ್ರಶ್ನೆಗಳು ಹೃದಯ ಹಿಂಡುತ್ತಿದ್ದವು. ದಿಕ್ಕು ತೋಚದೆ, ತಾಳಿಯನ್ನೇ ಕಿತ್ತು ಬಿಸಾಡಿದಾಗ ಒಂದಿಷ್ಟು ನಿರಾಳವಾಯ್ತು. ಕಾಯುತ್ತ, ಕನವರಿಸುತ್ತಿದ್ದ ದೀರ್ಘ ನಿರೀಕ್ಷೆ ಕೈಗೂಡಿತು, ಕೊನೆಗೂ ಜೊತೆಗಾರನೊಬ್ಬ ಸಿಕ್ಕನೆಂದು ನಿಟ್ಟುಸಿರು ಬಿಟ್ಟೆ. ಫಲಿತ ಪ್ರೀತಿಯ ಕುರುಹಾಗಿ ಗರ್ಭದಲ್ಲೊಂದು ಕುಡಿ ಮೂಡಿತು, ನಾನು ತಾಯ್ತನದ ಖುಷಿಯ ಹೂಮಾಲೆ ಕಟ್ಟುತ್ತಿದ್ದೆ, ಆತ ಬಾಂಧವ್ಯವನ್ನೇ ಹರಿದು ಬಿಸಾಕಿ ದೂರ ಹೊರಟುಹೋದ. ಇನ್ನೊಬ್ಬ ಜತೆಗಾರನ ಕಾಯುವಿಕೆ, ಇಲ್ಲದ ಗಂಡನ ಬಗ್ಗೆ ಬಚ್ಚಿಡುವ ಸುಳ್ಳು, ಲೋಕನಿಂದನೆಯ ಚುಚ್ಚುಮಾತುಗಳು ಅದೆಂತಹ ಯಾತನೆ...'

ಪಾತ್ರ 2: 'ಗಂಡನ ಪಾತ್ರಧಾರಿಯಾಗಿ ಬಂದವ ಜನುಮದ ಜೊತೆಗಾರನೆಂಬ ಭ್ರಮೆಯಲ್ಲಿ ಆತನ ಪುಸಲಾಯಿಸುವ ಮಾತಿಗೆ ಮರುಳಾಗಿ ಸಾಲ ಮಾಡಿಕೊಟ್ಟು, ಅವನ ಆನಂದದಲ್ಲಿ ನನ್ನ ಸುಖವನ್ನು ಮರೆತೆ. ಎರಡು ಮಕ್ಕಳಾದವು. ಒಮ್ಮೆ ಹೋದವ ಮತ್ತೆ ತಿರುಗಿ ನೋಡಿಲ್ಲ. ಮಕ್ಕಳು ಈಗ ಬೆಳೆದು ನಿಂತಿದ್ದಾರೆ. ಅವರಿಬ್ಬರ ಕಂಗಳಲ್ಲೂ ಸುಂದರ ನಾಳೆಗಳ ಕನಸಿತ್ತು, ಬೆಟ್ಟದಷ್ಟು ಓದಿ, ಅಮ್ಮನನ್ನು ಚೆನ್ನಾಗಿ ಸಲಹಬೇಕೆಂದು. ಆದರೆ, ಬಡತನ ಬಾಹು ಅಷ್ಟು ಸಲೀಸಾಗಿ ಹಿಡಿತ ಸಡಿಲಿಸದು. ಪೆನ್ನು ಹಿಡಿಯಬೇಕಿದ್ದ ಪುಟ್ಟ ಕೈಗಳು ಈಗ ಸಾಲತೀರಿಸಲೋಸುಗ ನನ್ನೊಂದಿಗೆ ಪಾತ್ರೆ ತೊಳೆಯುತ್ತವೆ. ನೋವಿನಲ್ಲಿ ಬೆಂದ ಗಟ್ಟಿಜೀವವಿದು, ಉರುಳನ್ನೂ ಜಾರಿಕೊಂಡು ಬದುಕಿಕೊಂಡಿದೆ. ಅದೆಷ್ಟು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದೆನೋ ಗೊತ್ತಿಲ್ಲ...'

ಪಾತ್ರ 3: 'ಮನೆಯಲ್ಲಿ ಗೋಡೆಗಳು ಮಾತನಾಡುತ್ತವೆ, ತಲ್ಲಣಿಸಿದ ಜೀವಕ್ಕೊಂದಿಷ್ಟು ಸಾಂತ್ವನ ಹೇಳುತ್ತವೆ. ಅವು ಎಂದಿಗೂ ನನ್ನನ್ನು ಹೀಯಾಳಿಸಲಾರವು. 'ದೇವದಾಸಿ' ನೀನೆಂದು ಕರ್ಣಕಠೋರ ಅಕ್ಷರಗಳಲ್ಲಿ ಇರಿಯಲಾರವು. ಗೋಡೆಗಳ ನಡುವೆ ಬಂಧಿಯಾಗಿರುವುದೇ ನನಗೆ ಇಷ್ಟ. ಸಮಾಜದ ಕುಹಕಗಳ ಉತ್ತರದಾಯಿತ್ವಕ್ಕಿಂತ ಗೃಹಬಂಧನದ ಬದುಕೇ ನಿರುಮ್ಮಳ...'

ಇಂತಹ ಹಲವಾರು ನೈಜ ಬದುಕಿನ ದುರಂತ ಕತೆಗಳನ್ನು ಸಾಕ್ಷ್ಯಚಿತ್ರದಲ್ಲಿ ನಿರೂಪಿಸಿರುವ ಪೂರ್ಣಿಮಾ, ಸಮಾಜದ ಕಣ್ತೆರೆಸುವ ಪ್ರಯತ್ನ ಮಾಡಿದ್ದಾರೆ.

2008ರಲ್ಲಿ ದೇವದಾಸಿಯರ ಸಮೀಕ್ಷೆ ನಡೆದಿತ್ತಾದರೂ, ಆಗ 35 ವರ್ಷ ಮೇಲಿನವರನ್ನು ಮಾತ್ರ ಪಿಂಚಣಿಗೆ ಪರಿಗಣಿಸಲಾಗಿತ್ತು. ಕನಿಷ್ಠ ಸೌಲಭ್ಯ ವಂಚಿತ ಮಹಿಳೆಯರು ಈಗಲೂ ಲೆಕ್ಕಕ್ಕೆ ಸಿಗದಷ್ಟು ಇದ್ದಾರೆ. ಅವರ ಬಳಿ ರೇಷನ್ ಕಾರ್ಡ್ ಇಲ್ಲ, ಗೃಹಲಕ್ಷ್ಮಿ ಯೋಜನೆಯ ಭಾಗ್ಯವೂ ಸಿಗುತ್ತಿಲ್ಲ. ಮಕ್ಕಳಿಗೆ ಶಿಕ್ಷಣ ಕೊಡಿಸಲು ಆರ್ಥಿಕ ಸಾಮರ್ಥ್ಯವಿಲ್ಲ. ಸ್ತ್ರೀ ವಿಮೋಚನೆ, ಮಹಿಳಾ ಸಬಲೀಕರಣ ಎಂಬ ಎಲ್ಲ ಘೋಷಣೆ, ಭಾಷಣಗಳ ಮಧ್ಯೆ 21ನೇ ಶತಮಾನದಲ್ಲೂ ಅದೆಷ್ಟೋ ಸಹೋದರಿಯರು ಅಕ್ಷರಶಃ ಕತ್ತಲೆಯ ಕೂಪದಲ್ಲಿ ಜೀವನ ನಡೆಸುತ್ತಿದ್ದಾರೆ. ಅವರಿಗೆ ಸಹಾನುಭೂತಿ ಬೇಕಿಲ್ಲ, ಸಹಾಯಹಸ್ತ ಬೇಕು ಎನ್ನುತ್ತಾರೆ ಪೂರ್ಣಿಮಾ.

ಶಾಪವಾದ 'ಆನ್‌ಲೈನ್ ವರ'

ಸಂತೋಷ ಜಿಗಳಿಕೊಪ್ಪ

'ಈ ಆನ್‌ಲೈನ್ ಯುಗದಲ್ಲಿ ಯಾರನ್ನು ನಂಬಬೇಕು? ಎಂಬುದೇ ಗೊತ್ತಾಗುತ್ತಿಲ್ಲ. 40 ವರ್ಷವಾದರೂ ನನಗೆ ಮದುವೆ ಆಗಿಲ್ಲ. ಹುಡುಗರನ್ನು ಹುಡುಕಿ ಸಾಕಾಯಿತು. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿದ್ದೆ. ವೈವಾಹಿಕ ಜಾಲತಾಣಗಳಲ್ಲಿ ಖಾತೆ ತೆರೆದು ಫೋಟೊ ಹಾಕಿದರೆ ನೆಚ್ಚಿನ ಹುಡುಗ ಸಿಗುತ್ತಾನೆಂದು ಕೆಲ ಸ್ನೇಹಿತೆಯರು ಸಲಹೆ ನೀಡಿದರು. ಅದರಂತೆ, ಒಂದು ವೆಬ್‌ಸೈಟಿನಲ್ಲಿ ಕೆಲ ಫೋಟೊಗಳನ್ನೂ ಅಪ್‌ಲೋಡ್ ಮಾಡಿದ್ದೆ. ಕೆಲ ದಿನಗಳ ನಂತರ ಗುಂಟೂರಿನ ನಿವಾಸಿ ಎನ್ನಲಾದ 44 ವರ್ಷದ ಅರವಿಂದ್ ಚೌಧರಿ ರಿಕ್ವೆಸ್ಟ್ ಕಳುಹಿಸಿದ್ದ. ಚಾಟಿಂಗ್‌ನಿಂದ ಶುರುವಾಗಿ, ಮೊಬೈಲ್ ನಂಬರ್ ವಿನಿಮಯಕ್ಕೆ ಬಂದು ನಿಂತು. ನಂತರ, ನಿರಂತರ ಕರೆಗಳು ಹಾಗೂ ವಾಟ್ಸ್‌ಆ್ಯಪ್ ವಿಡಿಯೊ ಕರೆ ಹೀಗೆ... ಎಲ್ಲವೂ ಶುರುವಾದವು.'

'ನೀನು ನನಗೆ ತುಂಬಾ ಇಷ್ಟ. ನಿನ್ನನ್ನು ಮದುವೆಯಾಗಲು ಸಿದ್ಧನಿದ್ದೇನೆ. ಆದಷ್ಟು ಬೇಗ ಭೇಟಿಯಾಗುತ್ತೇನೆ' ಎಂದಿದ್ದ. ಅದನ್ನು ನಂಬಿ 40 ವರ್ಷದಲ್ಲಾದರೂ ಮದುವೆಯಾಗುತ್ತಿದೆ ಎಂದು ಖುಷಿಪಟ್ಟಿದೆ. ದಿನ ಕಳೆದಂತೆ ಇಬ್ಬರ ನಡುವೆ ಸಲುಗೆ ಹೆಚ್ಚಾಯಿತು. ವಿಡಿಯೊ ಕರೆ ಮಾಡಿದ್ದ ಆತ, ತನ್ನ ಬಟ್ಟೆ ಬಿಚ್ಚಿ ನಗ್ನವಾಗುತ್ತಿದ್ದ. ನನಗೂ ಬಟ್ಟೆ ಬಿಚ್ಚುವಂತೆ ಹೇಳುತ್ತಿದ್ದ. ಆತನ ಮಾತಿಗೆ ಮರುಳಾಗಿ ಬಟ್ಟೆ ಬಿಚ್ಚಿ ಬೆತ್ತಲೆ ಆಗುತ್ತಿದ್ದೆ. ಇದೇ ಸಮಯದಲ್ಲಿಯೇ ಆತ, ನನಗೆ ಅರಿವಿಲ್ಲದಂತೆ ವಿಡಿಯೊ ಕರೆವನ್ನು ಚಿತ್ರೀಕರಿಸಿಕೊಂಡಿದ್ದ. ಜೊತೆಗೆ, ಮದುವೆಯಾಗುವುದಾಗಿ ಪದೇ ಪದೇ ಹೇಳಿ ನಂಬಿಸಿ ಅರೆನಗ್ನ ಫೋಟೊಗಳನ್ನೂ ಪಡೆದುಕೊಂಡಿದ್ದ.'

'ನನ್ನ ಎಲ್ಲ ವೈಯಕ್ತಿಕ, ಕುಟುಂಬದ ಮಾಹಿತಿ ಹಾಗೂ ಸಾಮಾಜಿಕ ಜಾಲತಾಣಗಳ ಮಾಹಿತಿಯನ್ನು ಆತನೊಂದಿಗೆ ಹಂಚಿಕೊಂಡಿದ್ದೆ. ಕೆಲ ದಿನಗಳ ನಂತರ, ನನ್ನ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಹಾಗೂ ಜಿ- ಮೇಲ್ ಖಾತೆಗಳನ್ನು ಆತ ಹ್ಯಾಕ್ ಮಾಡಿದ್ದ. ಈ ಸಂಗತಿ ಗೊತ್ತಾಗಿ ಆತನನ್ನು ಪ್ರಶ್ನಿಸಿದ್ದೆ. ಅವಾಗಲೇ ಆತನ ಅಸಲಿ ಮುಖ ಗೊತ್ತಾಗಿತ್ತು. ನನ್ನ ಬೆತ್ತಲೆ ವಿಡಿಯೊ ಹಾಗೂ ಫೋಟೊ ಇಟ್ಟುಕೊಂಡಿದ್ದ ಆತ, ಅವನ್ನು ಹಂಚುವುದಾಗಿ ಬೆದರಿಸಲಾರಂಭಿಸಿದ್ದ'

ಹೀಗೆ, ಬ್ಲ್ಯಾಕ್‌ಮೇಲ್ ಮಾಡಿ ನನ್ನಿಂದ ಹಂತ ಹಂತವಾಗಿ ₹1.50 ಲಕ್ಷ ನಗದು ಪಡೆದುಕೊಂಡಿದ್ದ. ಹಣ ನೀಡಿದ ನಂತರವೂ ಕಿರುಕುಳ ಮುಂದುವರಿದಿತ್ತು. ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದ. ಆದರೆ, ಹಣವಿಲ್ಲವೆಂದು ಹೇಳಿದ್ದೆ. ಅವಾಗಲೇ ಆತ, ನನ್ನ ತಾಯಿ ಹಾಗೂ ಕೆಲ ಸ್ನೇಹಿತರ ವಾಟ್ಸ್‌ಆ್ಯಪ್ ನಂಬರ್‌ಗೆ ಬೆತ್ತಲೆ ವಿಡಿಯೊ-ಫೋಟೊ ಕಳುಹಿಸಿದ್ದ. ಮಗಳು ಉತ್ತಮ ಗುಣವುಳ್ಳವರು ಎಂದುಕೊಂಡಿದ್ದ ತಾಯಿ, ನನ್ನ ಮೇಲೆಯೇ ಅನುಮಾನಪಡುವಂತಾಯಿತು. ಮದುವೆಗೆ ಹುಡುಗನನ್ನು ಹುಡುಕಿಕೊಳ್ಳಲು ಹೋಗಿ, ಸಂಕಷ್ಟಕ್ಕೆ ಸಿಲುಕಿದೆ. ವಿಡಿಯೊ-ಫೋಟೊ ನೋಡಿದ ನಂತರ, ಸ್ನೇಹಿತರೆಲ್ಲರೂ ಹೀಯಾಳಿಸುತ್ತಿದ್ದಾರೆ. ಹಣದ ಆಸೆಗಾಗಿ ನನ್ನನ್ನು ಬೆತ್ತಲೆ ಮಾಡಿದ. ಈ ಘಟನೆಯಿಂದ ಸಾಕಷ್ಟು ನೊಂದಿದ್ದೇನೆ. ಆರೋಪಿ ಪುನಃ ಪುನಃ ಹಣ ಕೇಳಿದ್ದರಿಂದ ಠಾಣೆಗೆ ದೂರು ನೀಡಿದ್ದೇನೆ.'

'ವಯಸ್ಸಾಗುತ್ತಿದ್ದರೂ ಮದುವೆಯಾಗುತ್ತಿಲ್ಲವೆಂಬ ಚಿಂತೆಯಲ್ಲಿರುವ ಬಹುತೇಕ ಯುವತಿಯರು, ಆನ್‌ಲೈನ್ ಮೊರೆ ಹೋಗುತ್ತಿದ್ದಾರೆ. ವೈವಾಹಿಕ ಜಾಲತಾಣಗಳಲ್ಲಿ ಖಾತೆ ತೆರೆದು, ಅಪರಿಚಿತ ವ್ಯಕ್ತಿಗಳ ಜೊತೆ ಒಡನಾಟ ಬೆಳೆಸಿಕೊಂಡು ಹಣ ಹಾಗೂ ಮರ್ಯಾದೆ ಎರಡನ್ನೂ ಕಳೆದುಕೊಳ್ಳುತ್ತಿದ್ದಾರೆ. ಆನ್‌ಲೈನ್‌ನಲ್ಲಿ ವರನನ್ನು ಹುಡುಕುವುದು ತಪ್ಪಲ್ಲ. ಆದರೆ, ಆದಷ್ಟು ಎಚ್ಚರಿಕೆ ವಹಿಸಬೇಕು. ಅಪರಿಚಿತ ವರನಿಗೆ ಯಾವುದೇ ಗುಟ್ಟು ಬಿಟ್ಟುಕೊಡಬಾರದು. ಆದಷ್ಟು ಪೋಷಕರನ್ನು ಮೊದಲು ಪರಿಚಯ ಮಾಡಿಸಿ, ನಂತರ ಮುಂದುವರಿಯುವುದು ಸೂಕ್ತ'

– ನೊಂದ ಯುವತಿ

ನಕಲಿ ಖಾತೆಗಳ ಬಗ್ಗೆ ಇರಲಿ ಎಚ್ಚರ

ಇಂದಿನ ಆಧುನಿಕ ಯುಗದಲ್ಲಿ ವಿದ್ಯಾವಂತ ಯುವತಿಯರು, ವೈವಾಹಿಕ ಜಾಲತಾಣಗಳ ಮೂಲಕ ವರನನ್ನು ಹುಡುಕುತ್ತಿದ್ದಾರೆ. ಸೈಬರ್ ವಂಚಕರು, ವೈವಾಹಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ತೆರೆದು ಯುವತಿಯರನ್ನು ತಮ್ಮ ತೆಕ್ಕೆಗೆ ಬೀಳಿಸಿಕೊಂಡು ಹಣ ದೋಚುತ್ತಿದ್ದಾರೆ. ಮದುವೆ ಹೆಸರಿನಲ್ಲಿ ಲೈಂಗಿಕವಾಗಿ ಬಳಸಿಕೊಂಡು ವಂಚಿಸುತ್ತಿದ್ದಾರೆ. ಇಂಥ ಕೃತ್ಯಗಳಿಗೆ ಸಂಬಂಧಪಟ್ಟಂತೆ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ಯುವತಿಯರು ಅಪರಿಚಿತರ ಬಗ್ಗೆ ಎಚ್ಚರಿಕೆ ವಹಿಸಬೇಕು.

ಸೈಬರ್ ಅಪರಾಧವಾದರೆ ದೂರು ನೀಡಿ:
112 ಅಥವಾ **1930** ಜಾಲತಾಣ: https://cybercrime.gov.in/

ರಕ್ತಸಂಬಂಧದಲ್ಲಿ ಮದುವೆ ಏನಾದರೂ ತೊಂದರೆ ಇದೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

ರಕ್ತ ಸಂಬಂಧಗಳಲ್ಲಿ ಮದುವೆಯಾದರೆ ಆಗುವ ಅನುಕೂಲಗಳು ಮತ್ತು ಅನಾನುಕೂಲಗಳ ಬಗ್ಗೆ ತಿಳಿಸಿ. ಮದುವೆಯಾಗಲು ವಯಸ್ಸಿನ ಅಂತರ ಎಷ್ಟಿರಬೇಕು ತಿಳಿಸಿ.

ಉತ್ತರ:- ರಕ್ತ ಸಂಬಂಧದಲ್ಲಿ ಮದುವೆ ಆಗುವುದು ದಕ್ಷಿಣ ಭಾರತದಲ್ಲಿ ಅದರಲ್ಲೂ ನಮ್ಮ ಕರ್ನಾಟಕದಲ್ಲಿ ಸಾಮಾನ್ಯ ಸಂಗತಿ. ಅತ್ತೆಮಗ, ಮಾವನಮಗ, ಇಲ್ಲವೇ ಸ್ವತಃ ಮಾವನನ್ನೇ ಮದುವೆಯಾದವರಿದ್ದಾರೆ. ಪರಂಪರಾಗತವಾಗಿಯೂ, ಹಲವು ಸಾಮಾಜಿಕ, ಆರ್ಥಿಕ ಕಾರಣಕ್ಕಾಗಿ ಇಂತಹ ಮದುವೆಗಳು ನಡೆಯುತ್ತಿದ್ದವು. ಇತ್ತೀಚೆಗೆ ಈ ಬಗ್ಗೆ ಅಲ್ಲಲ್ಲಿ ಜಾಗೃತಿ, ಮೂಡುತ್ತಿದೆ. ಕೆಲವರು ಮದುವೆಗೆ ಮೊದಲೇ ತಜ್ಞರನ್ನು ಭೇಟಿ ಮಾಡಿ ಈ ಬಗ್ಗೆ ವಿಚಾರಿಸುತ್ತಿದ್ದಾರೆ. ಕೆಲವರು ಮದುವೆಯಾದ ನಂತರ ಮಕ್ಕಳನ್ನು ಪಡೆಯುವ ಮೊದಲು ಈ ಬಗ್ಗೆ ಯೋಚಿಸುತ್ತಾರೆ. ಆದರೆ ಮದುವೆಗೂ ಮೊದಲು ಈ ಬಗ್ಗೆ ವಿಚಾರಿಸಿ ಆಪ್ತಸಮಾಲೋಚನೆಗೆ ಒಳಗಾಗುವುದು ಸೂಕ್ತ. ಹೆಚ್ಚಿನ ಸಂದರ್ಭಗಳಲ್ಲಿ ಸತಿಪತಿಯಾಗುವ ಇಬ್ಬರೂ ಆರೋಗ್ಯವಂತರಾಗಿದ್ದಾಗ ತೊಂದರೆಗಳೇನು ಆಗದಿರಬಹುದು. ಆದರೆ ಕೆಲವು ವಂಶವಾಹಿಗಳಲ್ಲಿ ದೋಷವಿದ್ದು ಕೆಲವು ಆನುವಂಶಿಯ ಕಾಯಿಲೆಗಳಿದ್ದರೆ ಕೌಟುಂಬಿಕವಾಗಿ ಈಗಾಗಲೇ ನ್ಯೂನತೆಯುಳ್ಳ ಮಕ್ಕಳು ಜನಿಸಿದ್ದಾಗ ಅಂತವರಲ್ಲಿ ಸಂಬಂಧ ಉಂಟಾಗಿ ಮಕ್ಕಳು ಹುಟ್ಟಿದಾಗ ತೊಂದರೆ ಆಗಬಹುದು. ಈ ತೊಂದರೆ ಬೇರೆಯವರಲ್ಲಾಗುವುದಿಲ್ಲವೇ? ಎಂದು ನಿಮಗನಿಸಬಹುದು. ಕೆಲವು ವಂಶವಾಹಿಗಳ ಮೂಲಕ ಬರುವ ಥೆಲೇಸೀಮಿಯ, ಹೃದಯದ ರಂಧ್ರಗಳ ಸಮಸ್ಯೆ, ಕೆಲವು ರಕ್ತಹೆಪ್ಪುಗಟ್ಟುವ ಸಮಸ್ಯೆಗಳು, ಆಟೋಸೋಮಲ್ ರಿಸೆಸಿವ್ ವಿಧಾನದಲ್ಲಿ ಆನುವಂಶೀಯವಾಗಿ ಹರಿದು ಬರುವ ಸಮಸ್ಯೆಗಳು ಸಂಭವನೀಯತೆ ಹೆಚ್ಚಾಗಿರುತ್ತದೆ. ಉಳಿದವರಿಗೆ ಹೋಲಿಸಿದರೆ. ಶೇಕಡ 25 ರಿಂದ 75ರಷ್ಟು ರಕ್ತಸಂಬಂಧದಲ್ಲಿ ಮದುವೆಯಾದರವರಲ್ಲಿ ಹೆಚ್ಚಿರುತ್ತದೆ. ರಕ್ತಸಂಬಂಧಗಳಲ್ಲಿ ಮದುವೆಯಾದಾಗ ಗಂಡು-ಹೆಣ್ಣು ಇಬ್ಬರಲ್ಲೂ ಏನೂ ತೊಂದರೆಗಳಿಲ್ಲದೇ ಇರುವಾಗ ಹೆಚ್ಚಿನ ಸಂದರ್ಭದಲ್ಲಿ ಆರೋಗ್ಯವಂತ ಮಕ್ಕಳೇ ಹುಟ್ಟುತ್ತಾರೆ. ಹಾಗಾಗಿ ಇಂತಹ ಸಂಬಂಧಗಳು ಇಂದಿಗೂ ಮುಂದುವರೆದು ಕೊಂಡುಬಂದಿವೆ. ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ಆವಿಷ್ಕಾರ, ತಾಂತ್ರಿಕಪರಿಣತಿ ಬಹಳಷ್ಟು ಮುಂದುವರೆದಿರುವ ಕಾರಣ ಅಷ್ಟೇಅಲ್ಲ ಇದರ ಜೊತೆಗೆ ಹಲವಾರು ಪರೀಕ್ಷೆಗಳೂ, ಸ್ಕ್ಯಾನಿಂಗ್ ಹಾಗೂ ರಕ್ತಪರೀಕ್ಷೆಗಳಿಂದ ಗರ್ಭಸ್ಥ ಶಿಶುವಿನಲ್ಲಿ ಹಲವು ನ್ಯೂನತೆ ಇರುವುದನ್ನ ಮೊದಲೇ ಕಂಡುಹಿಡಿಯಲು ಸಾಧ್ಯವಿರುತ್ತದೆ. ಜೊತೆಗೆ 20ರಿಂದ22 ವಾರಗಳವರೆಗೆ ನ್ಯೂನತೆಯುಳ್ಳ ಭ್ರೂಣ ಪತ್ತೆಯಾದಲ್ಲಿ ಗರ್ಭಪಾತಕ್ಕೂ ಕಾನೂನು ಇದೆ ಎನ್ನುವ ವಿಷಯ ತಿಳಿದಿರಬೇಕು. ಮದುವೆ ಆಗುವ ಮೊದಲೇ, ಅಥವಾ ಮಕ್ಕಳನ್ನ ಪಡೆಯುವ ಮೊದಲೇ ವೈದ್ಯರೊಂದಿಗೆ ಆಪ್ತಸಮಾಲೋಚನೆ ಬಹಳ ಒಳ್ಳೆಯದು.

ಮದುವೆಯಾಗಲು ಹೆಣ್ಣಿಗೆ 18ವರ್ಷಗಳು ಹಾಗೂ ಗಂಡಿಗೆ 21ವರ್ಷಗಳು ಆಗಿರಬೇಕೆಂದು ಕಾನೂನೇ ಇದೆ. ಈ ಕಾನೂನನ್ನು ವೈದ್ಯಕೀಯವಾಗಿ ಅರಿತುಕೊಂಡೆ ಮಾಡಿರುವುದು. ಹೆಣ್ಣಿನಲ್ಲಿ ದೈಹಿಕ, ಮಾನಸಿಕ ಹಾಗೂ ಲೈಂಗಿಕ ಬೆಳವಣಿಗೆ 18ವರ್ಷಕ್ಕೆ ಒಂದು ಹಂತಕ್ಕೆ ಬಂದಿರುತ್ತದೆ ಮತ್ತು ಪುರುಷರಲ್ಲಿ 21 ವರ್ಷಕ್ಕೆ ಈ ಪ್ರಬುದ್ಧತೆ ಬರುತ್ತದೆ. ಮಹಿಳೆಯರಲ್ಲಿ ಸುಮಾರು ಮುಟ್ಟುನಿಲ್ಲುವ ಅವಧಿಯವರೆಗೆ (ಸರಾಸರಿ 50 ವರ್ಷಗಳು) ಲೈಂಗಿಕ ಬಯಕೆ ಸಾಮರ್ಥ್ಯ ಹೆಚ್ಚಿರುತ್ತದೆ ಮತ್ತು ಪುರುಷರಲ್ಲಿ ಧೀರ್ಘಾವಧಿಯವರೆಗೆ (ಸುಮಾರು 60ವರ್ಷಗಳು) ಲೈಂಗಿಕ ಬಯಕೆ ಮತ್ತು ಸಾಮರ್ಥ್ಯ ಇರಬಹುದು. ಆದ್ದರಿಂದ ಆರೋಗ್ಯಕರವಾಗಿ ಉತ್ತಮ ಲೈಂಗಿಕ ಹಾಗೂ ಸಾಂಸಾರಿಕ ಸಹಬಾಳ್ವೆ ನಡೆಸಲು ಗಂಡಿಗಿಂತ ಮದುವೆಯಾಗುವ ಹೆಣ್ಣು 2ರಿಂದ 3ವರ್ಷಗಳಾದರೂ ಅಂತರವಿದ್ದರೆ ಒಳ್ಳೆಯದು ಎನ್ನುವ ಪದ್ಧತಿ ಇದೆ. ಆದರೆ ಇತ್ತೀಚಿಗೆ ಸಮವಯಸ್ಸು ಮತ್ತು ವಯಸ್ಸಿಗಿಂತ ದೊಡ್ಡ ಹೆಣ್ಣುಮಕ್ಕಳನ್ನು ಮದುವೆಯಾಗುತ್ತಿದ್ದಾರೆ. ಅಷ್ಟಕ್ಕೂ ಅದು ಅವರವರ ವೈಯಕ್ತಿಕ ನಿರ್ಧಾರ. ಮೂರುವರ್ಷ ಅಂತರದಿಂದ ಏಳೆಂಟು ವರ್ಷ ಅಂತರವಿದ್ದರೂ ವಿವಾಹವಾಗಲು ತೊಂದರೆ ಇಲ್ಲ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

‘ಮೆರಿಟ್ ಮೇಲೆ ತೀರ್ಮಾನ ಆದರೆ ಮುಗಿಯಿತು’

ಪ್ರಜಾವಾಣಿ ವಾರ್ತೆ

ಎಸ್. ಬಸವರಾಜು

ಬೆಂಗಳೂರು: ‘ಡಿ.ಕೆ.ಶಿವಕುಮಾರ್ ಮೇಲ್ಮನವಿಯ ವಿಚಾರಣೆ ಇದೇ 29ಕ್ಕೆ ನಿಗದಿಯಾಗಿದೆ. ಇಂತಹ ಸಂದರ್ಭದಲ್ಲಿ ಒಂದು ವೇಳೆ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ನಾವು ಮೆರಿಟ್ ಮೇಲೆ ನಿಮ್ಮ ಕೇಸನ್ನು ಆಲಿಸುತ್ತೇವೆ ಎಂದರೆ ಮುಗಿದೇ ಹೋಯಿತು. ಯಾಕೆಂದರೆ ಸುಪ್ರೀಂ ಕೋರ್ಟ್ ಇದನ್ನು ವಾಪಸ್ ಇಲ್ಲಿಗೇ ಕಳಿಸಿರುವ ಕಾರಣ ಇದು ಬಹುತೇಕ ಮೆರಿಟ್ ಮೇಲೆಯೇ ತೀರ್ಮಾನವಾಗುತ್ತದೆ’ ಎಂದು ಹೈಕೋರ್ಟ್‌ನ ಹಿರಿಯ ವಕೀಲ ಎಸ್.ಬಸವರಾಜು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ವಕೀಲರ ಪರಿಷತ್ ಸದಸ್ಯರೂ ಆದ ಬಸವರಾಜು ಅವರು ಈ ಕುರಿತಂತೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿ, ‘ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ವಾಪಸ್ ಪಡೆದಿರುವ ಸಚಿವ ಸಂಪುಟದ ನಿರ್ಣಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಚಾಣಾಕ್ಷ ನಡೆ. ಯಾಕೆಂದರೆ, ಈ ಮೂಲಕ ಶಿವಕುಮಾರ್ ಅವರನ್ನು ಕಾನೂನಿನ ಗೋಜಲಿಗೆ ನೂಕಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡರೂ ಆಶ್ಚರ್ಯವಿಲ್ಲ’ ಎಂದರು.

‘ಆವತ್ತು ಇದೇ ಸಿದ್ದರಾಮಯ್ಯ ಕೆಂಪಯ್ಯನವರ ಮಾತು ಕೇಳಿ ಎಸಿಬಿ ರಚನೆ ಮಾಡಿದ್ರು. ಮುಖ್ಯಮಂತ್ರಿಗೆ ಕಾನೂನು ಸಲಹೆ ನೀಡಲು ಎ.ಎಸ್. ಪೊನ್ನಣ್ಣ ಅವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರ ಸಲಹೆ ಪಡೆದಿದೆಯೇ ಹೇಗೆ ಎಂಬುದು ತಿಳಿಯಬೇಕಿದೆ’ ಎಂದು ಹೇಳಿದರು.

ನಿರ್ಧಾರಕ್ಕೆ ಬಲವಾದ ಕಾರಣಗಳ ಬೆಂಬಲ ಅಗತ್ಯ

ಪಿ.ಎನ್. ಹೆಗಡೆ

‘ಸಿಬಿಐ ತನಿಖೆಗೆ ರಾಜ್ಯ ಸರ್ಕಾರಗಳು ನೀಡುವ ಅನುಮತಿಯನ್ನು ಮಧ್ಯದಲ್ಲಿಯೇ ಹಿಂಪಡೆಯಬಹುದೇ? ಇಲ್ಲವೇ? ಎಂಬುದರ ಕುರಿತು ನ್ಯಾಯಾಲಯಗಳಲ್ಲಿ ಈವರೆಗೆ ಯಾವುದೇ ನಿರ್ಣಾಯಕ ತೀರ್ಪುಗಳು ಬಂದಿಲ್ಲ. ಕಾರ್ಯಕಾರಿ ಆದೇಶದ ಮೂಲಕ ನೀಡಿರುವ ಅನುಮತಿಯನ್ನು ಅದೇ ರೀತಿಯ ಪ್ರಕ್ರಿಯೆಯಿಂದ ಹಿಂಪಡೆಯುವ ನಿರ್ಧಾರ ಕೈಗೊಳ್ಳಲಾಗಿದೆ. ಆದರೆ, ಇಂತಹ ತೀರ್ಮಾನ ಕೈಗೊಳ್ಳಬೇಕಾದರೆ ಪ್ರಬಲವಾದ ಕಾರಣಗಳ ಬೆಂಬಲ ಅಗತ್ಯ’ ಎನ್ನುತ್ತಾರೆ ವಕೀಲ ಪಿ.ಎನ್. ಹೆಗಡೆ.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ಶಿವಕುಮಾರ್ ಅವರೇ ಸದಸ್ಯರಾಗಿರುವ ಸಂಪುಟವು ಅನುಮತಿ ಹಿಂಪಡೆಯುವ ನಿರ್ಣಯ ಕೈಗೊಂಡಿದೆ. ಪ್ರಕರಣ ಈಗ ಹೈಕೋರ್ಟ್ ಮುಂದಿದೆ. ಈ ಹಂತದಲ್ಲಿ ಹೈಕೋರ್ಟ್ ಯಾವ ತೀರ್ಮಾನಕ್ಕೆ ಬರುತ್ತದೆ ಎಂಬುದು ಪ್ರಕರಣದ ಭವಿಷ್ಯ ನಿರ್ಧರಿಸಲಿದೆ’ ಎಂದು ಹೇಳಿದರು.

ಡಿಕೆಶಿ ವಿರುದ್ಧ ಪ್ರಕರಣದ ತನಿಖೆಗೆ ನೀಡಿದ್ದ ಅನುಮತಿ ವಾಪಸ್‌ಗೆ ಎಚ್‌.ಡಿ. ಕುಮಾರಸ್ವಾಮಿ ಟೀಕೆ

‘ಲೂಟಿಕೋರರ ಪರ ಸರ್ಕಾರದ ಸಂದೇಶ’

ಪ್ರಜಾವಾಣಿ ವಾರ್ತೆ


ಕುಮಾರಸ್ವಾಮಿ

ರಾಮನಗರ: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ವಾಪಸ್ ಪಡೆದ ಸರ್ಕಾರ ತಾನು ಲೂಟಿ ಹೊಡೆಯವವರ ಪರ ಎಂಬ ಸಂದೇಶ ನೀಡಿದೆ’ ಎಂದು ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಕೀಲಿಕೆ ಮಾಡಿದವರ ಹಾಗೂ ಉಪನ್ಯಾಸ ನೀಡಿದವರ ನೇತೃತ್ವದ ಸರ್ಕಾರ ಕೈಗೊಂಡಿರುವ ನಿರ್ಧಾರವಿದು. ಕಾನೂನಿಗಿಂತ ಸರ್ಕಾರವೇ ದೊಡ್ಡದು ಎಂಬುದನ್ನು ಪ್ರದರ್ಶಿಸಿದೆ’ ಎಂದು ಹೇಳಿದರು.

‘ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳು ಕಣ್ಣ ಮುಂದಿವೆ. ಸಿಬಿಐ ತನಿಖೆ ರದ್ದು ಕೋರಿ ಶಿವಕುಮಾರ್ ಎರಡು ಸಲ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ಮಾನ್ಯ ಮಾಡಿಲ್ಲ. ಮುಖ್ಯಮಂತ್ರಿಗೆ ಇದು ಗೊತ್ತಿಲ್ಲವೆ? ಇಂತಹ ಸೂಕ್ಷ್ಮ ವಿಚಾರ ಕೋರ್ಟ್‌ನಲ್ಲಿದ್ದರೂ ಸರ್ಕಾರ ಏಕಾಏಕಿಯಾಗಿ ನಿರ್ಧಾರ ಕೈಗೊಂಡಿದ್ದು ತಪ್ಪು’ ಎಂದು ಪ್ರತಿಕ್ರಿಯಿಸಿದರು.

‘ಶಿವಕುಮಾರ್ ಈ ವಿಷಯದಲ್ಲಿ ದೊಡ್ಡತನ ತೋರಿದ್ದಾರೆ. ಸಂಪುಟ ಸಭೆಯಲ್ಲಿ ಅವರಿಗೆ ಸಂಬಂಧಿಸಿದ ಈ ವಿಷಯ ಚರ್ಚೆಗೆ ಬರುತ್ತದೆ ಎಂದು ಸಭೆಗೆ ಹೋಗಿಲ್ಲ. ಅವರ ಸಹಕಾರಕ್ಕೆ ಅಭಿನಂದಿಸಲೇಬೇಕು’ ಎಂದು ವ್ಯಂಗ್ಯವಾಡಿದರು.

‘ಮೂರು ದಿನದ ಹಿಂದೆಯೇ ಹಿರಿಯ ವಕೀಲರ ಕರೆದು, ಮುಂದೆ ಯಾವ ರೀತಿ ರಕ್ಷಣೆ ಪಡೆಯಬೇಕು ಎಂದು ಚರ್ಚಿಸಲಾಗಿದೆ. ಆಗಲೇ ಇದು, ನನ್ನ ಗಮನಕ್ಕೆ ಬಂದಿತ್ತು. ಈ ವಿಷಯ ರಾಷ್ಟ್ರ ಮಟ್ಟದಲ್ಲಿ, ಕಾನೂನು ತಜ್ಞರ ಮಟ್ಟದಲ್ಲಿ ಚರ್ಚೆಯಾಗಲಿದೆ’ ಎಂದು ತಿಳಿಸಿದರು.

‘ಹಿಂದಿನ ಸರ್ಕಾರವು ಸಿಬಿಐ ತನಿಖೆಗೆ ವಹಿಸಲು ಸ್ಪೀಕರ್ ಅನುಮತಿ ಪಡೆದಿರಲಿಲ್ಲ ಎನ್ನುವುದಾದರೆ, ಈಗ ವಾಪಸ್ ಪಡೆಯಲು ಸ್ಪೀಕರ್ ಅನುಮತಿ ಪಡೆದಿದ್ದಾರೆಯೇ? ಇದೆಲ್ಲಾ ಕೇವಲ ಸಬೂಬು’ ಎಂದು ಹೇಳಿದರು.

ಸಂಪುಟ ಡಿಕೆಶಿ ಪಾದದಡಿ ಇದೆ (ಹಾಸನ ವರದಿ): ಪ್ರಕರಣ ವಾಪಸು ಮೂಲಕ ಸಚಿವ ಸಂಪುಟ ಡಿ.ಕೆ.ಶಿವಕುಮಾರ್ ಪಾದದಡಿ ಇದೆ ಎಂಬುದನ್ನು ಮುಖ್ಯಮಂತ್ರಿ ತೋರಿಸಿದ್ದಾರೆ’ ಎಂದು ಕುಮಾರಸ್ವಾಮಿ ಟೀಕಿಸಿದರು.

‘ಹಿಂದಿನ ಸರ್ಕಾರವು ಯಾವುದಾದರೂ ದ್ವೇಷಕ್ಕಾಗಿ ಸಿಬಿಐ ತನಿಖೆಗೆ ಅನುಮತಿ ನೀಡಿತ್ತೇ. ಸಿದ್ದರಾಮಯ್ಯನವರು ವಕೀಲಿ ವೃತ್ತಿ ಮಾಡಿದವರು. ಅವರ ಕ್ಯಾಬಿನೆಟ್‌ನಲ್ಲಿ ಈ ತೀರ್ಮಾನ ಮಾಡಿದ್ದಾರೆ. ಬಹಳ ಮೇಧಾವಿಗಳಿದ್ದಾರೆ’ ಎಂದು ಲೇವಡಿ ಮಾಡಿದರು.

> **ಸಿದ್ದರಾಮಯ್ಯ ಹಿಂದೆ ಲೋಕಾಯುಕ್ತ ರದ್ದು ಮಾಡಿ ಎಸಿಬಿ ರಚಿಸಿ, ಆಗಿನ ಸರ್ಕಾರದ ಎಲ್ಲಾ ಅಕ್ರಮಗಳನ್ನು ಮುಚ್ಚಿ ಹಾಕಿದರು. ಈಗ ಹೊಸ ಹೆಜ್ಜೆ ಇಡುತ್ತಿದ್ದಾರೆ**
> **ಎಚ್‌.ಡಿ. ಕುಮಾರಸ್ವಾಮಿ** ಜೆಡಿಎಸ್ ಅಧ್ಯಕ್ಷ

> **ಡಿಕೆಶಿ ಪ್ರಾಮಾಣಿಕರಾಗಿದ್ದರೆ ನ್ಯಾಯಾಲಯದಲ್ಲೇ ನಿರ್ದೋಷಿಯಾಗಿ ಜನರ ಮುಂದೆ ಬರಬೇಕಿತ್ತು. ಅನುಮತಿ ವಾಪಸು ಪಡೆದಿರುವುದು ನ್ಯಾಯಾಲಯಕ್ಕೆ ಸವಾಲ್ ಹಾಕಿದಂತಿದೆ**
> **ಎ.ನಾರಾಯಣಸ್ವಾಮಿ**, ಕೇಂದ್ರ ಸಚಿವ

> **ಭ್ರಷ್ಟಾಚಾರದ ವಿಷಯದಲ್ಲಿ ಕಾಂಗ್ರೆಸ್‌ನ ನಾಟಕ ಬಯಲಾಗಿದೆ. ರಾಜ್ಯದ ಇತಿಹಾಸದಲ್ಲಿ ಇದೊಂದು ಕರಾಳ ನಿರ್ಧಾರ**
> **ಎನ್.ರವಿಕುಮಾರ್** ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ

ನೈತಿಕವಾಗಿ ಸರಿಯಾದ ನಡೆಯಲ್ಲ: ಜೋಶಿ

ಹುಬ್ಬಳ್ಳಿ: ‘ಡಿ.ಕೆ.ಶಿವಕುಮಾರ್ ವಿರುದ್ಧದ ತನಿಖೆಗೆ ನೀಡಿದ್ದ ಅನುಮತಿ ವಾಪಸು ಪಡೆಯಲು ಸರ್ಕಾರ ನಿರ್ಧರಿಸಿರುವುದು ನೈತಿಕವಾಗಿ ಹಾಗೂ ಕಾನೂನಾತ್ಮಕವಾಗಿ ಸರಿಯಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರಕರಣದ ಚಾರ್ಜ್‌ಶೀಟ್ ಸಲ್ಲಿಸುವ ಹಂತದಲ್ಲಿ ವಾಪಸ್ ಪಡೆಯಲು ಸರ್ಕಾರ ನಿರ್ಧರಿಸಿರುವುದು ದುರ್ದೈವ. ಈ ತೀರ್ಮಾನವನ್ನು ನ್ಯಾಯಾಲಯ ತಿರಸ್ಕರಿಸಲಿದೆ ಎನ್ನುವ ವಿಶ್ವಾಸ ತಮಗಿದೆ’ ಎಂದರು.

‘ನನಗೆ, ನಮ್ಮ ಪಕ್ಷಕ್ಕೆ ನ್ಯಾಯಾಂಗ ವ್ಯವಸ್ಥೆ ಮೇಲೆ ವಿಶ್ವಾಸವಿದೆ. ರಾಜಕೀಯ ಅಧಿಕಾರ ಚಲಾಯಿಸಿ, ಪ್ರಕರಣ ವಾಪಸು ಪಡೆಯುತ್ತೀರಿ ಎಂದರೆ ಏನರ್ಥ? ಕಾಂಗ್ರೆಸ್‌ಗೆ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲ ಎನ್ನುವುದು ಸ್ಪಷ್ಟ’ ಎಂದು ಟೀಕಿಸಿದರು.

ಕೋರ್ಟ್ ಮೊರೆ ಹೋಗಲಿ: ಸಚಿವ ರಾಜಣ್ಣ

ಚಿಕ್ಕನಾಯಕನಹಳ್ಳಿ: ‘ಡಿ.ಕೆ.ಶಿವಕುಮಾರ್ ವಿರುದ್ಧ ಅಂದಿನ ಬಿಜೆಪಿ ಸರ್ಕಾರ ರಾಜಕೀಯ ದುರುದ್ದೇಶದಿಂದ ಸಿಬಿಐ ತನಿಖೆಗೆ ಆದೇಶಿಸಿತ್ತು. ಈ ಸರ್ಕಾರ ಆದೇಶ ವಾಪಸ್ ಪಡೆದಿರುವುದು ಸರಿಯಾಗಿಯೇ ಇದೆ’ ಎಂದು ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾವು ಸನ್ಯಾಸಿಗಳಲ್ಲ. ರಾಜಕಾರಣ ಮಾಡುವವರೇ. ರಾಜಕಾರಣಕ್ಕಾಗಿ ಆದೇಶ ಹಿಂಪಡೆದಿದ್ದೇವೆ. ಈ ಕ್ರಮ ಸರಿ ಇಲ್ಲ ಎಂದಾದರೆ ಅವರು ಕೋರ್ಟ್ ಮೊರೆ ಹೋಗಬಹುದು’ ಎಂದು ಸಲಹೆ ನೀಡಿದರು.

‘ಸಂಪುಟದ ತೀರ್ಮಾನವನ್ನು ಡಿಕೆಶಿ ವಿರೋಧಿಸಲಿ’


ಬಿ.ವೈ. ವಿಜಯೇಂದ್ರ

ಬೆಂಗಳೂರು: ‘ಡಿ.ಕೆ.ಶಿವಕುಮಾರ್ ಅವರಿಗೆ ಏಕೆ ಈಗ ಭಯ ಆರಂಭವಾಗಿದೆ? ಅವರು ಪ್ರಾಮಾಣಿಕರಿದ್ದರೆ ಈ ತೀರ್ಮಾನವನ್ನು ಅವರೇ ವಿರೋಧಿಸಬೇಕಿತ್ತು. ರಾಜ್ಯದ ಉಪ ಮುಖ್ಯಮಂತ್ರಿಯಾಗಿ ತನಿಖೆ ಎದುರಿಸುವುದಾಗಿ ಹೇಳಬೇಕಿತ್ತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಶಿವಕುಮಾರ್ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಬಗ್ಗೆ ತನಿಖೆಯಲ್ಲಿ ಸಾಕ್ಷ್ಯಗಳು ಲಭಿಸಿವೆ ಎಂದು ಸಿಬಿಐ ಹೇಳಿದ್ದು, ಈ ಹಂತದಲ್ಲಿ ಸರ್ಕಾರದ ತೀರ್ಮಾನ ಕಾನೂನಿಗೆ ವಿರುದ್ಧ ಎಂದರು.

‘ಶಿವಕುಮಾರ್ ಅಪರಾಧಿ ಎಂದು ನಾನು ಹೇಳುವುದಿಲ್ಲ. ಅದು ಕೋರ್ಟ್‌ನಲ್ಲಿ ತೀರ್ಮಾನ ಆಗಬೇಕು. ತನಿಖೆ ಎದುರಿಸಿ, ಆರೋಪ ಮುಕ್ತರಾಗಿ ಹೊರಬರುವ ಸುವರ್ಣಾವಕಾಶವನ್ನು ಶಿವಕುಮಾರ್ ಬಳಸಿಕೊಳ್ಳಲಿ’ ಎಂದು ಆಗ್ರಹಿಸಿದರು.

ರಾಜಕೀಯ ಸಂಚಿನಂತೆ ತನಿಖೆ: ಪ್ರಿಯಾಂಕ್

ಬೆಂಗಳೂರು: ‘ಬಿಜೆಪಿಯ ರಾಜಕೀಯ ಸಂಚಿನ ಭಾಗವಾಗಿ ಡಿ.ಕೆ.ಶಿವಕುಮಾರ್ ವಿರುದ್ಧ, ಕಾನೂನು ಪ್ರಕ್ರಿಯೆಯನ್ನೂ ನಡೆಸದೆ ಸಿಬಿಐ ತನಿಖೆಗೆ ಅನುಮತಿ ನೀಡಲಾಗಿತ್ತು’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘2019ರ ಸೆ.9ರಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬರೆದ ಪತ್ರದ ಕುರಿತು ಆಗಿನ ಸರ್ಕಾರ ಎ.ಜಿಯವರ ಅಭಿಪ್ರಾಯ ಕೋರಿತ್ತು. ಎ.ಜಿ ಅಭಿಪ್ರಾಯ ನೀಡುವ ಮುನ್ನವೇ ಸಿಬಿಐ ತನಿಖೆಗೆ ಆದೇಶಿಸಲಾಗಿತ್ತು. ಇದು ರಾಜಕೀಯ ಸೇಡಿಗೆ ಸಾಕ್ಷಿ. ಶಾಸಕರ ವಿರುದ್ಧ ತನಿಖೆಗೆ ಆದೇಶಿಸುವ ಮೊದಲು ಸ್ಪೀಕರ್ ಅವರಿಂದ ಅನುಮತಿ ಪಡೆದಿರಲಿಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಸೇರಿ ಹೆಚ್ಚಿನ ನಾಯಕರ ವಿರುದ್ಧ ಬಿಜೆಪಿಯು ಸಿಬಿಐ, ಆದಾಯ ತೆರಿಗೆ ಇಲಾಖೆ, ಇ.ಡಿ ಮೂಲಕ ಕಿರುಕುಳ ನೀಡುತ್ತಿದೆ. ಶಿವಕುಮಾರ್ ವಿರುದ್ಧದ ಪ್ರಕರಣವೂ ಅದರ ಭಾಗವೇ ಆಗಿದೆ’ ಎಂದರು.

ರಾಜ್ಯಪಾಲರಿಗೆ ದೂರು: ಈಶ್ವರಪ್ಪ

ಶಿವಮೊಗ್ಗ: ‘ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಬಿಜೆಪಿ ಸರ್ಕಾರ ನೀಡಿದ್ದ ಅನುಮತಿ ಹಿಂಪಡೆಯುವ ರಾಜ್ಯ ಸರ್ಕಾರದ ನಿರ್ಧಾರ ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ’ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಟೀಕಿಸಿದರು.

‘ಕಳ್ಳ ಎಂದೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಂದಲ್ಲ ಒಂದು ದಿನ ಡಿ.ಕೆ.ಶಿವಕುಮಾರ್ ಜೈಲಿಗೆ ಹೋಗಬೇಕಾಗುತ್ತದೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

‘ಸರ್ಕಾರದ ನಡೆ ವಿರೋಧಿಸಿ ರಾಜ್ಯಪಾಲರಿಗೆ ದೂರು ನೀಡಲು ಬಿಜೆಪಿ ಯೋಚಿಸುತ್ತಿದೆ’ ಎಂದರು.

‘ಕಾನೂನಿನಡಿ ತೀರ್ಮಾನ’

‘ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ಹಿಂಪಡೆಯುವ ನಿರ್ಧಾರವನ್ನು ಕಾನೂನು ಚೌಕಟ್ಟಿನಲ್ಲೇ ಕೈಗೊಳ್ಳಲಾಗಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಿಯಮ ಪಾಲಿಸದೇ ಕೈಗೊಂಡಿದ್ದ ತೀರ್ಮಾನವನ್ನು ಹಿಂಪಡೆಯುವ ನಿರ್ಧಾರ ಮಾಡಿದ್ದೇವೆ. ಅದನ್ನು ಸರ್ಕಾರ ಹೈಕೋರ್ಟ್‌ಗೆ ತಿಳಿಸುತ್ತದೆ. ಮುಂದೆ ಸಿಬಿಐ ಯಾವ ಹೆಜ್ಜೆ ಇಡುತ್ತದೆ? ನ್ಯಾಯಾಲಯ ಯಾವ ತೀರ್ಮಾನ ಕೈಗೊಳ್ಳುತ್ತದೆ? ಎಂಬುದು ವ್ಯವಸ್ಥೆಗೆ ಬಿಟ್ಟ ವಿಚಾರ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಮಂಡ್ಯ ಜಿಲ್ಲೆ ಹಾಲು ಸೊಸೈಟಿಗೆ ರಾಷ್ಟ್ರೀಯ ಪ್ರಶಸ್ತಿ

ನವದೆಹಲಿ: ರಾಷ್ಟ್ರೀಯ ಹಾಲು ದಿನಾಚರಣೆಯ ಅಂಗವಾಗಿ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ನೀಡುವ ‘ರಾಷ್ಟ್ರೀಯ ಗೋಪಾಲ ರತ್ನ’ ಪ್ರಶಸ್ತಿಗೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ‘ಟಿ.ಎಂ. ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘ’ ಆಯ್ಕೆಯಾಗಿದೆ.

‘ಉತ್ಪಾದಕರ ಸಹಕಾರಿ, ಹಾಲು ಉತ್ಪಾದಕ ಕಂಪನಿ ಹಾಗೂ ಡೇರಿ ರೈತ ಸಂಘಟನೆ’ ವಿಭಾಗದಲ್ಲಿ ಸಂಘವು ದ್ವಿತೀಯ ಸ್ಥಾನದ ಪ್ರಶಸ್ತಿಗೆ ಆಯ್ಕೆಯಾಗಿದ್ದು, ₹3 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಪಡೆಯಲಿದೆ. ಅಸ್ಸಾಂನ ಗುವಾಹಟಿಯಲ್ಲಿ ಇದೇ 26ರಂದು ಹೈನುಗಾರಿಕಾ ಸಚಿವ ಪುರುಷೋತ್ತಮ ರೂಪಾಲಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

‘ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಯು ಜಾನುವಾರು ಮತ್ತು ಡೇರಿ ಉದ್ಯಮದಲ್ಲಿ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿ. ಈ ಪ್ರಶಸ್ತಿಯು ಸ್ಥಳೀಯ ಜಾನುವಾರು ಸಾಕಣೆದಾರರು, ಕೃತಕ ಬುದ್ಧಿಮತ್ತೆ ತಂತ್ರಜ್ಞರು ಮತ್ತು ಡೇರಿ ಸಹಕಾರ ಸಂಘಗಳು, ಹಾಲು ಉತ್ಪಾದಕರು, ಹೈನುಗಾರರು ಗುರುತಿಸಿ ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಶ್ರೀ ಅನ್ನ ಖರೀದಿಗೆ ನಿರ್ಮಲಾ ಸಲಹೆ

ನವದೆಹಲಿ: ‘ಕರ್ನಾಟಕದ ಬರಪೀಡಿತ ಪ್ರದೇಶದ ರೈತರನ್ನು ಭೇಟಿ ಮಾಡುವಂತೆ ಐಟಿಸಿಯ ಸಿಎಂಡಿ ಸಂಜೀವ್ ಪುರಿ ಅವರಿಗೆ ತಿಳಿಸಿದ್ದೇನೆ ಹಾಗೂ ‘ಶ್ರೀ ಅನ್ನ’ ಸಿರಿಧಾನ್ಯ ಖರೀದಿಸಲು ಅನುಕೂಲವಾಗುವಂತೆ ಸಲಹೆ ನೀಡಿದ್ದೇನೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ‘ಕರ್ನಾಟಕದ ಕಂದಾಯ ಸಚಿವ ಕೃಷ್ಣಭೈರೇಗೌಡ ಮತ್ತು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಅವರು ಗುರುವಾರ ನನ್ನನ್ನು ಭೇಟಿಯಾಗಿ ಬರ ಪರಿಸ್ಥಿತಿ ಕುರಿತು ಚರ್ಚೆ ನಡೆಸಿದ್ದಾರೆ. ಕೇಂದ್ರ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ಸಚಿವರಿಗೆ ತಿಳಿಸಲಾಗಿದೆ’ ಎಂದು ಹೇಳಿದ್ದಾರೆ.

ಹುಲಿ ದಾಳಿ; ಮಹಿಳೆ ಸಾವು

ನಂಜನಗೂಡು: ತಾಲ್ಲೂಕಿನ ಬಳ್ಳೂರು ಹುಂಡಿ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ದನ ಮೇಯಿಸುತ್ತಿದ್ದ ರತ್ನಮ್ಮ (49) ಅವರ ಮೇಲೆ ಹುಲಿ ದಾಳಿ ನಡೆಸಿ ಕೊಂದಿದೆ.

ಹುಲಿಯು ಮೃತ ದೇಹವನ್ನು 3 ಕಿ.ಮೀ ದೂರ ಎಳೆದೊಯ್ದು ಅರೆಬರೆ ತಿಂದು ಹೋಗಿದೆ. ಅರಣ್ಯ ಅಧಿಕಾರಿಗಳು ಸಂಜೆಯಾದರೂ ಸ್ಥಳಕ್ಕೆ ಬಂದಿರಲಿಲ್ಲ. ಗ್ರಾಮಸ್ಥರೇ ಮೃತ ದೇಹ ಪತ್ತೆ ಮಾಡಿದರು. ಹುಲಿ ಕೆಲ ದಿನದ ಹಿಂದೆ ಎತ್ತಿನ ಮೇಲೆ ದಾಳಿ ನಡೆಸಿತ್ತು.

ಡಿಕೆಶಿಗೆ ರಕ್ಷಣೆ: ವಿಪಕ್ಷ ಆಪಾದನೆ

ಒಂದನೇ ಪುಟದಿಂದ...

ಶಿವಕುಮಾರ್

ಕಾನೂನು ಪ್ರಕ್ರಿಯೆಗಳನ್ನು ಸಮರ್ಪಕವಾಗಿ ನಡೆಸದೇ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ವಹಿಸಲಾಗಿತ್ತು ಎಂಬ ರಾಜ್ಯ ಸರ್ಕಾರದ ಆರೋಪವನ್ನು ತಳ್ಳಿಹಾಕಿದ ಯಡಿಯೂರಪ್ಪ, ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಬರೆದಿದ್ದ ಪತ್ರವನ್ನು ಮಾಧ್ಯಮಗಳ ಎದುರು ಓದಿದರು.

ಸರ್ಕಾರದ ತೀರ್ಮಾನವನ್ನು ಟೀಕಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ‘ಇಡೀ ಸಂಪುಟ ಡಿ.ಕೆ. ಶಿವಕುಮಾರ್ ಪಾದದಡಿಯಲ್ಲಿದೆ’ ಎಂದು ಆರೋಪಿಸಿದರು.

ಪ್ರತಿಭಟನೆಗೆ ಬಿಜೆಪಿ ಸಜ್ಜು: ಸಂಪುಟದ ತೀರ್ಮಾನವನ್ನು ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ರಾಜ್ಯ ಘಟಕ ಪ್ರಕಟಿಸಿದೆ. ರಾಜ್ಯದೆಲ್ಲೆಡೆ ಸರಣಿ ಪ್ರತಿಭಟನೆಗಳನ್ನು ನಡೆಸುವುದಕ್ಕೂ ವಿರೋಧ ಪಕ್ಷ ಸಜ್ಜಾಗುತ್ತಿದೆ.

ಬೆಂಬಲಕ್ಕೆ ನಿಂತ ಕಾಂಗ್ರೆಸ್: ವಿರೋಧ ಪಕ್ಷಗಳ ಟೀಕಾಪ್ರಹಾರದ ಮಧ್ಯೆಯೇ ಸರ್ಕಾರದ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಕಾಂಗ್ರೆಸ್ ಮಾಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಪ್ರಮುಖರು ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆಯುವ ನಿರ್ಧಾರ ಕಾನೂನುಬದ್ಧ ಎಂದು ವಾದಿಸಿದರು.

ಪೊಲೀಸರಿಂದ ತನಿಖೆಗೆ ಎ.ಜಿ ಸಲಹೆ

ಒಂದನೇ ಪುಟದಿಂದ..

‘2019ರ ಸೆ. 19ರಂದು ಜಾರಿ ನಿರ್ದೇಶನಾಲಯವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು. ಅದರಲ್ಲಿ ಸಿಬಿಐ ತನಿಖೆ ನಡೆಸಬೇಕೆಂಬ ಕೋರಿಕೆ ಇರಲಿಲ್ಲ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ಅಗತ್ಯವಿದೆ ಎಂಬ ಉಲ್ಲೇಖವಷ್ಟೇ ಇತ್ತು. ಈ ಪ್ರಕರಣದ ತನಿಖೆ ನಡೆಸಲು ರಾಜ್ಯದ ಪೊಲೀಸರು/ ಲೋಕಾಯುಕ್ತ/ ಸಿಐಡಿ ಪೊಲೀಸರು ಅಸಮರ್ಥರಾಗಿದ್ದರು ಎಂಬುದನ್ನು ನಿರೂಪಿಸುವ ಯಾವ ದಾಖಲೆಯೂ ಇಲ್ಲ. ಆಗಿನ ಮುಖ್ಯಮಂತ್ರಿಯವರು ನೀಡಿದ್ದ ಮೌಖಿಕ ಸೂಚನೆಯಷ್ಟನ್ನೇ ಆಧರಿಸಿ ಸಿಬಿಐ ತನಿಖೆಗೆ ಆದೇಶಿಸಲಾಗಿತ್ತು’ ಎಂದು ಎ.ಜಿ ತಮ್ಮ ಅಭಿಪ್ರಾಯದಲ್ಲಿ ತಿಳಿಸಿದ್ದಾರೆ.

‘ಸಿಬಿಐ ತನಿಖೆಗೆ ಆದೇಶಿಸುವ ಕುರಿತು ಆಗಿನ ಎ.ಜಿಯವರ ಅಭಿಪ್ರಾಯವನ್ನೇ ಪಡೆದಿರಲಿಲ್ಲ. ಕೇಂದ್ರ ಗೃಹ ಸಚಿವಾಲಯದ ಮಾರ್ಗಸೂಚಿ ಪ್ರಕಾರ, ನಿಗದಿತ ನಮೂನೆಯಲ್ಲಿ ಪ್ರಕರಣದ ವಿವರವನ್ನೂ ಒದಗಿಸಿರಲಿಲ್ಲ.

ಕರ್ನಾಟಕ ಲೋಕಾಯುಕ್ತವು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಂದಿನ ಹಾಲಿ ಮುಖ್ಯಮಂತ್ರಿ ಹಾಗೂ ಸಚಿವರ ವಿರುದ್ಧವೂ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದರು. ಆದರೆ, ಶಿವಕುಮಾರ್ ವಿರುದ್ಧದ ಪ್ರಕರಣವನ್ನು ತರಾತುರಿಯಲ್ಲಿ ಸಿಬಿಐಗೆ ವಹಿಸಲಾಗಿತ್ತು’ ಎಂದೂ ಹೇಳಿದ್ದಾರೆ.

‘ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲೇಬೇಕಾದ ಯಾವ ವಿಶೇಷ ಸಂದರ್ಭ ಮತ್ತು ಕಾರಣಗಳಿದ್ದವು ಎಂಬುದನ್ನು ರಾಜ್ಯ ಸರ್ಕಾರವು ತಿಳಿಸಿರಲಿಲ್ಲ. ಕಾನೂನಿನ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸದೇ ನಿರ್ಧಾರ ಕೈಗೊಳ್ಳಲಾಗಿತ್ತು’ ಎಂದು ಉಲ್ಲೇಖಿಸಿದ್ದಾರೆ.

‘ನ್ಯಾಯಾಲಯದಲ್ಲಿ ಹೋರಾಟಕ್ಕೆ ಸಿದ್ಧ’

ಒಂದನೇ ಪುಟದಿಂದ...

ಈಗ ಸರ್ಕಾರ ಹೇಳುತ್ತಿರುವುದನ್ನು ಶಿವಕುಮಾರ್ ಅವರೇ ಹೈಕೋರ್ಟ್‌ನಲ್ಲಿ ಪ್ರಸ್ತಾಪಿಸಿದ್ದರು. ನ್ಯಾಯಾಲಯ ಅದನ್ನು ತಳ್ಳಿಹಾಕಿತ್ತು. ಈಗಲೂ ಸರ್ಕಾರದ ತೀರ್ಮಾನವನ್ನು ನ್ಯಾಯಾಲಯ ಒಪ್ಪುವುದಿಲ್ಲ. ಅಗತ್ಯ ಕಂಡುಬಂದಲ್ಲಿ ನ್ಯಾಯಾಲಯಕ್ಕೆ ಹೆಚ್ಚಿನ ದಾಖಲೆ ಒದಗಿಸಲು ತಾವು ಸಿದ್ಧ ಎಂದು ಹೇಳಿದರು.

‘ಎ.ಜಿ ಹುದ್ದೆಯಲ್ಲಿರುವವರು ಕಾನೂನು ಪ್ರಕಾರ ನಡೆದುಕೊಳ್ಳಬೇಕು. ಈ ಪ್ರಕರಣದಲ್ಲಿ ಕಾನೂನು ಚೌಕಟ್ಟು ಮೀರಿ ಅಭಿಪ್ರಾಯ ಕೊಟ್ಟಿದ್ದಾರೆ. ಸಿದ್ದರಾಮಯ್ಯ ಅವರು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ರಾಜ್ಯದ ಜನರು ಇದನ್ನು ಒಪ್ಪುವುದಿಲ್ಲ. ಈಗಲಾದರೂ ಸರ್ಕಾರ ತನ್ನ ನಿರ್ಧಾರವನ್ನು ಬದಲಿಸಬೇಕು’ ಎಂದು ಆಗ್ರಹಿಸಿದರು.

‘ಸಿಬಿಐಗೆ ಕೊಟ್ಟಿದ್ದೇ ಕಾನೂನುಬಾಹಿರ’

ಒಂದನೇ ಪುಟದಿಂದ...

‘ಇದನ್ನು ಪಡೆಯದೇ ಅಂದಿನ ಮುಖ್ಯಮಂತ್ರಿ ಮೌಖಿಕವಾಗಿ ಆದೇಶ ಹೊರಡಿಸಿದ್ದರು’ ಎಂದರು. ‘ನ್ಯಾಯಾಲಯದಲ್ಲಿ ಮೊಕದ್ದಮೆ ಏನಾಗಿದೆ ಎಂಬುದು ಗೊತ್ತಿಲ್ಲ. ಹಿಂದಿನ ಸರ್ಕಾರ ನೀಡಿದ್ದ ಅನುಮತಿ ಕಾನೂನುಬದ್ಧವಾಗಿರಲಿಲ್ಲ. ಹೀಗಾಗಿ, ಸಂಪುಟದಲ್ಲಿ ಚರ್ಚಿಸಿ ಹಿಂಪಡೆದಿದ್ದೇವೆ’ ಎಂದು ತಿಳಿಸಿದರು.

> **ಗುರುವಾರ ಸಂಪುಟ ಸಭೆಗೆ ನಾನು ಹೋಗಿರಲಿಲ್ಲ. ತೀರ್ಮಾನದ ಬಗ್ಗೆ ಪತ್ರಿಕೆಗಳಲ್ಲಿ ಓದಿರುವೆ. ಈ ಬಗ್ಗೆ ಯಾರು ಮಾತನಾಡಬೇಕೋ ಅವರು ಮಾತನಾಡುತ್ತಾರೆ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಅಪಘಾತ ರಹಿತ ಚಾಲನೆ ಮಾಡಿದ ಸಾರಿಗೆ ನಿಗಮಗಳ ಚಾಲಕರನ್ನು ‘ಶಕ್ತಿ–ಶತಕೋಟಿ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಗೃಹಸಚಿವ ಜಿ. ಪರಮೇಶ್ವರ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇದ್ದರು. –ಪ್ರಜಾವಾಣಿ ಚಿತ್ರ

ಶಕ್ತಿ ಯೋಜನೆ ‘ಶತಕೋಟಿ’ ಸಂಭ್ರಮದಲ್ಲಿ ಸಿ.ಎಂ ಪ್ರಶ್ನೆ

ಜನರ ದುಡ್ಡು ಜನರಿಗೆ ನೀಡಿದರೆ ಬಿಜೆಪಿಗೇಕೆ ಉರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ದುಡ್ಡನ್ನು ಜನರಿಗೇ ನೀಡುವ ಯೋಜನೆಗಳನ್ನು ರೂಪಿಸಿದ್ದಲ್ಲದೇ ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಇದಕ್ಕೆ ಬಿಜೆಪಿಯವರಿಗೆ ಯಾಕೆ ಉರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಾರಿಗೆ ಇಲಾಖೆ ಶುಕ್ರವಾರ ಹಮ್ಮಿಕೊಂಡಿದ್ದ ಶಕ್ತಿ ಯೋಜನೆಯ ‘ಶತಕೋಟಿ ಸಂಭ್ರಮ’ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಪಘಾತ ರಹಿತ ಚಾಲಕರಿಗೆ ಚಿನ್ನದ ಪದಕ ಪ್ರದಾನ ಮಾಡಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆ ಜಾರಿ ಆಗುವುದಿಲ್ಲ, ಜಾರಿ ಆದರೆ ರಾಜ್ಯ ಆರ್ಥಿಕ ದಿವಾಳಿ ಆಗುತ್ತದೆ ಎಂದು ಪ್ರಧಾನಿ ಮೋದಿ ಸೇರಿ ಬಿಜೆಪಿ ನಾಯಕರು ಆಡಿಕೊಂಡಿದ್ದರು. ಈಗ ಶಕ್ತಿ ಯೋಜನೆಯಲ್ಲಿ ಮಹಿಳೆಯರು ಉಚಿತವಾಗಿ 100 ಕೋಟಿ ಬಾರಿ ಪ್ರಯಾಣಿಸಿದ್ದಾರೆ. ಇನ್ನಾದರೂ ಸುಳ್ಳು ಹೇಳುವುದನ್ನು ಬಿಜೆಪಿಯರುವ ನಿಲ್ಲಿಸಬೇಕು. ಎಲ್ಲ ವರ್ಗದ ಬಡವರಿಗೆ-ಮಧ್ಯಮ ವರ್ಗದವರಿಗೆ ಶಕ್ತಿ ತುಂಬುವ ಕೆಲಸದಲ್ಲಿ ಇಟ್ಟ ಹೆಜ್ಜೆ ಹಿಂದಿಡುವುದಿಲ್ಲ ಎಂದು ತಿಳಿಸಿದರು.

ಬಸ್ ಪ್ರಯಾಣಿಕರಲ್ಲಿ ಶೇ 55 ರಷ್ಟು ಉಚಿತ ಬಸ್ ಪ್ರಯಾಣ ಮಾಡಿದ ಮಹಿಳೆಯರೇ ಸೇರಿದ್ದಾರೆ. 1.17 ಕೋಟಿ ಮಹಿಳೆಯರು ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿಕೊಂಡಿದ್ದು, 1.10 ಕೋಟಿ ಮಹಿಳೆಯರಿಗೆ ತಿಂಗಳಿಗೆ ₹ 2 ಸಾವಿರ ತಲುಪುತ್ತಿದೆ. ಇದು ಬಿಜೆಪಿಯವರ ಹೊಟ್ಟೆಕಿಚ್ಚಿಗೆ ಕಾರಣವಾಗಿದೆ ಎಂದು ವಿವರಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಮತ್ತು ಮಾಜಿ ಶಾಸಕಿ ಸೌಮ್ಯ ರೆಡ್ಡಿ, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್. ವಿ.ಪ್ರಸಾದ್, ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎಸ್. ಭರತ್, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎನ್. ರಾಚಪ್ಪ ಇದ್ದರು.

ಕೋವಿಡ್ ನಂತರ ಕಾರ್ಮಿಕರ ಕಾರ್ಡ್‌ಗಳ ಸಂಖ್ಯೆ ದಿಢೀರ್ ಏರಿಕೆ

ನಕಲಿ ಕಾರ್ಡ್ ಪತ್ತೆಗೆ ತಂಡ ರಚನೆ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ರಾಜ್ಯದಲ್ಲಿ ನಕಲಿ ಕಾರ್ಮಿಕರ ಸಂಖ್ಯೆ ಮಿತಿಮೀರಿದ್ದು, ಸರ್ಕಾರಿ ಸವಲತ್ತುಗಳು ಅನರ್ಹರ ಪಾಲಾಗುತ್ತಿವೆ ಎಂಬ ದೂರು ಕೇಳಿಬಂದ ಕಾರಣ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ನಕಲಿ ಕಾರ್ಮಿಕರ ಕಾರ್ಡ್‌ಗಳನ್ನು ಪತ್ತೆ ಮಾಡಿ, ರದ್ದುಗೊಳಿಸಲು ಮುಂದಾಗಿದೆ.

ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 18.49 ಲಕ್ಷ ಮಹಿಳಾ ಕಾರ್ಮಿಕರು, 27.83 ಲಕ್ಷ ಪುರುಷ ಕಾರ್ಮಿಕರು ಹಾಗೂ 9,076 ಇತರೆ ಸೇರಿದಂತೆ ಒಟ್ಟು 46.42 ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡು, ‘ಕಾರ್ಮಿಕರ ಕಾರ್ಡ್’ ಪಡೆದಿದ್ದಾರೆ. ಇವರಲ್ಲಿ ನಕಲಿ ಕಾರ್ಮಿಕರನ್ನು ಪತ್ತೆ ಹಚ್ಚಿ, ನೈಜ ಕಾರ್ಮಿಕರ ಪಟ್ಟಿ ಸಿದ್ಧಪಡಿಸಲು ಮಂಡಳಿ ಕ್ರಮ ಕೈಗೊಂಡಿದೆ.

ನಕಲಿ ಕಾರ್ಡ್ ಹಾವಳಿ: ಹಾವೇರಿ ಜಿಲ್ಲೆಯಲ್ಲಿ 2.96 ಲಕ್ಷ ಕಟ್ಟಡ ಕಾರ್ಮಿಕರು ನೋಂದಣಿಯಾಗಿದ್ದಾರೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ 3.30 ಲಕ್ಷ ಮನೆಗಳಿವೆ. ಅಂದರೆ ಪ್ರತಿ ಮನೆಗೊಂದರಂತೆ ನೋಂದಣಿ ಕಾರ್ಡ್ ಇರಬಹುದು, ಕಟ್ಟಡ ಕಾರ್ಮಿಕರಲ್ಲದವರು ನೋಂದಣಿಯಾಗಿರಬಹುದು ಎಂಬ ಸಂಶಯದಿಂದ ಜಿಲ್ಲೆಯಾದ್ಯಂತ ನಕಲಿ ಕಾರ್ಡ್‌ಗಳನ್ನು ಪತ್ತೆ ಹಚ್ಚಿ, ರದ್ದುಗೊಳಿಸಲು ಕಾರ್ಮಿಕ ಕಲ್ಯಾಣ ಮಂಡಳಿಯ ಕಾರ್ಯದರ್ಶಿ ಹಾಗೂ ಜಂಟಿ ಕಾರ್ಯದರ್ಶಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ.

ಕಾರ್ಮಿಕರ ನೈಜತೆಯನ್ನು ಸ್ಥಳೀಯ ಕಾರ್ಮಿಕ ನಿರೀಕ್ಷಕರು, ಎಕ್ಸಿಕ್ಯೂಟಿವ್ ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳು ಖುದ್ದು ಸ್ಥಳ ಪರಿಶೀಲನೆ ಮಾಡಬೇಕು. ಕಲ್ಯಾಣ ಮಂಡಳಿಯಿಂದ ನೀಡಿರುವ ಪಟ್ಟಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ನೈಜ ಕಾರ್ಮಿಕರಲ್ಲವೆಂಬ ಬಗ್ಗೆ ಮಾಹಿತಿ ದೊರೆತರೆ, ಮಹಜರು ಪ್ರತಿಯಲ್ಲಿ ನಮೂದಿಸಿ, ಸ್ಥಳೀಯ ಸಾಕ್ಷಿಗಳ ಸಮಕ್ಷಮ ಪಂಚನಾಮೆ ಜರುಗಿಸಬೇಕು ಎಂದು ಕಾರ್ಮಿಕ ಕಲ್ಯಾಣ ಮಂಡಳಿಯ ಜಂಟಿ ಕಾರ್ಯದರ್ಶಿ ಆದೇಶಿಸಿದ್ದಾರೆ.

ಕೋವಿಡ್ ನಂತರ ಕಾರ್ಡ್ ಹೆಚ್ಚಳ: ‘ಕೋವಿಡ್ ಬರುವ ಮುನ್ನ ಹಾವೇರಿ ಜಿಲ್ಲೆಯಲ್ಲಿ ಅಂದಾಜು 50 ಸಾವಿರ ಕಾರ್ಮಿಕರ ಕಾರ್ಡ್‌ಗಳಿದ್ದವು. ಕೋವಿಡ್ ಬಂದ ನಂತರ ಕಾರ್ಡ್‌ಗಳ ಸಂಖ್ಯೆ 2.96 ಲಕ್ಷಕ್ಕೆ ದಿಢೀರ್ ಏರಿಕೆಯಾಯಿತು. ಕೋವಿಡ್ ಸಂದರ್ಭ ಕಾರ್ಮಿಕ ಇಲಾಖೆಯಿಂದ ನೀಡಿದ ಆಹಾರ ಕಿಟ್ ಮತ್ತು ಕಾರ್ಮಿಕರ ಖಾತೆಗೆ ₹3 ಸಾವಿರ ಪ್ರೋತ್ಸಾಹಧನ ಪಡೆಯಲು ಕಾರ್ಮಿಕರಲ್ಲದವರು ಕಾರ್ಡ್ ಮಾಡಿಸಿಕೊಂಡು, ಸೌಲಭ್ಯಗಳಿಗಾಗಿ ಮುಗಿಬಿದ್ದರು. ಹಳ್ಳಿ–ಹಳ್ಳಿಯಲ್ಲೂ ಏಜೆಂಟರು ಹುಟ್ಟಿಕೊಂಡರು’ ಎನ್ನುತ್ತಾರೆ ಇಲಾಖೆ ಅಧಿಕಾರಿಗಳು.

5,500 ಕಾರ್ಡ್ ರದ್ದು: ‘ಹಾವೇರಿ ಜಿಲ್ಲೆಯಲ್ಲಿ ಈಗಾಗಲೇ 5,500 ನಕಲಿ ಕಾರ್ಡ್‌ಗಳನ್ನು ರದ್ದುಗೊಳಿಸಿದ್ದೇವೆ. ಹೊಸದಾಗಿ ಸಲ್ಲಿಕೆಯಾಗಿದ್ದ 20,657 ಆನ್‌ಲೈನ್ ಅರ್ಜಿಗಳಲ್ಲಿ 3,945 ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗಿದೆ. ಬಾಕಿ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ. ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಜಿಲ್ಲೆಗೆ ಅಧಿಕಾರಿಗಳ ತಂಡ ಬಂದಿದ್ದು, ಎಂಟು ತಾಲ್ಲೂಕುಗಳಲ್ಲೂ ನಕಲಿ ಕಾರ್ಡ್ ಪತ್ತೆ ಹಚ್ಚುವ ಕಾರ್ಯ ಕೈಗೊಳ್ಳಲಾಗಿದೆ’ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಕೊರಳಿ ‘ಪ್ರಜಾವಾಣಿ’ಗೆ ತಿಳಿಸಿದರು.

ವಜಾಗೊಂಡ ನೌಕರರಿಂದ ನಕಲಿ ಕಾರ್ಡ್ ಪತ್ತೆ ಕಾರ್ಯ!

ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಾವೇರಿ ಜಿಲ್ಲೆಯ 13 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನಕಲಿ ಕಾರ್ಡ್ ಮಾಡಿಕೊಟ್ಟ ಆರೋಪದಲ್ಲಿ ಕೆಲಸದಿಂದ ವಜಾಗೊಳಿಸುವಂತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ನ.5ರಂದು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭ ಸೂಚಿಸಿದ್ದರು.

ವಜಾಗೊಂಡ ನೌಕರರು ಕೇವಲ 15 ದಿನಗಳಲ್ಲೇ ಮತ್ತೆ ಕೆಲಸಕ್ಕೆ ಹಾಜರಾಗಿರುವುದು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ನೌಕರರನ್ನೇ ನಕಲಿ ಕಾರ್ಡ್‌ಗಳ ಪತ್ತೆ ಹಚ್ಚುವ ಕಾರ್ಯಕ್ಕೆ ನೇಮಿಸಿರುವುದಕ್ಕೆ ಕಾರ್ಮಿಕ ಮುಖಂಡರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ.

‘ಸೇವೆಯಿಂದ ಬಿಡುಗಡೆಗೊಂಡಿದ್ದ ನೌಕರರು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟು, ಮತ್ತೆ ಕೆಲಸಕ್ಕೆ ಹಾಜರಾಗಿದ್ದಾರೆ. ಇಲಾಖೆಯಲ್ಲಿ ಸಿಬ್ಬಂದಿಯ ತೀವ್ರ ಕೊರತೆಯಿರುವ ಕಾರಣ, ನಕಲಿ ಕಾರ್ಡ್ ಪತ್ತೆ ಹಚ್ಚುವ ಕಾರ್ಯಕ್ಕೆ ಈ 13 ಸಿಬ್ಬಂದಿಯನ್ನು ನೇಮಿಸಲಾಗಿದೆ’ ಎಂದು ಕಾರ್ಮಿಕ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

> **ಹಾವೇರಿ ಜಿಲ್ಲೆಯಲ್ಲಿ ನಕಲಿ ಕಾರ್ಡ್ ಪತ್ತೆ ಕಾರ್ಯ ಆರಂಭಗೊಂಡಿದ್ದು, ಉಳಿದ ಜಿಲ್ಲೆಗಳಲ್ಲೂ ಪರಿಶೀಲನೆ ನಡೆಸಲಾಗುತ್ತದೆ. ಅನರ್ಹರು ಸವಲತ್ತು ಪಡೆಯದಂತೆ ಕ್ರಮ ಕೈಗೊಳ್ಳಲಾಗುತ್ತದೆ**
> **ಭಾರತಿ ಡಿ, ಸಿಇಒ,** ಕಾರ್ಮಿಕ ಕಲ್ಯಾಣ ಮಂಡಳಿ

> **ಕಾರ್ಮಿಕ ಇಲಾಖೆ ಅಧಿಕಾರಿಗಳು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರತುಪಡಿಸಿ, ಬೇರೆ ಇಲಾಖೆ ಅಧಿಕಾರಿಗಳಿಂದ ಪಾರದರ್ಶಕ ತನಿಖೆ ನಡೆಸಬೇಕು**
> **ಅಜ್ಜಪ್ಪ ಹಡಪದ,** ಅಧ್ಯಕ್ಷ, ಅಖಿಲ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘ

ಶೌರ್ಯ ಪ್ರಶಸ್ತಿ ಪಡೆದ ವೈ.ಡಿ. ಅರ್ಜುನ ಸಾಗರ್, ಆರ್.ಸಿ. ಗೌಡ ಹಾಗೂ ಶಾಲು ಜಿತೇಂದ್ರ

ಮೂವರಿಗೆ ‘ಶೌರ್ಯ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧೈರ್ಯ, ಸಾಹಸ ಪ್ರದರ್ಶಿಸಿ ಇತರರ ಪ್ರಾಣ ಉಳಿಸಿದ ಇಬ್ಬರು ಬಾಲಕರು, ಒಬ್ಬ ಬಾಲಕಿಗೆ 2023–24ನೇ ಸಾಲಿನ ‘ಶೌರ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಬಾಲಭವನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಪ್ರಶಸ್ತಿ ವಿತರಿಸಿದರು. ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ನೋತ್ಯಾ ಗ್ರಾಮದ ವೈ.ಡಿ. ಅರ್ಜುನ ಸಾಗರ್, ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ರಾಗಲಹಳ್ಳಿಯ ಆರ್.ಸಿ. ಗೌಡ, ತುಮಕೂರು ತಾಲ್ಲೂಕು ಊರುಕೆರೆಯ ಶಾಲು ಜಿತೇಂದ್ರ ಅವರಿಗೆ ಪ್ರಶಸ್ತಿ, ತಲಾ ₹10 ಸಾವಿರ ನಗದು ನೀಡಲಾಯಿತು.

ಬೆಳಗಾವಿ ಜಿಲ್ಲೆ ಸೋಮವಾರ ಪೇಟೆಯ ರೋಲರ್ ಅಸೋಸಿಯೇಷನ್, ಬೀದರ್ ಜಿಲ್ಲೆ ಬೊಮ್ಮಗೊಂಡೇಶ್ವರ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್, ಉಡುಪಿ ಜಿಲ್ಲೆಯ ಗುರು ರಾಘವೇಂದ್ರ ಸೇವಾ ಟ್ರಸ್ಟ್ ಹಾಗೂ ಶಿವಮೊಗ್ಗ ಜಿಲ್ಲೆಯ ಬಾಪೂಜಿ ಎಜುಕೇಷನಲ್ ಸೊಸೈಟಿಗೆ ರಾಜ್ಯಮಟ್ಟದ ಪ್ರಶಸ್ತಿಯೊಂದಿಗೆ ತಲಾ ₹1 ಲಕ್ಷ ನಗದು ವಿತರಿಸಲಾಯಿತು.

ಧಾರವಾಡ ಜಿಲ್ಲೆಯ ಶಿರಗುಪ್ಪಿ ಗ್ರಾಮದ ಪರಶುರಾಮ ದಿವಾನದ, ಬಳ್ಳಾರಿ ಜಿಲ್ಲೆಯ ರಜನಿ ಲಕ್ಕಾ, ಮಂಡ್ಯ ಜಿಲ್ಲೆಯ ಎಚ್‌.ಆರ್. ಕನ್ನಿಕಾ ಹಾಗೂ ತುಮಕೂರು ಜಿಲ್ಲೆಯ ಲೋಕರಾಜು ಅರಸು ಅವರಿಗೆ ತಲಾ ₹25 ಸಾವಿರ ನಗದಿನೊಂದಿಗೆ ವೈಯಕ್ತಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸುಭಾಷಿತ

ನನ್ನ ಅಡಿಪಾಯದಲ್ಲೇ ಏನೋ ಕೊರತೆಯಾಗಿದೆ. ಹೀಗಿರುವಾಗ, ಬಡಪಾಯಿ ಗೋಡೆಗಳನ್ನು ನಾನು ದೂರಿದರೆ ಏನು ಪ್ರಯೋಜನ?

-ಜಾವೇದ್ ಅಖ್ತರ್

ಪಿಎಸ್ಐ ಹುದ್ದೆ ನೇಮಕಾತಿ ಮರುಪರೀಕ್ಷೆ ಹೊಣೆ ಕೆಇಎಗೆ: ಸಮರ್ಪಕ ನಿರ್ಧಾರ

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ಹುದ್ದೆಗಳ ನೇಮಕಾತಿಗೆ ಮರುಪರೀಕ್ಷೆ ನಡೆಸುವ ಹೊಣೆಗಾರಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ವಹಿಸುವ ಮೂಲಕ ಕರ್ನಾಟಕ ಸರ್ಕಾರವು ಸರಿಯಾದ ನಿರ್ಧಾರ ಕೈಗೊಂಡಿದೆ. ಮರುಪರೀಕ್ಷೆ ಪ್ರಸ್ತಾವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪಿಎಸ್ಐ ಹುದ್ದೆಗಳ ನೇಮಕಕ್ಕೆ ಈ ಹಿಂದೆ ನಡೆದ ಪರೀಕ್ಷೆಯಲ್ಲಿ ಅಕ್ರಮ ಆಗಿದೆ; ಹಾಗಾಗಿ, ಮರುಪರೀಕ್ಷೆ ನಡೆಸಲೇಬೇಕು ಎಂದು ಹೇಳಿದೆ. ಜೊತೆಗೆ, ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಸ್ವತಂತ್ರ ಸಂಸ್ಥೆಯೊಂದಕ್ಕೆ ವಹಿಸಬೇಕು ಎಂದಿದೆ. ಪರೀಕ್ಷೆ ನಡೆಸಲು ಕೆಇಎಯನ್ನು ಆಯ್ಕೆ ಮಾಡಿರುವುದು ಸಮರ್ಪಕವಾಗಿದೆ. ಏಕೆಂದರೆ, ಈ ಸಂಸ್ಥೆಯು 1994ರಿಂದಲೇ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಎಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಿದ ಅನುಭವವನ್ನು ಹೊಂದಿದೆ. ಸೊಸೈಟಿಗಳ ನೋಂದಣಿ ಕಾಯ್ದೆಯ ಅಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸುವ ಮೂಲಕ ಸರ್ಕಾರವು ಕೆಇಎಯನ್ನು 2006ರಲ್ಲಿ ಸ್ವಾಯತ್ತ ಸಂಸ್ಥೆಯಾಗಿಸಿದೆ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ 545 ಹುದ್ದೆಗಳನ್ನು ಭರ್ತಿ ಮಾಡಲು ಮರುಪರೀಕ್ಷೆಯು ಡಿಸೆಂಬರ್ 23ರಂದು ನಡೆಯಲಿದೆ.

ನೇಮಕಾತಿ ಪರೀಕ್ಷೆಗಳ ಪರಿಶುದ್ಧತೆಯನ್ನು ಮರಳಿ ತರಬೇಕಾದರೆ ಕೆಪಿಎಸ್‌ಸಿಯನ್ನು ಸಂಪೂರ್ಣವಾಗಿ ಪುನರ್‌ರಚಿಸಬೇಕು

ಪೊಲೀಸ್ ಇಲಾಖೆಯ ನೇಮಕಾತಿ ವಿಭಾಗವು 2021ರ ಅಕ್ಟೋಬರ್‌ನಲ್ಲಿ ನೇಮಕಾತಿ ಪರೀಕ್ಷೆಯನ್ನು ನಡೆಸಿತ್ತು. ಆದರೆ, ಪರೀಕ್ಷಾ ಅಕ್ರಮಗಳ ಹಲವು ಪ್ರಕರಣಗಳು ಬೆಳಕಿಗೆ ಬಂದ ಕಾರಣ ಆಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರವು ಇಡೀ ಪ್ರಕ್ರಿಯೆಯನ್ನು ರದ್ದುಗೊಳಿಸಿತ್ತು. ಪರೀಕ್ಷೆಯಲ್ಲಿ ಅಕ್ರಮ ಎಸಗುವುದಕ್ಕಾಗಿ ಕೆಲವು ಆರೋಪಿಗಳು ಬ್ಲೂಟೂತ್ ಉಪಕರಣಗಳನ್ನು ಬಳಸಿರುವುದು ಪತ್ತೆಯಾಗಿತ್ತು. ಕೆಲವು ಆರೋಪಿಗಳು ಒಎಂಆರ್ ಹಾಳೆಗಳನ್ನು ತಿದ್ದುವ ಕೆಲಸವನ್ನೂ ಮಾಡಿದ್ದರು. 52 ಅಭ್ಯರ್ಥಿಗಳನ್ನು ಕಾಯಂ ಆಗಿ ಡಿಬಾರ್ ಮಾಡಲಾಗಿದೆ. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಮೃತ್ ಪೌಲ್ ಮತ್ತು ಪೊಲೀಸ್ ಇಲಾಖೆಯ ಹಲವು ಹಿರಿಯ ಅಧಿಕಾರಿಗಳನ್ನು ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾಗಿದೆ. 54 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಇಡೀ ಪ್ರಕ್ರಿಯೆಯನ್ನು ಸರ್ಕಾರವು ರದ್ದುಗೊಳಿಸಿದ್ದನ್ನು ತಾತ್ಕಾಲಿಕ ಪಟ್ಟಿಗೆ ಆಯ್ಕೆಯಾಗಿದ್ದ ಹಲವು ಅಭ್ಯರ್ಥಿಗಳು ಪ್ರಶ್ನಿಸಿದ್ದರು. ಕಳಂಕಿತ ಅಭ್ಯರ್ಥಿಗಳಿಗೆ ಮಾತ್ರ ಮರುಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದ್ದರು. ಆದರೆ ಈ ವಾದವನ್ನು ಹೈಕೋರ್ಟ್ ಪುರಸ್ಕರಿಸಲಿಲ್ಲ. ಅಂತಹ ವರ್ಗೀಕರಣ ಸಾಧ್ಯವಿಲ್ಲ ಎಂದು ಹೇಳಿತು. ಅಷ್ಟೇ ಅಲ್ಲದೆ, ಪರೀಕ್ಷೆಗೆ ಮೊದಲೇ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವುದರಿಂದ ತಾತ್ಕಾಲಿಕ ಆಯ್ಕೆಪಟ್ಟಿಗೆ ಅರ್ಜಿದಾರರ ಸೇರ್ಪಡೆ ಕೂಡ ಸಂದೇಹದಿಂದ ಮುಕ್ತವಾಗಿಲ್ಲ ಎಂದು ಹೇಳಿದೆ. ನೇಮಕಾತಿಯ ಉಸ್ತುವಾರಿ ಹೊತ್ತಿದ್ದ ಹಿರಿಯ ಅಧಿಕಾರಿಯ ಬಂಧನದಿಂದಾಗಿ ವ್ಯವಸ್ಥೆಯ ಮೇಲೆ ಸಾರ್ವಜನಿಕರಿಗೆ ಇದ್ದ ವಿಶ್ವಾಸವು ಕುಸಿದಿದೆ. ಮರುಪರೀಕ್ಷೆ ನಡೆಸಲು ಸರ್ಕಾರ ಕೈಗೊಂಡ ತೀರ್ಮಾನವು ಸೂಕ್ತ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ನಾಗರಿಕ ಸೇವೆಯ ವಿವಿಧ ಹುದ್ದೆಗಳಿಗೆ ನೇಮಕಾತಿಗಾಗಿಯೇ ಸ್ಥಾಪಿತವಾದ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪಾತ್ರದ ಕುರಿತು ಈ ವಿವಾದವು ಗಮನ ಸೆಳೆಯುವಂತೆ ಮಾಡಿದೆ. ಕೆಪಿಎಸ್‌ಸಿ ಮೇಲೆ ಭ್ರಷ್ಟಾಚಾರದ ಹಲವು ಆರೋಪಗಳು ಇರುವ ಕಾರಣ ಈ ಸಂಸ್ಥೆಯು ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಹಾಗಾಗಿಯೇ ಸರ್ಕಾರದ ಇಲಾಖೆಗಳು ಸ್ವತಃ ನೇಮಕಾತಿ ಪ್ರಕ್ರಿಯೆ ನಡೆಸಲು ಬಯಸುತ್ತಿವೆ. ಆದರೆ, ಲೋಕಸೇವಾ ಆಯೋಗದ ಸಮಸ್ಯೆಗೆ ಕಂಡುಕೊಂಡ ಪರಿಹಾರವು ಇನ್ನೂ ಕೆಟ್ಟದ್ದೇ ಆಯಿತು ಎಂಬುದನ್ನು ಪಿಎಸ್ಐ ನೇಮಕಾತಿ ಅಕ್ರಮವು ತೋರಿಸಿಕೊಟ್ಟಿದೆ. ನೇಮಕಾತಿ ಪರೀಕ್ಷೆಗಳ ಪರಿಶುದ್ಧತೆಯನ್ನು ಮರಳಿ ತರಬೇಕಾದರೆ ಕೆಪಿಎಸ್‌ಸಿಯನ್ನು ಸಂಪೂರ್ಣವಾಗಿ ಪುನರ್ ರಚಿಸಬೇಕು, ಗರಿಷ್ಠ ಬದ್ಧತೆ ಉಳ್ಳವರನ್ನು ನೇಮಿಸಬೇಕು ಎಂದು ಹೈಕೋರ್ಟ್ ಸಲಹೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣವೇ ಇತ್ತ ಗಮನಹರಿಸಬೇಕಾದ ಜರೂರು ಇದೆ.

ದಿನದ ಟ್ವೀಟ್

ಪ್ರಚಾರದ ಹಪಹಪಿ

ಇದು, ಅಸಹ್ಯಕ್ಕಿಂತ ಕಡೆ. ಸೈನಿಕರೊಬ್ಬರು ಹೋರಾಟದಲ್ಲಿ ಹುತಾತ್ಮರಾಗಿದ್ದಾರೆ. ದೇಶದ ಸಚಿವರೊಬ್ಬರು ಅವರ ತಾಯಿಯನ್ನು ಹೊರಗೆ ಕರೆತಂದು, ಹಣ ನೀಡುತ್ತಿರುವ ಫೋಟೊ ತೆಗೆಸಿಕೊಳ್ಳುವ ಅವಕಾಶ ಸೃಷ್ಟಿಸಿ, ಆ ಮೂಲಕ ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸುತ್ತಾರೆ. ಇಂತಹ ಜನನಾಯಕರು ವರ್ಗಾತೀತರು.

ಜಯಂತ್ ಭಂಡಾರಿ, ಬರಹಗಾರ

ಕಿಡಿನುಡಿ

ರಾಜ್ಯಪಾಲರ ಅಧಿಕಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಪಂಜಾಬ್ ರಾಜ್ಯಪಾಲರಿಗಷ್ಟೇ ಹಾಕಿರುವ ಛೀಮಾರಿಯಲ್ಲ, ಅದು ಎಲ್ಲ ರಾಜ್ಯಪಾಲರುಗಳಿಗೂ ಅನ್ವಯವಾಗುತ್ತದೆ. ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರು ಈ ತೀರ್ಪಿನ ಪ್ರತಿ ಸಾಲನ್ನೂ ಓದಬೇಕು ಮತ್ತು ಅಗತ್ಯವೆನಿಸಿದರೆ ತೀರ್ಪನ್ನು ವಿವರಿಸಿ ಹೇಳಲು ಸಮರ್ಥ ಹಿರಿಯ ವಕೀಲರೊಬ್ಬರನ್ನು ಅವರು ಬರಹೇಳಬೇಕು.

ಪಿ.ಚಿದಂಬರಂ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 25-11-1998

- **ತೆರಿಗೆ ಪರಿವರ್ತನೆ: ಹತ್ತಿ ವರ್ತಕರ ಸಂಪು ಅಂತ್ಯ**

ಬೆಂಗಳೂರು, ನ. 24– ಹತ್ತಿಗೆ ವಿಧಿಸಲಾಗಿದ್ದ ಮೊದಲ ಹಂತದ ಖರೀದಿ ತೆರಿಗೆಯನ್ನು ಕೊನೆಯ ಹಂತದ ಮಾರಾಟ ತೆರಿಗೆಗೆ ಪರಿವರ್ತಿಸಲು ಸರ್ಕಾರ ಒಪ್ಪಿಕೊಂಡಿರುವುದರಿಂದ ಹತ್ತಿಯ ಮಾರಾಟಗಾರರು ರಾಜ್ಯದಾದ್ಯಂತ ನಡೆಸುತ್ತಿದ್ದ ಮುಷ್ಕರವನ್ನು ಇಂದು ಹಿಂತೆಗೆದುಕೊಂಡಿದ್ದಾರೆ.

ಹಣಕಾಸು ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನಲ್ಲಿ ಹತ್ತಿ ಮಾರಾಟಗಾರರ ಸಂಘದ ಪ್ರತಿನಿಧಿಗಳ ನಿಯೋಗವು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಮನವರಿಕೆ ಮಾಡಿಕೊಟ್ಟಿತು. ವಿಧಾನಸಭೆಯ ಉಪಾಧ್ಯಕ್ಷ ಚಂದ್ರಶೇಖರ ಮಾಮನಿ ಈ ನಿಯೋಗದ ನೇತೃತ್ವ ವಹಿಸಿದ್ದರು.

- **ವಿಶೇಷಪಡೆ ಮೇಲೆ ಪ್ರತಿದಾಳಿಗೆ ವೀರಪ್ಪನ್ ಸಜ್ಜು**

ಮೈಸೂರು, ನ. 24– ಕಾಡುಗಳ್ಳ ವೀರಪ್ಪನ್‌ನನ್ನು ಹಿಡಿಯಲು ಕರ್ನಾಟಕ ಮತ್ತು ತಮಿಳುನಾಡಿನ ವಿಶೇಷ ಕಾರ್ಯಾಚರಣೆ ಪಡೆಗಳು ತೀವ್ರ ಯತ್ನ ಆರಂಭಿಸಿರುವಂತೆಯೇ ವೀರಪ್ಪನ್ ಕೂಡ ವಿಶೇಷ ಕಾರ್ಯಾಚರಣೆ ಪಡೆಗೆ ತೀವ್ರ ಆಘಾತ ನೀಡುವಂಥ ಪ್ರತಿದಾಳಿ ನಡೆಸಲು ಸಿದ್ಧತೆ ನಡೆಸುತ್ತಿದ್ದಾನೆ ಎಂದು ತಿಳಿದುಬಂದಿದೆ.

ತನ್ನ ಆಪ್ತ ಸಹಚರರನ್ನು ಒಬ್ಬೊಬ್ಬರನ್ನಾಗಿ ಕಳೆದುಕೊಂಡು ಬೆರಳೆಣಿಕೆಯಷ್ಟು ಜನರೊಡನೆ ಕಾಡಿನಲ್ಲಿ ದಿಕ್ಕೆಟ್ಟು ಅಡ್ಡಾಡುತ್ತಿರುವ ವೀರಪ್ಪನ್ ಈಗ ತನ್ನ ಬಲವನ್ನು ಹೆಚ್ಚಿಸಿಕೊಂಡಿದ್ದಾನೆ ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 25-11-1973

- **ಆಕ್ಟ್ರಾಯ್: ಅಕ್ರಮ ಹಣ ಪಡೆವ ಯತ್ನದ ರುಜುವಾತಿಗೆ ಧ್ವನಿಮುದ್ರಿಕೆಯ ಹಾಜರು**

ಬೆಂಗಳೂರು, ನ. 24– ಜವಳಿಗೆ ಆಕ್ಟ್ರಾಯ್‌ನಿಂದ ಅಕ್ರಮ ವಿನಾಯಿತಿ ನೀಡುವ ಸಂಬಂಧದಲ್ಲಿ ನಗರ ಕಾರ್ಪೊರೇಷನ್ನಿನ ಆರ್ಥಿಕ ಮತ್ತು ತೆರಿಗೆ ಸ್ಥಾಯಿ ಸಮಿತಿ ಸದಸ್ಯರೊಬ್ಬರು ಮತ್ತು ದೊಡ್ಡಬಳ್ಳಾಪುರದ ವರ್ತಕರೊಬ್ಬರಲ್ಲಿ ನಡೆಯಿತೆಂದು ಹೇಳಲಾದ ಟೆಲಿಫೋನ್ ಸಂಭಾಷಣೆಯ ಧ್ವನಿಮುದ್ರಿಕೆಯನ್ನು ನಗರ ಕಾರ್ಪೊರೇಷನ್ ಸಭೆ ಇಂದು ಆಲಿಸಿ ಹೊಸ ಇತಿಹಾಸ ಸೃಷ್ಟಿಸಿತು.

ಡಿಎಂಕೆ ಸದಸ್ಯರಾದ ಸಂಬಂಧಪಟ್ಟ ಕಾರ್ಪೊರೇಟರ್ ಹತ್ತು ಸಾವಿರ ರೂ. ಗಳವರೆಗೆ ಆ ವರ್ತಕರಿಂದ ಅಕ್ರಮ ಸಂಭಾವನೆ ಪಡೆಯಲು ಯತ್ನಿಸಿದ್ದರೆಂಬುದನ್ನು ರುಜುವಾತುಪಡಿಸುವುದು ಆ ಧ್ವನಿಮುದ್ರಿಕೆಯ ಉದ್ದೇಶ.

ಧ್ವನಿಮುದ್ರಿಕೆಯನ್ನು ಆಲಿಸಿದ ನಂತರ ಸಭೆಯು ಆ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿ ಮಾಡಲು ಏಳು ಮಂದಿಯ ಸಮಿತಿಯೊಂದನ್ನು ರಚಿಸಿತು.

- **ಸಚಿವರ ಬೂಸಾ ಹೇಳಿಕೆ ವಿರುದ್ಧ ವಿದ್ಯಾರ್ಥಿಗಳ ತೀವ್ರ ಪ್ರತಿಭಟನೆ: ಕರಾಳ ದಿನದ ಯಶಸ್ವಿ ಆಚರಣೆ**

ಬೆಂಗಳೂರು, ನ. 24– ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದು ಕನ್ನಡ ಸಾರಸ್ವತ ಲೋಕಕ್ಕೆ ಅಪಮಾನ ಮಾಡಿದ್ದಾರೆಂದು ಕೆರಳಿದ ವಿದ್ಯಾರ್ಥಿಗಳು ವಿವಿಧ ಕಾಲೇಜುಗಳಲ್ಲಿ ಕಪ್ಪು ಬ್ಯಾಡ್ಜ್ ಧರಿಸಿ ಪ್ರತಿಭಟನೆ ವ್ಯಕ್ತಪಡಿಸಿದರು.

ನಗರದ ದಕ್ಷಿಣ ಭಾಗದ ಅನೇಕ ಕಾಲೇಜುಗಳು ಮಧ್ಯಾಹ್ನದ ನಂತರ ನಡೆಯಲಿಲ್ಲವೆಂದು ವರದಿಯಾಗಿದೆ. ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ರಿಯಾ ಸಮಿತಿಯು ತಾನು ಕರೆ ನೀಡಿದ್ದ ಕರಾಳ ದಿನಾಚರಣೆ ಯಶಸ್ವಿಯಾಯಿತೆಂದು ಹೇಳಿದೆ.

ಪ್ರಜಾತಂತ್ರವು ಶುದ್ಧ ಅಣಕವಾಗುವ ಮೊದಲು ಕೋರ್ಟ್ ಮಧ್ಯಪ್ರವೇಶ ಮಾಡಬೇಕು

ಉಚಿತ ಕೊಡುಗೆ: ಕ್ರಮ ಕೈಗೊಳ್ಳುವವರಾರು?

ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳಿಗೆ ಉಚಿತ ಸ್ಕೂಟರ್ ಮತ್ತು ಉಚಿತ ಲ್ಯಾಪ್‌ಟಾಪ್, ಎಲ್ಲ ಮಹಿಳೆಯರಿಗೆ ಉಚಿತವಾಗಿ ಸ್ಮಾರ್ಟ್‌ಫೋನ್, ಮದುಮಗಳಿಗೆ ₹ 1 ಲಕ್ಷಕ್ಕಿಂತ ಹೆಚ್ಚು ಹಣ ಮತ್ತು 10 ಗ್ರಾಂ ಚಿನ್ನ, 100 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್, ಉಚಿತವಾಗಿ ಅಥವಾ ಭಾರಿ ಸಬ್ಸಿಡಿ ದರದಲ್ಲಿ ಎಲ್‌ಪಿಜಿ ಸಿಲಿಂಡರ್, ಕಾಲೇಜು ವಿದ್ಯಾರ್ಥಿಗಳಿಗೆ ಮಾಸಿಕ ಪ್ರಯಾಣ ಭತ್ಯೆ, ಎಲ್ಲ ಮಹಿಳೆಯರಿಗೆ ಮಾಸಿಕ ಪಿಂಚಣಿ... ಇವೆಲ್ಲ ಐದು ರಾಜ್ಯಗಳ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ನೀಡುತ್ತಿರುವ ಉಚಿತ ಕೊಡುಗೆಗಳ ಭರವಸೆ. ಈ ಮೂಲಕ ಪಕ್ಷಗಳು ದೇಶದಲ್ಲಿ ಜನಪ್ರಿಯ ಭರವಸೆಗಳನ್ನು ಹೊಸ ಹಂತಕ್ಕೆ ಒಯ್ಯುತ್ತಿವೆ.

ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳ ಹಣಕಾಸಿನ ಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಹೀಗಿರುವಾಗ, ಮತದಾರರ ಮನ ಗೆಲ್ಲಲು ರಾಜಕೀಯ ಪಕ್ಷಗಳು ಈ ಬಗೆಯ ಸ್ಪರ್ಧೆಗೆ ಇಳಿದಿರುವುದು ದೇಶದ ಅರ್ಥ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಬಹುದು. ಆದರೆ ಈ ಸಮಸ್ಯೆಯನ್ನು ಹತ್ತಿಕ್ಕಲು ಚುನಾವಣಾ ಆಯೋಗದ ಬಳಿಯಾಗಲಿ, ರಾಜಕೀಯ ಪಕ್ಷಗಳಲ್ಲಿಯಾಗಲಿ ಯಾವುದೇ ಯೋಜನೆ ಇಲ್ಲ. ಹೀಗಾಗಿ, ಉಚಿತ ಕೊಡುಗೆಗಳಿಗೆ ಸಂಬಂಧಿಸಿದ ಎರಡು ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ಈ ವಿಚಾರದಲ್ಲಿ ಮಧ್ಯಪ್ರವೇಶಿಸಲು ಇದು ಸಕಾಲ.

ರಾಜಸ್ಥಾನದಲ್ಲಿ ಅಶೋಕ್ ಗೆಹಲೋತ್ ನೇತೃತ್ವದ ಸರ್ಕಾರವು ಮತದಾರರಿಗೆ ಏಳು ಗ್ಯಾರಂಟಿಗಳ ಭರವಸೆ ನೀಡಿದೆ. ಕುಟುಂಬದ ಯಜಮಾನಿಗೆ ವರ್ಷಕ್ಕೆ ₹ 10 ಸಾವಿರ ನೆರವು; ಒಂದು ಕೋಟಿ ಕುಟುಂಬಗಳಿಗೆ ₹ 500ಕ್ಕೆ ಎಲ್‌ಪಿಜಿ ಸಿಲಿಂಡರ್; ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿ ಗಳಿಗೆ ಲ್ಯಾಪ್‌ಟಾಪ್ ಅಥವಾ ಟ್ಯಾಬ್; ನೈಸರ್ಗಿಕ ವಿಕೋಪಗಳಲ್ಲಿ ಹಾನಿಯಾದರೆ ಪ್ರತಿ ಕುಟುಂಬಕ್ಕೆ ₹ 15 ಲಕ್ಷದವರೆಗಿನ ವಿಮಾ ರಕ್ಷಣೆ; ಚಿರಂಜೀವಿ ಆರೋಗ್ಯ ವಿಮಾ ರಕ್ಷೆಯ ಮೊತ್ತವನ್ನು ₹ 25 ಲಕ್ಷದಿಂದ ₹ 50 ಲಕ್ಷಕ್ಕೆ ಹೆಚ್ಚಿಸುವುದು. ಇದಕ್ಕೆ ಪ್ರತಿಯಾಗಿ ಬಿಜೆಪಿಯು ಬಡ ಕುಟುಂಬಗಳ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ; ವಿದ್ಯಾರ್ಥಿ ನಿಯರಿಗೆ ಸ್ಕೂಟಿ; ₹ 450ಕ್ಕೆ ಎಲ್‌ಪಿಜಿ ಸಿಲಿಂಡರ್; ರೈತರಿಗೆ ವರ್ಷಕ್ಕೆ ₹ 12 ಸಾವಿರ ನೆರವು; ಕಾಲೇಜು ವಿದ್ಯಾರ್ಥಿಗಳಿಗೆ ಮಾಸಿಕ ₹ 1,200ರಷ್ಟು ಪ್ರಯಾಣ ಭತ್ಯೆ; ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಮಾಸಿಕ ₹ 1,500 ಮೊತ್ತದ ಪಿಂಚಣಿಯ ಭರವಸೆಗಳನ್ನು ನೀಡಿದೆ.

ಮಧ್ಯಪ್ರದೇಶದಲ್ಲಿ 20 ವರ್ಷಕ್ಕೂ ಹೆಚ್ಚಿನ ಅವಧಿಗೆ ಆಡಳಿತ ನಡೆಸಿರುವ ಬಿಜೆಪಿಯು ತನ್ನ ಕಾರ್ಯಕರ್ತರಲ್ಲಿ ಉತ್ಸಾಹದ ಕೊರತೆ ಎದುರಿಸುತ್ತಿದೆ. ಅಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ತಮ್ಮವೇ ಆದ ಉಚಿತ ಕೊಡುಗೆಗಳನ್ನು ಪ್ರಕಟಿಸಿದ್ದಾರೆ. ಮಾರ್ಚ್‌ನಲ್ಲಿ ಲಾಡ್ಲಿ ಬೆಹ್ನಾ ಯೋಜನೆ ಆರಂಭಿಸಿರುವ ಅವರು ಪ್ರತಿ ಮಹಿಳೆಗೆ ತಿಂಗಳಿಗೆ ₹ 1,000 ಘೋಷಿಸಿದ್ದಾರೆ. ಕಾಂಗ್ರೆಸ್ ತಾನು ₹1,500 ನೀಡುವುದಾಗಿ ಭರವಸೆ ಕೊಟ್ಟಾಗ, ಬಿಜೆಪಿಯು ಮೊತ್ತವನ್ನು ₹ 1,250ಕ್ಕೆ ಹೆಚ್ಚಿಸಿದೆ. ಕಾಲಾನು ಕ್ರಮದಲ್ಲಿ ಮೊತ್ತವನ್ನು ₹ 3,000ಕ್ಕೆ ಹೆಚ್ಚಿಸುವುದಾಗಿ ಚೌಹಾಣ್ ಭರವಸೆ ನೀಡಿದ್ದಾರೆ. ಮತದಾರರ ಬೆಂಬಲ ಪಡೆಯಲು ಈ ಎರಡು ಪಕ್ಷಗಳ ನಡುವಿನ ಸೆಣಸಾಟವು ಹರಾಜು ಪ್ರಕ್ರಿಯೆಯನ್ನು ಹೋಲುವಂತಿದೆ. ₹ 500ಕ್ಕೆ ಎಲ್‌ಪಿಜಿ ಸಿಲಿಂಡರ್ ನೀಡುವುದಾಗಿ ಕಾಂಗ್ರೆಸ್ ಘೋಷಿಸಿದಾಗ ಚೌಹಾಣ್ ಅವರು ಅದನ್ನು ತಾವು ₹ 450ಕ್ಕೆ ನೀಡುವುದಾಗಿ ಹೇಳಿದರು. ಮೊದಲ 100 ಯೂನಿಟ್ ವಿದ್ಯುತ್ ಉಚಿತ, ನಂತರದ 100 ಯೂನಿಟ್‌ಗಳಿಗೆ ಶೇ 50ರಷ್ಟು ರಿಯಾಯಿತಿ ಎಂಬ ಘೋಷಣೆಯನ್ನು ಕಾಂಗ್ರೆಸ್ ಮಾಡಿದೆ. ಅಲ್ಲದೆ, ವಿದ್ಯಾರ್ಥಿ ಗಳಿಗೆ ಮಾಸಿಕ ವಿದ್ಯಾರ್ಥಿ-ವೇತನದ ಭರವಸೆ ನೀಡಿದೆ.

ತೆಲಂಗಾಣದ ಪರಿಸ್ಥಿತಿ ಗಮನಿಸೋಣ. ಈ ರಾಜ್ಯದ ಮೇಲಿನ ಸಾಲದ ಹೊರೆ ₹ 3 ಲಕ್ಷ ಕೋಟಿ. ಕಳೆದ ಹತ್ತು ವರ್ಷಗಳಲ್ಲಿ ಸಾಲದ ಪ್ರಮಾಣ ಶೇ 300ರಷ್ಟು ಹೆಚ್ಚಾಗಿದೆ ಎನ್ನಲಾಗುತ್ತಿದೆ. ಹೀಗಿದ್ದರೂ, ಪರಿಣಾಮಗಳ ಬಗ್ಗೆ ಗಮನ ನೀಡದೆ, ಆಡಳಿತಾರೂಢ ಬಿಆರ್‌ಎಸ್ ಪಕ್ಷವು ಮದುಮಗಳಿಗೆ ಮದುವೆಯ ನಂತರದಲ್ಲಿ ₹ 1 ಲಕ್ಷಕ್ಕಿಂತ ಹೆಚ್ಚು ನಗದು ನೀಡಲಾಗುವುದು ಎಂದು ಹೇಳಿದೆ. ಅಷ್ಟೇ ಅಲ್ಲದೆ, ₹ 15 ಲಕ್ಷ ವಿಮಾ ರಕ್ಷೆ ನೀಡುವ ಆರೋಗ್ಯ ವಿಮಾ ಯೋಜನೆಯೊಂದನ್ನು ಪಕ್ಷ ಭರವಸೆಯಾಗಿ ನೀಡಿದೆ, ಬೀಡಿ ಕಾರ್ಮಿಕರಿಗೆ ₹ 5000 ಗೌರವಧನ, ಬಡ ಕುಟುಂಬದ ಪ್ರತಿ ಮಹಿಳೆಗೆ ₹ 3,000 ಹಾಗೂ ರೈತರ ಸಾಲಮನ್ನಾ ಭರವಸೆಗಳನ್ನೂ ಪಕ್ಷ ನೀಡಿದೆ.

ಬಿಆರ್‌ಎಸ್‌ಗಿಂತ ಮುಂದಿರಬೇಕು ಎಂಬ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು, ಕರ್ನಾಟಕ ಮಾದರಿಯ ಗ್ಯಾರಂಟಿಗಳನ್ನು ತೆಲಂಗಾಣದಲ್ಲಿಯೂ ಜಾರಿಗೆ ತರುವುದಾಗಿ ಹೇಳಿದೆ. ಬಿಆರ್‌ಎಸ್ ಪಕ್ಷವನ್ನು ಅನುಕರಿಸಿರುವ ಕಾಂಗ್ರೆಸ್, ಅಲ್ಪಸಂಖ್ಯಾತ ಸಮುದಾಯದ ಮದುಮಗಳಿಗೆ ₹ 1.60 ಲಕ್ಷ ಹಣ ಹಾಗೂ ಹಿಂದೂ ಮದುಮಗಳಿಗೆ ₹ 1 ಲಕ್ಷ ನಗದು ಹಾಗೂ 10 ಗ್ರಾಂ ಚಿನ್ನ ನೀಡುವುದಾಗಿ ಭರವಸೆ ಇತ್ತಿದೆ. ಇನ್ನೂ ಹಲವು ಘೋಷಣೆಗಳು ಇವೆ.

18 ವರ್ಷ ವಯಸ್ಸಿನ ನಂತರವೂ ವ್ಯಾಸಂಗಕ್ಕೆ ಮುಂದಾಗುವ ಹೆಣ್ಣುಮಕ್ಕಳಿಗೆ ವಿದ್ಯುತ್ ಚಾಲಿತ ಸ್ಕೂಟಿ, ಆಟೊ ಚಾಲಕರಿಗೆ ವರ್ಷಕ್ಕೆ ₹ 12 ಸಾವಿರ ನೆರವು, ವಿಧವೆಯರಿಗೆ ಮಾಸಿಕ ₹ 6,000 ಪಿಂಚಣಿ ಮತ್ತು ರೈತರಿಗೆ ₹ 3 ಲಕ್ಷದಷ್ಟು ಬಡ್ಡಿ ರಹಿತ ಬೆಳೆ ಸಾಲ ನೀಡುವುದಾಗಿ ಅದು ಭರವಸೆ ನೀಡಿದೆ.

ತಾನು ಹಿಂದುಳಿಯಬಾರದು ಎಂದು ಬಿಜೆಪಿ ಕೂಡ ಒಂದಿಷ್ಟು ಭರವಸೆಗಳನ್ನು ನೀಡಿದೆ. ಅಭಿವೃದ್ಧಿಗೆ ಪೂರಕವಾಗುವ ಹಲವು ಯೋಜನೆಗಳನ್ನು ಜಾರಿಗೆ ತರುವುದಾಗಿ ಬಿಜೆಪಿ ಹೇಳಿದೆ. ದುರ್ಬಲ ವರ್ಗಗಳಿಗೆ ಒಟ್ಟಾರೆಯಾಗಿ ಪ್ರಯೋಜನ ತಂದುಕೊಡುವ, ಬಡ ಕುಟುಂಬಗಳಿಗೆ ವರ್ಷಕ್ಕೆ ನಾಲ್ಕು ಉಚಿತ ಎಲ್‌ಪಿಜಿ ಸಿಲಿಂಡರ್‌ಗಳು ಮತ್ತು ಪೆಟ್ರೋಲ್, ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ತಗ್ಗಿಸುವ ಭರವಸೆಗಳನ್ನು ಅದು ನೀಡಿದೆ. ಹಾಗೆಯೇ, ಜನಪ್ರಿಯ ಘೋಷಣೆಗಳ ಅನಿವಾರ್ಯಕ್ಕೆ ಶರಣಾಗಿರುವ ಬಿಜೆಪಿಯು ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡುವುದಾಗಿ ಭರವಸೆ ಕೊಟ್ಟಿದೆ. ಆದರೆ ಛತ್ತೀಸಗಢದಲ್ಲಿನ ಆಡಳಿತಾರೂಢ ಸರ್ಕಾರವು ಉಚಿತ ಕೊಡುಗೆಗಳ ವಿಚಾರದಲ್ಲಿ ಹೆಚ್ಚು ಎಚ್ಚರಿಕೆಯಿಂದಿರುವಂತೆ ಕಾಣುತ್ತಿದೆ. ಚುನಾವಣೆಯ ಗುಂಗಿನಲ್ಲಿರುವ ಐದು ರಾಜ್ಯಗಳ ಪೈಕಿ ಉಚಿತ ಕೊಡುಗೆಗಳ ಬಗ್ಗೆ ಹೆಚ್ಚಿನ ಮಾತು ಕೇಳದೆ ಇದ್ದುದು ಮಿಜೋರಾಂನಲ್ಲಿ ಮಾತ್ರ.

ತಮಿಳುನಾಡಿನಂತಹ ರಾಜ್ಯಗಳಲ್ಲಿ ಉಚಿತ ಕೊಡುಗೆಗಳ ಸಂಸ್ಕೃತಿಯು ಬಹಳ ಹಿಂದೆ ಆರಂಭವಾಯಿತು. ಅಲ್ಲಿ ದ್ರಾವಿಡ ಪಕ್ಷಗಳು ಅದರಲ್ಲೂ ಮುಖ್ಯವಾಗಿ ಜಯಲಲಿತಾ ನೇತೃತ್ವದ ಎಐಎಡಿಎಂಕೆ ಪಕ್ಷವು ಟಿ.ವಿ. ಮತ್ತು ಪ್ರೆಷರ್ ಕುಕ್ಕರ್‌ಗಳನ್ನು ಮತದಾರರಿಗೆ ನೀಡಿತ್ತು.

ಈ ವಿಚಾರದಲ್ಲಿ ಚುನಾವಣಾ ಆಯೋಗವು ಮೂಕ ಪ್ರೇಕ್ಷಕ ಆಗಿ ಕುಳಿತಿರುವುದು ವಿಷಾದಕರ. ಈ ಪ್ರವೃತ್ತಿಗೆ ಕಡಿವಾಣ ಹಾಕಲು ಆಯೋಗವು ಮುಂದಡಿ ಇರಿಸಿರುವ ಸೂಚನೆಗಳು ಕಾಣುತ್ತಿಲ್ಲ. ಉಚಿತ ಕೊಡುಗೆಗಳು ನ್ಯಾಯಸಮ್ಮತವಾದ ಚುನಾವಣೆ ಹಾಗೂ ಒಳ್ಳೆಯ ಆಡಳಿತಕ್ಕೆ ಧಕ್ಕೆ ತರುವ ಅಪಾಯ ಎದುರಾಗಿದೆ. ಇದಕ್ಕೆ ಸಂಬಂಧಿಸಿದ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಂಡಿದೆ. ಅಭಿವೃದ್ಧಿ ಹಾಗೂ ಬಡತನ ನಿರ್ಮೂಲನೆ ಹೆಸರಿನಲ್ಲಿ ಮತದಾರರಿಗೆ ಇಂತಹ ಆಮಿಷಗಳನ್ನು ನೀಡುವ ವಿಚಾರದಲ್ಲಿ ರಾಜಕೀಯ ಪಕ್ಷಗಳಲ್ಲಿ ಇರುವ ಸಹಮತವನ್ನು ಗಮನಿಸಿದರೆ, ನ್ಯಾಯಾಂಗದ ಮಧ್ಯಪ್ರವೇಶ ಮಾತ್ರವೇ ಈ ಸಮಸ್ಯೆ ನಿವಾರಿಸಬಹುದು. ಈ ವಿಚಾರದಲ್ಲಿ ತಾನು ಏನು ಮಾಡಬಹುದು ಎಂಬ ಪ್ರಶ್ನೆಯನ್ನು ಕೋರ್ಟ್ ಈ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಕೇಳಿದೆ ಕೂಡ.

ಸಮಸ್ಯೆಯು ಸಂಪೂರ್ಣವಾಗಿ ಕೈಮೀರುವ ಮೊದಲು, ಪ್ರಜಾತಂತ್ರವು ಶುದ್ಧ ಅಣಕವಾಗುವ ಮೊದಲು ಕೋರ್ಟ್ ಮಧ್ಯಪ್ರವೇಶ ಮಾಡಬೇಕು.

ಚುರುಮುರಿ

ಚಳಿ ಕಲಾಪ

• ಮಣ್ಣೆ ರಾಜು

‘ದೀರ್ಘ ಬಾಳಿಕೆಯ ಸ್ವೆಟರ್ ತೋರಿಸಿ...’ ಅಂಗಡಿ ಓನರ್‌ಗೆ ಕೇಳಿದ ಶಂಕ್ರಿ.

‘ಪ್ರತಿವರ್ಷ ಚಳಿಗಾಲಕ್ಕೆ ಸ್ವೆಟರ್, ಮಳೆಗಾಲಕ್ಕೆ ರೈನ್ ಕೋಟು ಕೊಳ್ತೀರಿ, ನೀವು ಯಾವುದನ್ನೂ ದೀರ್ಘಕಾಲ ಬಾಳಿಸುವುದಿಲ್ಲ...’ ಗಂಡನ ಮೇಲೆ ಸಿಡುಕಿದಳು ಸುಮಿ.

‘ಯುಗಾದಿಗೆ ಹೋಳಿಗೆ, ಗಣೇಶ ಹಬ್ಬಕ್ಕೆ ಕಡುಬು ಅನ್ನುವಂತೆ ಹಬ್ಬಕ್ಕೆ ತಕ್ಕ ಅಡುಗೆ ಮಾಡಬೇಕು, ಕಾಲಕ್ಕೆ ತಕ್ಕ ಉಡುಗೆ ಕೊಳ್ಳಬೇಕು ಮೇಡಂ...’ ಎಂದು ನಕ್ಕ ಓನರ್, ಸ್ವೆಟರ್‌ಗಳನ್ನು ತೆಗೆದು ಹರಡಿ, ‘ಚಳಿಗಾಲದ ಅಧಿವೇಶನಕ್ಕೆ ಎಮ್ಮೆಲ್ಲೆ ಇದೇ ಕ್ವಾಲಿಟಿಯ ಸ್ವೆಟರ್ ಕೊಂಡುಕೊಂಡರು’ ಎಂದ.

‘ಬರಗಾಲದ ಕಾರಣಕ್ಕೆ ಚಳಿಗಾಲದ ಅಧಿವೇಶನದಲ್ಲಿ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು ಅಂತ ಸರ್ಕಾರ ಹೇಳಿದೆ, ಶಾಸಕರಿಗೆ ಹೊಸ ಸ್ವೆಟರ್ ಅಗತ್ಯವಿತ್ತೇ?’ ಸುಮಿ ಗೊಣಗಿಕೊಂಡಳು.

‘ಶಾಸಕರು, ಸಚಿವರು ಶಾಲು, ಸ್ವೆಟರ್, ಕೋಟು ಧರಿಸಿದರೆ ಕಲಾಪದಲ್ಲಿ ಮೈಚಳಿ ಬಿಟ್ಟು ಚರ್ಚೆ ಮಾಡಬಹುದು ಮೇಡಂ’.

‘ಅಧಿವೇಶನದ ವೇಳೆ ಸಚಿವರು, ಶಾಸಕರು, ಅಧಿಕಾರಿಗಳು ಐಷಾರಾಮಿ ಹೋಟೆಲ್‌ಗಳಲ್ಲಿ ತಂಗಬೇಡಿ, ನಮ್ಮ ಮನೆಗಳಲ್ಲಿ ವಾಸ್ತವ್ಯ ಮಾಡಿರಿ, ರುಚಿಕಟ್ಟಾದ ಊಟ, ಅಚ್ಚುಕಟ್ಟಾದ ವಸತಿ ವ್ಯವಸ್ಥೆ ಮಾಡ್ತೀವಿ, ನಮ್ಮ ಕಷ್ಟಗಳನ್ನು ಕಣ್ಣಾರೆ ಕಾಣಬಹುದು ಅಂತ ಬೆಳಗಾವಿ ರೈತರು ಕೇಳಿಕೊಂಡಿದ್ದಾರೆ’.

‘ಅದಿರಲಿ, ಸರ್ಕಾರವನ್ನು ನಡುಗಿಸುತ್ತೇವೆ, ಚಳಿ-ಜ್ವರ ಬಿಡಿಸುತ್ತೇವೆ ಅಂತ ವಿರೋಧ ಪಕ್ಷದವರು ಗುಡುಗಿ ಆಡಳಿತಗಾರರಲ್ಲಿ ಮತ್ತಷ್ಟು ನಡುಕ ಹುಟ್ಟಿಸಿದ್ದಾರೆ. ಜೊತೆಗೆ, ಬೇಡಿಕೆ ಈಡೇರಿಸಿ ಅಂತ ಸಂಘಸಂಸ್ಥೆಗಳು ಚಳವಳಿಗೆ ಸಜ್ಜಾಗಿ ಸರ್ಕಾರದ ತಲೆಬಿಸಿ ಮಾಡಿದ್ದಾವಂತೆ’.

‘ಬಾಕಿ ಇರುವ ಬೇಡಿಕೆ ಈಡೇರಿಸಿ, ಚಳಿ ಕಲಾಪದಲ್ಲಿ ಬಿಸಿ ಪ್ರಲಾಪ ನಿವಾರಿಸಿ ಸುಗಮ ಚರ್ಚೆಗೆ ಅವಕಾಶ ಕಲ್ಪಿಸಲು ಪರಿಷತ್ ಸಭಾಪತಿ ಹೊರಟ್ಟಿ ಸರ್ಕಾರವನ್ನು ಒತ್ತಾಯಿಸಿದ್ದಾರಂತೆ ಕಣ್ರೀ...’ ಎಂದ ಶಂಕ್ರಿ ಸ್ವೆಟರ್ ಬಿಲ್ ಪಾವತಿಸಿದ.

ಸಂಗತ

‘ನಾಪತ್ತೆ’ ವರದಿ ಯಾವುದು?

ಹಿಂದುಳಿದ ವರ್ಗಗಳ ಆಯೋಗ ಯಾವುದೇ ಪೂರ್ವಗ್ರಹಗಳಿಲ್ಲದೆ ವೈಜ್ಞಾನಿಕವಾಗಿ ನಡೆಸಿದ ಸಮೀಕ್ಷಾ ವರದಿಗೆ ಕೆಲವರ ಪೂರ್ವಗ್ರಹಗಳಿಂದಾಗಿ ಗ್ರಹಣ ಬಡಿದಿದೆ

• ಕೆ.ಎನ್.ಲಿಂಗಪ್ಪ

ಎಚ್.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ನಡೆಸಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ದತ್ತಾಂಶ ಆಧರಿಸಿ ಸಿದ್ಧಪಡಿಸಿದ್ದ ವರದಿಯ ಮೂಲಪ್ರತಿಯು (ಹಸ್ತಪ್ರತಿ) ಆಯೋಗದ ಕಚೇರಿಯಿಂದಲೇ ನಾಪತ್ತೆಯಾಗಿದೆ ಎಂಬ ವರದಿಗಳನ್ನು ರಾಜ್ಯದ ಜನ ಗಮನಿಸಿದ್ದಾರೆ. ಇಂತಹ ಸುದ್ದಿಗಳಿಂದ ನಾಗರಿಕರಲ್ಲಿ ಗೊಂದಲ ಮೂಡುವುದು ಸಹಜ.

ಈ ಬಗೆಯ ಪುಕಾರುಗಳಿಗೆ ಮೂಲ ಕಾರಣ, ಹಿಂದುಳಿದ ವರ್ಗಗಳ ಆಯೋಗದ ಪ್ರಸ್ತುತ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ಅವರು 2021ರ ಅಕ್ಟೋಬರ್‌ನಲ್ಲಿ ಸರ್ಕಾರಕ್ಕೆ ಪತ್ರ ಬರೆದಿರುವುದು. ಕಾಂತರಾಜ ಅವರ ನೇತೃತ್ವದಲ್ಲಿ ನಡೆದಿದ್ದ ಸಮೀಕ್ಷೆಯ ಅಂಕಿ ಅಂಶಗಳಿಗೆ ಸಂಬಂಧಿಸಿದ ಎಲ್ಲ ಸಂಪುಟಗಳು ಮತ್ತು ಅಂಕಿ ಅಂಶಗಳನ್ನು ಬಳಸಿಕೊಂಡು ತಯಾರಿಸಿದ್ದ ಹಿಂದುಳಿದ ವರ್ಗಗಳ ಹೊಸ ಪಟ್ಟಿಯ ಒಂದು ಚಿಕ್ಕ ಪುಸ್ತಕ ಹಾಗೂ ಅದಕ್ಕೆ ಸಂಬಂಧಿಸಿದ ಕೆಲವು ಅಂಕಿ ಅಂಶಗಳ ದಾಖಲೆಗಳನ್ನು 2019ರ ಆಗಸ್ಟ್‌ನಲ್ಲಿ ಆಯೋಗದ ಕಚೇರಿಯ ಒಂದು ಕೊಠಡಿಯಲ್ಲಿಟ್ಟು, ಅದನ್ನು ಸೀಲ್ ಮಾಡಿ, ಬೀಗದ ಕೈಯನ್ನು ಸದಸ್ಯ ಕಾರ್ಯದರ್ಶಿಗೆ ಹಸ್ತಾಂತರಿಸಲಾಗಿತ್ತು.

ದಾಖಲೆಗಳಿಟ್ಟಿದ್ದ ಕೊಠಡಿಯನ್ನು ಆಯೋಗದ ಸಿಬ್ಬಂದಿ ಯಾರ ಆಜ್ಞೆಯ ಮೇರೆಗೆ ತೆರೆದರು ಎಂಬುದು ತಿಳಿದುಬಂದಿಲ್ಲ. ಸರ್ಕಾರಕ್ಕೆ ಬರೆದ ಪತ್ರದಲ್ಲಿಯೂ ಆ ಕುರಿತು ಉಲ್ಲೇಖ ಇಲ್ಲ. ‘ಮುದ್ರಿತ ಮುಖ್ಯ ವರದಿಯಲ್ಲಿ ಸದಸ್ಯ ಕಾರ್ಯದರ್ಶಿಯವರ ಸಹಿ ಇಲ್ಲದೆ ಇರುವುದನ್ನು ಆಯೋಗವು ಗಮನಿಸಿರುತ್ತದೆ. ಇದರೊಂದಿಗೆ ಇದಕ್ಕೆ ಸಂಬಂಧಿಸಿದ ಮುಖ್ಯ ವರದಿಯ ಮೂಲ ಅಥವಾ ಹಸ್ತಪ್ರತಿ ಸೀಲ್ಡ್ ಬಾಕ್ಸ್‌ನಲ್ಲಿ ಲಭ್ಯವಿಲ್ಲದೇ ಇರುವುದರಿಂದ ಸದರಿ ಹಸ್ತಪ್ರತಿಯನ್ನು ಕೂಡಲೇ ಆಯೋಗದ ಕಚೇರಿಗೆ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಲಾಗಿದೆ’ ಎಂದು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಹೇಳಲಾಗಿದೆ.

ಮುಖ್ಯ ವರದಿಯೇ ಸೀಲ್ಡ್ ಬಾಕ್ಸ್‌ನಲ್ಲಿ ಲಭ್ಯವಿಲ್ಲ ಎಂದು ಹೇಳಲಾಗುತ್ತಿದೆ. ಹಾಗಾದರೆ ‘ಯಾವ ಮುಖ್ಯ ವರದಿ’ಯನ್ನು ನೋಡಿ ಸದಸ್ಯ ಕಾರ್ಯದರ್ಶಿಯ ಸಹಿ ಇಲ್ಲ ಎಂದು ಹೇಳಿದ್ದಾರೆ ಎಂಬುದು ತಿಳಿದುಬರುವುದಿಲ್ಲ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಒಳಪಡಿಸುವ ದೃಷ್ಟಿಯಿಂದ ಕೈಪಿಡಿಯಲ್ಲಿ 1,351 ಜಾತಿ-ಉಪಜಾತಿಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಲಾಗಿತ್ತು. ಅಷ್ಟೂ ಜಾತಿ, ಉಪಜಾತಿಗಳಲ್ಲಿ ಬರೀ ಎರಡೇ ಜಾತಿಗಳು ಸಮೀಕ್ಷೆ ಕುರಿತು ಗಾಳಿಮಾತು ಆಧರಿಸಿದ ಅಂಶಗಳನ್ನು ನಂಬಿ ಆಯೋಗದ ಅಧ್ಯಕ್ಷರಿಗೂ ಮುಖ್ಯಮಂತ್ರಿಗೂ ಮನವಿ ಸಲ್ಲಿಸಿವೆ.

ಸಮೀಕ್ಷೆಯನ್ನು ರಾಷ್ಟ್ರೀಯ ಜನಗಣತಿ ಮಾದರಿಯಲ್ಲಿಯೇ ನಡೆಸಲಾಗಿದೆ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಮುಖ್ಯವಾಗಿ ಸಮೀಕ್ಷೆಯಲ್ಲಿ ತೊಡಗಿಸಿಕೊಂಡವರು. ಈ ಅಧಿಕಾರಿಗಳ್ಯಾರೂ ಆಯೋಗದ ನಿಯಂತ್ರಣದಲ್ಲಿ ಇರದೆ ಸರ್ಕಾರದ ನೇರ ನಿಯಂತ್ರಣದಲ್ಲಿ ಇರುವವರು ಎಂಬುದೂ ಸತ್ಯ ಸಂಗತಿ.

ಒಟ್ಟು 1,33,140 ಗಣತಿದಾರರು ಮತ್ತು ಗಣತಿದಾರರ ಮೇಲ್ವಿಚಾರಣೆಗಾಗಿ 22,190 ಮಂದಿಯನ್ನು ನೇಮಿಸಲಾಗಿತ್ತು. ಪ್ರತಿ ಗಣತಿದಾರನಿಗೆ 150– 175 ಮನೆಗಳನ್ನು ಸಮೀಕ್ಷೆಗಾಗಿ ಹಂಚಿಕೆ ಮಾಡಿ, ಈ ಕಾರ್ಯಕ್ಕೆ ಒಂದು ತಿಂಗಳ ಅವಧಿಯನ್ನು ನಿಗದಿ ಮಾಡಲಾಗಿತ್ತು. ಗಣತಿದಾರರೆಲ್ಲರೂ ಶಾಲಾ ಉಪಾಧ್ಯಾಯರಾಗಿದ್ದರು. 2015ರ ಬೇಸಿಗೆ ರಜೆಯ ಅವಧಿಯಲ್ಲಿ ಗಣತಿ ಕಾರ್ಯವನ್ನು ಕೈಗೊಂಡಿದ್ದರು. ಕುಟುಂಬದ ಅನುಸೂಚಿಯನ್ನೂ (ನಮೂನೆ 3) ಅವರೇ ಭರ್ತಿ ಮಾಡಿದ್ದಾರೆ. ಅವರ ಮೇಲ್ವಿಚಾರಕರು, ತಾಲ್ಲೂಕಿನ ಹಿರಿಯ ಅಧಿಕಾರಿಗಳು ಹಾಗೂ ಆಯೋಗದ ಸದಸ್ಯರು ಸಮೀಕ್ಷಾ ಅವಧಿಯಲ್ಲಿ ಅಲ್ಲೊಂದು ಇಲ್ಲೊಂದು ಪ್ರಕರಣವನ್ನು ಪರಿಶೀಲನೆ ಮಾಡಿದ್ದಾರೆ.

ಆಯೋಗವು ಮುಖ್ಯವಾಗಿ ಸಮಾಜ ವಿಜ್ಞಾನಿಗಳು, ಪರಿಣತ ಅಧಿಕಾರಿಗಳು ಮತ್ತು ತಂತ್ರಜ್ಞರ ಪೂರ್ವಭಾವಿ ಸಭೆಗಳನ್ನು ನಡೆಸಿ, ಅವರು ನೀಡಿದ ಸಲಹೆಗಳನ್ನು ಪಡೆದುಕೊಂಡಿದೆ. ಬಿಇಎಲ್ ಸಂಸ್ಥೆಯ ನೇರ ನಿಯಂತ್ರಣದಲ್ಲಿ ರಾಜ್ಯದ ಜನರಿಗೆ ಅಗತ್ಯ ಮಾಹಿತಿಯನ್ನು ಮಾಧ್ಯಮಗಳ ಮೂಲಕ ನೀಡಿ, ಮನೆ ಮನೆಗೂ ಭೇಟಿ ಕೊಟ್ಟು ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ. ಮಾಹಿತಿಯನ್ನು ಸಂಕೇತಾಕ್ಷರಗಳಲ್ಲಿ ಬರೆದುಕೊಳ್ಳಲಾಗಿದೆ. ಹೀಗೆ ಸಂಗ್ರಹಿಸಿದ ಅಂಕಿ ಅಂಶಗಳು ಮತ್ತು ಸಂಗ್ರಹಿಸಿದ ವಿಧಾನವನ್ನು ತಜ್ಞರ ಸಮಿತಿ ಹಾಗೂ ಐಐಎಂ ದೃಢೀಕರಿಸಿವೆ.

ಈ ನಡುವೆ ಕೆಲವು ಸುದ್ದಿ ಮಾಧ್ಯಮಗಳು ಜಾತಿ ಜನಗಣತಿ ವರದಿ ಸೋರಿಕೆಯಾಗಿದೆ ಎಂದು, ತಪ್ಪು ಮಾಹಿತಿ ಆಧರಿಸಿ ವರದಿ ಮಾಡಿದವು. ಪ್ರಮುಖ ಜಾತಿಗಳ ಕಪೋಲಕಲ್ಪಿತ ಅಂಕಿ ಅಂಶಗಳನ್ನು ‘ಬಹಿರಂಗ’ ಪಡಿಸಿದವು. ಯಾವುದೇ ಅಂಕಿ ಅಂಶಗಳು ಸೋರಿಕೆ ಆಗಿಲ್ಲವೆಂದು ಆಯೋಗವು ತಕ್ಷಣದಲ್ಲಿ ಸ್ಪಷ್ಟಪಡಿಸಿತು. ಆದರೆ ಕೆಲ ವ್ಯಕ್ತಿಗಳು ಮತ್ತು ಸಂಘ–ಸಂಸ್ಥೆಗಳು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾದ ಅಂಕಿ ಅಂಶಗಳೇ ನಿಜ ಎಂದು ನಂಬಿಕೊಂಡಿದ್ದಾರೆ. ಆದಕಾರಣ, ಆಯೋಗವು ಯಾವುದೇ ಪೂರ್ವಗ್ರಹ ಇಲ್ಲದೆ ವೈಜ್ಞಾನಿಕವಾಗಿ ನಡೆಸಿದ ಸಮೀಕ್ಷೆಗೆ ಗ್ರಹಣ ಬಡಿದಿದೆ.

ಕೆಲವರ ರಾಜಕೀಯ ಹಿತಾಸಕ್ತಿಗೆ ಮಾರಕವಾಗಬಹುದು ಎಂಬ ಕಾರಣಕ್ಕೆ, ಎರಡು ಪ್ರಬಲ ಸಮುದಾಯಗಳ ರಾಜಕಾರಣಿಗಳು ಜಾತಿ ಜನಗಣತಿಯ ಅಂಕಿ ಅಂಶಗಳು ಬಹಿರಂಗಗೊಳ್ಳಬಾರದು ಎಂಬ ನಿಲುವಿಗೆ ಬಂದಿರುವಂತೆ ಕಾಣಿಸುತ್ತದೆ.

ಲೇಖಕ: ಮಾಜಿ ಸದಸ್ಯ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ವಾಚಕರ ವಾಣಿ

ಗ್ಯಾರಂಟಿ ಹಣ: ದಿನ ನಿಗದಿಯಾಗಲಿ

ರಾಜ್ಯ ಸರ್ಕಾರದ ‘ಗೃಹಲಕ್ಷ್ಮಿ’ ಹಾಗೂ ‘ಅನ್ನಭಾಗ್ಯ’ ಯೋಜನೆಗಳ ಹಣವನ್ನು ಅರ್ಹ ಬಿಪಿಎಲ್ ಕಾರ್ಡ್‌ದಾರರ ಖಾತೆಗೆ ಸರ್ಕಾರ ಜಮೆ ಮಾಡುವುದು ಸರಿಯಷ್ಟೆ. ಆದರೆ ಗ್ರಾಮೀಣ ಪ್ರದೇಶದ ತೋಟಪಟ್ಟಿಯ ವೃದ್ಧ ಮಹಿಳೆಯರು, ಕೂಲಿ ಮಾಡುವ ಮಹಿಳೆಯರು ನಿತ್ಯ ತಮ್ಮ ಕೆಲಸ ಕಾರ್ಯ ಬಿಟ್ಟು ಹಣ ಜಮಾವಣೆ ಬಗ್ಗೆ ತಿಳಿದುಕೊಳ್ಳಲು ಬ್ಯಾಂಕ್‌ನಲ್ಲಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವಂತೆ ಆಗಿದೆ.

ಮನೆಯಿಂದ ಬ್ಯಾಂಕ್‌ಗೆ ಬ್ಯಾಂಕ್‌ನಿಂದ ಮನೆಗೆ ಹೋಗಿ ಬರುವ ಈ ಅಲೆದಾಟವನ್ನು ತಪ್ಪಿಸಲು ಪ್ರತಿ ತಿಂಗಳು ಈ ಯೋಜನೆಗಳ ಹಣ ಜಮಾವಣೆಯ ನಿರ್ದಿಷ್ಟ ದಿನಾಂಕವನ್ನು ತಿಳಿಸಿದರೆ ಬಹಳ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ನಿಯಮ ಪಾಲನೆಗೆ ಇರಲಿ ಮಾನವೀಯ ಸ್ಪರ್ಶ

ಬೆಂಗಳೂರಿನ ‘ನಮ್ಮ ಮೆಟ್ರೊ’ ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದ ಯುವಕನೊಬ್ಬನಿಗೆ ಬಿಎಂಆರ್‌ಸಿಎಲ್ ಭದ್ರತಾ ಸಿಬ್ಬಂದಿ ₹ 500 ದಂಡ ಹಾಕಿರುವುದರ ಬಗ್ಗೆ ವರದಿಯಾಗಿದೆ (ಪ್ರ.ವಾ., ನ. 24). ಮೆಟ್ರೊ ರೈಲಿನಲ್ಲಿ ಯುವಕ ಭಿಕ್ಷೆ ಬೇಡಿದ್ದು ಎಷ್ಟು ತಪ್ಪೋ ಭದ್ರತಾ ಸಿಬ್ಬಂದಿ ಅವನಿಗೆ ದಂಡ ವಿಧಿಸಿರುವುದೂ ಅಷ್ಟೇ ತಪ್ಪು. ನಿಮ್ಮ ಕಾನೂನು ಏನೇ ಹೇಳಲಿ, ಕಿವುಡ, ಮೂಗನಂತೆ ಸೋಗು ಹಾಕದ, ನಿಜವಾಗಿಯೂ ಕಿವುಡ ಮತ್ತು ಮೂಗನಾಗಿರುವ ಈ ಯುವಕನಿಗೆ ಬರೋಬ್ಬರಿ ₹ 500 ದಂಡ ವಿಧಿಸಿರುವುದು ಅಕ್ಷಮ್ಯ ಮತ್ತು ಅಮಾನವೀಯ ನಡೆ.

ದಂಡ ವಿಧಿಸಬೇಕಿರುವುದು ಅಂಗವಿಕಲರಂತೆ ನಟಿಸುವ ದೃಢಕಾಯರಾದ ಭಿಕ್ಷುಕರಿಗೆ, ಸಿಗ್ನಲ್‌ಗಳಲ್ಲಿ ನಿಂತು ವಾಹನ ಸವಾರರನ್ನು ಹಣಕ್ಕಾಗಿ ಪೀಡಿಸುವ ಮತ್ತು ಕಲ್ಯಾಣ ಮಂಟಪಗಳಿಗೆ ನುಗ್ಗಿ ಹಣಕ್ಕಾಗಿ ಬೇಡಿಕೆ ಇಟ್ಟು, ಕೊಡದಿದ್ದರೆ ನಾಲ್ಕು ಜನರೆದುರು ಮಾನ ಕಳೆಯಲು ಹೇಸದ ಲೈಂಗಿಕ ಅಲ್ಪಸಂಖ್ಯಾತರಿಗೆ. ಭಿಕ್ಷಾಟನೆಗೆ ಭಿಕ್ಷುಕ ಎಷ್ಟು ಜವಾಬ್ದಾರನೋ ಸರ್ಕಾರವೂ ಅಷ್ಟೇ ಜವಾಬ್ದಾರ ಎಂಬುದನ್ನು ತಣ್ಣಗೆ ಮರೆತು, ಭಿಕ್ಷುಕನನ್ನು ಮಾತ್ರ ಹೊಣೆಗಾರನನ್ನಾಗಿ ಮಾಡುವುದು ಸಮರ್ಥನೀಯವಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಹೆಜ್ಜೇನು ಗೂಡು: ಸ್ಥಳಾಂತರ ಸೂಕ್ತ

ಪ್ರಮುಖ ಧಾರ್ಮಿಕ ಕ್ಷೇತ್ರ ಮೇಲುಕೋಟೆಯ ತೊಟ್ಟಿಲಮಡು ಜಾತ್ರೆಯಲ್ಲಿ ನಡೆದ ಹೆಜ್ಜೇನು ದಾಳಿಯಲ್ಲಿ 80 ಮಂದಿ ಅಸ್ವಸ್ಥರಾಗಿರುವುದು ದುರದೃಷ್ಟಕರ. ಹೆಜ್ಜೇನುಗಳು ಮಧ್ಯಾಹ್ನದ ವೇಳೆಯಲ್ಲಿ ಕ್ರಿಯಾಶೀಲವಾಗಿರುತ್ತವೆ. ಶಬ್ದ ಹಾಗೂ ಹೊಗೆಗೆ ಬಹುಬೇಗ ಉದ್ರೇಕಗೊಂಡು ಜನರನ್ನು ಬೆನ್ನಟ್ಟಿ ಹೋಗಿ ಮಾರಕವಾದ ರೀತಿಯಲ್ಲಿ ಅವು ದಾಳಿ ನಡೆಸುವುದು ಎಲ್ಲರಿಗೂ ತಿಳಿದ ವಿಚಾರ. ಉದ್ರೇಕಗೊಂಡ ಹೆಜ್ಜೇನು, ನೀರಲ್ಲಿ ಮುಳುಗಿದರೂ ಸೇಡು ತೀರಿಸಿಕೊಳ್ಳಲು ಕಾಯುತ್ತದೆ ಎಂದು ಹಿರಿಯರು ಹೇಳುವುದನ್ನು ಕೇಳಿದ್ದೇನೆ. ನನ್ನ ಸಂಬಂಧಿಯೊಬ್ಬರನ್ನು ಹೆಜ್ಜೇನಿನ ಹಿಂಡು ಒಂದು ಕಿ.ಮೀ.ವರೆಗೂ ಹಿಂಬಾಲಿಸಿಕೊಂಡು ಹೋಗಿ ಕಚ್ಚಿದ್ದರಿಂದ ಅವರು ಮರಣ ಹೊಂದಿದರು.

ಒಮ್ಮೆ ಶವಸಂಸ್ಕಾರದ ವೇಳೆ ಊದಿನಕಡ್ಡಿಯ ವಾಸನೆಗೆ, ಸಮೀಪದ ತೆಂಗಿನ ಮರದಲ್ಲಿ ಗೂಡು ಕಟ್ಟಿದ್ದ ಹೆಜ್ಜೇನು ರೊಚ್ಚಿಗೆದ್ದು ಅಲ್ಲಿ ಸೇರಿದ್ದ ಜನರ ಮೇಲೆ ದಾಳಿ ನಡೆಸಿದ್ದನ್ನು ಕಂಡಿರುವೆ. ಹಾಗಾಗಿ, ಶಾಲಾ ಕಾಲೇಜು, ಕಚೇರಿಯ ಕಟ್ಟಡಗಳು, ದೇವಾಲಯ, ವಸತಿ ಸಂಕೀರ್ಣ, ಜಾತ್ರೆ, ಉರುಸ್ ನಡೆಯುವ ಸ್ಥಳಗಳ ಸಮೀಪದ ಕಟ್ಟಡ ಮತ್ತು ಮರಗಳಲ್ಲಿ ಕಟ್ಟಿರುವ ಹೆಜ್ಜೇನಿನ ಗೂಡುಗಳನ್ನು ಸುರಕ್ಷತೆಯ ದೃಷ್ಟಿಯಿಂದ ತೆರವುಗೊಳಿಸುವುದು ಒಳಿತು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಕನ್ನಡದಲ್ಲೇಕೆ ಈ ಅಪಪ್ರಯೋಗ?

‘ಹಿಂದೂ ಎಂದು ಹೇಳಿಕೊಳ್ಳಲು ಗರ್ವ ಪಡಬೇಕು’ ಎಂಬ ಶೀರ್ಷಿಕೆಯನ್ನು ಒಳಗೊಂಡ ಸುದ್ದಿ (ಪ್ರ.ವಾ., ನ. 22) ಪ್ರಕಟವಾಗಿದೆ. ಹಿಂದೂ ಎಂದು ಹೇಳಿಕೊಳ್ಳಲು ಯಾಕೆ ‘ಗರ್ವ’ ಪಡಬೇಕು ಎಂದು ನನಗೆ ತಕ್ಷಣ ಅರ್ಥವಾಗಲಿಲ್ಲ. ಗರ್ವ ಎಂದರೆ ಕನ್ನಡದಲ್ಲಿ ಜಂಬ, ಅಹಂಕಾರ, ಸೊಕ್ಕು ಎಂಬ ಅರ್ಥಗಳಿವೆ ಎಂಬುದು ನಮಗೆಲ್ಲಾ ತಿಳಿದಿದೆ. ಅದಕ್ಕೆ ಸಕಾರಾತ್ಮಕ ಅರ್ಥವಂತೂ ಇಲ್ಲವೇ ಇಲ್ಲ. ಹಾಗಾದರೆ ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಹೀಗೇಕೆ ಹೇಳಿದರು ಎಂದು ತಲೆಕೆಡಿಸಿಕೊಂಡಾಗ ಹೊಳೆದದ್ದು, ಅವರು ಉತ್ತರದ ರಾಜ್ಯಗಳಲ್ಲಿ ಹೆಚ್ಚು ಸಂಚರಿಸುತ್ತಾರೆ ಮತ್ತು ಮೊದಲಿನಿಂದಲೂ ಹಿಂದಿಯವರ ಮಾತಿನ ಸಂಪರ್ಕ ಇರುವವರು. ಅದಕ್ಕಾಗಿ ಅವರು ಆ ಹಿಂದಿಯವರ ಧಾಟಿಯನ್ನೇ ಅನುಸರಿಸಿ ಈ ಶಬ್ದ ಬಳಸಿದ್ದಾರೆ ಎಂಬುದು ಅರ್ಥವಾಯಿತು. ನಾವು ಹೆಮ್ಮೆ ಎಂದು ಹೇಳುವುದಕ್ಕೆ ಅವರು ಸಂಸ್ಕೃತದ ‘ಗರ್ವ’ ಪದವನ್ನು ಬಳಸುತ್ತಾರೆ. ಹಾಗಾಗಿ, ಹಿಂದೂ ಎಂದು ಹೇಳಿಕೊಳ್ಳಲು ನಾವೆಂದೂ ಗರ್ವಪಡಬೇಕಾದ್ದಿಲ್ಲ. ಹೆಮ್ಮೆಪಟ್ಟರೆ ಸಾಕು.

ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಶಾಲೆಗಳಲ್ಲಿ ಶೌಚಾಲಯ: ತುರ್ತು ಆದ್ಯತೆಯಾಗಲಿ

ಕೊಪ್ಪಳ ಜಿಲ್ಲೆ ಅಳವಂಡಿಯ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿನಿಯರು ಮತ್ತು ಶಿಕ್ಷಕರ ಶೌಚಕ್ಕೆ ಬಯಲೇ ಗತಿಯಾಗಿರುವ ಕುರಿತ ವರದಿಯು (ಪ್ರ.ವಾ., ನ. 23) ವ್ಯವಸ್ಥೆಯ ಕಣ್ತೆರೆಸುವಂತಿದೆ. ದೇಶವನ್ನು ಬಯಲು ಶೌಚಮುಕ್ತ ಎಂದು ಈಗಾಗಲೇ ಘೋಷಿಸಲಾಗಿದೆ. ಹೀಗಿದ್ದರೂ ಇಂತಹ ಸ್ಥಿತಿ ಇರುವುದು ಬೇಸರದ ಸಂಗತಿ. ಇಲ್ಲಷ್ಟೇ ಅಲ್ಲದೆ ರಾಜ್ಯದ ಹಲವು ಶಾಲಾ-ಕಾಲೇಜುಗಳಲ್ಲಿ ಶೌಚಾಲಯ ಇಲ್ಲದೆ ವಿದ್ಯಾರ್ಥಿಗಳು ಬಯಲನ್ನು ಅವಲಂಬಿಸುವುದು ಸಾಮಾನ್ಯವಾಗಿದೆ.

ಸರ್ಕಾರಿ ಶಾಲೆಗಳಿಗೆ ಶೌಚಾಲಯದಂತಹ ಅಗತ್ಯ ಮೂಲ ಸೌಲಭ್ಯ ಒದಗಿಸುವುದು ಆದ್ಯತೆಯ ವಿಷಯವಾಗಿರುವುದರಿಂದ, ಸರ್ಕಾರ ಈ ಸಂಬಂಧ ತುರ್ತಾಗಿ ಅನುದಾನ ನೀಡಬೇಕು. ಇಲ್ಲವಾದಲ್ಲಿ ಸಾರ್ವಜನಿಕ ಸಹಭಾಗಿತ್ವ ಹಾಗೂ ದಾನಿಗಳ ನೆರವಿನಲ್ಲಿ ಮೂಲ ಸೌಲಭ್ಯ ಅಭಿವೃದ್ಧಿಪಡಿಸಲು ಒತ್ತು ನೀಡಬೇಕು.

ಪ್ರಸಾದ್ ಜಿ.ಎಂ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಂದಿನ 25 ವರ್ಷಗಳು ನವಯುಗದ ಕರ್ನಾಟಕದ ವೃತ್ತಿಪರರಿಗೆ ಹೊಸ ಸವಾಲುಗಳು ಮತ್ತು ಅವಕಾಶಗಳ ಬಾಗಿಲುಗಳನ್ನು ಒಟ್ಟೊಟ್ಟಿಗೆ ತೆರೆಯಲಿವೆ. ಡಿಜಿಟಲ್ ಮತ್ತು ಎಐ ತಂತ್ರಜ್ಞಾನಾಧಾರಿತ ಔದ್ಯೋಗಿಕ ಮಾರುಕಟ್ಟೆಯಲ್ಲಿ ವಿಶ್ಲೇಷಣಾತ್ಮಕ ಸಾಮರ್ಥ್ಯ, ಕ್ರಿಯಾಶೀಲ ಆಲೋಚನೆ, ವೈಯುಕ್ತಿಕ ಕ್ಷಮತೆಯ ಅರಿವು, ನಿರಂತರ ಕಲಿಕೆ ಮತ್ತು ನಾಯಕತ್ವದ ಕೌಶಲಗಳು ಅತ್ಯಂತ ಅವಶ್ಯಕ

ನವಯುಗದ ವೃತ್ತಿಗಳಿಗೆ ಕನ್ನಡಿಗರು ಸನ್ನದ್ಧರಾಗಲಿ

● ಸತ್ಯಪ್ರಕಾಶ್ ಎಂ. ಆರ್.

ನಾವೀಗ ಐತಿಹಾಸದ ಬಹುದೊಡ್ಡ ಸಂಕ್ರಮಣ ಕಾಲಘಟ್ಟದಲ್ಲಿದ್ದೇವೆ. ಹೊಸಯುಗದ ತಂತ್ರಜ್ಞಾನ, ಜಗತ್ತಿನ ರೂಪುರೇಷೆಯನ್ನೇ ಬದಲಿಸುತ್ತಲಿದೆ. ಡಿಜಿಟಲ್ ಮಾಧ್ಯಮ, ಅಂತರ್ಜಾಲ ಆಧಾರಿತ ಅನಲಿಟಿಕ್ಸ್, ಕೃತಕ ಬುದ್ಧಿಮತ್ತೆ, ವೃತ್ತಿಗತ ಮಾರುಕಟ್ಟೆಯ ಅನುಭೂತಿ ಬದುಕಿನ ಎಲ್ಲ ಮಗ್ಗುಲುಗಳನ್ನೂ ಬುಡಮೇಲು ಮಾಡುತ್ತಿದೆ. ಸಾಂಪ್ರದಾಯಿಕ ಉದ್ಯೋಗಗಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸುತ್ತಿದೆ. ಉದ್ಯೋಗದ ಸ್ವರೂಪ ಕೂಡ ಬದಲಾಗುತ್ತಿದೆ.

ಜನರೇಷನ್ ವೈ ಮತ್ತು ಜೆಡ್ ಅಂದರೆ 1980ರಿಂದ 1994ರವರೆಗೆ ಮತ್ತು 1995ರಿಂದ 2010ರ ನಡುವೆ ಹುಟ್ಟಿದ ಪೀಳಿಗೆಗಳು ಹಿಂದಿನ ಎಲ್ಲ ಪೀಳಿಗೆಗಿಂತಲೂ ಭಿನ್ನ, ವಿಶಿಷ್ಟ. ಜನರೇಷನ್ ವೈ ಅನಲಾಗ್‌ನಿಂದ ಡಿಜಿಟಲ್ ತಂತ್ರಜ್ಞಾನಕ್ಕೆ ತೆರೆದುಕೊಂಡವರಾದರೆ, ಜನರೇಷನ್ ಜೆಡ್ ಹುಟ್ಟುತ್ತಲೇ ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಸ್ಮಾರ್ಟ್‌ಫೋನ್ ಹಾಗೂ ಅತಿ ವೇಗದ ಅಂತರ್ಜಾಲವನ್ನು ಬಳುವಳಿಯಾಗಿ ಪಡೆದವರು. ಈ ಎರಡು ಪೀಳಿಗೆಯ ವೃತ್ತಿಪರರು ಅರಸುವ ಮತ್ತು ಇವರಿಗಾಗಿ ಲಭ್ಯವಿರುವ ವೃತ್ತಿಗಳು, ಅವುಗಳ ನಿರ್ವಹಣೆಯ ಸ್ವರೂಪ ಕೂಡ ಬದಲಾಗುತ್ತಲೇ ಇದೆ.

ಕೋವಿಡ್-19 ನಂತರ ಸಂಭವಿಸಿದ ಆರ್ಥಿಕತೆಯ ಸ್ಥಿತ್ಯಂತರ ಹಾಗೂ ಜಾಗತಿಕ ರಾಜಕಾರಣದ ಪಲ್ಲಟ, ಔದ್ಯೋಗಿಕ ರಂಗದಲ್ಲಿ ಅಚ್ಚರಿಯ ಬದಲಾವಣೆಗಳನ್ನು ತಂದೊಡ್ಡಿದೆ. ಭವಿಷ್ಯದ ವೃತ್ತಿಗಳ ಕುರಿತು ವಿಶ್ವ ಆರ್ಥಿಕ ವೇದಿಕೆಯು 2023ರಲ್ಲಿ ಹೊರತಂದಿರುವ ವರದಿಯ ಪ್ರಕಾರ ಮುಂಬರುವ ವರ್ಷಗಳಲ್ಲಿ ಸಾಮಾನ್ಯ ಶಿಕ್ಷಣ ಪಡೆದ ಪದವೀಧರರು ಮತ್ತು ಮಹಿಳೆಯರು ಉದ್ಯೋಗ ಗಿಟ್ಟಿಸುವುದು ಕಷ್ಟಕರವಾಗಲಿದೆ. ಈ ಸಂಕಷ್ಟಕರ ಪರಿಸ್ಥಿತಿಯ ಮಧ್ಯೆ ಜಾಗತಿಕ ಔದ್ಯೋಗಿಕ ಮಾರುಕಟ್ಟೆಯಲ್ಲಿ ಕಂಪನಿಗಳು ಕಡಿಮೆ ವೇತನದಲ್ಲಿ ಕೌಶಲಯುತ ಹಾಗೂ ಗುಣಮಟ್ಟದ ವೃತ್ತಿಪರರನ್ನು ಅರಸುವ ವಿದ್ಯಮಾನಕ್ಕೆ ನಾವೆಲ್ಲರೂ ಅಣಿಗೊಳ್ಳಬೇಕಿದೆ.

ಹಾಗಾದರೆ ಕನ್ನಡಿಗ ಉದ್ಯೋಗಾಕಾಂಕ್ಷಿಗಳಿಗಿರುವ ಅವಕಾಶಗಳಾದರೂ ಯಾವುವು? ಅವುಗಳನ್ನು ಸಾಕಾರಗೊಳಿಸಿಕೊಳ್ಳಲು ಇರುವ ಮಾರ್ಗಗಳು ಯಾವುವು? ಮುಂಬರುವ ದಿನಗಳಲ್ಲಿ ಡಿಜಿಟಲ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ ಮತ್ತು ಅಂತರ್ಜಾಲ ಕೇಂದ್ರಿತ ವೃತ್ತಿಗಳಿಗೆ ಬೇಡಿಕೆ ಹೆಚ್ಚಲಿದೆ.

ಕೋವಿಡ್-19ರ ಹೊಡೆತಕ್ಕೆ ಮಕಾಡೆ ಮಲಗಿದ, ಮುಂದುವರಿಯುತ್ತಿರುವ ಮತ್ತು ಹಿಂದುಳಿದ ದೇಶಗಳಲ್ಲಿ ಪರಿಸರಸ್ನೇಹಿ ತಂತ್ರಜ್ಞಾನ, ಹಸಿರು ಆರ್ಥಿಕತೆ ಮತ್ತು ಆರ್ಥಿಕ ಮರುಹೊಂದಾಣಿಕೆಯಿಂದಾಗಿ ಭಾರಿ ಸಂಖ್ಯೆಯಲ್ಲಿ ಸಾಂಪ್ರದಾಯಿಕ ಉದ್ಯೋಗಗಳು ಕಣ್ಮರೆಯಾಗಲಿವೆ.

ಶಿಕ್ಷಣ ಮತ್ತು ಉದ್ಯೋಗದ ಪ್ರಶ್ನೆ: ಪ್ರಸಕ್ತ ಶಿಕ್ಷಣ ವ್ಯವಸ್ಥೆಯೇ ಸಂಪೂರ್ಣ ಬದಲಾಗಬೇಕಾಗಿದೆ. ಸಾಂಪ್ರದಾಯಿಕವಾದ ಪಾಠ ಪ್ರವಚನಗಳ ಜೊತೆಗೆ ಈಗ ಆನ್‌ಲೈನ್ ಶಿಕ್ಷಣ, ಸರ್ವಾಂತರ್ಯಾಮಿ ಕಲಿಕೆ (Ubiquitous learning), ಸ್ವಯಂ ಕಲಿಕೆ, ಹೀಗೆ ಬೋಧನೆ ಮತ್ತು ಕಲಿಕೆಯ ಸ್ವರೂಪ ಹೈಬ್ರಿಡ್ ಮಾದರಿಗೆ ಬದಲಾಗಿದೆ. ಈ ಹೈಬ್ರಿಡ್ ಶಿಕ್ಷಣ ಮಾದರಿಯನ್ನು ಮಾಹಿತಿ ಆಧಾರಿತ ಆರ್ಥಿಕತೆಗೆ ಸೂಚಕವಾಗಿ ಪರಿಗಣಿಸುವುದಾದರೆ, ಸಮಕಾಲೀನ ಉದ್ಯೋಗಗಳೂ ಹೈಬ್ರಿಡ್ ಮಾದರಿಗೆ ಬೇಕೆ ಹೊರಳಿವೆ ಎಂಬುದು ನಮಗೆ ಅರಿವಾಗುತ್ತದೆ.

ತಂತ್ರಜ್ಞಾನದ ರಾಕೆಟ್ ವೇಗದ ಅಭಿವೃದ್ಧಿ ಮತ್ತು ವ್ಯಾಪಕ ಡಿಜಿಟಲೀಕರಣದ ಪರಿಣಾಮದಿಂದ ಸರ್ವೆ ಸಾಮಾನ್ಯವಾಗಿ ಕಂಡುಬರುತ್ತಿದ್ದ ಗುಮಾಸ್ತರು, ಸಹಾಯಕರು, ಬ್ಯಾಂಕ್‌ಗಳಲ್ಲಿನ ಟೆಲ್ಲರ್‌ಗಳು, ಪೋಸ್ಟಲ್ ಸೇವಾ ಕ್ಲರ್ಕ್‌ಗಳು, ಕ್ಯಾಷಿಯರ್‌ಗಳು, ಟಿಕೆಟ್ ಏಜೆಂಟ್‌ಗಳು, ಡೇಟಾ ಎಂಟ್ರಿ ಆಪರೇಟರ್‌ಗಳು ಮುಂಬರುವ ವರ್ಷಗಳಲ್ಲಿ ಗಣನೀಯವಾಗಿ ಕಡಿಮೆಯಾಗಲಿದ್ದಾರೆ. ಆದ್ದರಿಂದ ಉದ್ಯೋಗಾಸಕ್ತರು ಮುಂದಿನ ದಿನಗಳಲ್ಲಿ ಸಾಂಪ್ರದಾಯಿಕ ವೃತ್ತಿಗಳ ಬಗ್ಗೆ ಯೋಚಿಸುವುದನ್ನು ಬಿಟ್ಟು, ನವಯುಗದ ಹೊಸ ಮಾದರಿಯ ವೃತ್ತಿಗಳಿಗೆ ತಯಾರಾಗುವುದರತ್ತ ಗಮನಹರಿಸಬೇಕಿದೆ.

ಮರೀಚಿಕೆಯಾಗುತ್ತಿರುವ ಸರ್ಕಾರಿ ಉದ್ಯೋಗ: ಇನ್ನು ಸರ್ಕಾರಿ ವಲಯದ ಔದ್ಯೋಗಿಕ ಅವಕಾಶಗಳ ವಿಷಯಕ್ಕೆ ಬಂದರೆ, ಉದ್ಯೋಗಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಲೇ ಇದೆ. ಹಲವು ಇಲಾಖೆಗಳಲ್ಲಿ ನೇಮಕಾತಿಗೆ ಚಾಲನೆಯೇ ದೊರೆಯುತ್ತಿಲ್ಲ. ನೇರ ನೇಮಕಾತಿಯ ಬದಲಿಗೆ ಹೊರಗುತ್ತಿಗೆ, ತಾತ್ಕಾಲಿಕ ಗುತ್ತಿಗೆ ಆಧಾರದ ನೇಮಕಾತಿ, ಸೀಮಿತ ಅವಧಿಯ ನೇಮಕಾತಿಗೆ ಇಲಾಖೆಗಳು ಮೊರೆ ಹೋಗುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಈ ಮಾತು ಅನ್ವಯಿಸುತ್ತದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಏಂದೊಂದಾಗಿ ಖಾಸಗೀಕರಣಗೊಳ್ಳುತ್ತಿರುವ ವಿಷಮ ಸಂದರ್ಭದಲ್ಲಿ ಸರ್ಕಾರಿ ಉದ್ಯೋಗವು ಸಹಜವಾಗಿಯೇ ಕೈಗೆಟುಕದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಪರಿಸ್ಥಿತಿ ಹೀಗಿರುವಾಗ ಸರ್ಕಾರವನ್ನೇ ನೆಚ್ಚಿ ಕೂರುವಂತಿಲ್ಲ. ಖಾಸಗಿ ವಲಯದ ಸ್ಪರ್ಧಾತ್ಮಕ ಉದ್ಯೋಗ ಮಾರುಕಟ್ಟೆಯ ಆಗತ್ಯಗಳಿಗೆ ತಕ್ಕ ಕೌಶಲಗಳನ್ನು ಕನ್ನಡಿಗರು ಕಲಿಯಲೇಬೇಕಿದೆ. ಹೊಸ ಮಾದರಿಯ ವೃತ್ತಿಗಳಿಗೆ ಪೂರಕವಾದ ಕೋರ್ಸ್‌ಗಳು, ಕೌಶಲ್ಯವೃದ್ಧಿ, ಉದ್ಯೋಗದ ಜೊತೆ ಜೊತೆಗೆ ಕಲಿಕೆ, ಹೀಗೆ ಹೊಸ ಯುಗದ ರೀತಿ ರಿವಾಜುಗಳಿಗೆ ತಯಾರಾಗಲೇಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ.

ಹೊಸ ಮಾದರಿಯ ವೃತ್ತಿಗಳು: ಡಿಜಿಟಲೀಕರಣ ಪ್ರಕ್ರಿಯೆ ಉದ್ಯಮಗಳ ವಾಣಿಜ್ಯ ವ್ಯವಹಾರಗಳ ಮೇಲೆ ಬಹುದೊಡ್ಡ ಪ್ರಭಾವ ಬೀರಲಿದೆ. ಕಾರ್ಪೊರೇಟ್ ಸಂಸ್ಥೆಗಳು ಕ್ಲೌಡ್ ಕಂಪ್ಯೂಟಿಂಗ್, ಎಐ, ಬಿಗ್ ಡೇಟಾ, ಡಿಜಿಟಲ್ ವೇದಿಕೆಗಳು ಮತ್ತು ಆ್ಯಪ್‌ಗಳನ್ನು ತಮ್ಮ ದೈನಂದಿನ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಲಿವೆ. ಬಹುತೇಕ ಉದ್ಯಮಗಳು ಆನ್‌ಲೈನ್ ಅಥವಾ ಡಿಜಿಟಲ್ ವ್ಯಾಪಾರ ಮತ್ತು ಈ-ಕಾಮರ್ಸ್ ವಹಿವಾಟನ್ನು ಹೊಂದಲಿವೆ. ಇದರ ಪರಿಣಾಮ ಡೇಟಾ ಅನಲಿಟಿಕ್ಸ್, ಬಿಸಿನೆಸ್ ಅನಲಿಟಿಕ್ಸ್, ವೈಯುಕ್ತಿಕ ಡೇಟಾ ನಿರ್ವಹಣೆ, ಎನ್‌ಕ್ರಿಪ್ಷನ್, ಸೈಬರ್ ಸುರಕ್ಷತೆ, ಫೈನಾನ್ಷಿಯಲ್ ಅನಾಲಿಸಿಸ್, ಫಂಡ್ ನಿರ್ವಹಣೆ ಇವೇ ಮುಂತಾದ ವೃತ್ತಿಗಳಿಗೆ ಬೇಡಿಕೆ ಹೆಚ್ಚಾಗಲಿದೆ.

ಎಐ ವಿಜ್ಞಾನಿಗಳು ಮತ್ತು ಮಷಿನ್ ಲರ್ನಿಂಗ್ ಎಂಜಿನಿಯರ್‌ಗಳು, ಮಾಹಿತಿ ಸುರಕ್ಷತಾ ಅನಲಿಸ್ಟ್‌ಗಳು, ಸಿಸ್ಟಮ್ ಎಂಜಿನಿಯರುಗಳು ಮಂಚೂಣಿಗೆ ಬರಲಿದ್ದಾರೆ. ಡಿಜಿಟಲ್ ತಂತ್ರಜ್ಞಾನದ ವಿಸ್ತರಣೆಯಿಂದಾಗಿ ಇ-ಕಾಮರ್ಸ್ ಪರಿಣತರು, ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್ ಪರಿಣತರು, ಎಥಿಕಲ್ ಹ್ಯಾಕರ್‌ಗಳು, ಡಿಜಿಟಲ್ ಮಾರ್ಕೆಟಿಂಗ್ ಮತ್ತು ತಂತ್ರಗಾರಿಕೆ ಪರಿಣತರಂತಹ ಸುಮಾರು 40 ಲಕ್ಷ ಸ್ವರೂಪದ ಹೊಸ ವೃತ್ತಿಗಳು ಸೃಷ್ಟಿಯಾಗಲಿವೆ ಎಂದು ಡಬ್ಲ್ಯುಇಎಫ್ ಅಂದಾಜಿಸಿದೆ.

ಮುಂದಿನ 25 ವರ್ಷಗಳು ನವಯುಗದ ಕರ್ನಾಟಕದ ವೃತ್ತಿಪರರಿಗೆ ಹೊಸ ಸವಾಲುಗಳು ಮತ್ತು ಅವಕಾಶಗಳ ಬಾಗಿಲುಗಳನ್ನು ಒಟ್ಟೊಟ್ಟಿಗೆ ತೆರೆಯಲಿವೆ. ಡಿಜಿಟಲ್ ಮತ್ತು ಎಐ ತಂತ್ರಜ್ಞಾನಾಧಾರಿತ ಔದ್ಯೋಗಿಕ ಮಾರುಕಟ್ಟೆಯಲ್ಲಿ ವಿಶ್ಲೇಷಣಾತ್ಮಕ ಸಾಮರ್ಥ್ಯ, ಕ್ರಿಯಾಶೀಲ ಆಲೋಚನೆ, ವೈಯುಕ್ತಿಕ ಕ್ಷಮತೆಯ ಅರಿವು, ನಿರಂತರ ಕಲಿಕೆ ಮತ್ತು ನಾಯಕತ್ವದ ಕೌಶಲಗಳು ಅತ್ಯಂತ ಅವಶ್ಯಕ. ಐವತ್ತರ ಹರೆಯದ ಕರ್ನಾಟಕ ಹೊಸ ಯುಗದ ಉದ್ಯೋಗಾವಕಾಶಗಳಿಗೆ ಸನ್ನದ್ಧವಾಗುವ ದಿಸೆಯಲ್ಲಿ ಅಗತ್ಯವಾದ ವೃತ್ತಿಕೌಶಲಗಳನ್ನು ರೂಢಿಸಿಕೊಳ್ಳಲೇಬೇಕಿದೆ. ಇದು ಈ ಕಾಲಘಟ್ಟದ ಅಗತ್ಯವೂ ಹೌದು.

ಲೇಖಕ: ಸಹ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ



ಸಮಗ್ರ ಗ್ರಾಮೀಣಾಭಿವೃದ್ಧಿಯ ಪ್ರಗತಿ ಪಥದತ್ತ ನಮ್ಮ ಚಿತ್ತ

ಸಮಗ್ರ ಗ್ರಾಮೀಣಾಭಿವೃದ್ಧಿ ಸಾಧನೆಗೆ ದೃಢಸಂಕಲ್ಪ, ಒಳಗೊಳ್ಳುವಿಕೆಯ ಪ್ರಜಾಪ್ರಭುತ್ವದ ಆಚರಣೆಗೆ ರಾಜಕೀಯ ಇಚ್ಛಾಶಕ್ತಿ ಇದ್ದರೆ, ಜನತೆ ಸಿನಿಕತನ ತೊರೆದು ಮುನ್ನಡೆದರೆ, ಗ್ರಾಮ ಸ್ವರಾಜ್ಯದ ಸ್ಥಾಪನೆ ಕಷ್ಟವೇನಲ್ಲ

● ಕೃಪಾ ಎಂ.ಎಂ.

ಸ್ಥಳೀಯ ಸರ್ಕಾರಗಳ ಸ್ವಾಯತ್ತೆ ಮಹದಾಶಯದೊಂದಿಗೆ ಜಾರಿಯಾದ ಸಂವಿಧಾನದ 73ನೇ ತಿದ್ದುಪಡಿಗೆ 30ರ ಹರೆಯದೊಂದಿಗೆ ಕರ್ನಾಟಕ ರಾಜ್ಯಕ್ಕೆ ಸುವರ್ಣ ಸಂಭ್ರಮ. ಭಾರತದ ನಿಜವಾದ ಪ್ರಗತಿ ಎಂದರೆ ಕೇವಲ ಕೈಗಾರಿಕಾ ನಗರ ಕೇಂದ್ರಗಳ ಬೆಳವಣಿಗೆ ಮತ್ತು ವಿಸ್ತರಣೆ ಮಾತ್ರವಲ್ಲ, ಮುಖ್ಯವಾಗಿ ಹಳ್ಳಿಗಳ ಅಭಿವೃದ್ಧಿ ಎಂದು ಗಾಂಧೀಜಿಯವರು ಹೇಳಿದ್ದರು. ನಮ್ಮದು ಹಳ್ಳಿಗಳ ದೇಶ. ಇಂದಿಗೂ, ಭಾರತದ ಜನಸಂಖ್ಯೆಯ 70 % ರಷ್ಟು ಜನರು ಗ್ರಾಮವಾಸಿಗಳಾಗಿದ್ದಾರೆ. ಭಾರತವು ವೇಗವಾಗಿ ನಗರೀಕರಣಗೊಳ್ಳುತ್ತಿದೆ ಎಂಬ ದೃಷ್ಟಿಕೋನದ ಹೊರತಾಗಿಯೂ, 2050ರ ಹೊತ್ತಿಗೆ ದೇಶದ ಜನಸಂಖ್ಯೆಯ ಅರ್ಧದಷ್ಟು ಮಾತ್ರ ನಗರಗಳಲ್ಲಿ ಇರುತ್ತದೆ ಎಂಬುದು ಅಕ್ಷರಶಃ ಸತ್ಯ.

ವಿಕೇಂದ್ರೀಕೃತ ಪ್ರಜಾತಂತ್ರ ಜೀವನಾಡಿಯಾಗಿರುವ ಭಾರತದ ಅಭಿವೃದ್ಧಿಯ ನೆಲೆಯಿರುವುದೇ ಗ್ರಾಮಪಂಚಾಯಿತಿಗಳಲ್ಲಿ. ಗ್ರಾಮಸರ್ಕಾರಗಳ ಸ್ವಯಮಾಡಳಿತದ ವೈಖರಿಯಲ್ಲಿ. ಅಭಿವೃದ್ಧಿ ಎಂದೊಡನೆ ಹೆಚ್ಚಿನ ಆದ್ಯತೆಯನ್ನು ಮೂಲಭೂತ ಸೌಕರ್ಯಗಳಾದ ವಸತಿ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಆಹಾರ ಭದ್ರತೆ, ಉದ್ಯೋಗಾವಕಾಶ ಹೆಚ್ಚಳ ಹಾಗೂ ತಂತ್ರಜ್ಞಾನ ಆಧಾರಿತ ಸಂವಹನಕ್ಕೆ ನೀಡಲಾಗುತ್ತದೆ. ಪಂಚಾಯಿತಿಯಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯೂ ಸೇರಿದಂತೆ ಎಲ್ಲ ಯೋಜನಾ ಪ್ರಕ್ರಿಯೆಗಳಲ್ಲೂ ಹೆಚ್ಚಾಗಿ ಪ್ರಸ್ತಾಪವಾಗುವುದು ರಸ್ತೆ, ಚರಂಡಿ, ದಾರಿದೀಪ, ಕೆರೆಯ ಹೂಳೆತ್ತುವುದು, ಮನೆ, ನೀರಿನ ವ್ಯವಸ್ಥೆ, ಶಾಲೆಗೆ ಆವರಣ ಗೋಡೆ, ಪೀಠೋಪಕರಣ ಹೀಗೆ... ಪಟ್ಟಿ ಬೆಳೆಯುತ್ತದೆ. ಕೇವಲ ಭೌತಿಕ, ಆರ್ಥಿಕ ಸುಧಾರಣೆಯಷ್ಟೇ ಅಭಿವೃದ್ಧಿಯಲ್ಲ; ಮಾನವ, ಪರಿಸರ ಹಾಗೂ ಸಾಮಾಜಿಕ ಅಭಿವೃದ್ಧಿಯೂ ಅಷ್ಟೇ ಮಹತ್ವದ್ದು.

ರಾಜ್ಯದಲ್ಲಿ 2020ರಿಂದೀಚೆಗೆ ಕೋವಿಡ್ ಪರಿಸ್ಥಿತಿಯ ನಡುವೆಯೂ ಆಶಾಕಿರಣವಾಗಿರುವ ಸಮಗ್ರ ಪ್ರಗತಿಪೂರಕವಾದ ಕಾರ್ಯಕ್ರಮವೆಂದರೆ ಗ್ರಾಮೀಣ ಗ್ರಂಥಾಲಯಗಳು ಸುರಕ್ಷಿತ, ಸೃಜನಾತ್ಮಕ ತಾಣಗಳಾಗಿ ರೂಪುಗೊಳ್ಳುತ್ತಿರುವುದು. ಭೌತಿಕ, ಆರ್ಥಿಕ ಅಭಿವೃದ್ಧಿಯ ಮೂಲಮಂತ್ರವಾಗಿರುವವರಿಗೆ ಇದು ಅಭಿವೃದ್ಧಿಯ ಹೊಸ ಆಯಾಮವನ್ನು ಪರಿಚಯಿಸಿದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆ, ಮಕ್ಕಳಿಗೆ, ಯುವಜನರಿಗೆ, ಮಹಿಳೆಯರಿಗೆ ತಮ್ಮ ವಿಷಯಗಳ ಮುಕ್ತಚರ್ಚೆಗೆ ಸುರಕ್ಷಿತ ವಾತಾವರಣ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪೂರಕವ್ಯವಸ್ಥೆ, ಗ್ರಾಮಸ್ಥರಿಗೆ ಅಗತ್ಯ ಮಾಹಿತಿಗಳನ್ನು ಕ್ಷಿಪ್ರವಾಗಿ ನೀಡುವಂತಹ ಕೇಂದ್ರವಾಗಿ ರೂಪಿತವಾಗುವ ಮಹಾತ್ವಾಕಾಂಕ್ಷಿ ಯೋಜನೆ ಇದಾಗಿದೆ. ಇದರ ಸಾಕಾರಕ್ಕೆ ಗ್ರಾಮಪಂಚಾಯಿತಿಗಳು ಚುಕ್ಕಾಣಿ ಹಿಡಿದವು. ಸಹವರ್ತಿಗಳು ಹಾಗೂ ಗ್ರಾಮೀಣ ಸಮುದಾಯ ಜಂಟಿಯಾಗಿ ಹೆಜ್ಜೆಹಾಕಿದರೆ, ಗ್ರಂಥಾಲಯವೊಂದರ ಅಲ್ಲ; ಕರ್ನಾಟಕದ ಎಲ್ಲ ಗ್ರಾಮಗಳು ಸೃಜನಾತ್ಮಕ, ಸುರಕ್ಷಿತ, ಜ್ಞಾನಕೇಂದ್ರಗಳಾಗಿ ಪ್ರಗತಿಪಥದ ಮೆಟ್ಟಿಲುಗಳಾಗಲು ಯುಗಗಳು ಬೇಕಿಲ್ಲ.

ಮಕ್ಕಳಿಂದಲೇ ಪ್ರಾರಂಭವಾಗಿ, 2016ರಲ್ಲಿ ಕಾಯ್ದೆಯ ಮೂಲಕ ಶಾಸನಬದ್ಧ ಮನ್ನಣೆ ಪಡೆದ ಮಕ್ಕಳ ಗ್ರಾಮಸಭೆಯನ್ನು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಅವರಿಗೆ ಸ್ನೇಹಿಯಾದ ಗ್ರಾಮಪಂಚಾಯಿತಿಗಳ ಸ್ಥಾಪನೆಗಾಗಿ ಅಭಿಯಾನ ಮಾದರಿಯಲ್ಲಿ ನಡೆಸುವಂತೆ ಇಲಾಖೆಯ ಪ್ರತಿವರ್ಷ ನಿರ್ದೇಶಿಸುತ್ತಿದೆ. ತನ್ಮೂಲಕ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಪಂಚಾಯಿತಿಮಟ್ಟದಲ್ಲಿ ಆಗಬೇಕಾದ ಪ್ರಗತಿ-ಪ್ರಕ್ರಿಯೆ, ಅದರಲ್ಲಿ ಮಕ್ಕಳ ಸಕ್ರಿಯ ಭಾಗವಹಿಸುವಿಕೆಯನ್ನು ಎತ್ತಿಹಿಡಿಯಲಾಗಿದೆ. ಅಲ್ಲದೇ ಮಕ್ಕಳ ಧ್ವನಿಗೆ ವೇದಿಕೆಯಾಗುವ ಬಾಲಮಿತ್ರ, ಎಲ್ಲ ಮಕ್ಕಳಿಗೆ ಕಿವಿಯಾಗಲು ಧ್ವನಿಪೆಟ್ಟಿಗೆ ವ್ಯವಸ್ಥೆಗಳನ್ನೂ ಉಲ್ಲೇಖಿಸಿದೆ. ಪಂಚಾಯಿತಿಗಳು ತನ್ನ ಮೇಲಿರುವ ಹೆಚ್ಚಿನ ಹೊರೆ ಇದೆಂದು ಭಾವಿಸದೇ, ಕಾಯ್ದೆ-ಸುತ್ತೋಲೆಯ ಆಶಯದಂತೆ ಕಾರ್ಯನಿರ್ವಹಿಸಿದರೆ, ಮುಂಬರುವ ವರ್ಷಗಳಲ್ಲಿ ಮಕ್ಕಳಿಗೆ ಸ್ಪಂದಿಸುವ ಸ್ಥಳೀಯ ಸರ್ಕಾರಗಳಾಗಿ ಮಕ್ಕಳ ಸ್ನೇಹಿ ಹಾಗೂ ಸುರಕ್ಷಿತ ಗ್ರಾಮಗಳಾಗಿ ರೂಪಿತವಾಗಬಲ್ಲವು.

ಗ್ರಾಮೀಣ ಮಹಿಳೆಯರ ಸಶಕ್ತತೆ, ಅವರ ಆರ್ಥಿಕಸಮಾನತೆ ಸುಧಾರಣೆ ಮತ್ತು ಕೌಶಲ ಅಭಿವೃದ್ಧಿಗಾಗಿ ಸಂಜೀವಿನಿ ಯೋಜನೆ ಜಾರಿಯಾಗಿದೆ. ಗ್ರಾಮಸ್ವರಾಜ್ ಅಧಿನಿಯಮದಂತೆ ಗ್ರಾಮಾಭಿವೃದ್ಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸಲು ಮಹಿಳಾ ಗ್ರಾಮಸಭೆಗಳು ಇವೆ. ಗ್ರಾಮದ ಜನಸಂಖ್ಯೆಯ ಸುಮಾರು ಅರ್ಧದಷ್ಟನ್ನು ಪ್ರತಿನಿಧಿಸುವ ಮಹಿಳೆಯರು ಗ್ರಾಮದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಗ್ರಾಮದ ಸ್ವರೂಪವನ್ನೇ ಬದಲಾಯಿಸುವಲ್ಲಿ ಮಹತ್ವದ ಕೊಡುಗೆ ನೀಡುತ್ತದೆ. ಸರ್ಕಾರಗಳು ಇವುಗಳ ಘೋಷಣೆಯ ಸಮಯದಲ್ಲಿ ತೋರಿದಂತಹ ಚುರುಕುತನ, ಆಸಕ್ತಿಯನ್ನು ಅನುಷ್ಠಾನದಲ್ಲಿಯೂ ತೋರಿದರೆ ಮಹಿಳಾ ಸಬಲೀಕರಣ, ಸ್ವಾವಲಂಬನೆ, ಸಮುದಾಯ ಅಭಿವೃದ್ಧಿಯಲ್ಲಿ ಅವರ ಕೊಡುಗೆಗಳು ಮಿಳೈಸಿ ಗ್ರಾಮಗಳ ಚಿತ್ರಣವೇ ಬದಲಾಗುವುದರಲ್ಲಿ ಅನುಮಾನವಿಲ್ಲ.

ಗ್ರಾಮೀಣ ಅಕುಶಲ ಕಾರ್ಮಿಕರ ಜೀವನೋಪಾಯಕ್ಕೆ ಉದ್ಯೋಗದ ಭರವಸೆಯೊಂದಿಗೆ, ಸಮಗ್ರ ಗ್ರಾಮೀಣಾಭಿವೃದ್ಧಿಗೆ ಆಸ್ತಿ ಸೃಜಿಸುವ ಮಹತ್ತರ ಉದ್ದೇಶದಿಂದ ನರೇಗಾ ಕಾಯ್ದೆ ಮತ್ತು ಯೋಜನೆ ಜಾರಿಯಾಗಿದೆ. ಇದರಿಂದ ಜನರ ಜೀವನಮಟ್ಟ ಸುಧಾರಣೆಯೊಂದಿಗೆ, ವಲಸೆ ತಡೆಗಟ್ಟಲು ತಕ್ಕಮಟ್ಟಿಗೆ ಸಹಕಾರಿಯಾಗಿದೆ. ಲಕ್ಷಾಂತರ ನರೇಗಾ ಕಾರ್ಮಿಕರು ಸುಡು ಬಿಸಿಲು, ಮಳೆ, ಕೊಳೆ ಎಂಬುದನ್ನೂ ಲೆಕ್ಕಿಸದೇ ಗ್ರಾಮೀಣಾಭಿವೃದ್ಧಿಯಲ್ಲಿ ಸಕಾರರೊಂದಿಗೆ ಕೈಜೋಡಿಸುತ್ತಿದ್ದಾರೆ. ಇವರ ಪರಿಶ್ರಮವನ್ನು ಗೌರವಿಸುತ್ತಾ, ಕೆರೆಯ ನೀರನ್ನು ಕರೆಗೇ ಚೆಲ್ಲುವಂತಹ ಯೋಜನೆಗಳನ್ನು ಮಾಡದೇ, ಅಸ್ತಿತ್ವದ ಜನರಿಯ ವೈಜ್ಞಾನಿಕತೆ ಅನುಗುಣವಾಗಿ ಕೃಷಿ, ಶಿಕ್ಷಣ, ಆರೋಗ್ಯ, ಜೀವನೋಪಾಯ, ಜಲಪೂರಣ, ಆಹಾರ, ವಸತಿ, ನೈರ್ಮಲ್ಯೀಕರಣ, ಮಾನವ ಹಾಗೂ ಪರಿಸರ ಅಭಿವೃದ್ಧಿ – ಹೀಗೆ ವಿವಿಧ ಆಯಾಮಗಳನ್ನು ಪರಿಗಣಿಸಿ, ಸಮುದಾಯದ ಪಾಲ್ಗೊಳ್ಳುವಿಕೆಯ ತಯಾರಿಸಿದ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕೆ ಎಲ್ಲ ಸರ್ಕಾರಗಳು ಕೈಜೋಡಿಸಿದರೆ ಸಮಗ್ರ ಗ್ರಾಮೀಣಾಭಿವೃದ್ಧಿಯ ರಾಜ್ಯ ಮಾದರಿಯಾಗಬಲ್ಲದು.

ಆರೋಗ್ಯಕ್ಷೇತ್ರದ ಸುಧಾರಣೆಯು ಅಭಿವೃದ್ಧಿಯಲ್ಲಿ ಗಣನೀಯ ಪಾತ್ರವಹಿಸುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಆರೋಗ್ಯಕ್ಷೇತ್ರಕ್ಕೆ ಪೂರಕವಾಗಿ 1:1000 ವೈದ್ಯರ-ರೋಗಿಗಳ ಅನುಪಾತವನ್ನು ಸೂಚಿಸಿದೆ, ಆದರೆ ಭಾರತದಲ್ಲಿ ಈ ಅನುಪಾತವು ಸುಮಾರು 1:2000 ಆಗಿದೆ. ಇತ್ತೀಚೆಗೆ ತಂತ್ರಜ್ಞಾನ ಮತ್ತು ಸುಧಾರಿತ ಮೂಲಸೌಕರ್ಯಗಳನ್ನು ಒಳಗೊಂಡಂತಹ ಪ್ರಾಥಮಿಕ ಆರೋಗ್ಯ ಕೇಂದ್ರ/ಉಪಕೇಂದ್ರಗಳು ರೂಪುಗೊಳ್ಳುತ್ತಿವೆ. ಗ್ರಾಮಸ್ಥರ ಆರೋಗ್ಯ ಸೇವೆಗೆ ಸಮುದಾಯ ಆರೋಗ್ಯ ಅಧಿಕಾರಿಗಳ ನೇಮಕವಾಗಿದೆ. ಈ ಎಲ್ಲವೂ ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲಾರಂಭಿಸಿದರೆ, ಹೆಚ್ಚಿನ ಗ್ರಾಮೀಣ ಜನತೆ ಕಡಿಮೆ-ಆದಾಯದ ಹೊರತಾಗಿಯೂ ಗುಣಮಟ್ಟದ ಸೇವೆಯಿಂದ ಆರೋಗ್ಯಕ್ಕೋ ಹೆಚ್ಚಿನ ವೆಚ್ಚವನ್ನು ಪಾವತಿಸುತ್ತಿರುವ ಸ್ಥಿತಿ ಬದಲಾಗಿ, ಮುಂದಿನ ದಿನಗಳಲ್ಲಿ ಗ್ರಾಮೀಣ ಆರೋಗ್ಯಕ್ಷೇತ್ರದಲ್ಲಿ ಮಹಾಕ್ರಾಂತಿಯೇ ಆಗಬಹುದು.

ನಿಜ, ಈ ಎಲ್ಲವೂ ಅಂದುಕೊಂಡಷ್ಟು ಸುಲಭವಲ್ಲ, ತಿಂಗಳು-ವರ್ಷದಲ್ಲಿ, ಕಣ್ಣುಚ್ಚಿ ತೆಗೆಯುವುದರೊಳಗೆ ಸಾಧಿಸುವಂತಹುದಲ್ಲ. ಹೀಗೆಂದೇ ಗ್ರಾಮಸ್ವರಾಜ್ ಕಾಯ್ದೆಯೂ ಸಹ ಮುನ್ನೋಟ ಯೋಜನೆಗೆ ಅವಕಾಶ ನೀಡಿರುವುದು. ಸಮಗ್ರ ಗ್ರಾಮೀಣಾಭಿವೃದ್ಧಿ ಸಾಧನೆಗೆ ದೃಢಸಂಕಲ್ಪ, ಒಳಗೊಳ್ಳುವಿಕೆಯ ಪ್ರಜಾಪ್ರಭುತ್ವದ ಆಚರಣೆಗೆ ರಾಜಕೀಯ ಇಚ್ಛಾಶಕ್ತಿ ಇದ್ದರೆ, ಜನತೆ ಸಿನಿಕತನ ತೊರೆದು ಮುನ್ನಡೆದರೆ, ಗ್ರಾಮ ಸ್ವರಾಜ್ಯದ ಸ್ಥಾಪನೆ ಕಷ್ಟವೇನಲ್ಲ. ಅನುಷ್ಠಾನದ ಹಾದಿಯಲ್ಲಿ ಕಲ್ಲು-ಮುಳ್ಳುಗಳಿರುವುದು, ಎಡವಿ ಬೀಳುವುದು ಸಹಜ. ಆದರೆ ಗ್ರಾಮಪಂಚಾಯಿತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಮೈಕೊಡವಿ ನಿಂತರೆ, ಮುಂದಿನ ರಜತ ವರ್ಷಾಚರಣೆಯೊಳಗೆ ನಗರ ಕೇಂದ್ರಿತ ಅಭಿವೃದ್ಧಿ ಮಾದರಿಯನ್ನು ಹಿಮ್ಮೆಟ್ಟಿಸಿ, ಸಮಗ್ರ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸುವತ್ತ ದಾಂಗುಡಿಯಿಡಬಹುದು.

ಲೇಖಕಿ: ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಾಲಯದ ಸದಸ್ಯೆ

ತಿದ್ದುಪಡಿ: ಶುಕ್ರವಾರದ ಸಂಚಿಕೆಯ ಆಳ-ಅಗಲದಲ್ಲಿ 'ಸಂವಿಧಾನವ ಸಹಿಸದವರಿಂದ ಬದಲಿಸುವ ಅಭಿಯಾನ' ಎಂಬ ತಲೆಬರಹವಿತ್ತು, ಅದು 'ಸಂವಿಧಾನ ಸಹಿಸದವರ ತಿದ್ದುವ ಅಭಿಯಾನ' ಎಂದಾಗಬೇಕಿತ್ತು.

ಸೂರಿ 'ಮಿಕ್ಸ್ ಮಸಾಲಾ'

ನಾವು ನೋಡಿದ ಸಿನಿಮಾ

ಬ್ಯಾಡ್ ಮ್ಯಾನರ್ಸ್ (ಕನ್ನಡ)

● **ನಿರ್ಮಾಣ:** ಸುಧೀರ್ ಕೆ.ಎಂ.
● **ನಿರ್ದೇಶನ:** ದುನಿಯಾ ಸೂರಿ
● **ತಾರಾಗಣ:** ಅಭಿಷೇಕ್ ಅಂಬರೀಶ್, ರೋಚಿತ್ ಶೆಟ್ಟಿ, ತ್ರಿವಿಕ್ರಮ್, ಶರತ್ ಲೋಹಿತಾಶ್ವ, ತಾರಾ, ರಚಿತಾ ರಾಮ್, ದತ್ತಣ್ಣ

'ಮಿಕ್ಸ್ ಮಸಾಲಾ' ಎಂಬ ಪದಪುಂಜ ಈ ಸಿನಿಮಾದ ಸಂಭಾಷಣೆಯಲ್ಲಿ ಕೇಳಿಬರುತ್ತದೆ. ಅದನ್ನು ಇಡೀ ಚಿತ್ರಕ್ಕೆ ಅನ್ವಯಿಸಿ, ಇದೊಂದು ಭರ್ತಿ ಮಾನರಂಜನಾ ಸಿನಿಮಾ ಎಂದು ನಿಸ್ಸಂಶಯವಾಗಿ ಹೇಳಬಹುದು. ನಟ ಅಂಬರೀಶ್ ಪರಂಪರೆಯ ಒಂದು ಎಳೆಯನ್ನು ಎತ್ತಿಕೊಂಡು, ಅದನ್ನು ಅವರ ಪುತ್ರನಿಗೆ ತೆಳುವಾಗಿ ಸುತ್ತಿ, ಸೂರಿ ತಮ್ಮದೇ ಮಸಾಲೆಯನ್ನು ಇಲ್ಲಿ ಅರೆದಿದ್ದಾರೆ. ಆ ಮಸಾಲೆ ಆಗಾಗ ಮೂಗಿಗೆ ಘಾಟು. ಅಲ್ಲಲ್ಲಿ ಕಣ್ಣುರಿ ತರಿಸುವಷ್ಟು ಖಾರವೂ ಉಂಟು.

'ಗ್ಯಾಂಗ್ಸ್ ಆಫ್ ವಸೇಪುರ್' ಹಿಂದಿ ಸಿನಿಮಾದ ಕಚ್ಚಾ ಗುಣವನ್ನು ಈ ಸಿನಿಮಾದಲ್ಲೂ ಆರೋಪಿಸಬಹುದು. ಅದರಲ್ಲೂ ವಿಲನ್ ಪಾತ್ರಗಳ ಪೋಷಣೆ ಆ ಚಿತ್ರದ ರೂಹನ್ನೇ ನೆನಪಿಸುತ್ತದೆ. ಆದರೆ ಅಲ್ಲಿ ಇರುವಷ್ಟು ಮೌನ ಇಲ್ಲಿ ಇಲ್ಲ. ನಿಜಕ್ಕೂ ಅತಿ ಚಲನಶೀಲ ಚಲನಚಿತ್ರ ಎನ್ನುವಂತಿದೆ ಚಿತ್ರಕಥೆಯ ಓಘ.

'ಗೂಳಿ' ಅರ್ಥಾತ್ ಗೋವರ್ಧನಗಡಕ್ಕೆ ನಾಯಕ ಕಾಲಿಡುತ್ತಾನೆ. ದೇಸಿ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಲ್ಪನಾಲೋಕ ಅದು. 'ರಾಮ್‌ಲೀಲಾ ಗೋಲಿಯೋಂ ಕಿ ರಾಸಲೀಲಾ' ಹಿಂದಿ ಸಿನಿಮಾದಲ್ಲಿ ಮೂಟೆಗಳಲ್ಲಿ ಉದ್ದುದ್ದ ಶಸ್ತ್ರಾಸ್ತ್ರಗಳನ್ನು ಮಾರುವ ದೃಶ್ಯಗಳನ್ನು ನಾವು ನೋಡಿದ್ದೆವು. ಇಲ್ಲಿ ಸಣ್ಣ ಚೀಲಗಳಲ್ಲಿ ಮಾರಾಟಕ್ಕಿಟ್ಟ ಬಂದೂಕುಗಳ ಭರಾಟೆ. ಅಂಥ ಊರಿಗೆ ಹೋಗಿ ಪಿಸ್ತೂಲ್‌ಗಳನ್ನೇ ಪೆರಿಸಿಟ್ಟು, ನಾಯಕ ಲಗೋರಿ ಆಡುವ ಸಾಹಸ ದೃಶ್ಯವೊಂದರ ಸಂಯೋಜನೆ ಇದೆ. ಕಳಪೆ ಗುಣಮಟ್ಟದ ನಾಡಬಂದೂಕಿನ ಲೋಕದೊಳಗೆ ನಾಯಕ ಪ್ರವೇಶಿಸಿದ್ದಾದರೂ ಯಾಕೆ, ಅದರ ಹಿಂದೆ ಇರುವ ಉದ್ದೇಶವಾದರೂ ಏನು ಎನ್ನುವ ಹಳ ನಿಧಾನ ತಲೆಯಲ್ಲಿ ಗುಂಯ್‌ಗುಡುವಂತೆ ಮದ್ದುಂತರದವರೆಗಿನ ನಿರೂಪಣೆ. ದೃಶ್ಯಗಳ ಕೊಲಾಜ್ ತೆಲೆದಿಟ್ಟು, 'ಊಹಿಸಿ ನೋಡಿ' ಎಂದು ಸವಾಲೊಡ್ಡುವ ಸೂರಿ ಜಾಯಮಾನದ ನಿರೂಪಣೆ ಇದು.

ಅಂಬರೀಶ್ ಚಹರೆಯ ಕೆಲವು ಲಕ್ಷಣಗಳು ಅಭಿಷೇಕ್ ಅವರಲ್ಲಿಯೂ ಇವೆ. ಅವನ್ನು ಸೂರಿ ದುಡಿಸಿಕೊಂಡಿರುವ ರೀತಿ ಆಸಕ್ತಕರ; ವಿಶೇಷವಾಗಿ ಅವರ ಕಣ್ಣಿನ ನೋಟ. ನಾಯಕನ ನೀಳಕಾಯ, ಕಟ್ಟುಮಸ್ತು ಆಕಾರವನ್ನು ಸಂಭಾಷಣೆಯಲ್ಲಿ ಮಾಸ್ತಿ ಹಾಗೂ ಅಮ್ರಿ ಕೇಸರಿ ಹದವರಿತಂತೆ ಬಳಸಿದ್ದಾರೆ. ಅಲ್ಲಲ್ಲಿ ಮೊನಚಾದ ಮಾತೂ ಇರುವುದು ಸುರೇಂದ್ರನಾಥ್ ಹಾಗೂ ಸೂರಿ ಛಾಪಿಗೆ ಹಿಡಿದ ಕನ್ನಡಿಯಂತಿದೆ. ಚಿತ್ರಕಥಾ ಪರಿಣಾಮವನ್ನು ವರ್ಧಿಸಿದೆ. ಶೇಖರ್ ಎಸ್. ಛಾಯಾಗ್ರಹಣ, ಚರಣ್‌ರಾಜ್ ಹಿನ್ನೆಲೆ ಸಂಗೀತ, ರವಿವರ್ಮ ಸಾಹಸ ದೃಶ್ಯಗಳ ಸಂಯೋಜನೆ ಎಲ್ಲವೂ ಇನ್ನೊಂದರ ಮಜಾ ಕೊಡುವ 'ಮಿರ್ಚಿ ಮಸಾಲಾ'.

ರೋಚಿತ್ ಶೆಟ್ಟಿ, ತ್ರಿವಿಕ್ರಮ್ ಇಬ್ಬರೂ ಮುಖ್ಯಪಾತ್ರಗಳಲ್ಲಿ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಶರತ್ ಲೋಹಿತಾಶ್ವ ಫಾರ್ಮ್ ಮುಂದುವರಿದಿದೆ. ಹುಳಿ, ಒಗರು, ಖಾರ, ಸಿಹಿ ಎಲ್ಲವನ್ನೂ ಬೆರೆಸಿಟ್ಟ ಈ 'ಮಸಾಲಾ' ಸರಕು ಹೊಡೆದಾಟದ ದೃಶ್ಯಪ್ರಿಯರ ಕಣ್ಣಿಗಂತೂ ಹಬ್ಬ.

ವಿಶಾಖ ಎನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5510 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಓಬವ್ವನ ಆಯುಧ (3)
4.ಸಾವು ಹೀಗೆ ಬಂದಿದೆ (3)
5.ತಳದಲ್ಲಿ ಕಾಣಿಸಿದ ಬುನಾದಿ (4)
6.ಹಂಬಲವನ್ನು ಹೀಗೆನ್ನಿ (4)
8.ಉಲ್ಲಾ ಅಗಿರುವ ಸುಳ್ಳು (2)
10.ತಿರುವು ಮುರುವಾದ ಹಿಸ್ಸೆ (2)
13.ದ್ರವದಿಂದ ತುಂಬಿರುವುದು (4)
14.ಜೊತೆಯಲ್ಲಿ ವಾಸಿಸುವಿಕೆ (4)
15.ಸುಮಾರು ಆರು ಮೈಲಿ (3)
16.ಈತ ಚರ್ಮದ ಕೆಲಸಗಾರ (3)

ಮೇಲಿಂದ ಕೆಳಕ್ಕೆ

1.ಎಲ್ಲಾ ಅವಕಾಶಗಳನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವವನು (6)
2.ಕೆಲಸಕ್ಕೆ ಬಾರದ ಮಾತು (5)
3.ಭವ್ಯವಾದ ಸೌಧ (3)
5.ತಡವಾಗಿ ಕಾಣಿಸಿದ ಅಬ್ಬಿ (4)
7.ಕಾಡಿನಲ್ಲಿ ಅಳುವಿಕೆ (6)
9.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
11.ಈತ ಸಣ್ಣ ಪ್ರಾಂತ್ಯದ ಮುಖಂಡ (5)
12.ಪರಾಕ್ರಮಿ ಇಲ್ಲದವನ (3)



5509ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸದಿಚ್ಛ 4.ರವಿಸುತ 6.ಮಿತವ್ಯಯ 8.ಕಗ್ಗ 11.ಮನ್ನಿಸು 13.ಉಗಾಪುದಾ 17.ಹಸುಗೂಸು 18.ರಮಣಿ

ಮೇಲಿಂದ ಕೆಳಕ್ಕೆ: 1.ಸದ್ಗುರು 2.ಹರುವಾ 3.ನವಪ್ಪ 5.ತ್ರಯಿ 7.ಯವಳ 9.ಜನುಮ 10.ಮುಗಿಲು 12.ಸೂರಾಸುರ 14.ಗಾಬಾರ 15.ದಾಹ 16.ಗುರಾಣಿ

ಸುಡೊಕು 5896

				2		3		
3		6	5		8			
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

5895 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ನವೆಂಬರ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತೀಕ ಶುಕ್ಲ ತ್ರಯೋದಶಿ ಗಂ. 17-23 ನಕ್ಷತ್ರ: ಅಶ್ವಿನಿ ಗಂ. 14-56 ಯೋಗ: ವ್ಯತೀಪಾತ ಗಂ 06-23 ನಂತರ ವರಿಯಾನ್ ಗಂ. 27-53 ಕರಣ: ತೈತಿಲ ಗಂ 17-23, ವೃಶ್ಚಿಕ ಮಾಸದ 09 ನೇ ದಿನ, ಮಳೆನಕ್ಷತ್ರ: ಅನುರಾಧ 2.
ರಾಹುಕಾಲ: ಬೆಳಿಗ್ಗೆ 09-00 - 10-30, ಸೂರ್ಯೋದಯ: 06-38 ಸೂರ್ಯಾಸ್ತ: 05-57
ಮುಸ್ಲಿಂ ದಿನಾಂಕ: 10 ಜಮಾದುಲ್ಲಾವಲ್
ದಿನ ವಿಶೇಷ: ವೈಕುಂಠ ಚತುರ್ದಶಿ, ಅದೃಷ್ಟ ಸಂಖ್ಯೆ: 9, 10

ಮೇಷ: ಅನಾವಶ್ಯಕ ಮಾತುಗಳಿಂದ ಆತ್ಮೀಯರಲ್ಲಿ ಕಲಹ ಉಂಟಾಗಬಹುದು. ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರ ದೊರೆಯಲಿದೆ. ರಾಜಕೀಯ ವ್ಯಕ್ತಿಗಳು ಇಂದು ಪ್ರಬಲರಾಗುವ ಸಾಧ್ಯತೆ ಹೆಚ್ಚು.

ವೃಷಭ: ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂತಹ ಸಮಾರಂಭಗಳ ಆಲಿಕೆಯು ಕಾರಣವಾಗುವುದು. ಅನ್ಯ ಜಟಿಲದಂತಹ ಮಹತ್ವದ ಕೆಲಸಗಳಿಗೆ ಸಕಾಲ. ಅಧಿಕಾರ ಪ್ರಾಪ್ತಿ ಯೋಗವಿದೆ.

ಮಿಥುನ: ಬಹಳ ದಿನಗಳ ನಂತರ ಸೋದರರ ಆಗಮನದಿಂದಾಗಿ ಮನೆಯಲ್ಲಿ ಹೆಚ್ಚಿನ ಸಂಭ್ರಮವಿರುವುದು. ನೌಕರಿ ಲಾಭದ ಜೊತೆಗೆ ಹೊಸ ಆಡಳಿತ ವರ್ಗದಿಂದ ಅವರೆಗೆ ಇದ್ದ ಅಭಿಪ್ರಾಯ ಕರುಹಿಸಲು ನಿರ್ಧರಿಸಲಿದ್ದೀರಿ.

ಕರ್ಕಾಟಕ: ನಿಮ್ಮ ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಅವಕಾಶ ಸಿಗುವುದು. ಅತಿಯಾದ ನಿದ್ದೆ ವಿಪರೀತ ವ್ಯಸನವು ಅಭಿವೃದ್ಧಿಗೆ ಧಕ್ಕೆಯನ್ನು ತರಲಿದೆ. ಇಂದು ಮಿತ್ರ ಭಾವನೆಗಳಿಂದ ಕೂಡಿದ ದಿನವಾಗಿದೆ.

ಸಿಂಹ: ನಿಮ್ಮ ಪ್ರಯತ್ನಕ್ಕೆ ಅತ್ಮವಿಶ್ವಾಸಕ್ಕೆ ಸರಿಸಮಾನವಾದ ಫಲ ನಿಶ್ಚಿತವಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಅಗತ್ಯವಿದೆ. ಕೆಲಸ ಬದಲಿಸುವ ಯೋಚನೆ ಮಾಡುವವರಿಗೆ ಇಂದು ಸಕಾಲ. ಲಕ್ಷ್ಮೀ ಕೃಪಾಕಟಾಕ್ಷವನ್ನು ಸಂಪಾದಿಸಿ.

ಕನ್ಯಾ: ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಲಾಭವಾಗುವುದು. ಅಪೇಕ್ಷಿಸಿದ ಪ್ರಗತಿಯು ಅನಾಯಾಸವಾಗಿ ಇಂದು ಸಂಪಾದಿಸುವಿರಿ. ಶತ್ರುಗಳ ಬಲಗಳ ಬೀಳದಂತೆ ಎಚ್ಚರವಹಿಸಬೇಕು.

ತುಲಾ: ಷೇರು ವ್ಯವಹಾರದಲ್ಲಿ ಮತ್ತು ಎಲೆಕ್ಟ್ರಾನಿಕ್ ವ್ಯಾಪಾರದಲ್ಲಿ ಲಾಭ ಪಡೆಯುವಿರಿ. ಆದರೆ ಹಣ ಸ್ವೀಕರಿಸುವಲ್ಲಿ ಉಳಿಯುವುದು ಕಷ್ಟಕರ ವಿಷಯ. ಶೀತ ಸಂಬಂಧಿತವಾದ ಅನಾರೋಗ್ಯ ಉಂಟಾಗಬಹುದು.

ವೃಶ್ಚಿಕ: ಯಾರನ್ನು ನಿರ್ಲಕ್ಷ್ಯ ಮಾಡುತ್ತಿರುವಿರೋ ಅವರಿಂದಲೇ ನಿಮ್ಮ ಕೆಲಸ ಆಗುವ ಸಾಧ್ಯತೆಗಳಿವೆ. ದುರಾಭ್ಯಾಸಕ್ಕೊಳಗಾಗುವಿರಿ, ಆರೋಗ್ಯದ ಕಾಳಜಿ ವಹಿಸಿ. ಕನಸಿನ ಭಯದಿಂದ ಹೊರಬರಬಹುದು. ಹೆದರುವ ಅವಶ್ಯಕತೆ ಇಲ್ಲ.

ಧನು: ಚೆಕ್ ಸಂಬಂಧಿತ ವ್ಯವಹಾರದಲ್ಲಿ ತುಸು ಎಚ್ಚರ ಇರಬೇಕಾಗುವುದು. ಆರ್ಥಿಕವಾಗಿ ಬಹಳ ದಿನಗಳಿಂದ ಇದ್ದಂತಹ ಋಣಬಾಧೆಯಿಂದ ಮುಕ್ತಿ ದೊರಕುವುದು.

ಮಕರ: ಒಂದು ವಿಚಾರದ ಬಗ್ಗೆ ಇತರರಲ್ಲಿ ಸಲಹೆ ಸ್ವೀಕರಿಸುವ ವಿಚಾರವಾಗಿ ಕೇಳಿದಾಗ ಹತ್ತಾರು ಸಲಹೆ ಬಂದು ಗೊಂದಲವುಂಟಾಗುವುದು. ತಾಯಿಯವರ ಮಾನಸಿಕ ಆರೋಗ್ಯದ ಬಗ್ಗೆ ಗಮನವಿರಲಿ. ದಿನಕ್ಕೆ ಸಹಕರಿಸಲಿದೆ.

ಕುಂಭ: ನಿಮ್ಮದೇ ಜನರನ್ನು ನೀವು ನಿಯಂತ್ರಿಸುವ ಕೆಲಸದಲ್ಲಿ ಚಾಣಾಕ್ಷತನ ತೋರಿಸುವುದು ಅನಿವಾರ್ಯವಾಗುತ್ತದೆ. ಗರ್ವ ತೋರಿಸುವ ಜನರನ್ನು ದೂರವಿಡುವ ಉಪಾಯ ಮಾಡುವುದು ಒಳ್ಳೆಯದು.

ಮೀನ: ವಿವಾಹ ವಿಷಯ ನಿಶ್ಚಿತಗೊಂಡಿದ್ದರೂ ಇನ್ನೂಮ್ಮೆ ವಿಚಾರಿಸಿದ್ದರ ಪಡಿಸಿಕೊಳ್ಳುವುದು ಉತ್ತಮ. ಸಂಸ್ಥೆಯ ನಿರ್ವಹಣೆಯಲ್ಲಿ ನೀವು ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರವನ್ನು ತೆಗೆದುಕೊಳ್ಳುವಿರಿ.

ಷೇರುಪೇಟೆ ವಹಿವಾಟು

47



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,802
ಇಂದಿನ ಅಂತ್ಯ	19,795
▼	7
ದಿನದ ಕನಿಷ್ಠ	19,768

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹75

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹957 (960)
ಸೂರ್ಯಕಾಂತಿ (ರಿಫೈನ್ಡ್)	₹960 (965)
ಪಾಮೋಲಿನ್	₹842 (848)

ವಿನಿಮಯ ದರ

$ ಡಾಲರ್	83.40
£ ಪೌಂಡ್	104.47
€ ಯುರೊ	90.94
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-8100
ತಿಪಟೂರು	₹7100-7900

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-485
ದ್ವಿತಳಿ (ಬಿ.ವಿ)	₹250-605

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹130.50

ರಾಜ್ಯದ 54 ನಗರಗಳಲ್ಲಿ ಜಿಯೊ ಏರ್ ಫೈಬರ್ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 54 ನಗರಗಳಲ್ಲಿ ಜಿಯೊ ಏರ್ ಫೈಬರ್ ಸೇವೆಯನ್ನು ಆರಂಭಿಸಿರುವುದಾಗಿ ರಿಲಯನ್ಸ್ ಜಿಯೊ ಕಂಪನಿಯು ಶುಕ್ರವಾರ ತಿಳಿಸಿದೆ.

ಜಿಯೊ ಏರ್ ಫೈಬರ್‌ನ 30 ಎಂಬಿಪಿಎಸ್ ವೇಗದ ಅನಿಯಮಿತ ಡೇಟಾ ₹599, 100 ಎಂಬಿಪಿಎಸ್ ವೇಗದ ಪ್ಲಾನ್ ₹899 ಮತ್ತು ₹1,199ಕ್ಕೆ ಲಭ್ಯವಿದೆ.

14 ಒಟಿಟಿ ಆ್ಯಪ್ ₹599 ಹಾಗೂ ₹899ಕ್ಕೆ ದೊರೆಯಲಿದೆ. ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ಮತ್ತು ಜಿಯೊ ಸಿನಿಮಾ ಪ್ರೀಮಿಯಂ ಸೇರಿದಂತೆ 17 ಒಟಿಟಿ ಪ್ಲಾಟ್‌ಫಾರಂಗಳು ₹1,199ಕ್ಕೆ ಸಿಗಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

24-11-2023

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	935 (945)
ಪಾಮ್ ವಾರದ ಡೆಲಿವರಿ	844 (850)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 61,100 (61,100)

ಬೆಳ್ಳಿ ಕೆ.ಜಿ 73,000 (73,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

3 ಬ್ಯಾಂಕ್‌ಗೆ ಒಟ್ಟು ₹10.34 ಕೋಟಿ ದಂಡ

ಮುಂಬೈ (ಪಿಟಿಐ): ನಿಯಮಗಳನ್ನು ಉಲ್ಲಂಘನೆ ಮಾಡಿದ್ದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಸಿಟಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗಳಿಗೆ ಒಟ್ಟು ₹10.34 ಕೋಟಿ ದಂಡ ವಿಧಿಸಿದೆ.

ಸಿಟಿ ಬ್ಯಾಂಕ್‌ಗೆ ₹5 ಕೋಟಿ, ಬ್ಯಾಂಕ್ ಆಫ್ ಬರೋಡಕ್ಕೆ ₹4.34 ಕೋಟಿ ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗೆ ₹ 1 ಕೋಟಿ ದಂಡ ವಿಧಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	580

ಅಡಿಕೆ

ಬಂಟ್ವಾಳ

ಕೋಕ	15000-27500
ಹಳತು	43500-48500

ಹೊನ್ನಾವರ

ಹಳೆಚಾಲಿ	36000-39000
ಹೊಸಚಾಲಿ	25000-34000

ಹೊಸನಗರ

ಚಾಲಿ	37129-37129
ಕೆಂಪುಗೋಟು	30899-34989
ರಾಶಿ	40890-48219

ಕಾರ್ಕಳ

ಹಳತು	30000-48500

ಶಿವಮೊಗ್ಗ

ಬೆಟ್ಟೆ	46099-53299
ಗೊರಬಾಲು	22699-38100
ಹೊಸತು	41039-46599
ರಾಶಿ	35089-47398
ಸರಕು	45099-83500

ಶಿರಸಿ

ಬೆಟ್ಟೆ	36899-46566
ಬಿಳಿಗೋಟು	29899-35110
ಚಾಲಿ	37018-40699
ಕೆಂಪುಗೋಟು	31669-34899
ರಾಶಿ	45499-47459

ಯಲ್ಲಾಪುರ

ಬಿಳಿಗೋಟು	25570-36099
ಚಾಲಿ	36699-40599
ಕೋಕ	18299-32899
ಕೆಂಪುಗೋಟು	26080-34699
ರಾಶಿ	44312-54950
ತಟ್ಟಿಬೆಟ್ಟೆ	37609-43699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	12000	-	178.65 ಸೆಂಟ್ಸ್
ಎಸಿ	-	7000	-	
ಆರ್‌ಪಿ	-	-	-	ಲಂಡನ್
ಆರ್‌ಸಿ	-	-	-	2491 ಡಾಲರ್ಸ್

ಮಾರುಕಟ್ಟೆಗೆ ಹೆಚ್ಚುತ್ತಿರುವ ಈರುಳ್ಳಿ ಆವಕ ● ವಾರದಿಂದೀಚೆಗೆ ಸಗಟು ದರ ಇಳಿಮುಖ

ಈರುಳ್ಳಿ: ತಗ್ಗಲೇ ಇಲ್ಲ ಚಿಲ್ಲರೆ ದರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ ಎಪಿಎಂಸಿಯಲ್ಲಿ ಮಹಿಳಾ ಕಾರ್ಮಿಕರು ಈರುಳ್ಳಿಯನ್ನು ಗಾತ್ರದ ಆಧಾರದ ಮೇಲೆ ವಿಂಗಡಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದಲ್ಲಿ ವಾರದಿಂದೀಚೆಗೆ ಈರುಳ್ಳಿ ಸಗಟು ದರ ಇಳಿಮುಖವಾಗಿದೆ. ಆದರೆ, ಅದಕ್ಕೆ ತಕ್ಕಂತೆ ಎಲ್ಲೆಡೆಯೂ ಚಿಲ್ಲರೆ ಮಾರಾಟ ದರದಲ್ಲಿ ಇಳಿಕೆ ಆಗಿಲ್ಲ. ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡದಲ್ಲಿ ಚಿಲ್ಲರೆ ದರ ತಗ್ಗಿಲ್ಲ. ಆದರೆ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಕಲಬುರಗಿ, ಮಂಗಳೂರಿನಲ್ಲಿ ಸ್ವಲ್ಪ ಮಟ್ಟಿಗೆ ಇಳಿಕೆ ಕಂಡಿದೆ.

ಮಾರುಕಟ್ಟೆಗೆ ಆವಕ ಹೆಚ್ಚಾಗುತ್ತಿರುವುದರಿಂದ ಸಗಟು ದರ ಇಳಿಕೆ ಕಾಣುತ್ತಿದೆ. ಬೆಂಗಳೂರಿನಲ್ಲಿ ಈರುಳ್ಳಿ ಸಗಟು ದರವು ಒಂದು ವಾರದಿಂದಲೂ ಇಳಿಮುಖವಾಗಿದೆ. ಆದರೆ, ಚಿಲ್ಲರೆ ಮಾರಾಟ ದರದಲ್ಲಿ ಮಾತ್ರ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ. ಈಗಲೂ ಕೆ.ಜಿಗೆ ₹70–80ರವರೆಗೆ ಮಾರಾಟ ಆಗುತ್ತಿದೆ.

ಈರುಳ್ಳಿ ಸಗಟು ದರ ಒಂದು ವಾರದಿಂದ ಇಳಿಕೆ ಕಾಣುತ್ತಿದ್ದು, ಸದ್ಯ ಕೆ.ಜಿಗೆ ₹35–40ರವರೆಗೆ ಇದೆ. ಪೂರೈಕೆ ಹೆಚ್ಚಾಗುತ್ತಿರುವುದರಿಂದ ಸಗಟು ಬೆಲೆ ಕಡಿಮೆ ಆಗುತ್ತಿದೆ ಎಂದು ಬೆಂಗಳೂರು ಆಲೂಗಡ್ಡೆ ಮತ್ತು ಈರುಳ್ಳಿ ವರ್ತಕರ ಸಂಘದ ಕಾರ್ಯದರ್ಶಿ ರವಿಶಂಕರ್ ಬಿ. ತಿಳಿಸಿದರು. ತಿಂಗಳ ಹಿಂದೆ ಸಗಟು ದರ ₹58–₹60ರವರೆಗೆ ಇತ್ತು.

'ಸಗಟು ದರ ಇಳಿಕೆ ಕಂಡಿದೆ ಎಂದಾಕ್ಷಣ ತಕ್ಷಣಕ್ಕೆ ಚಿಲ್ಲರೆ ಮಾರಾಟ ದರ ಕಡಿಮೆ ಆಗುವುದಿಲ್ಲ. ಕನಿಷ್ಠ ಒಂದು ವಾರವಾದರೂ ಬೇಕು. ಏಕೆಂದರೆ ಚಿಲ್ಲರೆ ವ್ಯಾಪಾರಿಗಳು ಹೆಚ್ಚಿನ ಬೆಲೆಗೆ ತಂದಿಟ್ಟುಕೊಂಡ ದಾಸ್ತಾನನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ನಷ್ಟ ಮಾಡಿಕೊಳ್ಳಲು ಬಯಸುವುದಿಲ್ಲ ಎಂದು ಅವರು ಹೇಳಿದರು.

ಹುಬ್ಬಳ್ಳಿಯ ಅಮರಗೋಳ ಎಪಿಎಂಸಿ ಸಗಟು ಮಾರುಕಟ್ಟೆಯಲ್ಲಿ ಈರುಳ್ಳಿ ದರವು ಕಳೆದ ಮೂರು ವಾರಗಳಿಂದ ಸ್ಥಿರವಾಗಿದೆ. ಸದ್ಯ ಕ್ವಿಂಟಲ್‌ಗೆ ₹ 500 ರಿಂದ ₹ 4,000 ದರ ಇದೆ. ಆದರೆ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹60 ರಿಂದ ₹ 80ರಂತೆ ಮಾರಾಟ ಆಗುತ್ತಿದೆ. ಸಗಟು ದರಕ್ಕೆ ಹೋಲಿಸಿದರೆ ಚಿಲ್ಲರೆ ದರವು ಶೇ 50ರಿಂದ 100 ರಷ್ಟು ಹೆಚ್ಚಳವಾಗಿದೆ. ಸಗಟು ಮಾರುಕಟ್ಟೆಯಲ್ಲಿ ಈರುಳ್ಳಿಗೆ ಕೊರತೆ ಇಲ್ಲ. ಸ್ಥಳೀಯ ರೈತರಿಂದ ಹಾಗೂ ಪಕ್ಕದ ಬಾಗಲಕೋಟೆ, ಬೆಳಗಾವಿಯಿಂದ, ಮಹಾರಾಷ್ಟ್ರದ ಪುಣೆಯಿಂದ ಈರುಳ್ಳಿ ಮಾರುಕಟ್ಟೆಗೆ ಬರುತ್ತಿದೆ.

ಧಾರವಾಡ ಜಿಲ್ಲೆಯಲ್ಲಿ ಈರುಳ್ಳಿ ದರ ಕೆ.ಜಿ.ಗೆ ₹ 55 ರಿಂದ ₹60 ಇದೆ. 'ಸಗಟು ಮಾರುಕಟ್ಟೆಯಲ್ಲಿ ಈರುಳ್ಳಿ ದರ ಕ್ವಿಂಟಲ್ ಗೆ ₹ 4,500 ದಿಂದ ₹ 5 ಸಾವಿರ ಇದೆ. ತಿಂಗಳ ಹಿಂದೆ ಕ್ವಿಂಟಲ್ ಗೆ ₹ 7 ಸಾವಿರ ಇತ್ತು' ಎಂದು ವರ್ತಕ ಸೋಮನಗೌಡ ಪಾಟೀಲ ತಿಳಿಸಿದರು.

'ಗದಗ ಎಪಿಎಂಸಿಯಲ್ಲಿ ಕ್ವಿಂಟಲ್ ಈರುಳ್ಳಿ ದರ ₹2,400 ರಿಂದ ₹3,800 ರವರೆಗೆ ಇದೆ. ಆದರೆ, ಮಾರುಕಟ್ಟೆಯಲ್ಲಿ ಈಗಲೂ ಪ್ರತಿ ಕಿಲೋ ಈರುಳ್ಳಿ ಬೆಲೆ ₹60ರಿಂದ ₹70ರಂತೆಯೇ ಮಾರಾಟ ಆಗುತ್ತಿದೆ' ಎಂದು ಈರುಳ್ಳಿ ವರ್ತಕ ರಾಜು ಮುಧೋಳ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಸಗಟು ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹ 3,500 ರಿಂದ ₹ 4,500 ಇದ್ದರೆ, ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹50 ರಿಂದ ₹60 ಇದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ತುಂಬಾ ಚಿಕ್ಕ ಗಾತ್ರದ ಈರುಳ್ಳಿ ಬೆಲೆ ಕೆ.ಜಿಗೆ ₹ 20 ಇದೆ.

'ಸಗಟು ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಈರುಳ್ಳಿ ಖರೀದಿಸುವ ಚಿಲ್ಲರೆ ವ್ಯಾಪಾರಿಗಳು ಸಹಜವಾಗಿ ₹ 5ರಿಂದ ₹10 ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ. ಸಾರಿಗೆ ವೆಚ್ಚ, ಲಾಭ ನೋಡಿಕೊಂಡು ದರ ನಿಗದಿಪಡಿಸುತ್ತಾರೆ. ಗ್ರಾಹಕರೂ ಚೌಕಾಸಿ ಮಾಡುವ ಕಾರಣ ಸಹಜವಾಗಿ ಹೆಚ್ಚು ದರ ನಿಗದಿಪಡಿಸಿರುತ್ತಾರೆ' ಎಂದು ವರ್ತಕ ಪ್ರತಿನಿಧಿ ದೊಗ್ಗಳ್ಳಿ ಬಸವರಾಜ್ ಹೇಳಿದರು.

ಬೆಳಗಾವಿ, ಮಂಗಳೂರು, ರಾಮನಗರದಲ್ಲಿ ಇಳಿಕೆ

ಬೆಳಗಾವಿ ಎಪಿಎಂಸಿಯಲ್ಲಿ ಕಳೆದ ಬುಧವಾರ, ಕ್ವಿಂಟಲ್‌ಗೆ ಸಗಟು ದರ ಸರಾಸರಿ ₹3,500 ರಿಂದ ₹4,000ರಂತೆ ಮಾರಾಟವಾಗಿದೆ. ಎರಡು ವಾರಗಳ ಹಿಂದೆ ₹5,000 ದರ ಇತ್ತು. ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆಜಿಗೆ ಗುಣಮಟ್ಟದ, ದೊಡ್ಡ ಗಾತ್ರದ ಈರುಳ್ಳಿ ₹60 ಹಾಗೂ ಎರಡನೇ ಕ್ವಾಲಿಟಿ ಈರುಳ್ಳಿ ₹50ರಂತೆ ಮಾರಾಟವಾಗುತ್ತಿದೆ.

ಎರಡು ವಾರಗಳ ಹಿಂದೆ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ ಕಡೆಯಿಂದ ಹೆಚ್ಚು ಬೇಡಿಕೆ ಬಂದಿತ್ತು. ಹೀಗಾಗಿ ದರ ಏರಿಕೆ ಆಗಿತ್ತು. ಈಗ ಅಲ್ಲಿ ಸ್ಥಳೀಯವಾಗಿ ಹೊಸ ಬೆಳೆ ಬಂದಿದ್ದರಿಂದ ಈರುಳ್ಳಿ ಪೂರೈಕೆ ಹೆಚ್ಚಾಗಿದೆ. ಸಹಜವಾಗಿ ಇದು ಬೆಳಗಾವಿ ಎಪಿಎಂಸಿಯಲ್ಲಿ ದರ ಕಡಿಮೆಯಾಗಲು ಕಾರಣವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ವಾರ ಈರುಳ್ಳಿ ದರ ₹70ರಿಂದ ₹80ರ ಆಸುಪಾಸಿನಲ್ಲಿತ್ತು. ಉಡುಪಿಯ ಕೆಲವು ಕಡೆ ಅದು ₹100ರ ಸಮೀಪ ತಲುಪಿತ್ತು. ಆದರೆ ಈಗ ಮಂಗಳೂರಿನಲ್ಲಿ ₹60ರಿಂದ ₹70ರ ದರದಲ್ಲಿ ಈರುಳ್ಳಿ ಲಭ್ಯವಾಗುತ್ತಿದೆ. ಉಡುಪಿಯಲ್ಲೂ ಬಹುತೇಕ ಅದೇ ದರ ಇದೆ.

ಕೊಪ್ಪಳ ಜಿಲ್ಲೆಯ ಸಗಟು ಮಾರುಕಟ್ಟೆಯಲ್ಲಿ ವಾರದ ಹಿಂದೆ ಈರುಳ್ಳಿ ಸ್ಥಳೀಯ ಫಸಲಿಗೆ ಒಂದು ಕ್ವಿಂಟಲ್‌ಗೆ ₹5,000 ಇತ್ತು. ಆಗ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹70ರಿಂದ ₹80ಕ್ಕೆ ಮಾರಾಟ ಮಾಡಲಾಗುತ್ತಿತ್ತು. ಈಗ ಸ್ಥಳೀಯ ಫಸಲಿಗೆ ಪ್ರತಿ ಕ್ವಿಂಟಲ್‌ಗೆ ₹3,500ರಿಂದ ₹4,000 ಇದ್ದು, ಚಿಲ್ಲರೆ ದರ ಒಣಗಡ್ಡೆಗೆ ಪ್ರತಿ ಕೆ.ಜಿ.ಗೆ ₹55ರಿಂದ ₹60 ಮತ್ತು ಹಸಿಗಡ್ಡೆಗೆ ₹45ರಿಂದ ₹50ಕ್ಕೆ ಬಂದಿದೆ.

ಯಾದಗಿರಿ ಜಿಲ್ಲೆಯಲ್ಲಿ ವಾರದ ಹಿಂದೆ ಸಗಟು ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹5,000ರಿಂದ ₹5,500 ದರವಿತ್ತು. ಈಗ ₹4,000ರಿಂದ ₹4,500ಕ್ಕೆ ಕುಸಿದಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕಳೆದ ತಿಂಗಳು ಕೆಜಿಗೆ ₹70ರಿಂದ ₹80 ದರವಿತ್ತು. ಈಗ ₹60ರಿಂದ ₹70ವರೆಗೆ ಈರುಳ್ಳಿ ಮಾರಾಟವಾಗುತ್ತಿದೆ.

'ಮೂರ್ನಾಲ್ಕು ದಿನಗಳ ಹಿಂದೆ ಸಾಧಾರಣ ಮತ್ತು ಅತ್ಯುತ್ತಮ ಈರುಳ್ಳಿ ದರವು ಕೆ.ಜಿ.ಗೆ ₹80–₹90 ಇತ್ತು. ಇದೀಗ ₹50–₹60ಕ್ಕೆ ಇಳಿಕೆಯಾಗಿದೆ. ಸಗಟು ಮಾರುಕಟ್ಟೆಯಲ್ಲಿ ಸಾಧಾರಣ ಗುಣಮಟ್ಟದ ಈರುಳ್ಳಿ ಕೆ.ಜಿ.ಗೆ ₹40–₹50 ಹಾಗೂ ಉತ್ತಮ ಗುಣಮಟ್ಟದ ಈರುಳ್ಳಿ ಕೆ.ಜಿ.ಗೆ ₹60–₹70ಕ್ಕೆ ಮಾರಾಟವಾಗುತ್ತಿದೆ' ಎಂದು ರಾಮನಗರ ಮಾರುಕಟ್ಟೆಯ ಈರುಳ್ಳಿ ವ್ಯಾಪಾರಿ ರಾಜಣ್ಣ ತಿಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 50 ಕೆ.ಜಿ ತೂಕದ ಒಂದು ಚೀಲ ಈರುಳ್ಳಿಯ ಬೆಲೆ ₹2,600ರಿಂದ ₹ 2,900ರವರೆಗೆ ಮಾರಾಟವಾಗುತ್ತಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ಕೆ.ಜಿ ಈರುಳ್ಳಿಗೆ ₹60ರಿಂದ ₹ 80ರವರೆಗೆ ಇದೆ. ಕಳೆದ ವಾರಕ್ಕೆ ಹೋಲಿಸಿದರೆ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ಕೆ.ಜಿ ಈರುಳ್ಳಿಗೆ ಸರಾಸರಿ ₹10ರಿಂದ ₹ 15 ಇಳಿಕೆ ಆಗಿದೆ ಎನ್ನುತ್ತಾರೆ ವರ್ತಕರು.

ಮೈಸೂರು ವ್ಯಾಪ್ತಿಯಲ್ಲಿ ಮೂರು ವಾರಗಳ ಹಿಂದೆ ಸಗಟು ದರ ಕೆ.ಜಿಗೆ ₹60–65 ಇತ್ತು. ಆಗ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹75ರಂತೆ ಮಾರಾಟ ಆಗಿತ್ತು. ಈಗ ಸಗಟು ದರ ಕೆ.ಜಿಗೆ ₹40–50ರವರೆಗೆ ಇದ್ದು, ಚಿಲ್ಲರೆ ದರ ₹60–70ರವರೆಗೆ ಇದೆ.

ಅಭ್ಯುದಯ ಕೋ–ಆಪರೇಟಿವ್ ಬ್ಯಾಂಕ್‌ನ ಮಂಡಳಿ ಸೂಪರ್‌ಸೀಡ್

ಮುಂಬೈ (ಪಿಟಿಐ): ಅಭ್ಯುದಯ ಕೋ–ಆಪರೇಟಿವ್ ಬ್ಯಾಂಕ್‌ನ ಆಡಳಿತ ವ್ಯವಸ್ಥೆ ದುರ್ಬಲ ಆಗಿರುವುದರಿಂದ ಅದರ ಆಡಳಿತ ಮಂಡಳಿಯನ್ನು ಒಂದು ವರ್ಷದವರೆಗೆ ಸೂಪರ್‌ಸೀಡ್ ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಎಸ್‌ಬಿಐನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಸತ್ಯಪ್ರಕಾಶ್ ಪಾಠಕ್ ಅವರನ್ನು ಒಂದು ವರ್ಷಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ. ಆಡಳಿತಾಧಿಕಾರಿಗೆ ನೆರವಾಗಲು ಸಲಹಾ ಸಮಿತಿಯೊಂದನ್ನೂ ಆರ್‌ಬಿಐ ನೇಮಿಸಿದೆ.

ಬ್ಯಾಂಕಿನ ಕಾರ್ಯವೈಖರಿಯ ಮೇಲೆ ಯಾವುದೇ ತರಹದ ನಿರ್ಬಂಧಗಳನ್ನು ವಿಧಿಸಿಲ್ಲ. ಆಡಳಿತಾಧಿಕಾರಿಯ ಮಾರ್ಗದರ್ಶನದ ಅಡಿಯಲ್ಲಿ ಎಂದಿನಂತೆಯೇ ಬ್ಯಾಂಕಿಂಗ್ ಚಟುವಟಿಕೆಗಳನ್ನು ಮುಂದುವರಿಸಬಹುದು ಎಂದು ಆರ್‌ಬಿಐ ಹೇಳಿದೆ.

ಷೇರು ವಿಕ್ರಯಕ್ಕೆ ಭಾರಿ ಹಿನ್ನಡೆ?

ಐಡಿಬಿಐ ಬ್ಯಾಂಕ್, ಎನ್‌ಎಂಡಿಸಿ ಸ್ಟೀಲ್ ಮಾರಾಟ ಮುಂದೂಡಿಕೆ

2023-24ರಲ್ಲಿ ಷೇರು ವಿಕ್ರಯ

₹51 ಸಾವಿರ ಕೋಟಿ – ಸಂಗ್ರಹಿಸಲು ಉದ್ದೇಶಿಸಿರುವ ಮೊತ್ತ

₹8 ಸಾವಿರ ಕೋಟಿ – ಈವರೆಗೆ ಸಂಗ್ರಹ ಆಗಿರುವ ಮೊತ್ತ

₹30 ಸಾವಿರ ಕೋಟಿ – ಸಂಗ್ರಹ ಆಗುವ ಅನುಮಾನ ಇರುವ ಮೊತ್ತದ ಅಂದಾಜು

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಸತತ ಐದನೇ ವರ್ಷವು ಷೇರು ವಿಕ್ರಯದ ಗುರಿ ತಲುಪುವಲ್ಲಿ ವಿಫಲ ಆಗಲಿದೆ. ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಗ್ರಹಿಸಲು ಉದ್ದೇಶಿಸಿರುವ ಬಂಡವಾಳದ ಅರ್ಧದಷ್ಟು ಗುರಿ ಸಾಧನೆಯೂ ಕಷ್ಟವಾಗಲಿದೆ ಎಂದು ಮೂಲಗಳು ಹೇಳಿವೆ.

ಕೆಲವು ಕೇಂದ್ರೋದ್ಯಮಗಳ ಮಾರಾಟ ಅಥವಾ ಷೇರುಪಾಲು ಮಾರಾಟ ಮಾಡಲು ಒಂದಿಷ್ಟು ತೊಡಕುಗಳು ಎದುರಾಗಿವೆ. ಇದಲ್ಲದೆ, ರಾಜ್ಯಗಳ ವಿಧಾನಸಭೆ ಮತ್ತು ಮುಂಬರುವ ಸಾರ್ವತ್ರಿಕ ಚುನಾವಣೆಗಳತ್ತ ಕೇಂದ್ರ ಸರ್ಕಾರವು ಗಮನ ಹರಿಸಿರುವುದರಿಂದಲೂ ಷೇರುವಿಕ್ರಯ ಗುರಿ ಸಾಧನೆಗೆ ಅಡ್ಡಿಯಾಗಿದೆ.

2023–24ರಲ್ಲಿ ಷೇರು ವಿಕ್ರಯದ ಮೂಲಕ ಒಟ್ಟು ₹51 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಸರ್ಕಾರದ ಮಾಹಿತಿಯ ಪ್ರಕಾರ, ಈವರೆಗೆ ಒಟ್ಟು ₹8 ಸಾವಿರ ಕೋಟಿಯಷ್ಟೇ ಸಂಗ್ರಹ ಆಗಿದೆ. ಸದ್ಯದ ಬೆಳವಣಿಗೆಯನ್ನು ಪರಿಗಣಿಸಿದರೆ ₹30 ಸಾವಿರ ಕೋಟಿಯಷ್ಟು ಕಡಿಮೆ ಸಂಗ್ರಹ ಆಗಲಿದೆ ಎಂದು ತಿಳಿಸಿವೆ.

ಸಂಗ್ರಹಿಸಲು ಉದ್ದೇಶಿಸಿರುವ ಒಟ್ಟು ₹51 ಸಾವಿರ ಕೋಟಿ ಮೊತ್ತದಲ್ಲಿ ಐಡಿಬಿಐ ಬ್ಯಾಂಕ್‌ನ ಷೇರು ಮಾರಾಟ ಮತ್ತು ಎನ್‌ಎಂಡಿಸಿ ಸ್ಟೀಲ್‌ನ ಖಾಸಗೀಕರಣದಿಂದಲೇ ₹30,000 ಕೋಟಿ ಬರುವ ನಿರೀಕ್ಷೆಯನ್ನು ಕೇಂದ್ರ ಇಟ್ಟುಕೊಂಡಿದೆ.

ಐಡಿಬಿಐ ಬ್ಯಾಂಕ್ ಷೇರು ಖರೀದಿಗೆ ಹೂಡಿಕೆದಾರರಿಂದ ಖರೀದಿ ಆಸಕ್ತಿ ವ್ಯಕ್ತವಾಗಿಲ್ಲ. ಹೀಗಾಗಿ 2024ರಲ್ಲಿ ಸಾರ್ವತ್ರಿಕ ಚುನಾವಣೆಯ ಬಳಿಕ ಷೇರುಗಳನ್ನು ಮಾರಾಟ ಮಾಡಲು ಆರ್‌ಬಿಐ ನಿರ್ಧರಿಸಿದೆ. ಎನ್‌ಎಂಡಿಸಿ ಸ್ಟೀಲ್ ಕಂಪನಿಯ ಮಾರಾಟವು ರಾಜ್ಯಗಳ ಚುನಾವಣೆ ಮತ್ತು ಸಾರ್ವತ್ರಿಕ ಚುನಾವಣೆಯ ಕಾರಣಕ್ಕಾಗಿ ಕೈಗೂಡುತ್ತಿಲ್ಲ. ಕಂಪನಿಯ ಪ್ರಮುಖ ಘಟಕವು ಛತ್ತಿಸಗಢದಲ್ಲಿ ಇದ್ದು, ಅಲ್ಲಿನ ಕಾರ್ಮಿಕರು ಮತ್ತು ಕಾರ್ಮಿಕರ ಸಂಘದಿಂದ ಮಾರಾಟಕ್ಕೆ ವಿರೋಧ ವ್ಯಕ್ತವಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2019ರಿಂದಲೂ ಉಕ್ಕು, ರಸಗೊಬ್ಬರ ಮತ್ತು ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಮಾರಾಟ ಮಾಡುವ ಯೋಜನೆ ರೂಪಿಸುತ್ತಿದೆಯಾದರೂ ಅದು ಕೈಗೂಡುತ್ತಲೇ ಇಲ್ಲ. ಭೂ ಮಾಲೀಕತ್ವ ಮತ್ತು ಪ್ರತಿಪಕ್ಷಗಳ ವಿರೋಧವು ಅಡ್ಡಿಯಾಗುತ್ತಲೇ ಇದೆ ಎಂದು ಮೂಲಗಳು ಹೇಳಿವೆ.

ಷೇರು ವಿಕ್ರಯದ ಕುರಿತು ಹಣಕಾಸು ಸಚಿವಾಲಯವು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಸರ್ಕಾರದ ಈ ಅವಧಿಯಲ್ಲಿ ಯಾವುದೇ ಕಂಪನಿಗಳ ಖಾಸಗೀಕರಣ ಆಗುವುದಿಲ್ಲ ಎಂದು ಮಾಜಿ ಹಣಕಾಸು ಕಾರ್ಯದರ್ಶಿ ಸುಭಾಷ್ ಚಂದ್ರ ಗರ್ಗ್ ಅವರು ಹೇಳಿದ್ದರು. ಆಳುವ ವರ್ಗಕ್ಕೆ ಖಾಸಗೀಕರಣ ನೀತಿಯಲ್ಲಿ ಈಗ ರಾಜಕೀಯವಾಗಿ ಆಸಕ್ತಿ ಇಲ್ಲದೇ ಇರುವುದರಿಂದ ಮುಂದಿನ ಆರು ತಿಂಗಳವರೆಗೆ ಷೇರು ವಿಕ್ರಯ ಮತ್ತು ಖಾಸಗೀಕರಣವನ್ನು ಮರೆತುಬಿಡಿ ಎಂದು ಅವರು ಹೇಳಿದ್ದಾರೆ.

ಕೇಂದ್ರೋದ್ಯಮಗಳು ಉತ್ತಮ ಲಾಭಾಂಶ ಗಳಿಸಿಕೊಂಡಿವೆ. ಹೀಗಾಗಿ ಕೇಂದ್ರ ಸರ್ಕಾರಕ್ಕೆ ಲಾಭಾಂಶ ರೂಪದಲ್ಲಿ ಹೆಚ್ಚಿನ ಮೊತ್ತ ಸಂದಾಯ ಆಗಲಿದೆ. ಕೇಂದ್ರವು ₹43 ಸಾವಿರ ಕೋಟಿಯಷ್ಟು ಲಾಭಾಂಶವನ್ನು ಪಡೆಯುವ ಗುರಿಯನ್ನು ಮೀರಲಿದೆ. ಏಕೆಂದರೆ ಈವರೆಗೆ ಲಾಭಾಂಶವಾಗಿ ₹20,300 ಕೋಟಿ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಎಲ್ಲಿಯವರೆಗೆ ಕೇಂದ್ರ ಸರ್ಕಾರವು ವಿತ್ತೀಯ ಗುರಿಯನ್ನು ತಲುಪುತ್ತದೆಯೋ ಅಲ್ಲಿಯವರೆಗೆ ಷೇರು ವಿಕ್ರಯದ ಗುರಿ ತಪ್ಪಿದರೆ ಸಮಸ್ಯೆ ಆಗವುದಿಲ್ಲ ಎಂದು ಬರ್ಕ್ಲೇಸ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್‌ನ ಆರ್ಥಿಕ ತಜ್ಞ ರಾಹುಲ್ ಬಜೋರಿಯಾ ಹೇಳಿದ್ದಾರೆ.

ಖಾಸಗೀಕರಣದಲ್ಲಿನ ವಿಳಂಬವು ಸರ್ಕಾರದ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 5.9ಕ್ಕೆ ನಿಯಂತ್ರಿಸುವ ಗುರಿಯ ಮೇಲೆ ಪರಿಣಾಮ ಬೀರಲಾರದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿದೇಶಿ ವಿನಿಮಯ ₹42,081 ಕೋಟಿ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ನವೆಂಬರ್ 17ಕ್ಕೆ ಕೊನೆಗೊಂಡ ವಾರದಲ್ಲಿ ₹42,081 ಕೋಟಿಯಷ್ಟು ಹೆಚ್ಚಾಗಿದ್ದು, ಒಟ್ಟಾರೆ ಮೀಸಲು ಸಂಗ್ರಹವು ₹49.41 ಲಕ್ಷ ಕೋಟಿಗೆ ತಲಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ನವೆಂಬರ್ 10ಕ್ಕೆ ಕೊನೆಗೊಂಡ ವಾರದಲ್ಲಿ ₹48.99 ಲಕ್ಷ ಕೋಟಿಯಷ್ಟು ಇತ್ತು ಎಂದು ಆರ್‌ಬಿಐ ಹೇಳಿದೆ.

ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹದ ಪಾಲು ಹೆಚ್ಚಿನದ್ದಾಗಿದೆ. ನವೆಂಬರ್ 17ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ₹36,354 ಕೋಟಿಯಷ್ಟು ಏರಿಕೆ ಕಂಡು ₹43.69 ಲಕ್ಷ ಕೋಟಿಗೆ ತಲುಪಿದೆ. ಇದರಿಂದಾಗಿ ಒಟ್ಟಾರೆ ಮೀಸಲು ಸಂಗ್ರಹದಲ್ಲಿಯೂ ಏರಿಕೆ ಕಂಡುಬಂದಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಚಿನ್ನದ ಮೀಸಲು ಸಂಗ್ರಹವು ₹1 ಸಾವಿರ ಕೋಟಿಯಷ್ಟು ಹೆಚ್ಚಾಗಿ ₹1.50 ಲಕ್ಷ ಕೋಟಿಗೆ ತಲುಪಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹350 ಕೋಟಿ ಹೆಚ್ಚಾಗಿ ₹40,089 ಕೋಟಿಯಷ್ಟು ಆಗಿದೆ ಎಂದು ಆರ್‌ಬಿಐ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿಯ ನೇರನೇಮಕಾತಿ, ಪ್ಯಾಕಿಂಗ್,ಪಿಕ್ಕಿಂಗ್ ಸ್ಕ್ಯಾನಿಂಗ್,ಆಪರೇಟರ್ ಟೆಲಿಕಾಲಿಂಗ್,ಡೆಲಿವರಿ ಆಫೀಸ್ ಹಾಗೂ,ಶೋರೂಂ ಬ್ಯಾಂಕಿಂಗ್ ಹುದ್ದೆಗಳಿಗೆ ಬೇಕಾಗಿದ್ದಾರೆ. ಸಂಬಳ:16,000 ರಿಂದ36,000 ಊಟ,ವಸತಿ ವಾಹನ ಸೌಲಭ್ಯವಿದೆ 9611237045 8861430488

Multiple Vacancy

REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Wanted

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

ಭವಿಷ್ಯ

Astrology

ಓಂ ಶ್ರೀ.ಮಹಾಗಣಪತಿ ಜ್ಯೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜ್ಯೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ. ಗಣೇಶರಾವ್ ಶಾಸ್ತ್ರಿ ಜಿ: 9226506660/ 9960147770

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

08.01.2024 12.03.2024 12.04.2024 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 13.01.2024 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 12.01.2024 05.03.2024 ನೇಪಾಳ 9 ದಿನಗಳು. 23.12.2023 12.01.2024 06.03.2024 ಭೂತಾನ್ 8 ದಿನಗಳು. 09.01.2024 05.02.2024 25.03.2024 ಶ್ರೀಲಂಕಾ 6 ದಿನಗಳು. 06.01.2024 15.02.2024 02.04.2024 ಅಸ್ಸಾಂ,ಮೇಘಾಲಯ 9 ದಿನಗಳು 13.01.2024 05.02.2024 ಗುಜರಾತ್ 8 ದಿನಗಳು. 13.01.2024 12.02.2024 ರಾಜಸ್ಥಾನ್ 10 ದಿನಗಳು. 12.04.2024 06.05.2024 ಕಾಶ್ಮೀರ್ 6 ದಿನಗಳು. 05.04.2024 25.04.2024 02.05.2024 ಶಿಮ್ಲಾ,ಮನಾಲಿ 8 ದಿನಗಳು. 18 04.2024 17.05.2024 ಗ್ಯಾಂಗ್ ಟಾಕ್,ಡಾರ್ಜಲಿಂಗ 6 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರೀ ಟಿ. ಸತ್ಯನಾರಾಯಣ ರೆಡ್ಡಿ

ನಿಧನ : 24–11–2023

ದಿನಾಂಕ 24–11–2023, ಶುಕ್ರವಾರದಂದು ಶ್ರೀ ಟಿ. ಸತ್ಯನಾರಾಯಣ ರೆಡ್ಡಿಯವರು ಆಕಸ್ಮಿಕವಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತಿದ್ದೇವೆ.
ಅವರ ಪಾರ್ಥಿವ ಶರೀರವನ್ನು ನಂ.6, ಎಸ್.ಎನ್. ಪ್ರೈಡ್, ಶನಿದೇವರ ದೇವಸ್ಥಾನದ ಪಕ್ಕ, 1ನೇ ಕ್ರಾಸ್, 3ನೇ ಮೈನ್, ಮಡಿವಾಳ, ಬೆಂಗಳೂರು–68. ಇಲ್ಲಿ ತಾ. 25–11–2023 ರಂದು ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು. ಮೊಬೈಲ್: 8904474735
ತಾ. 25–11–2023 ರಂದು ಸಂಜೆ 4.00 ಗಂಟೆಯ ನಂತರ ಅಂತ್ಯಕ್ರಿಯೆ ಕೂಡ್ಲು ಸ್ಮಶಾನ, 5ನೇ ಕ್ರಾಸ್, ಹೊಸಪಾಳ್ಯ, ಮುನೇಶ್ವರ ನಗರ, ಬೆಂಗಳೂರು– 560 068 ಇಲ್ಲಿ ನಡೆಯಲಿದೆ.

ದುಃಖತಪ್ತರು,
ಕುಟುಂಬ ಮತ್ತು ಸ್ನೇಹಿತರು

ಭಾವಪೂರ್ಣ ಶ್ರದ್ಧಾಂಜಲಿ



(1944 - 2023)

ಪಾರ್ವತಮ್ಮ

W/o ನಾರಾಯಣಸ್ವಾಮಿ (Rtd. BDO)

ಇವರು ದಿನಾಂಕ: 24.11.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ಚಿಂತಾಮಣಿ ತಾಲ್ಲೂಕಿನ ದೊಡ್ಡಗಂಜೂರು ನಲ್ಲಿ ದಿ: 25.11.2023 ರಂದು ಶನಿವಾರ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು

ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಮೊ : 98800 67797 / 80739 97910

LOOKING TO BUILD, BUY OR SELL A PROPERTY

Please refer Classifieds on Sunday

ಭಾವಪೂರ್ಣ ಶ್ರದ್ಧಾಂಜಲಿ

ಕ್ಯಾಪ್ಟನ್ ಎಂ.ವಿ. ಪ್ರಾಂಜಲ್

23–11–2023

ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಉಗ್ರರ ವಿರುದ್ಧ ಹೋರಾಡಿ ವೀರ ಮರಣ ಹೊಂದಿದ ನಂದನವನ ಬಡಾವಣೆಯ ನಿವಾಸಿಯಾದ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ದುಃಖತಪ್ತ,
ವಿ. ಲಕ್ಷ್ಮೀನಾರಾಯಣ್
ಸಂಸ್ಥಾಪಕರು, ನಿರ್ಮಾಣ್ ಸಮೂಹ ಸಂಸ್ಥೆಗಳು, ಬೆಂಗಳೂರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ಸರ್ಕಾರ ಬದಲಾಗಬೇಕು. ಆದರೆ...’

ರಾಜಸ್ಥಾನದ ಈಶಾನ್ಯದ ಮೂಲೆಯಿಂದ ನೈರುತ್ಯದ ಮೂಲೆಯವರೆಗೆ ಒಂದು ಗೆರೆ ಎಳೆದಂತಿರುವ ಅರಾವಳಿ ಪರ್ವತ ಪ್ರದೇಶವು ರಾಜ್ಯವನ್ನು ಎರಡು ಭಾಗಗಳನ್ನಾಗಿ ಮಾಡುತ್ತದೆ. ಈ ಪರ್ವತಸಾಲಿನಿಂದ ಪೂರ್ವಕ್ಕಿರುವ ಪ್ರಾಂತಗಳು ಅಭಿವೃದ್ಧಿಯಲ್ಲಿ ಮುಂದಿದ್ದರೆ, ಪಶ್ಚಿಮಕ್ಕಿರುವ ಪ್ರಾಂತಗಳು ಹಿಂದುಳಿದಿವೆ. ಅಭಿವೃದ್ಧಿಯಲ್ಲಿ ಈ ವಿಭಜನೆ ಇದ್ದರೂ, ಪ್ರತಿ ಬಾರಿ ಸರ್ಕಾರ ಬದಲಾಗಬೇಕು ಎಂಬುದರಲ್ಲಿ ಎರಡೂ ಕಡೆಯ ಜನರದ್ದು ಒಂದೇ ದನಿ. ಆದರೆ, ಈ ಬಾರಿಯೂ ಸರ್ಕಾರ ಬದಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸುವಲ್ಲಿ ಎರಡೂ ಕಡೆಯ ಜನರ ಅಭಿಪ್ರಾಯ ಬೇರೆ–ಬೇರೆ

ಜಯಸಿಂಹ ಆರ್.

ಜೈಪುರ: ರಾಜಸ್ಥಾನದಲ್ಲಿ ಪ್ರತಿ ಐದು ವರ್ಷಗಳಿಗೆ ಒಮ್ಮೆ ಸರ್ಕಾರ ಬದಲಾಗುತ್ತದೆ. ಒಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ನಂತರದ ಅವಧಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ಹೀಗೆ ಸರ್ಕಾರ ಬದಲಿಸುವ ಪರಂಪರೆಯನ್ನು 30 ವರ್ಷಗಳಿಂದ ರಾಜಸ್ಥಾನದ ಮತದಾರರು ರೂಢಿಸಿಕೊಂಡು ಬಂದಿದ್ದಾರೆ. ಮತದಾರರು ಹೀಗೆ ಸರ್ಕಾರವನ್ನು ಬದಲಿಸುವುದು ಏಕೆ? ಚುನಾವಣಾ ಪಯಣದ ಎದುರು ಇದ್ದ ಬಹಳ ಮುಖ್ಯ ಪ್ರಶ್ನೆ ಇದು. ಸರ್ಕಾರ ಬದಲಾಗುತ್ತಿದ್ದರೆ, ಎಲ್ಲಾ ರೀತಿಯ ಕೆಲಸಗಳು ನಿರಂತರವಾಗಿ ನಡೆಯುತ್ತಿರುತ್ತವೆ: ಜನರು ಥಟ್ಟನೆ ನೀಡುವ ಉತ್ತರವಿದು.

‘10 ವರ್ಷಗಳ ಹಿಂದೆ ಕಾಂಗ್ರೆಸ್ ಶಾಸಕ ಇದ್ದರು. ನಂತರದ ಚುನಾವಣೆಯಲ್ಲಿ ಬಿಜೆಪಿ ಶಾಸಕನನ್ನು ನಮ್ಮ ಜನ ಗೆಲ್ಲಿಸಿದರು. ಅವರು ನಮ್ಮೂರಿಗೆ ಆಸ್ಪತ್ರೆ ಕಟ್ಟಿಸಿಕೊಟ್ಟರು. ತುಂಬಾ ಚೆನ್ನಾಗೇ ಕೆಲಸ ಮಾಡಿದ್ದಾರೆಂದು ಐದು ವರ್ಷದ ಹಿಂದೆ ಅವರನ್ನೇ ಮರುಆಯ್ಕೆ ಮಾಡಿದ್ದೆವು. ಆ ಮನುಷ್ಯ ಕೆಲಸ ಮಾಡುವುದನ್ನೇ ಬಿಟ್ಟ. ಈಗ ಆಸ್ಪತ್ರೆಗೆ ವೈದ್ಯರೇ ಇಲ್ಲ. ಈಗ ಮನವಿ ಕೊಡಲೂ ಅವರು ಸಿಗುತ್ತಿಲ್ಲ. ಊರಿಗೆ ಬಂದರೆ ಕಾರಿನಿಂದ ಇಳಿಯುವುದೇ ಇಲ್ಲ. ಹೀಗಾಗಬಾರದೆಂದೇ ಐದು ವರ್ಷಗಳಿಗೊಮ್ಮೆ ಶಾಸಕರನ್ನು ಬದಲಿಸುತ್ತೇವೆ’ ಎಂದು ದೃಢವಾಗಿ ಹೇಳಿದ್ದು ಉದಯಪುರ ಹೊರವಲಯದಲ್ಲಿರುವ ಬೇಕಡಿಯಾ ಗ್ರಾಮದ ಗೋವಿಂದ್.

ಉದ್ಯಮಿಗಳಿರಲಿ, ಕೂಲಿ ಕಾರ್ಮಿಕರಿರಲಿ, ವ್ಯಾಪಾರಿಗಳಿರಲಿ, ಕಾಲೇಜು ವಿದ್ಯಾರ್ಥಿಗಳಿರಲಿ... ರಾಜಸ್ಥಾನದ ಎಲ್ಲಾ ಪ್ರಾಂತಗಳಲ್ಲೂ ಜನರು ಸರ್ಕಾರ ಬದಲಾಗುತ್ತಿರಬೇಕು ಎಂದೇ ಹೇಳುತ್ತಾರೆ ಮತ್ತು ಹೀಗೆ ಸರ್ಕಾರವನ್ನು ಬದಲಿಸುವ ತಮ್ಮ ಪರಂಪರೆ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಾರೆ.

ಆದರೆ, ‘ಈ ಬಾರಿಯೂ ಸರ್ಕಾರ ಬದಲಾಗುತ್ತದೆಯೇ’ ಎಂಬ ಪ್ರಶ್ನೆಗೆ ಉತ್ತರ ಸುಲಭಕ್ಕೆ ಸಿಗುವುದಿಲ್ಲ.

ಈ ಪ್ರಶ್ನೆ ಮುಂದಿಟ್ಟಾಗ ಜೈಪುರದ ರವಿಕಾಂತ್ ಶರ್ಮಾ, ‘2018ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಹೇಳಬಹುದಿತ್ತು. ಆದರೆ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಹೇಳುವುದು ಕಷ್ಟ. ಒಳಜಗಳ, ಸರ್ಕಾರಿ ನೇಮಕಾತಿ ಪ್ರಶ್ನೆಪತ್ರಿಕೆಗಳ ಸೋರಿಕೆ ಮತ್ತು ಮುಸ್ಲಿಮರ ಓಲೈಕೆ ಈ ಸರ್ಕಾರದ ಎದುರು ಇರುವ ಅತ್ಯಂತ ದೊಡ್ಡ ಸವಾಲುಗಳು. ಆದರೆ, ಈ ಸರ್ಕಾರದ ಉಚಿತ ಕೊಡುಗೆಗಳು ಜನರಿಗೆ ತಲುಪಿವೆ. ಹೀಗಾಗಿ ಸರ್ಕಾರ ಬದಲಿಸುವ ಪರಂಪರೆ ಮುಂದುವರಿಯುವ ಸಾಧ್ಯತೆ 50:50 ಎಂದು ಹೇಳಬಹುದು’ ಎಂದರು.

‘ವಸುಂಧರಾ ರಾಜೇ ಬಡಜನರಿಗಾಗಿ ಕೆಲಸ ಮಾಡಿರಲಿಲ್ಲ. ಹೀಗಾಗಿ ಕಾಂಗ್ರೆಸ್ ಬರುತ್ತದೆ ಎಂದು ಆಗ ಹೇಳಬಹುದಿತ್ತು. ಆದರೆ ಈ ಬಾರಿ ಕಾಂಗ್ರೆಸ್ ಸರ್ಕಾರ ಕೆಲಸ ಮಾಡಿದೆ. ಬಿಜೆಪಿ ಸರ್ಕಾರದಲ್ಲಿ ₹5 ಲಕ್ಷ ಆರೋಗ್ಯ ವಿಮೆ ಇತ್ತು, ಅದು ಯಾರಿಗೂ ಸಿಗುತ್ತಿರಲಿಲ್ಲ. ಆಶೋಕ್ ಜೀ ಅವರ ಸರ್ಕಾರ ₹25 ಲಕ್ಷ ಆರೋಗ್ಯ ವಿಮೆ ನೀಡಿದೆ. ನನ್ನ ಗೆಳೆಯನ ಅಮ್ಮನಿಗೇ ಆ ವಿಮೆಯಿಂದ ಕ್ಯಾನ್ಸರ್‌ಗೆ ಉಚಿತ ಚಿಕಿತ್ಸೆ ಸಿಗುತ್ತಿದೆ. ಅವನು ಬಿಜೆಪಿಗೇ ಮತ ಹಾಕುತ್ತಿದ್ದ, ಈ ಬಾರಿ ಕಾಂಗ್ರೆಸ್‌ಗೆ ಹಾಕುತ್ತಾನೆ. ನಾನು ಬಿಜೆಪಿಗೇ ಹಾಕುತ್ತೇನೆ. ಬಿಜೆಪಿ ಸರ್ಕಾರವೂ ಬರಬಹುದು, ಕಾಂಗ್ರೆಸ್ ಸರ್ಕಾರವೂ ಬರಬಹುದು. ಆದರೆ ಈ ಬಾರಿ ಬಿಜೆಪಿ ಬರಬೇಕು’ ಎಂಬುದು ಚಿತ್ತೋರಗಡದ ದೀಪಕ್ ಕುಮಾರ್ ಕರ್ಣಿಯ ವಿವರಣೆ.

ಬವಡಾ ಮಂಡಿಯ ಹೇಮಲತಾ ಪಾಂಚಾಲ್ ಮತ್ತು ದಿವ್ಯಾ ಪಾಂಚಾಲ್ —ಪ್ರಜಾವಾಣಿ ಚಿತ್ರ

‘ನೋಡಿ ಮೊದಲೇ ಹೇಳಿಬಿಡುತ್ತೇನೆ, ನಾನು ಕಾಂಗ್ರೆಸ್ ಅಭಿಮಾನಿ. ಹಾಗೆಂದು ಈ ಬಾರಿ ಕಾಂಗ್ರೆಸ್ ಸರ್ಕಾರವೇ ಬರುತ್ತದೆ ಎಂದು ಹೇಳಿದರೆ ಅದು ನನಗೆ ನಾನು ಮಾಡಿಕೊಳ್ಳುವ ಮೋಸ. ಜನ ಶಾಸಕರನ್ನು ಬದಲಿಸಿಯೇ ಬದಲಿಸುತ್ತಾರೆ. ಹೀಗಾಗಿ ಬಿಜೆಪಿ ಸರ್ಕಾರ ಬರುವ ಸಾಧ್ಯತೆಯೇ ಹೆಚ್ಚು. ಕಾಂಗ್ರೆಸ್ ಮರಳಿ ಅಧಿಕಾರ ಹಿಡಿಯುವ ಸಾಧ್ಯತೆ ಕಡಿಮೆ. ಆದರೆ ಇಲ್ಲವೇ ಇಲ್ಲ ಎಂದು ಹೇಳಲಾಗುವುದಿಲ್ಲ’ ಎಂದು ಉತ್ತರಿಸಿದ್ದು ಉದಯಪುರದ ಹೋಟೆಲ್ ಉದ್ಯಮಿ ಪ್ರತೀಕ್ ಜೈನ್.

ಅರಾವಳಿ ಬೆಟ್ಟಸಾಲಿನ ಪೂರ್ವಕ್ಕಿರುವ ಹಡೋತಿ, ಧೂಂದರ್, ಅಜ್ಮೀರ್, ಮೆವಾಡ ಪ್ರಾಂತಗಳು ಬಿಜೆಪಿಯ ಭದ್ರಕೋಟೆ. 2018ರಲ್ಲಿ ಕಾಂಗ್ರೆಸ್ ಇಲ್ಲಿ ಹೆಚ್ಚಿನ ಸ್ಥಾನ ಗೆದ್ದಕಾರಣ ಅಧಿಕಾರ ಹಿಡಿದಿತ್ತು. ಇಲ್ಲಿನ ಜನರು ಸರ್ಕಾರ ಬದಲಾಗಬೇಕು ಎಂದು ಬಯಸುತ್ತಾರಾದರೂ, ಬದಲಾಗದೇ ಇರುವ ಸಾಧ್ಯತೆಯೂ ಇದೆ ಎನ್ನುತ್ತಾರೆ. ಬೆಟ್ಟಸಾಲಿನ ಪಶ್ಚಿಮಕ್ಕಿರುವ ಮಾರ್ವಾಡ, ಶೆಖಾವತಿ, ಗಾಡ್ವಾಡ್ ಪ್ರಾಂತಗಳು ಯಾವ ಪಕ್ಷದ ಭದ್ರಕೋಟೆಯೂ ಅಲ್ಲ. ಇಲ್ಲಿನ ಶಾಸಕರು ಬದಲಾಗುತ್ತಲೇ ಇರುತ್ತಾರೆ. ಈ ಭಾಗದ ಜನರು ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬರುತ್ತದೆ ಎಂದು ಹೇಳುವುದಿಲ್ಲವಾದರೂ, ಕಾಂಗ್ರೆಸ್ ಬರಬೇಕು ಎಂದೇ ಹೇಳುತ್ತಾರೆ. ಸರ್ಕಾರ ಏಕೆ ಬರಬೇಕು ಎಂಬುದಕ್ಕೂ ಈ ಜನರು ಹಲವಾರು ಕಾರಣಗಳನ್ನು ಮುಂದಿಡುತ್ತಾರೆ.

‘ನನ್ನ ಗಂಡ ಕುಡುಕ. ಈಗ ದುಡಿಯುತ್ತಿಲ್ಲ. ನಾನು ಅಪ್ಪನ ಮನೆಗೆ ಬಂದಿದ್ದೇನೆ. ಉಚಿತ ರೇಷನ್, ಪಿಂಚಣಿ ಬರುತ್ತಿರುವ ಕಾರಣಕ್ಕೆ ಜೀವನ ನಡೆಯುತ್ತಿದೆ. ಈ ಸರ್ಕಾರವೇ ಇದ್ದರೆ ಚೆನ್ನಾಗಿರುತ್ತದೆ ಅಲ್ಲವೇ’ ಎಂಬುದು ಬವಾಡಾ ಮಂಡಿಯ ಹೇಮಲತಾ ಪಾಂಚಾಲ್ ಅವರ ವಿವರಣೆ. ಅವರ ಪಕ್ಕವೇ ನಿಂತಿದ್ದ ಮಗಳು ದಿವ್ಯಾ ಪಾಂಚಾಲ್, ‘ನಾನು ಮೊದಲು ಖಾಸಗಿ ಇಂಗ್ಲಿಷ್ ಶಾಲೆಗೆ ಹೋಗುತ್ತಿದ್ದೆ. ಅಪ್ಪ ದುಡಿಯುತ್ತಿಲ್ಲ ಎಂದು ಸರ್ಕಾರಿ ಶಾಲೆಗೆ ಹಾಕಿದರು. ಅಲ್ಲಿ ಹಿಂದಿ ಮಾಧ್ಯಮ ಇತ್ತು. ಈಗ ಎರಡು ವರ್ಷದಿಂದ ನಮ್ಮ ಶಾಲೆಯಲ್ಲೂ ಇಂಗ್ಲಿಷ್‌ನಲ್ಲಿ ಪಾಠ ಮಾಡುತ್ತಿದ್ದಾರೆ. ಇದು ಒಳ್ಳೆ ಸರ್ಕಾರ’ ಎಂದಳು.

ಸರ್ಕಾರಿ ನೇಮಕಾತಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಮತ್ತು ಇದರಿಂದ ಯುವಕರಿಗೆ ಉದ್ಯೋಗಾವಕಾಶ ಕಡಿಮೆಯಾಯಿತು ಎಂಬುದನ್ನು ಈ ಭಾಗದ ಜನ ಒಪ್ಪಿಕೊಳ್ಳುತ್ತಾರೆ. ಆದರೂ, ಈ ಸರ್ಕಾರದ ಅವಧಿಯಲ್ಲಿ ಹಲವರಿಗೆ ಉದ್ಯೋಗ ಸಿಕ್ಕಿದೆ. ಜೀವನ ನಡೆಸಲು ಅನುಕೂಲಗಳೂ ಸಿಕ್ಕಿದೆ. ಈ ಕಾರಣಕ್ಕೆ ಕಾಂಗ್ರೆಸ್ ಸರ್ಕಾರ ಬರಬೇಕು ಎನ್ನುತ್ತಾರೆ.

ಮೋಗ್ಡಾದ ಹನುಮಾನ್ ಘಾರ್ಸಿ, ‘ಐದು ವರ್ಷದಲ್ಲಿ ನನ್ನ ನಾಲ್ವರು ಗೆಳೆಯರಿಗೆ ಸರ್ಕಾರಿ ಕೆಲಸ ಸಿಕ್ಕಿದೆ. ಅವರೆಲ್ಲಾ ಕಾಂಗ್ರೆಸ್‌ಗೇ ಮತ ಹಾಕುತ್ತಾರೆ. ನಾನು ಡಿಪ್ಲೊಮಾ ಮಾಡಿದ್ದು, ಸ್ವಂತ ಗ್ಯಾರೇಜ್ ನಡೆಸುತ್ತಿದ್ದೇನೆ. ನಮಗೇನೂ ತೊಂದರೆಯಾಗಿಲ್ಲ. ಇದೇ ಸರ್ಕಾರ ಮತ್ತೊಮ್ಮೆ ಬರಲಿ’ ಎಂದರು. ಜೈಸಲ್ಮೇರ್, ಬಿಕಾನೇರ್, ಸಿರ್ಕಾ, ನಾಗೌರ್‌ನಲ್ಲೂ ಜನರು ಇಂಥದ್ದೇ ಅನುಕೂಲಗಳ ಪಟ್ಟಿ ನೀಡುತ್ತಾರೆ. ಈ ಸರ್ಕಾರವೇ ಬರಲಿ ಎನ್ನುತ್ತಾರೆ.

ಆದರೆ, ಅರಾವಳಿ ಬೆಟ್ಟಸಾಲಿನುದ್ದಕ್ಕೂ ಇರುವ ಪರಿಶಿಷ್ಟ ಪಂಗಡಗಳ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಭಾರತೀಯ ಆದಿವಾಸಿ ಪಕ್ಷವು ದೊಡ್ಡಮಟ್ಟದಲ್ಲಿ ಪ್ರಚಾರ ನಡೆಸುತ್ತಿದೆ. ಪ್ರತಿ ಹಳ್ಳಿಗೂ ಹೋಗಿ ಬ್ಯಾನರ್ ಕಟ್ಟಿದೆ. ನಿಮಗಾಗಿ ದುಡಿಯುತ್ತೇವೆ ನಮಗೆ ಮತ ನೀಡಿ ಎಂದು ಕೇಳುತ್ತಿದೆ. ಇನ್ನೊಂದೆಡೆ ಜಾಟರ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಆರ್‌ಎಲ್‌ಪಿ ಸಹ ಇದೇ ರೀತಿ ಪ್ರಚಾರ ಮಾಡುತ್ತಿದೆ. ಹಳ್ಳಿಗಳ ಪ್ರತಿ ಮತದಾರನನ್ನೂ ಭೇಟಿ ಮಾಡಿ ಮತ ಕೇಳುತ್ತಿದೆ. ಈ ಎರಡೂ ಪಕ್ಷಗಳು ಅಧಿಕಾರಕ್ಕೆ ಬರುತ್ತವೆ ಎಂದು ಹೇಳಲಾಗದು. ಆದರೆ, ಕಾಂಗ್ರೆಸ್ ಮತ್ತು ಬಿಜೆಪಿಯ ಮತಗಳನ್ನು ಸೆಳೆಯುತ್ತವೆ. ಪ್ರತಿ ಬಾರಿ ಸರ್ಕಾರ ಬದಲಿಸುವ ಪರಂಪರೆ ಮುಂದುವರಿಯುವದರಲ್ಲಿ ಅಥವಾ ಪರಂಪರೆ ಮುರಿಯುವುದರಲ್ಲಿ ಇದು ಸಣ್ಣ ಪಾತ್ರವಹಿಸಬಹುದು. ❖

ಕರ್ನಾಟಕದಲ್ಲಿ ಕುಸಿತ ಕಂಡ ರಿಯಲ್ ಎಸ್ಟೇಟ್: ಕೆಟಿಆರ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ನೆರೆಯ ರಾಜ್ಯ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ರಿಯಲ್ ಎಸ್ಟೇಟ್ ಮತ್ತು ನಿರ್ಮಾಣ ಉದ್ಯಮದಲ್ಲಿ ಶೇಕಡ 28ರಷ್ಟು ಕುಸಿತವಾಗಿದೆ ಎಂದು ತೆಲಂಗಾಣದ ಕೈಗಾರಿಕಾ ಸಚಿವ ಕೆ.ಟಿ.ರಾಮರಾವ್ ಅವರು ಆರೋಪಿಸಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದ 'ರಿಯಲ್ ಎಸ್ಟೇಟ್ ಶೃಂಗಸಭೆ'ಯಲ್ಲಿ ಕೆಟಿಆರ್ ಅವರು, ಹೈದರಾಬಾದ್ ಬಗ್ಗೆ ತಮ್ಮ ದೃಷ್ಟಿಕೋನ ಮತ್ತು ಡಿಸೆಂಬರ್ 3 ರಂದು ಮೂರನೇ ಬಾರಿಗೆ ಸರ್ಕಾರ ರಚಿಸಿದ ನಂತರ ಕೈಗೊಳ್ಳಬೇಕಾದ ಕ್ರಿಯ ಯೋಜನೆಯನ್ನು ಹಂಚಿಕೊಂಡರು.

'ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಬಗ್ಗೆ ಮಾತನಾಡಿದ ಕೆಟಿಆರ್, ಬೆಂಗಳೂರಿನಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕು. ನಿರ್ಮಾಣ ಮತ್ತು ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಕುಸಿತವಾಗಿದೆ. ಸ್ಥಿರ ಸರ್ಕಾರ ಮತ್ತು ಸಮರ್ಥ ನಾಯಕತ್ವ ಮಾತ್ರ ಪ್ರಗತಿ ಮುಂದುವರಿಸಬಹುದು. ನಿಮ್ಮ

ಕೆ.ಟಿ. ರಾಮರಾವ್

ರಜಾದಿನಗಳನ್ನು ಮತ್ತು ಉದ್ಯಮದ ಉತ್ಕರ್ಷವನ್ನು ಆನಂದಿಸಲು ಬಯಸಿದರೆ, ನಮಗೆ ರಜೆ ನೀಡಬೇಡಿ. ಎಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸರ್ಕಾರವನ್ನು ಪ್ರೋತ್ಸಾಹಿಸಿ’ ಎಂದು ಕೆಟಿಆರ್ ಮನವಿ ಮಾಡಿದರು.

ಮೂವರು ಪ್ರಮುಖ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡಿದ ಕೆಟಿಆರ್, 1999ರಿಂದ 2004 ರವರೆಗೆ ಚಂದ್ರಬಾಬು ನಾಯ್ಡು ಸರ್ಕಾರ ಐ.ಟಿ ಮತ್ತು ಹೈದರಾಬಾದ್ ಪರವಾಗಿತ್ತು. 2004ರಿಂದ 2009 ರವರೆಗೆ ವೈ.ಎಸ್. ರಾಜಶೇಖರ ರೆಡ್ಡಿ ಸರ್ಕಾರವು ಗ್ರಾಮೀಣ, ಕೃಷಿ, ಬಡವರ ಪರವಾಗಿತ್ತು ಎಂದು ಹೇಳಿದರು. 2014ರಿಂದ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರ ಬಿಆರ್‌ಎಸ್ ಸರ್ಕಾರವು ನಗರ - ಗ್ರಾಮೀಣ, ಕೃಷಿ - ಉದ್ಯಮ ಮತ್ತು ಬಡವರ ಪರವಾಗಿದೆ. ಎಲ್ಲದರಲ್ಲೂ ಸಮತೋಲನ ಕಾಯ್ದುಕೊಂಡಿದ್ದಾರೆ ಎಂದರು.

ನುಡಿ–ಕಿಡಿ

ಈ ಬಾರಿ ನಾವು ಶತಕ ಬಾರಿಸುತ್ತೇವೆ. ಬಹಳ ಕಷ್ಟ ಪಟ್ಟಿರುವುದರಿಂದ ಚುನಾವಣಾ ಪರೀಕ್ಷೆ ಪಾಸಾಗುವುದು ಸುಲಭವೆಂದು ತೋರುತ್ತಿದೆ. ಕೆಲವೆಡೆ ಆಡಳಿತ ವಿರೋಧಿ ಅಲೆ ಇರಬಹುದು. ಆದರೆ ಅಲ್ಲಿ ಸಿಟ್ಟಿಲ್ಲ. ಹತ್ತು ವರ್ಷಗಳ ವರೆಗೆ ಅಧಿಕಾರದಲ್ಲಿದ್ದಾಗ ವಿರೋಧ ಇರುವುದು ಸಹಜ.

ಕೆ. ಕವಿತಾ, ಬಿಆರ್‌ಎಸ್ ನಾಯಕಿ

ನಾವು ಮತ್ತು ತೆಲಂಗಾಣದ ಜನರು ‘ಮೊದಲು ರಾಜ್ಯ’ ಎಂದರೆ, ಬಿಆರ್‌ಎಸ್ ಪಕ್ಷದ ನಾಯಕರು ‘ಮೊದಲು ಕುಟುಂಬ’ ಎನ್ನುತ್ತಾರೆ. ತೆಲಂಗಾಣದಲ್ಲಿ ಬಿಜೆಪಿ ಸರ್ಕಾರ ರಚನೆಯಾದರೆ, ಆಗ ‘ಮೊದಲು ತೆಲಂಗಾಣ’ ಮಾತ್ರ ಇರಲಿದೆ.


ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಸಾಮಾಜಿಕ ಜಾಲತಾಣಗಳಲ್ಲಿ ಕೆಸರೆರಚಾಟ ಮುಂದುವರಿಕೆ

ಕೈ–ಕಮಲ ‘ಅಪಶಕುನ’ ಸಮರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ‘ಅಪಶಕುನ’ ಎಂದು ಕರೆದ ನಂತರದ ರಾಜಕೀಯ ಕೆಸರೆರಚಾಟವು ಸಾಮಾಜಿಕ ಜಾಲತಾಣಗಳಲ್ಲಿ ಮುಂದುವರಿದಿದೆ.

ಕಾಂಗ್ರೆಸ್ ಪಕ್ಷವು ಪ್ರಧಾನಿಯವರನ್ನು ‘ಮಹಾನ್ ಅಪಶಕುನ’ (ಪನೌತಿ–ಎ–ಆಜಂ) ಎಂದು ಕರೆದಿದೆ. ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ, ಗಾಂಧಿ ಕುಟುಂಬವು ಈ ದೇಶದ ಪಾಲಿಗೆ ‘ನಿಜವಾದ ಅಪಶಕುನ’ ಎಂದು ಹೇಳಿದೆ. ಪ್ರಧಾನಿಯವರನ್ನು ‘ಅಪಶಕುನ’ ಎಂದು ಕರೆದಿದ್ದಕ್ಕೆ ಚುನಾವಣಾ ಆಯೋಗವು ರಾಹುಲ್ ಅವರಿಗೆ ಗುರುವಾರ ನೋಟಿಸ್ ಜಾರಿ ಮಾಡಿದೆ.

ಕಾಂಗ್ರೆಸ್ ಪಕ್ಷವು ತನ್ನ ಎಕ್ಸ್ ಖಾತೆಯಲ್ಲಿ ಶುಕ್ರವಾರ ಪೋಸ್ಟರ್ ಒಂದನ್ನು ಪ್ರಕಟಿಸಿದ್ದು, ಅದರಲ್ಲಿ ಪ್ರಧಾನಿ ಮೋದಿ ಅವರು ಒಂದು ಪರದೆಯ ಹಿಂದೆ ಇದ್ದಾರೆ. ಅದರ ಮೇಲೆ ‘ಪನೌತಿ–ಎ–ಆಜಂ’ (ಮಹಾನ್ ಅಪಶಕುನ) ಎಂದು ಬರೆಯಲಾಗಿದೆ.

ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಅವರು ಕಾಂಗ್ರೆಸ್ಸಿನ ಪೋಸ್ಟರ್‌ಗೆ ತಿರುಗೇಟಿನ ರೂಪದಲ್ಲಿ ಒಂದು ಪೋಸ್ಟರ್ ಪ್ರಕಟಿಸಿದ್ದಾರೆ. ಗಾಂಧಿ ಕುಟುಂಬದ ಸದಸ್ಯರ ಹೆಸರಿನ ಕೆಲವು ಅಕ್ಷರಗಳಿಗೆ ಒತ್ತು ನೀಡಿ ‘ಪನೌತಿ’ ಎಂದು ಇಂಗ್ಲಿಷ್‌ನಲ್ಲಿ ತೋರಿಸಲಾಗಿದೆ. ‘ಇವರು ಭಾರತದ ನಿಜವಾದ ಅಪಶಕುನ’ ಎಂದು ಪೋಸ್ಟರ್ ಮೇಲೆ ಬರೆಯಲಾಗಿದೆ.

ಎಕ್ಸ್‌ನ ಪೋಸ್ಟ್‌ನಲ್ಲಿ ಪೂನಾವಾಲಾ ಅವರು ‘ಭಾರತದ ನಿಜವಾದ ಅಪಶಕುನ – ಪರಿವಾರವಾದ, ಆತಂಕವಾದ, ಸ್ವಜನಪಕ್ಷಪಾತ, ಭ್ರಷ್ಟಾಚಾರ, ಅರ್ಥ ವ್ಯವಸ್ಥೆಯ ಸಾಧನೆ ಚೆನ್ನಾಗಿಲ್ಲದಿರುವುದು, ತುಷ್ಟೀಕರಣ, ಮತಬ್ಯಾಂಕ್‌ಗಾಗಿ ರಾಷ್ಟ್ರದ ಹಿತಾಸಕ್ತಿಯನ್ನು ಉಪೇಕ್ಷಿಸುವುದು’ ಎಂದು ಬರೆದಿದ್ದಾರೆ.ವಿಶ್ವ ಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತ ಸೋತಿದ್ದನ್ನು ಉಲ್ಲೇಖಿಸಿ ರಾಹುಲ್ ಅವರು ‘ಪಿಎಂ ಅಂದರೆ ಪನೌತಿ ಮೋದಿ’ (ಅಪಶಕುನ ಮೋದಿ) ಎಂದು ಮಂಗಳ ವಾರ ಹೇಳಿದ್ದರು. ಮೋದಿ ಅವರು ಫೈನಲ್ ಪಂದ್ಯ ವೀಕ್ಷಣೆಗೆ ಕ್ರೀಡಾಂಗಣದಲ್ಲಿದ್ದರು.

ರಾಜಸ್ಥಾನ ವಿಧಾನಸಭೆ: ಇಂದು ಮತದಾನ

ಜೈಪುರ (ಪಿಟಿಐ): ರಾಜಸ್ಥಾನ ವಿಧಾನಸಭೆಯ ಹೊಸ ಸದಸ್ಯರ ಆಯ್ಕೆಗೆ ಶನಿವಾರ ಮತದಾನ ನಡೆಯಲಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಕೆಳಗಿಳಿಸುವ ಗುರಿಯನ್ನು ಬಿಜೆಪಿ ಹೊಂದಿದ್ದರೆ, ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ತೀವ್ರ ಹೋರಾಟ ನಡೆಸುತ್ತಿದೆ.

200 ಕ್ಷೇತ್ರಗಳ ಪೈಕಿ 199ರಲ್ಲಿ ಬಿಗಿ ಭದ್ರತೆ ನಡುವೆ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಪ್ರವೀಣ್ ಗುಪ್ತಾ ಹೇಳಿದ್ದಾರೆ. ಶ್ರೀಗಂಗಾ ನಗರದ ಕರಣಾಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಗುರ್ಮೀತ್ ಸಿಂಗ್ ಅವರ ನಿಧನದ ಕಾರಣ ಈ ಕ್ಷೇತ್ರದ ಮತದಾನ ಮುಂದೂಡಲಾಗಿದೆ.

ಒಟ್ಟು 1,862 ಅಭ್ಯರ್ಥಿಗಳು ಕಣದಲ್ಲಿದ್ದು 5,25,38,105 ಮತದಾರರು ಇದ್ದಾರೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ಧೊಟಾಸರಾ, ಪಕ್ಷದ ನಾಯಕ ಸಚಿನ್ ಪೈಲಟ್ ಸೇರಿ, ಕೆಲ ಸಚಿವರು ಕಾಂಗ್ರೆಸ್‌ನಿಂದ ಕಣದಲ್ಲಿರುವ ಪ್ರಮುಖರು. ಪ್ರತಿಪಕ್ಷದ ನಾಯಕ ರಾಜೇಂದ್ರ ರಾಠೋಡ್, ಸತೀಶ್ ಪೂನಿಯಾ, ವಸುಂಧರಾ ರಾಜೇ, ದಿಯಾ ಕುಮಾರಿ ಮತ್ತಿತರರು ಬಿಜೆಪಿಯಿಂದ ಸ್ಪರ್ಧಿಸಿರುವ ಪ್ರಮುಖರು. ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಸುಮಾರು 40 ಮಂದಿ ಬಂಡಾಯ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ರಾಜಸ್ಥಾನದಲ್ಲಿ ಶನಿವಾರ ನಡೆಯಲಿರುವ ವಿಧಾನಸಭೆ ಮತದಾನಕ್ಕೆ ಜೈಪುರದಲ್ಲಿ ಶುಕ್ರವಾರ ಸಂಜೆ ಇವಿಎಂನೊಂದಿಗೆ ಚುನಾವಣಾ ಕರ್ತವ್ಯಕ್ಕೆ ತೆರಳಿದ ಮತಗಟ್ಟೆ ಸಿಬ್ಬಂದಿ ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ

- **ವಿಡಿಯೊ ಹಂಚಿಕೆ:** ಪಕ್ಷದ ಅಭ್ಯರ್ಥಿಗೆ ಮತ ನೀಡುವಂತೆ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಕೋರುತ್ತಿರುವ ವಿಡಿಯೊವನ್ನು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸಾಮಾಜಿಕ ತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಅಧಿಕಾರಕ್ಕಾಗಿ ಪೈಲಟ್– ಗೆಹಲೋತ್ ನಡುವೆ ತಿಕ್ಕಾಟವಿದೆ ಎಂಬ ಅಂಶ ಪ್ರಚಾರ ಸಂದರ್ಭದಲ್ಲಿ ಪದೇ ಪದೇ ಕೇಳಿ ಬಂದ ಹಿನ್ನೆಲೆಯಲ್ಲಿ ಗೆಹಲೋತ್ ಅವರ ನಡೆ ಮಹತ್ವ ಪಡೆದಿದೆ. ರಾಜಸ್ಥಾನದಲ್ಲಿ ಶನಿವಾರ ಮತದಾನ ನಡೆಯಲಿದೆ.
- **ಗೆಹಲೋತ್ ಮನವಿ:** ‘ಇಬ್ಬರು ಗುಜರಾತಿಗಳು (ಮೋದಿ, ಶಾ) ರಾಜಸ್ಥಾನದಲ್ಲಿ ಪ್ರವಾಸ ಮಾಡುತ್ತಿದ್ದಾರೆ. ನಾನು ರಾಜಸ್ಥಾನಿ. ಗುಜರಾತಿನಲ್ಲಿ ಜನರು ಅವರನ್ನು ಗೆಲ್ಲುವಂತೆ ಮಾಡಿದ ರೀತಿಯಲ್ಲೇ ರಾಜ್ಯದ ಜನರು ನನ್ನನ್ನು ಗೆಲ್ಲಿಸಬೇಕು’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಕೋರಿದ್ದಾರೆ.

ಅಶೋಕ್ ಗೆಹಲೋತ್

- **ಕೆಸಿಆರ್ ಆರೋಪ:** ಚುನಾವಣೆಯಲ್ಲಿ ಆಯ್ಕೆಯಾದ ಬಳಿಕ ಬಿಆರ್‌ಎಸ್ ಸೇರುವುದಾಗಿ ಹೇಳಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಮತ ಕೋರುತ್ತಿದ್ದಾರೆ ಎಂದು ಬಿಆರ್‌ಎಸ್ ಅಧ್ಯಕ್ಷ, ಮುಖ್ಯಮಂತ್ರಿ ಕೆ. ಚಂದ್ರಶೇಖರರಾವ್ ಶುಕ್ರವಾರ ಆರೋಪಿಸಿದ್ದಾರೆ. ಕಲ್ಲಿದ್ದಲು ಗಣಿ ಪ್ರದೇಶ ಹೆಚ್ಚಿರುವ ಮಂಚೆರಿಯಲ್‌ನಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಕಲ್ಲಿದ್ದನ್ನು ಆಸ್ಟ್ರೇಲಿಯಾದ ಅದಾನಿ ಸಮೂಹದ ಕಲ್ಲಿದ್ದಲು ಗಣಿಯಿಂದ ಆಮದು ಮಾಡಿಕೊಳ್ಳುತ್ತಿರುವುದಾಗಿ ಪ್ರಧಾನಿ ಮೋದಿ ಅವರು ಹೇಳುತ್ತಿದ್ದಾರೆ ಎಂದು ಟೀಕಿಸಿದರು.
- **ಅಮಿತ್‌ಶಾ ಆಶ್ವಾಸನೆ:** ಸಾವಿರಾರು ಕೋಟಿ ಮೌಲ್ಯದ ಹಗರಣದಲ್ಲಿ ಕೆ. ಚಂದ್ರಶೇಖರರಾವ್ ಭಾಗಿಯಾಗಿದ್ದಾರೆ. ತಮಗೆ ಏನೂ ಆಗುವುದಿಲ್ಲ ಎಂದು ಕೆಸಿಆರ್ ಭಾವಿಸಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ಹಗರಣಗಳ ಬಗ್ಗೆ ಬಿಜೆಪಿ ಸರ್ಕಾರ ತನಿಖೆ ನಡೆಸಲಿದೆ. ಭ್ರಷ್ಟಾಚಾರದಲ್ಲಿ ಭಾಗಿಯಾದವರನ್ನು ಜೈಲಿಗೆ ಕಳುಹಿಸಲಿದೆ ಎಂದು ಚುನಾವಣಾ ರ‍್ಯಾಲಿಯಲ್ಲಿ ಹೇಳಿದರು.
- **‘ಮುಕ್ತಾಯದ ಹಂತ’:** ತೆಲಂಗಾಣದಲ್ಲಿ ಬಿಆರ್‌ಎಸ್ ಸರ್ಕಾರವು ಜನರನ್ನು ವಂಚಿಸಿದ್ದು, ಅದರ ಅವಧಿ ಮುಕ್ತಾಯದ ಹಂತ ತಲುಪಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ. ಪಾಲಕುರ್ತಿಯಲ್ಲಿ ಮಾತನಾಡಿದ ಅವರು, ರಾಜ್ಯದ ಯುವಜನತೆ, ಮಹಿಳೆಯರು ಮತ್ತು ರೈತರಿಗೆ ಅನ್ಯಾಯ ಆಗಿದ್ದು ಜನರ ನಿರೀಕ್ಷೆಗೆ ತಕ್ಕಂತೆ ಸರ್ಕಾರ ನಡೆದುಕೊಂಡಿಲ್ಲ ಎಂದು ಆರೋಪಿಸಿದರು.

ಸಂಬಳ ಕೇಳಿದ ದಲಿತ ಯುವಕನ ಬಾಯಿಗೆ ಚಪ್ಪಲಿ

ಒಂದನೇ ಪುಟದಿಂದ...

ಅವರನ್ನು ವಾಣಿಜ್ಯ ಸಂಕೀರ್ಣದ ಟೆರೇಸ್‌ಗೆ ಕರೆದೊಯ್ದರು. ಅಲ್ಲಿ ಪರೀಕ್ಷಿತ್ ಪಟೇಲ್, ಓಂ ಪಟೇಲ್ ಮತ್ತು ಇತರ ಆರರಿಂದ ಏಳು ಜನ ಹಲ್ಲೆ ನಡೆಸಿದರು. ವಿಭೂತಿ ತಮ್ಮ ಪಾದರಕ್ಷೆಯನ್ನು ಬಾಯಿಯಿಂದ ಕಚ್ಚಿ ಹಿಡಿ ಯುವಂತೆ ಬಲವಂತ ಮಾಡಿದರು, ಸಂಬಳ ಕೇಳಿದ್ದಕ್ಕೆ ಕ್ಷಮೆ ಯಾಚಿಸುವಂತೆ ಮಾಡಿದರು ಎಂದು ದೂರಿನಲ್ಲಿ ಹೇಳಲಾಗಿದೆ.

ಹಲ್ಲೆ ನಡೆಸಿದವರು ವಿಡಿಯೊ ಚಿತ್ರೀಕರಿಸಿಕೊಂಡಿದ್ದು, ತಾವು ವಿಭೂತಿ ಕಚೇರಿಗೆ ಬಂದಿದ್ದು ಹಣ ವಸೂಲಿಗೆ ಎಂದು ಹೇಳುವಂತೆ ಬಲವಂತ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ವಿಡಿಯೊ ಒಂದರಲ್ಲಿ ಆರೋಪಿಗಳು, ಸಂತ್ರಸ್ತ ವ್ಯಕ್ತಿಯು ವೇತನ ಕೇಳಿದ್ದಕ್ಕೆ ಕ್ಷಮೆ ಯಾಚಿಸುವಂತೆ ಒತ್ತಾಯಿಸುವ ದೃಶ್ಯಗಳು ಇವೆ.

ಆರೋಪಿಗಳ ವಿರುದ್ಧ ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯಾರನ್ನೂ ಬಂಧಿಸಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಸುರಂಗದೊಳಗೆ ನಿತ್ಯ ವ್ಯಾಯಾಮ, ಯೋಗ ಮಾಡುತ್ತಿರುವ ಶ್ರಮಜೀವಿಗಳು

ಕಾರ್ಮಿಕರ ಒತ್ತಡ ತಗ್ಗಿಸಲು ಲೂಡೊ, ಚೆಸ್

ಉತ್ತರಕಾಶಿ / ಡೆಹ್ರಾಡೂನ್ (ಪಿಟಿಐ): ಸಿಲ್ಕ್ಯಾರಾ ಸುರಂಗದೊಳಗೆ ಸಿಲುಕಿರುವ 41 ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ವಿಳಂಬವಾದ ಕಾರಣ ಅವರ ಒತ್ತಡ ನಿವಾರಣೆಗೆ ಲೂಡೊ, ಚೆಸ್ ಬೋರ್ಡ್, ಮತ್ತು ಇಸ್ಪೀಟ್ ಎಲೆ ಕಳುಹಿಸಲು ರಕ್ಷಣಾ ಸಿಬ್ಬಂದಿ ಯೋಜಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೊರೆಯುವ ಯಂತ್ರವನ್ನು ಇರಿಸಿರುವ ಜಾಗದಲ್ಲಿ ಗುರುವಾರ ರಾತ್ರಿ ಬಿರುಕು ಉಂಟಾದ ಕಾರಣದಿಂದಾಗಿ ಇಡೀ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಕಾರ್ಯಾಚರಣೆ ಆರಂಭವಾದಾಗಿನಿಂದ ಕೊರೆಯುವ ಯಂತ್ರ ನಿಲ್ಲಿಸಿರುವುದು ಇದು ಮೂರನೇ ಬಾರಿ.

ರಕ್ಷಣಾ ಕಾರ್ಯಾಚರಣೆ 13ನೇ ದಿನ ಪ್ರವೇಶಿಸಿದ್ದು, ಕಾರ್ಮಿಕರು ಹೊರ ಜಗತ್ತಿನ ಬೆಳಕು ನೋಡಲು ಇನ್ನೂ ಕೆಲವು ತಾಸು ಬೇಕಾಗಬಹುದು.

ಘಟನಾ ಸ್ಥಳದಲ್ಲಿರುವ ಮನೋವೈದ್ಯ ಡಾ.ರೋಹಿತ್ ಗೊಂಡ್ವಾಲ್, ‘ನಾವು ಲೂಡೊ, ಚೆಸ್ ಬೋರ್ಡ್ ಮತ್ತು ಇಸ್ಪೀಟ್ ಎಲೆಗಳನ್ನು ಒದಗಿಸಲು ಯೋಜಿಸುತ್ತಿದ್ದೇವೆ. ಕಾರ್ಯಾಚರಣೆ ವಿಳಂಬವಾಗುತ್ತಿದೆ. ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳುವ ಸಾಧ್ಯತೆ ಇದೆ. ಎಲ್ಲಾ ಕಾರ್ಮಿಕರು ಆರೋಗ್ಯವಾಗಿದ್ದಾರೆ. ಆದರೆ, ಅವರು ಆರೋಗ್ಯವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರಬೇಕು‘ ಎಂದು ಹೇಳಿದರು.

‘ಒತ್ತಡ ನಿವಾರಿಸಲು ಅವರು ಕಳ್ಳ–ಪೊಲೀಸ್ ಆಟ, ಯೋಗ ಹಾಗೂ ನಿತ್ಯ ವ್ಯಾಯಾಮ ಮಾಡುವುದಾಗಿ ನಮಗೆ ತಿಳಿಸಿದ್ದಾರೆ‘ ಎಂದರು.

ಸುರಂಗದಲ್ಲಿ ಸಿಲುಕಿರುವ ಕಾರ್ಮಿರಿಗೆ ಕಳುಹಿಸಲು ಆಹಾರವನ್ನು ಪ್ಯಾಕ್ ಮಾಡುತ್ತಿರುವ ದೃಶ್ಯ. ಪಿಟಿಐ ಚಿತ್ರ

ಕಾರ್ಮಿಕರ ಮಾನಸಿಕ ಆರೋಗ್ಯದ ಬಗ್ಗೆ ಮಾತನಾಡಿದ ಮತ್ತೊಬ್ಬ ತಜ್ಞ ವೈದ್ಯ, ‘ಅವರಲ್ಲಿ ನೈತಿಕ ಸ್ಥೈರ್ಯವು ಹೆಚ್ಚಾಗಿದೆ. ವೈದ್ಯರ ತಂಡವು ನಿತ್ಯ ಕಾರ್ಮಿಕರೊಂದಿಗೆ ಮಾತನಾಡುತ್ತಿದ್ದು, ಅವರ ಆರೋಗ್ಯ ಮತ್ತು ಮಾನಸಿಕ ಪರಿಸ್ಥಿತಿಗಳ ಬಗ್ಗೆ ವಿಚಾರಿಸುತ್ತಿದೆ’ ಎಂದರು.

ಕೊರೆಯುವ ಯಂತ್ರಕ್ಕೆ ಬುಧವಾರ ರಾತ್ರಿ ಕಬ್ಬಿಣದ ಮೆಶ್ ಅಡ್ಡಿಯಾಗಿ ಕಾರ್ಯಾಚರಣೆ ಆರು ತಾಸು ಸ್ಥಗಿತಗೊಂಡಿತು. ಅದನ್ನು ತೆರವುಗೊಳಿಸಿದ ಬಳಿಕ ಗುರುವಾರ ಬೆಳಿಗ್ಗೆ ಮತ್ತೆ ಕೆಲಸ ಆರಂಭಗೊಂಡಿತು. ಆದರೆ, ರಾತ್ರಿ ಮತ್ತೆ ಸಮಸ್ಯೆ ಉಂಟಾಗಿ ಕಾರ್ಯಾಚರಣೆ ಸ್ಥಗಿತಗೊಂಡಿತು.

ರಕ್ಷಣಾ ಸಿಬ್ಬಂದಿ 48 ಮೀಟರ್‌ವರೆಗೂ ಸುರಂಗ ಕೊರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನೂ 12–14 ಮೀಟರ್ ನಷ್ಟು ಕೊರೆದರೆ ಕಾರ್ಮಿಕರನ್ನು ತಲುಪಬಹುದು. ನಂತರ ಅವರನ್ನು ಹೊರಗೆತರಲು ಅನುಕೂಲವಾಗುತ್ತದೆ.

ಉತ್ತರಕಾಶಿ ಮತ್ತು ಡೆಹ್ರಾಡೂನ್‌ನಿಂದ ಬಂದಿರುವ ವೈದ್ಯರು, ಮನೋವೈದ್ಯರ ತಂಡ ಘಟನಾ ಸ್ಥಳದಲ್ಲಿ ಬೀಡುಬಿಟ್ಟಿದೆ. ರಕ್ಷಣಾ ಸಿಬ್ಬಂದಿ ನಿತ್ಯ ಬೆಳಿಗ್ಗೆ ಮತ್ತು ಸಂಜೆ ಕಾರ್ಮಿಕರೊಂದಿಗೆ ಅರ್ಧ ತಾಸು ಮಾತನಾಡುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಡಿಆರ್‌ಎಫ್ ತಾಲೀಮು: ಸುರಂಗದೊಳಗಿರುವ ಕಾರ್ಮಿಕರನ್ನು ವೀಲ್ ಸ್ಟ್ರೆಚರ್ ಮೇಲೆ ಮಲಗಿಸಿ ಹೊರತರುವ ಬಗ್ಗೆ ಎನ್‌ಡಿಆರ್‌ಎಫ್ ಶುಕ್ರವಾರ ತಾಲೀಮು ನಡೆಸಿತು.

ಸುರಂಗದ ಕೊನೆಯಲ್ಲಿ ಹಗ್ಗಕ್ಕೆ ಕಟ್ಟಿದ ವೀಲ್ ಸ್ಟ್ರೆಚರ್ ಅನ್ನು ತಳ್ಳುತ್ತಾ ಪೈಪ್ ಮೂಲಕ ಎನ್‌ಡಿಆರ್‌ಎಫ್ ಸಿಬ್ಬಂದಿಯೊಬ್ಬರು ಸ್ವಲ್ಪ ದೂರ ಸಾಗಿದರು. ವೀಲ್ ಸ್ಟ್ರೆಚರ್ ಮೇಲೆ ಅವರು ಕೆಳಮುಖವಾಗಿ ಮಲಗಿದರು. ನಂತರ ಸ್ಟ್ರೆಚರ್ ಅನ್ನು ಹಗ್ಗದಿಂದ ಹಿಂದಕ್ಕೆ ಎಳೆಯಲಾಯಿತು. ಸುರಂಗದ ಅವಶೇಷಗಳ ಅಡಿ 800 ಮಿಲಿ ಮೀಟರ್ ವ್ಯಾಸದ ಉಕ್ಕಿನ ಪೈಪ್‌ಗಳನ್ನು ಅಳವಡಿಸಲಾಗಿದ್ದು, ಈ ಪೈಪ್ ಮೂಲಕ ಕಾರ್ಮಿಕರು ಹೊರ ಬರುತ್ತಾರೆ.

‘ಪೈಪ್‌ಗಳ ಒಳಗೆ ಸಾಕಷ್ಟು ಸ್ಥಳವಿತ್ತು. ಕಾರ್ಯಾಚರಣೆ ಸಮಯದಲ್ಲಿ ಉಸಿರಾಡಲು ಯಾವುದೇ ತೊಂದರೆ ಇರಲಿಲ್ಲ’ ಎಂದು ಎನ್‌ಡಿಆರ್‌ಎಫ್ ಸಿಬ್ಬಂದಿ ತಿಳಿಸಿದರು.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಗುರುವಾರದಿಂದ ಮಟ್ಲಿಯಲ್ಲಿ ಮೊಕ್ಕಾಂ ಹೂಡಿದ್ದು, ರಕ್ಷಣಾ ಕಾರ್ಯಾಚರಣೆ ಗಮನಿಸುತ್ತಿದ್ದಾರೆ. ಅವರ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸಲು ಸಹಾಯ ಮಾಡಲು ಮುಖ್ಯಮಂತ್ರಿ ಕಚೇರಿಯ ತಾತ್ಕಾಲಿಕ ಶಿಬಿರವನ್ನು ಅಲ್ಲಿ ಸ್ಥಾಪಿಸಲಾಗಿದೆ.

ಕಾರ್ಯಾಚರಣೆಗೆ ಮತ್ತೆ ಅಡ್ಡಿ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯನ್ನು ಶುಕ್ರವಾರ ಮತ್ತೆ ನಿಲ್ಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

25 ಟನ್ ತೂಕದ ಕೊರೆಯುವ ಯಂತ್ರ ಇರಿಸಿದ್ದ ಜಾಗದಲ್ಲಿ ಗುರುವಾರ ರಾತ್ರಿ ಬಿರುಕು ಉಂಟಾದ ಕಾರಣ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಶುಕ್ರವಾರ ಡ್ರಿಲ್ಲಿಂಗ್ ಪುನರಾರಂಭಗೊಂಡ ಕೂಡಲೇ ಕೊರೆಯುವ ಯಂತ್ರಕ್ಕೆ ಲೋಹದ ವಸ್ತು ಅಡ್ಡಿಯಾಗಿದ್ದು ಕಾರ್ಯಾಚರಣೆಯನ್ನು ಮತ್ತೆ ನಿಲ್ಲಿಸಬೇಕಾಯಿತು.

ಈಗಾಗಲೇ ಕೊರೆದಿರುವ ಮಾರ್ಗದ ಮೂಲಕ ಡ್ರಿಲ್ ಬಿಟ್ ಅನ್ನು ಹೊರತೆಗೆಯಲಾಗಿದೆ ಎಂದು ರಕ್ಷಣಾ ಸಿಬ್ಬಂದಿ ಸಂಜೆ ತಿಳಿಸಿದ್ದಾರೆ. ಬಿರುಕು ಕಾಣಿಸಿಕೊಂಡಿದ್ದ ಕೊರೆಯುವ ಯಂತ್ರ ಇರುವ ಜಾಗವನ್ನು ಸಿಮೆಂಟ್‌ನಿಂದ ದುರಸ್ತಿಪಡಿಸಲಾಗಿದೆ.

ಕೇಂದ್ರ ಸರ್ಕಾರದ ಚಾರ್‌ಧಾಮ್ ಸರ್ವಋತು ರಸ್ತೆ ಯೋಜನೆಯಡಿ ಸುರಂಗ ನಿರ್ಮಿಸುತ್ತಿದ್ದ ವೇಳೆ ನವೆಂಬರ್ 12 ರಂದು ಭೂಕುಸಿತ ಸಂಭವಿಸಿ ಕಾರ್ಮಿಕರು ಅದರೊಳಗೆ ಸಿಲುಕಿಕೊಂಡಿದ್ದಾರೆ.

ಪ್ರಜಾವಾಣಿ

ಒಂದು ಆಲಸಿ ಭಾನುವಾರದ ವಿಶೇಷ ಕಾಂಬೊ – ಅಪ್ಪ ಮಟನ್ ಬಿರಿಯಾನಿ ಮತ್ತು ಕೂರ್ಗ್ ಚಿಕನ್

ನಮ್ಮ ವಿಶೇಷವಾದ ಆನ್‌ಲೈನ್ ಶೋ – ಕರುನಾಡ ಸವಿಯೂಟದಲ್ಲಿ, ಕರ್ನಾಟಕದ ವಿಶೇಷ ಅಡುಗೆಗಳು ಮತ್ತು ಪ್ರಾದೇಶಿಕ ಪಾಕಗಳ ತಯಾರಿಯಲ್ಲಿ ನೀವೂ ಪಾಲ್ಗೊಳ್ಳಿ.

ಪ್ರಸಿದ್ಧ ಶೆಫ್ ರಘು ಅವರು ಅಪ್ಪ ಮಟನ್ ಬಿರಿಯಾನಿ ಮತ್ತು ಕೂರ್ಗ್ ಚಿಕನ್ ಅನ್ನು ಅತ್ಯಂತ ಸಾಂಪ್ರದಾಯಿಕ ರೀತಿಯಲ್ಲಿ ತಯಾರಿಸುವುದನ್ನು ತಪ್ಪದೇ ವೀಕ್ಷಿಸಿ. ಈ ಪ್ರದರ್ಶನವನ್ನು ಪ್ರಸಿದ್ಧ ವ್ಲಾಗರ್ ಅರುಣ್ ಅವರು ಮಾಡರೇಟ್ ಮಾಡಿದರು.

Freedom Healthy Cooking Oils presents
ಕರುನಾಡ ಸವಿಯೂಟ

ವಿಡಿಯೊಗಳನ್ನು ವೀಕ್ಷಿಸಿ ಮತ್ತು ನಿಮ್ಮ ಸ್ವಂತ ಪಾಕವಿಧಾನವನ್ನು pv@prajavani.net ಗೆ ಕಳಿಸಿ.
ನಿಮ್ಮ ಪಾಕವಿಧಾನ ಪ್ರಜಾವಾಣಿಯಲ್ಲಿ ಮುದ್ರಿತವಾಗುವ ಅವಕಾಶ ಪಡೆಯಿರಿ.

in association with Ravi | star

ಈ ಕಾರ್ಯಕ್ರಮವನ್ನು ವೀಕ್ಷಿಸಲು bit.ly/PVCuisinesS2

ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯ

ಸೆಮಿಫೈನಲ್‌ಗೆ ಚಿರಾಗ್– ಸಾತ್ವಿಕ್

ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ರಾಜ್ ರಣಕಿರೆಡ್ಡಿ

ಶೆನ್‌ಜೆನ್ (ಪಿಟಿಐ): ಏಷ್ಯನ್ ಗೇಮ್ಸ್ ಚಾಂಪಿಯನ್ನರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ನೇರ ಸೆಟ್‌ಗಳಿಂದ ಇಂಡೊನೇಷ್ಯಾದ ಲಿಯೊ ರೋಲಿ ಕರ್ನಾಂಡೊ ಮತ್ತು ಡೇನಿಯಲ್ ಮಾರ್ಟಿನ್ ಅವರನ್ನು ಸೋಲಿಸಿ ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಡಬಲ್ಸ್ ಸೆಮಿಫೈನಲ್ ತಲುಪಿತು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಸಾತ್ವಿಕ್– ಚಿರಾಗ್ ಜೋಡಿ 21–16, 21–14 ರಿಂದ ಕರ್ನಾಂಡೊ– ಮಾರ್ಟಿನ್ ಜೋಡಿಯನ್ನು ಸೋಲಿಸಿತು. ಭಾರತದ ಆಟಗಾರರು, ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಇಂಡೊನೇಷ್ಯಾ ಜೋಡಿಯನ್ನು ಮಣಿಸಲು 46 ನಿಮಿಷ ತೆಗೆದುಕೊಂಡರು.

ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ಭಾರತದ ಆಟಗಾರರು ಶನಿವಾರ ಸೆಮಿಫೈನಲ್‌ನಲ್ಲಿ ಚೀನಾದ ಹಿ ಜಿ ಟಿಂಗ್ ಮತ್ತು ರೆನ್ ಷಿಯಾಂಗ್ ಯು ಜೋಡಿಯನ್ನು ಎದುರಿಸಲಿದ್ದಾರೆ. ಎಂಟರ ಘಟ್ಟದ ಪಂದ್ಯದಲ್ಲಿ ಟಿಂಗ್– ರೆನ್ ಜೋಡಿ 21–15, 21–15 ರಿಂದ ಸ್ವದೇಶದ ಲಿಯು ಯು ಚೆನ್– ಉಕ್ಸುವಾನ್ ಯಿ ಜೋಡಿಯನ್ನು ನೇರ ಗೇಮ್‌ಗಳಿಂದ ಸೋಲಿಸಿತು. ಯು ಚೆನ್– ಉಕ್ಸುವಾನ್ ಇಲ್ಲಿ ಎಂಟನೇ ಶ್ರೇಯಾಂಕ ಪಡೆದಿದ್ದರು.

ಭಾರತದ ಜೋಡಿ ಈ ವರ್ಷ ಇಂಡೊನೇಷ್ಯಾ ಸೂಪರ್ 1000, ಕೊರಿಯಾ ಸೂಪರ್ 500 ಮತ್ತು ಸ್ವಿಸ್ ಸೂಪರ್ 300 ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಆದರೆ ನಂತರ ಕೆಲವು ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ತೋರಿರಲಿಲ್ಲ.

ಸಾತ್ವಿಕ್– ಚಿರಾಗ್ ಉತ್ತಮ ಹೊಂದಾಣಿಕೆಯಿಂದ ಆಡಿದರು. ಪದೇ ಪದೇ ಅಂಕಣದೊಳಗೆ ತಮ್ಮ ಸ್ಥಾನಗಳನ್ನು ಬದಲಾಯಿಸುತ್ತ ಹೋದರು. ಹೀಗಾಗಿ ಇಂಡೊನೇಷ್ಯಾ ಆಟಗಾರರು ಒತ್ತಡಕ್ಕೆ ಸಿಲುಕಿದರು. ಭಾರತದ ಆಟಗಾರರ ಆಕ್ರಮಣದ ಆಟಕ್ಕೆ ತಕ್ಕ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಮೊದಲ ಗೇಮ್‌ನ ಬಹುತೇಕ ಅವಧಿ ಹೋರಾಟದಿಂದ ಕೂಡಿದ್ದು ಒಂದು ಹಂತದಲ್ಲಿ ಸ್ಕೋರ್ 14–14 ಆಗಿತ್ತು. ಆದರೆ ಚಿರಾಗ್ ಅವರ ಜಾಣ್ಮೆಯ ಆಟದಿಂದ ಭಾರತದ ಜೋಡಿ 19–16ರಲ್ಲಿ ಮುನ್ನಡೆಯಿತು. ನಂತರ ಗೇಮ್ ಗೆಲ್ಲುವುದು ಕಷ್ಟವಾಗಲಿಲ್ಲ.

ಎರಡನೇ ಗೇಮ್‌ನಲ್ಲಿ ಭಾರತದ ಆರಂಭದಿಂದಲೇ ಮುನ್ನಡೆ ಪಡೆಯಿತು. ಮೊದಲು 11–6ರಲ್ಲಿ ನಂತರ 17–10ರಲ್ಲಿ ಲೀಡ್ ಪಡೆಯಿತು.

ನರವೋಕಾ ವಿರುದ್ಧ ಪ್ರಣಯ್‌ಗೆ ಸೋಲು

ಭಾರತದ ಎಚ್‌.ಎಸ್‌. ಪ್ರಣಯ್ ಅವರು ಸರಣಿ ತಪ್ಪುಗಳನ್ನೆಸಗಿ ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲನುಭವಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ವಿಜೇತರಾಗಿರುವ ಜಪಾನ್‌ನ ಆಟಗಾರ ಕೊಡೈ ನರವೋಕಾ 21–9, 21–14 ರಿಂದ ವಿಶ್ವ ಕ್ರಮಾಂಕದಲ್ಲಿ ಎಂಟನೇ ಸ್ಥಾನದಲ್ಲಿರುವ ಪ್ರಣಯ್ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದರು.

ಪ್ರಣಯ್ ಆರಂಭದಿಂದಲೇ ಪರದಾಡಿದರು. ಹೊಡೆತಗಳನ್ನು ನಿಭಾಯಿಸುವ ದಾರಿಯಲ್ಲಿ ಅನೇಕ ತಪ್ಪುಗಳನ್ನು ಎಸಗಿದರು. ಹೀಗಾಗಿ ಮೂರನೇ ಶ್ರೇಯಾಂಕದ ನರವೋಕಾ ಅವರಿಗೆ ಸರಾಗವಾಗಿ ಮುನ್ನಡೆ ಪಡೆಯಲು ಸಾಧ್ಯವಾಯಿತು.

31 ವರ್ಷದ ಪ್ರಣಯ್ ಎರಡನೇ ಗೇಮ್‌ನಲ್ಲಿ ಸ್ವಲ್ಪ ಚೇತರಿಕೆಯ ಆಟವಾಡಿದರು. ಕೆಲವು ಉತ್ತಮ ಹೊಡೆತಗಳನ್ನೂ ಆಡಿದರು. ಆದರೆ ನೆಟ್ ಬಳಿಯ ಆಟ ಪರಿಪೂರ್ಣವಾಗಿರಲಿಲ್ಲ. ಒಂದು ಹಂತದಲ್ಲಿ ಸ್ಕೋರ್ 9–8 ಆಗಿತ್ತು. ಈ ಸಂದರ್ಭದಲ್ಲಿ ನೆಟ್‌ನ ಸಮೀಪದಲ್ಲಿ ಆಡುವಾಗ ನರವೋಕಾ ಅವರ ರ‍್ಯಾಕೆಟ್, ನೆಟ್‌ಗಿಂತ ಆಚೆಹೋಗಿತ್ತು ಎಂದು ಅಂಪೈರ್ ತೀರ್ಪು ನೀಡಿದರು. ಇದರ ವಿರುದ್ಧ ಜಪಾನ್ ಆಟಗಾರ ಪ್ರತಿಭಟಿಸಿದ್ದರಿಂದ ಆಟ ಕೆಲ ನಿಮಿಷಗಳ ಕಾಲ ಸ್ಥಗಿತೊಂಡಿತು.

ಪಂದ್ಯ ಮುಂದುವರಿದಾಗಲೂ ಕೆಲಕಾಲ ಪ್ರಣಯ್ ಮೇಲುಗೈ ವಹಿಸಿದ್ದರು. ಆದರೆ ಜಪಾನ್‌ನ ಆಟಗಾರ ಚೇತರಿಸಿಕೊಂಡು 15–12 ಮುನ್ನಡೆ ಸಾಧಿಸಿದರು. ಪ್ರಣಯ್ ಅವರ ಜಂಪ್‌ಸ್ಮಾಶ್‌ಗಳು ಕೆಲ ಬಾರಿ ನೆಟ್‌ಗೆ ಬಡಿದವು. ರಿಟರ್ನ್‌ಗಳು ಗೆರೆಗಿಂತ ಆಚೆಬಿದ್ದವು. ನೆಟ್ ಬಳಿಯ ನವಿರು ಹೊಡೆತಗಳೂ ಕೈಕೊಟ್ಟವು. ಹೀಗಾಗಿ ಜಪಾನ್ ಆಟಗಾರ 19–13 ರಲ್ಲಿ ಮುನ್ನಡೆ ಪಡೆದರಲ್ಲದೇ ಸುಲಭವಾಗಿ ಗೇಮ್ ಹಾಗೂ ಪಂದ್ಯ ಗೆದ್ದರು.

ಒಲಿಂಪಿಯನ್ ಈಜುಪಟುಗಳ ಆಕರ್ಷಣೆ

ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಕೂಟ ಇಂದಿನಿಂದ

ಪ್ರಜಾವಾಣಿ ವಾರ್ತೆ


ಸಜನ್ ಪ್ರಕಾಶ್

ಬೆಂಗಳೂರು: ಶನಿವಾರ ಮತ್ತು ಭಾನುವಾರ ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ನಡೆಯಲಿರುವ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ನಲ್ಲಿ ರೋಚಕವಾದ ಸ್ಕಿನ್ಸ್ ಸ್ಪರ್ಧೆಗಳು ಮತ್ತು ಅಂತರರಾಷ್ಟ್ರೀಯ ಈಜುಪಟುಗಳ ಪೈಪೋಟಿ ಪ್ರಮುಖವಾಗಿವೆ.

ಪದ್ಮನಾಭ ನಗರದಲ್ಲಿರುವ ಎನ್‌ಎಸಿಯಲ್ಲಿ ಎರಡು ದಿನ ನಡೆಯುವ ಈಜುಕೂಟದಲ್ಲಿ ಕರ್ನಾಟಕ ಸೇರಿದಂತೆ ಬೇರೆ ಬೇರೆ ರಾಜ್ಯಗಳಿಂದ 250 ಸ್ಪರ್ಧಿಗಳು ಭಾಗವಹಿಸುತ್ತಿದ್ದಾರೆ. ಇದು ಎರಡನೇ ವರ್ಷ ಅಯೋಜನೆಯಾಗುತ್ತಿರುವ ಸ್ಪರ್ಧೆಯಾಗಿದೆ. ಅದರಲ್ಲಿ ಸ್ಕಿನ್ಸ್ ಸ್ಪರ್ಧೆಗಳು ಗಮನ ಸೆಳೆಯುವ ನಿರೀಕ್ಷೆ ಇದೆ.

ಸ್ಕಿನ್ಸ್ ಎಂದರೆ; ಫೈನಲ್ಸ್‌ನಲ್ಲಿ ಮೂರು ಸುತ್ತುಗಳ ಸ್ಪರ್ಧೆ ನಡೆಸಿ ವಿಜೇತರನ್ನು ನಿರ್ಣಯಿಸಲಾಗುತ್ತದೆ. ಈಜುಪಟುಗಳ ಸಂಪೂರ್ಣ ಸಾಮರ್ಥ್ಯ ಒರೆಗೆ ಹಚ್ಚುವ ಸ್ಪರ್ಧೆ ಇದಾಗಿದೆ. ಹೋದ ಸಲ ಮೊದಲ ಬಾರಿ ಸ್ಕಿನ್ಸ್ ನಡೆದಿತ್ತು. ಈ ಸ್ಪರ್ಧೆಗಳು ಯುರೋಪ್ ಮತ್ತು ಅಮೆರಿಕದಲ್ಲಿ ನಡೆಯುವ ಅಂತರರಾಷ್ಟ್ರೀಯ ಈಜು ಲೀಗ್‌ಗಳಲ್ಲಿ ಆಯೋಜನೆಗೊಳ್ಳುತ್ತವೆ. ಹೋದ ಬಾರಿ 50 ಮೀ ವಿಭಾಗದ ಸ್ಪರ್ಧೆಗಳನ್ನು ಸ್ಕಿನ್ಸ್ ಮಾದರಿಯಲ್ಲಿ ನಡೆಸಲಾಗಿತ್ತು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಶ್ರೀಹರಿ ನಟರಾಜ್ ಮತ್ತು ಸಜನ್ ಪ್ರಕಾಶ್ ಅವರು ಈ ಬಾರಿಯ ಕೂಟದ ಪ್ರಮುಖ ಆಕರ್ಷಣೆಯಾಗಿದ್ದಾರೆ. ಈಚೆಗೆ ಚೀನಾದಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿಯೂ ಶ್ರೀಹರಿ ಭಾಗವಹಿಸಿದ್ದರು. ಅವರಲ್ಲದೇ ಇನ್ನೂ ಹಲವು ಅಂತರರಾಷ್ಟ್ರೀಯ ಈಜುಪಟುಗಳು ಕೂಟದಲ್ಲಿ ಭಾಗವಹಿಸುವರು ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ತಿಳಿಸಿದ್ದಾರೆ.

ಉದ್ಘಾಟನೆ ಇಂದು: ಕೂಟವನ್ನು ನ.25ರಂದು ಸಂಜೆ 5 ಗಂಟೆಗೆ ರಾಜ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಉದ್ಘಾಟಿಸಲಿದ್ದಾರೆ.

ಈಜುಕೋಟದ ನೇರಪ್ರಸಾರ ವೀಕ್ಷಿಸಲು ಯೂಟ್ಯೂಬ್ ಲಿಂಕ್: https://youtube.com/live/yzEBk8rbV8Q?feature=share

https://youtube.com/live/zrpIDY0Sa5o?feature=share

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ

ಗೆಲುವಿನ ಓಟದ ಛಲದಲ್ಲಿ ಕರ್ನಾಟಕ

ವೈಶಾಖ ವಿಜಯಕುಮಾರ್

ಅಹಮದಾಬಾದ್: ಈ ಬಾರಿಯ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿರುವ ಕರ್ನಾಟಕ ಎರಡನೇ ಪಂದ್ಯಕ್ಕೆ ಸಿದ್ಧವಾಗಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು ಉತ್ತರಾಖಂಡ ವಿರುದ್ಧ ಸೆಣಸಲಿದೆ.

ಸಿ ಗುಂಪಿನ ಪ್ರಥಮ ಪಂದ್ಯದಲ್ಲಿ ಕರ್ನಾಟಕ ತಂಡವು 222 ರನ್‌ಗಳಿಂದ ಜಮ್ಮು–ಕಾಶ್ಮೀರ ವಿರುದ್ಧ ಜಯಿಸಿತ್ತು. ಅದರಲ್ಲಿ ಆರಂಭಿಕ ಬ್ಯಾಟರ್‌ಗಳಾದ ಮಯಂಕ್ ಮತ್ತು ಆರ್. ಸಮರ್ಥ್ ಅವರು ಶತಕ ಗಳಿಸಿದ್ದರು.

ದೇವದತ್ತ ಪಡಿಕ್ಕಲ್ ಅವರು ಮಿಂಚಿನ ಅರ್ಧಶತಕ ಹೊಡೆದು ತಮ್ಮ ಫಿಟ್‌ನೆಸ್ ಪ್ರದರ್ಶಿಸಿದ್ದರು. ಅದರೊಂದಿಗೆ ತಂಡವು ದೇಶಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 400 ರನ್‌ಗಳಿಗಿಂತ ಹೆಚ್ಚಿನ ಮೊತ್ತ ಪೇರಿಸಿತ್ತು.

ಕರ್ನಾಟಕದ ಪ್ರಮುಖ ಶಕ್ತಿಯಾದ ಬೌಲಿಂಗ್ ವಿಭಾಗವೂ ಉತ್ತಮವಾಗಿಯೇ ಆಡಿತ್ತು. ವೇಗಿ ವೈಶಾಖ ವಿಜಯಕುಮಾರ್ ನಾಲ್ಕು ವಿಕೆಟ್ ಗಳಿಸಿದ್ದರು. ಅವರಿಗೆ ವಿದ್ವತ್ ಕಾವೇರಪ್ಪ ಮತ್ತು ವಿ. ಕೌಶಿಕ್ ಕೂಡ ಉತ್ತಮ ಜೊತೆ ನೀಡಿದ್ದರು.

ಅಲ್ಲದೇ ಸ್ಪಿನ್ನರ್ ಜೆ. ಸುಚಿತ್ ಹಾಗೂ ಕೆ. ಗೌತಮ್ ಕೂಡ ಉತ್ತಮ ಬೌಲಿಂಗ್ ಮಾಡಿದ್ದರು.

ಈ ಪಂದ್ಯದಲ್ಲಿ ಕರ್ನಾಟಕ ತಂಡವು ಉತ್ತರಾಖಂಡ ತಂಡದ ವಿರುದ್ಧವೂ ಸುಲಭ ಜಯದ ನಿರೀಕ್ಷೆಯಲ್ಲಿದೆ. ಅನುಭವ ಮತ್ತು ಬಲಾಬಲದಲ್ಲಿ ಕರ್ನಾಟಕ ತಂಡವೇ ಬಲಿಷ್ಠವಾಗಿದೆ.

ಜೀವನ್‌ಜ್ಯೋತ್ ಸಿಂಗ್ ನಾಯಕತ್ವದ ಉತ್ತರಾಖಂಡ ತಂಡವು ಮೊದಲ ಪಂದ್ಯದಲ್ಲಿ ಹರಿಯಾಣ ಎದುರು ಸೋತಿದೆ. ತಂಡದ ಆದಿತ್ಯ ತರೆ ಅರ್ಧಶತಕ ಗಳಿಸಿದ್ದರು. ಆರಂಭಿಕ ಬ್ಯಾಟರ್ ಕುನಾಲ್ ಚಾಂಡೇಲಾ 47 ರನ್ ಗಳಿಸಿದ್ದರು. ಆದರೆ ಉಳಿದ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿರಲಿಲ್ಲ. ಹರಿಯಾಣದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಆರು ವಿಕೆಟ್ ಗಳಿಸಿ ಉತ್ತರಾಖಂಡಕ್ಕೆ ಸಿಂಹಸ್ವಪ್ನರಾಗಿದ್ದರು.

ಕರ್ನಾಟಕದ ಸ್ಪಿನ್ನರ್‌ಗಳನ್ನು ಎದುರಿಸುವುದು ಉತ್ತರಾಖಂಡದ ಬ್ಯಾಟರ್‌ಗಳಿಗೆ ಸವಾಲಾಗಬಹುದು.

ಪಂದ್ಯ ಆರಂಭ: ಬೆಳಿಗ್ಗೆ 9

ಟಿಟಿ: ಅರ್ಚನಾಗೆ ಚಿನ್ನದ ಪದಕ

ಬೆಂಗಳೂರು: ಕರ್ನಾಟಕದ ಅರ್ಚನಾ ಕಾಮತ್ ಅವರು ವಡೋದರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಪಿಎಸ್‌ಪಿಬಿ ಟೇಬಲ್ ಟೆನಿಸ್ ಅಕಾಡೆಮಿಯನ್ನು ಪ್ರತಿನಿಧಿಸಿದ್ದ ಅರ್ಚನಾ ಶುಕ್ರವಾರ ನಡೆದ ಫೈನಲ್‌ನಲ್ಲಿ 11-7, 12-10, 11-5, 11-7 (4-0) ರಿಂದ ಆರ್‌ಬಿಐನ ಐಹಿಕಾ ಮುಖರ್ಜಿ ಅವರನ್ನು ಮಣಿಸಿದರು. ಅವರು ಈಚೆಗೆ ರಾಷ್ಟ್ರೀಯ ಕ್ರೀಡಾಕೂಟದಲ್ಲೂ ಚಿನ್ನದ ಸಾಧನೆ ಮಾಡಿದ್ದರು. ಅವರು ಸೆಮಿಫೈನಲ್‌ನಲ್ಲಿ ತಮಿಳುನಾಡಿನ ಕಾವ್ಯಶ್ರೀ ಭಾಸ್ಕರ್ ಅವರನ್ನು, ಕ್ವಾರ್ಟರ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಶ್ರೀಜಾ ಅಕುಲಾ ಅವರನ್ನು ಮಣಿಸಿದ್ದರು.

ಆಕಾಶ್‌ಗೆ ಕಂಚು: ಕರ್ನಾಟಕದ ಕೆ.ಜೆ. ಆಕಾಶ್ 19 ವರ್ಷದೊಳಗಿನವರ ಪುರುಷರ ಸಿಂಗಲ್ಸ್‌ನಲ್ಲಿ ಕಂಚು ಗೆದ್ದಿದ್ದಾರೆ.

ಸೆಮಿಫೈನಲ್‌ನಲ್ಲಿ ಅವರು ಪಶ್ಚಿಮ ಬಂಗಾಲದ ಅಂಕುರ್ ಭಟ್ಟಾಚಾರ್ಯ ವಿರುದ್ಧ ಪರಾಭವಗೊಂಡರು.

ನಾಲ್ಕರ ಘಟ್ಟಕ್ಕೆ ಭಾರತದ ಮೂವರು

ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ನಿಯ ಸಿಂಗಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಶ್ರೇಯಾಂಕದ ಋತುಜಾ ಭೋಸಲೆ ಸೇರಿದಂತೆ ಭಾರತದ ಮೂವರು ಆಟಗಾರ್ತಿಯರು ಯಶಸ್ಸಿನ ಓಟ ಮುಂದುವರಿಸಿ ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್‌ನ ಸಿಂಗಲ್ಸ್ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದರು.

ಕಣದಲ್ಲಿ ಉಳಿದಿರುವ ಅತಿ ಹೆಚ್ಚಿನ ಶ್ರೇಯಾಂಕದ ಭಾರತೀಯ ಆಟಗಾರ್ತಿಯಾಗಿರುವ ಋತುಜಾ ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 7–6 (4), 1–6, 6–1 ರಿಂದ ತಮ್ಮ ಡಬಲ್ಸ್ ಜೊತೆಗಾರ್ತಿ ಹಾಗೂ ಐದನೇ ಶ್ರೇಯಾಂಕದ ಝಿಬೆಕ್ ಕುಲಂಬಯೇವಾ (ಕಜಕಸ್ತಾನ) ಅವರನ್ನು ಹಿಮ್ಮೆಟ್ಟಿಸಿದರು.

ವೈರಾಣು ಜ್ವರದಿಂದ ಬಳಲುತ್ತಿದ್ದರೂ, ಗಟ್ಟಿ ಮನೋಬಲದ ಪರಿಣಾಮ ಪಂದ್ಯ ಗೆಲ್ಲಲು ಸಾಧ್ಯವಾಯಿತು ಎಂದು ಮಹಾರಾಷ್ಟ್ರದ 27 ವರ್ಷದ ಆಟಗಾರ್ತಿ ಋತುಜಾ ಹೇಳಿದರು.

ಗುರುವಾರ ಅಗ್ರಶ್ರೇಯಾಂಕದ ಉಜ್ಬೇಕ್ ಆಟಗಾರ್ತಿ ನಿಗಿನಾ ಅಬ್ದುರೈಮೋವಾ ಅವರಿಗೆ ಆಘಾತ ನೀಡಿದ್ದ ಉತ್ಸಾಹದಲ್ಲಿರುವ ಗುಜರಾತ್‌ನ ಶ್ರೇಯಾಂಕರಹಿತ ಆಟಗಾರ್ತಿ ಝೀಲ್ ದೇಸಾಯಿ ಅವರ ಗೆಲುವಿನ ಓಟ ಮುಂದುವರಿಯಿತು. ಅವರು ಗೆಲುವಿಗೆ ಮೊದಲು ಒಂದು ಸೆಟ್ ಕಳೆದುಕೊಂಡರೂ ನಿರ್ಣಾಯಕ ಸಂದರ್ಭದಲ್ಲಿ ಚೇತರಿಸಿಕೊಂಡು 6–3, 6–7 (2), 6–4 ರಿಂದ ಜರ್ಮನಿಯ ಅಂಟೊನಿಯೊ ಶ್ಮಿಟ್ ಅವರನ್ನು ಮಣಿಸಿದರು.

ಋತುಜಾ ಭೋಸಲೆ ಆಟದ ವೈಖರಿ
–ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಎರಡನೇ ಶ್ರೇಯಾಂಕದ ಆಟಗಾರ್ತಿ ಲನ್ಲಾನಾ ತರಾರುದೀ ಅವರು ಹೆಚ್ಚಿನ ಪ್ರಯಾಸವಿಲ್ಲದೇ ಏಳನೇ ಶ್ರೇಯಾಂಕದ ಡಿಲೆಟ್ಟಾ ಚೆರುಬಿನಿ (ಇಟಲಿ) ಅವರನ್ನು 6–1, 6–2 ರಿಂದ ಸದೆಬಡಿದರು. ಉತ್ತಮ ಲಯದಲ್ಲಿರುವ ಭಾರತದ ಆಟಗಾರ್ತಿ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರು 6–1, 6–4 ರಿಂದ ಸ್ವದೇಶದ ವೈಷ್ಣವಿ ಅಡ್ಕರ್ ಅವರನ್ನು ಮಣಿಸಲು ತೆಗೆದುಕೊಂಡಿದ್ದು 76 ನಿಮಿಷಗಳನ್ನಷ್ಟೇ.

ಐಟಿಎಫ್ ಕ್ರಮಾಂಕ ಪಟ್ಟಿಯಲ್ಲಿ 938ನೇ ಸ್ಥಾನದಲ್ಲಿರುವ ಝೀಲ್ ಈ ವರ್ಷ ಎರಡು ಐಟಿಎಫ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದುಕೊಂಡು ಉತ್ತಮ ಲಯದಲ್ಲಿದ್ದಾರೆ.

ಡಬಲ್ಸ್ ಸೆಮಿಫೈನಲ್ಸ್: ಡಿಲೆಟ್ಟಾ ಚೆರುಬಿನಿ (ಇಟಲಿ) ಮತ್ತು ಅಂಟೊನಿಯಾ ಶ್ಮಿಟ್ (ಜರ್ಮನಿ) ಅವರಿಗೆ ಮೂರನೇ ಶ್ರೇಯಾಂಕದ ರಶ್ಮಿಕಾ ಭಮಿಡಿಪಾಟಿ/ ವೈದೇಹಿ ಚೌಧರಿ (ಭಾರತ) ವಿರುದ್ಧ 0–6, 6–0, 10–3ರಲ್ಲಿ ಜಯ. ಅಗ್ರ ಶ್ರೇಯಾಂಕದ ಋತುಜಾ ಭೋಸಲೆ/ ಝಿಬೆಕ್ ಕುಲಂಬಯೇವಾ (ಕಜಕಸ್ತಾನ) ಮತ್ತು ಪುನ್ನಿನ್ ಕೊವಾಪಿಟುಕ್ಟೆಡ್ (ಥಾಯ್ಲೆಂಡ್)/ ಅನ್ನಾ ಉರೆಕೆ (ರಷ್ಯಾ) ನಡುವಣ ಪಂದ್ಯ 2–6, 0–0 ಇದ್ದಾಗ ಮಂದ ಬೆಳಕಿನಿಂದಾಗಿ ಅಡ್ಡಿ.

ದಕ್ಷಿಣ ಆಫ್ರಿಕಾ ಪ್ರವಾಸ: ಸೀನಿಯರ್‌ಗಳಿಗೆ ಮುಂಚಿತವಾಗಿ ತೆರಳಲು ಅವಕಾಶ?

ಆರ್‌. ಅಶ್ವಿನ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಭಾರತ ಕ್ರಿಕೆಟ್ ತಂಡವು ಡಿಸೆಂಬರ್ 26ರಿಂದ ನಡೆಯುವ ಟೆಸ್ಟ್ ಸರಣಿಯಲ್ಲಿ ಆಡಲಿದೆ.

ಅದಕ್ಕೂ ಮುನ್ನ ಭಾರತ 'ಎ' ತಂಡವು ಮೂರು ಪಂದ್ಯಗಳನ್ನು ಆಡಲಿದೆ. ಅದರಲ್ಲಿ ಸೀನಿಯರ್ ತಂಡದ ಕೆಲವು ಅನುಭವಿ ಟೆಸ್ಟ್ ಪರಿಣತ ಆಟಗಾರರನ್ನೂ ಸೇರ್ಪಡೆ ಮಾಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯ್ಕೆ ಸಮಿತಿ ಯೋಜಿಸಿದೆ.

ಇದರಿಂದಾಗಿ ಆ ದೇಶದ ವಾತಾವರಣಕ್ಕೆ ಹೊಂದಿಕೊಳ್ಳಲು ಅನುಕೂಲವಾಗಲಿದೆ. ಭಾರತ ಎ ತಂಡವು ದಕ್ಷಿಣ ಆಫ್ರಿಕಾ ಎ ವಿರುದ್ಧ ಮೂರು 'ಟೆಸ್ಟ್'ಗಳನ್ನು ಆಡಲಿದೆ. ಜನವರಿಯಲ್ಲಿ ಭಾರತ ಎ ತಂಡವು ಇಂಗ್ಲೆಂಡ್ ಸೀನಿಯರ್ ಬಳಗದ ವಿರುದ್ಧವೂ ಸರಣಿ ಆಡಲಿದೆ ಎಂದು ಮೂಲಗಳು ಖಚಿತಪಡಿಸಿವೆ.

ಅನುಭವಿ ಆಟಗಾರರಾದ ಅಜಿಂಕ್ಯ ರಹಾನೆ, ಆರ್. ಅಶ್ವಿನ್ ಮತ್ತು ಜಯದೇವ್ ಉನದ್ಕತ್ ಅವರು ಎ ತಂಡದೊಂದಿಗೆ ತೆರಳುವ ಅವಕಾಶ ಪಡೆಯುವ ಸಾಧ್ಯತೆ ಇದೆ. ಉಳಿದಂತೆ ಯುವ ಆಟಗಾರರಾದ ಯಶ್ ಧುಲ್, ಬಿ. ಸಾಯಿ ಸುದರ್ಶನ್, ಕೊನಾ ಭರತ್, ಉಪೇಂದ್ರ ಯಾದವ್ ಮತ್ತು ಸೌರಭ್ ಕುಮಾರ್ ಸ್ಥಾನ ಪಡೆಯುವುದು ಬಹುತೇಕ ಖಚಿತ. ಕನ್ನಡಿಗ ವಿದ್ವತ್ ಕಾವೇರಪ್ಪ, ಕುಲದೀಪ್ ಸೇನ್, ಹರ್ಷಿತ್ ರಾಣಾ ಮತ್ತು ಉಮ್ರಾನ್ ಮಲಿಕ್ ಅವರಿಗೂ ಅವಕಾಶ ಸಿಗುವ ಸಾಧ್ಯತೆ ಇದೆ.

ಕಳೆದ ರಣಜಿ ಋತುವಿನಲ್ಲಿ ಹೆಚ್ಚು ರನ್ ಗಳಿಸಿದ ಬ್ಯಾಟರ್, ಕನ್ನಡಿಗ ಮಯಂಕ್ ಅಗರವಾಲ್ ಅವರಿಗೆ ಟೆಸ್ಟ್ ತಂಡದ ಬುಲಾವ್ ಬರುವ ನಿರೀಕ್ಷೆ ಇದೆ. ಆದರೆ ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಕೂಡ ಸ್ಪರ್ಧೆಯಲ್ಲಿರುವುದರಿಂದ ಮಯಂಕ್ ಹಾದಿ ಸುಗಮವೂ ಅಲ್ಲ ಎನ್ನಲಾಗಿದೆ.

ಟ್ರೋಫಿ ಮೇಲೆ ಕಾಲು: ದೂರು

ನವದೆಹಲಿ (ಪಿಟಿಐ): ಈಚೆಗೆ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಗೆದ್ದ ಟ್ರೋಫಿಯ ಮೇಲೆ ತಮ್ಮ ಪಾದಗಳನ್ನು ಇಟ್ಟದ್ದಕ್ಕಾಗಿ ಆಸ್ಟ್ರೇಲಿಯಾದ ಕ್ರಿಕೆಟಿಗ ಮಿಚೆಲ್ ಮಾರ್ಷ್ ವಿರುದ್ಧ ಅಲಿಘರ್‌ನ ಭ್ರಷ್ಟಾಚಾರ ವಿರೋಧಿ ಸೇನೆಯ ಅಧ್ಯಕ್ಷ ಪಂಡಿತ್ ಕೇಶವ್ ದೇವ್ ದೆಹಲಿ ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ದೂರು ಸ್ವೀಕಾರ ಮಾಡಲಾಗಿದೆ. ಆದರೆ, ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಟೆನಿಸ್: ಪಾಕ್‌ಗೆ ಹೋಗದಿರಲು ನಗಾಲ್, ಮುಕುಂದ್ ನಿರ್ಧಾರ

ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರರಾದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಅವರು ಮುಂದಿನ ಡೇವಿಸ್ ಕಪ್ ಪಂದ್ಯ ಆಡಲು ತಾವು ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆಗೆ (ಎಐಟಿಎ) ತಿಳಿಸಿದ್ದಾರೆ. ಆಟಗಾರರ ನಿಲುವಿನಿಂದ ಯೋಚನೆಗೆ ಬಿದ್ದಿರುವ ಎಐಟಿಎ ತನ್ನ ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಈ ಬಗ್ಗೆ ಸಮಾಲೋಚಿಸಲು ನಿರ್ಧರಿಸಿದೆ.

ಎಟಿಪಿ ಕ್ರಮಾಂಕದಲ್ಲಿ 141ನೇ ಸ್ಥಾನದಲ್ಲಿರುವ ನಗಾಲ್ ಭಾರತದ ಶ್ರೇಷ್ಠ ರ‍್ಯಾಂಕಿನ ಆಟಗಾರ ಎನಿಸಿದ್ದಾರೆ. 447ನೇ ಸ್ಥಾನದಲ್ಲಿರುವ ಮುಕುಂದ್ ಎರಡನೇ ಉತ್ತಮ ಆಟಗಾರನಾಗಿದ್ದಾರೆ. ಪಾಕಿಸ್ತಾನದಲ್ಲಿ ಬರುವ ಫೆಬ್ರುವರಿಯಲ್ಲಿ ನಡೆಯಬೇಕಿರುವ ಈ ವಿಶ್ವ ಗುಂಪಿನ ಪಂದ್ಯ ಆಡಲು ನಿರಾಕರಿಸಿರುವುದಕ್ಕೆ ಇವರಿಬ್ಬರು ಕಾರಣ ಸ್ಪಷ್ಟಪಡಿಸಿಲ್ಲ. ಈ ಪಂದ್ಯ ಹುಲ್ಲಿನಂಕಣದಲ್ಲಿ ನಡೆಯಲಿದ್ದು, ಇದು ನಗಾಲ್ ಅವರ ಆಟಕ್ಕೆ ಹೊಂದದ ಕಾರಣ ಅವರು ಹಿಂದೆಸರಿದಿದ್ದಾರೆ ಎನ್ನಲಾಗುತ್ತಿದೆ. 'ವೈಯಕ್ತಿಕ ಕಾರಣ' ನೀಡಿ ಮುಕುಂದ್ ಹಿಂದೆ ಸರಿದಿದ್ದಾರೆ. ಹೀಗಾಗಿ ಪ್ರಸಕ್ತ ಸ್ಥಿತಿಯಲ್ಲಿ ರಾಮಕುಮಾರ್ ರಾಮನಾಥನ್, ದಿಗ್ವಿಜಯ ಪ್ರತಾಪ್ ಸಿಂಗ್ ಅವರೇ ಭಾರತದ ಸವಾಲನ್ನು ಮುನ್ನಡೆಸಬೇಕಾಗಬಹುದು. ದಿಗ್ವಿಜಯ್, ಸೆಪ್ಟೆಂಬರ್‌ನಲ್ಲಿ ಮೊರಾಕ್ಕೊ ವಿರುದ್ಧ ಡೇವಿಸ್ ಕಪ್‌ಗೆ ಪದಾರ್ಪಣೆ ಮಾಡಿದ್ದರು. ರಾಮನಾಥನ್ ಆಟ ಹುಲ್ಲಿನಂಕಣಕ್ಕೆ ಹೊಂದುತ್ತದೆ.

ಅಸಮಾಧಾನ: ರಾಷ್ಟ್ರೀಯ ತಂಡಕ್ಕೆ ಆಡುವ ವಿಷಯದಲ್ಲಿ ಆಟಗಾರರು ಎರಡೆರಡು ಆಲೋಚನೆ ಮಾಡಬಾರದು ಎಂದು ಎಐಟಿಎ ಮಹಾ ಕಾರ್ಯದರ್ಶಿ ಅನಿಲ್ ಧುಪರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉದ್ದೀಪನ ಮದ್ದು ಸೇವನೆ: ಸಿಕ್ಕಿಬಿದ್ದ ರಚನಾ ಕುಮಾರಿ

ನವದೆಹಲಿ (ಪಿಟಿಐ): ಚೀನಾದ ಹಾಂಗ್‌ಝೌನಲ್ಲಿ ಈಚೆಗೆ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದ ಭಾರತದ ಹ್ಯಾಮರ್ ಥ್ರೋ ಅಥ್ಲೀಟ್ ರಚನಾ ಕುಮಾರಿ ಅವರು ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಕ್ಕಿಬಿದ್ದಿದ್ದಾರೆ.

ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ಫೆಡರೇಷನ್ ಭದ್ರತಾ ಘಟಕ (ಎಐಯು) ಏಷ್ಯನ್ ಕ್ರೀಡಾಕೂಟಕ್ಕೂ ಮೊದಲು ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಿತ್ತು.

30 ವರ್ಷದ ರಚನಾಕುಮಾರಿ ಅವರ ಮಾದರಿಯಲ್ಲಿ ನಿಷೇಧಿತ ಮದ್ದುಗಳಾದ ಸ್ಟ್ಯಾನೊಜೊಲಲ್, ಮೆಟಾಂಡಿನೊನ್ ಮತ್ತು ಡಿಹೈಡ್ರೊಕ್ಲೊರೊ ಮಿಥೈಲ್‌ಟೆಸ್ಟೊಸ್ಟಿರಾನ್ (ಡಿಎಚ್‌ಸಿಎಂಟಿ) ಅಂಶಗಳು ಇರುವುದು ಪತ್ತೆಯಾಗಿದೆ. ಅವರನ್ನು ತಾತ್ಕಾಲಿಕ ಅಮಾನತು ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಭಾರತ 'ಎ' ತಂಡಕ್ಕೆ ಮಿನ್ನು ನಾಯಕಿ

ಮಿನ್ನು ಮಣಿ

ಬೆಂಗಳೂರು: ಕೇರಳದ ಆಫ್ ಸ್ಪಿನ್ನರ್ ಸಿ. ಮಿನ್ನು ಮಣಿ ಇಂಗ್ಲೆಂಡ್ 'ಎ' ವಿರುದ್ಧದ ಟಿ20 ಪಂದ್ಯಗಳ ಸರಣಿಯಲ್ಲಿ ಭಾರತ 'ಎ' ಮಹಿಳಾ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತ 'ಎ' ತಂಡವು ನ.29, ಡಿ.1 ಮತ್ತು 3ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ 'ಎ' ತಂಡವನ್ನು ಎದುರಿಸಲಿದೆ. ತಂಡದಲ್ಲಿ ಕರ್ನಾಟಕದ ಶ್ರೇಯಾಂಕಾ ಪಾಟೀಲ, ವೃಂದಾ ದಿನೇಶ್, ಜಿ. ದಿವ್ಯಾ ಮತ್ತು ಮೋನಿಕಾ ಪಟೇಲ್ ಸ್ಥಾನ ಪಡೆದಿದ್ದಾರೆ.

ತಂಡ ಹೀಗಿದೆ: ಸಿ ಮಿನ್ನು ಮಣಿ (ನಾಯಕಿ), ಕನಿಕಾ ಅಹುಜಾ, ಉಮಾ ಚೆಟ್ರ, ಶ್ರೇಯಾಂಕಾ ಪಾಟೀಲ, ಜಿ. ತ್ರಿಶಾ, ವೃಂದಾ ದಿನೇಶ್, ಜಿ. ದಿವ್ಯಾ, ಆರುಷಿ ಗೋಯಲ್, ದಿಶಾ ಕಸತ್, ರಾಶಿ ಕನೋಜಿಯಾ, ಮನ್ನತ್ ಕಶ್ಯಪ್, ಅನುಷಾ ಬಾರೆಡ್ಡಿ, ಮೋನಿಕಾ ಪಟೇಲ್, ಜಿ. ಕಾಶವೀ, ಜಿಂತಿಮಣಿ ಕಲಿತಾ, ಪ್ರಕಾಶಿಕಾ ನಾಯ್ಕ್.

ಡಬ್ಲ್ಯುಪಿಎಲ್: ಡಿ.9ರಂದು ಬಿಡ್ಡಿಂಗ್

ನವದೆಹಲಿ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) 2024ರ ಆವೃತ್ತಿಗೆ ಆಟಗಾರ್ತಿಯರ ಬಿಡ್ಡಿಂಗ್ ಪ್ರಕ್ರಿಯೆ ಡಿ.9ರಂದು ಮುಂಬೈನಲ್ಲಿ ನಡೆಯಲಿದೆ ಎಂದು ಬಿಸಿಸಿಐ ಶುಕ್ರವಾರ ತಿಳಿಸಿದೆ.

ಲೀಗ್‌ನ ಎರಡನೇ ಆವೃತ್ತಿಯು ಮುಂದಿನ ವರ್ಷ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಯುವ ಸಾಧ್ಯತೆ ಇದೆ. ಎರಡನೇ ಆವೃತ್ತಿಗೆ ಮುಂಬೈ, ಡೆಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಜೈಂಟ್ಸ್ ಮತ್ತು ಯುಪಿ ವಾರಿಯರ್ಜ್ ಫ್ರಾಂಚೈಸಿಗಳು 21 ವಿದೇಶಿ ಆಟಗಾರ್ತಿಯರು ಸೇರಿದಂತೆ 60 ಮಂದಿಯನ್ನು ಉಳಿಸಿಕೊಂಡಿವೆ. ಐದು ತಂಡಗಳಿಂದ ಒಟ್ಟು 29 ಮಂದಿಯನ್ನು ಒಪ್ಪಂದದಿಂದ ಬಿಡುಗಡೆ ಮಾಡಲಾಗಿದೆ.

ಮತ್ತೆ ಇಂಡಿಯನ್ಸ್‌ನತ್ತ ಹಾರ್ದಿಕ್ ಪಾಂಡ್ಯ?

ನವದೆಹಲಿ (ಪಿಟಿಐ): ಐದು ಬಾರಿಯ ಐಪಿಎಲ್ ಚಾಂಪಿಯನ್ ಮುಂಬೈ ಇಂಡಿಯನ್ಸ್, ಗುಜರಾತ್ ಟೈಟಾನ್ಸ್ ನಾಯಕನಾಗಿರುವ ಹಾರ್ದಿಕ್ ಪಾಂಡ್ಯ ಅವರನ್ನು ಮತ್ತೆ ತಂಡಕ್ಕೆ ಕರೆತರಲು ಪ್ರಯತ್ನ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಹಾಗೂ ಆಲ್‌ರೌಂಡ್ ಆಟಗಾರನಾಗಿರುವ ಹಾರ್ದಿಕ್ ಈ ಹಿಂದೆ ಏಳು ಆವೃತ್ತಿಗಳಲ್ಲಿ ಮುಂಬೈ ತಂಡದ ಪರ ಆಡಿದ್ದರು. 2022ರಲ್ಲಿ ಗುಜರಾತ್ ಟೈಟಾನ್ಸ್ ಸೇರಿಕೊಂಡ ಅವರು ತಂಡವನ್ನು ಚೊಚ್ಚಲ ಋತುವಿನಲ್ಲಿ ಚಾಂಪಿಯನ್ ಪಟ್ಟಕ್ಕೇರಿಸಿದ್ದರು. ನಂತರದ ಆವೃತ್ತಿಯಲ್ಲಿ ತಂಡ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತ್ತು.

ಹಾರ್ದಿಕ್ ಮುಂಬೈ ತಂಡಕ್ಕೆ ಮರಳಿದರೆ, ಟೈಟಾನ್ಸ್ ತಂಡಕ್ಕೆ ಯಾರು ನಾಯಕರಾಗಬಹುದು ಎಂಬ ಕುತೂಹಲ ಮೂಡಿದೆ.